BIBLE STORIES.

ದೇ ವ ವಾ ಕ್ಯ ದ್ವಿ ಪ ಂ ಚಾ ಶ ಕ.

OLD TESTAMENT.

ಪೂರ್ವನಿರ್ಧಾರ.


Price 6 annas. ಕ್ರಯವು ೬ ಆಣೆ.

ಮಂಗಳೂರಲ್ಲಿ ಛಾಪಿಸಿದ್ದು.

4th Edition.] ೧೮೭೪. [4000 Copies.

ಹಳೇ ಒಡಂಬಡಿಕೆಯ ಕಥೆಗಳು.

೧. ಸೃಷ್ಟಿಯು.



ದೇವರು ಪರಲೋಕ ಭೂಲೋಕಗಳನ್ನು ತನ್ನ ವಾಕ್ಯದ ಮೂಲಕದಿಂದ ನಿರ್ಮಿಸಿದನು. ದೇವರು ಸೃಷ್ಟಿಮಾಡುವದಕ್ಕಿಂತ ಮುಂಚೆ ಆತನನ್ನು ಹೊರ್ತಾಗಿ ಯಾವದೂ ಇರಲಿಲ್ಲಾ. ದೇವರು ಮಾತ್ರ ಆದಿ ಅಂತ್ಯ ಇಲ್ಲದವನೂ, ತನಗೆ ಮನಸ್ಸಿದ್ದವುಗಳನ್ನೆಲ್ಲಾ ನಿರ್ಮಿಸ ಶಕ್ತನೂ ಆಗಿರುತ್ತಾನೆ. ಆತನು ಭೂಪರಲೋಕಗಳ ಮಹಿಮೆಯನ್ನು ಕ್ಷಣಮಾತ್ರದಲ್ಲಿ ಉಂಟುಮಾಡ ಮನಸ್ಸಿಲ್ಲದೆ, ಕ್ರಮದಿಂದಲೇ ಅವುಗಳನ್ನು ಮಾಡಿ, ಆದಿಯಲ್ಲಿ ಸಮಸ್ತ ಸೃಷ್ಟಿಯ ಅಳತೆ ಲೆಖ್ಖ ಭಾರಾದಿಗಳನ್ನು ನಿಶ್ಚೈಸಿದನು.

ಈಗ ದೇವರು ಆರು ದಿನಗಳಲ್ಲಿ ಭೂಪರಲೋಕಗಳನ್ನು ನಿರ್ಮಿಸಿದ ಕಥೆಯನ್ನು ಕೇಳಿರಿ.

ದೇವರು ಬೆಳಕುಂಟಾಗಲಿ ಎಂದನು, ಆಗಲು ಬೆಳಕುಂಟಾಯಿತು. ಆ ಬೆಳಕನ್ನು ದೇವರು ಕತ್ತಲೆಯಿಂದ ಪ್ರತ್ಯೇಕಿಸಲಾಗಿ, ಮೊದಲನೇ ಇರಳೂ ಮೊದಲನೇ ಹಗಲೂ ಉಂಟಾದವು. ಎರಡನೇ ದಿನದಲ್ಲಿ ಆತನು ಪೃಥ್ವಿಯನ್ನು ಸುತ್ತಿರುವ ವಿಶಾಲಮಂಡಲವನ್ನು ನಿರ್ಮಿಸಿ, ಆ ವಿಶಾಲಮಂಡಲದ ಮೇಲಿ

ರುವ ಜಲವನ್ನೂ, ಅದರ ಕೆಳಗಿರುವ ಜಲವನ್ನೂ ವಿಂಗಡಿಸಿ, ವಿಶಾಲಮಂಡಲಕ್ಕೆ ಆಕಾಶವೆಂಬ ಹೆಸರಿಟ್ಟನು. ಮೂರನೇ ದಿವಸದಲ್ಲಿ ಆತನು ಪೃಥ್ವಿಯಲ್ಲಿ ಜಲವನ್ನೂ ಭೂಮಿಯನ್ನೂ ಪ್ರತ್ಯೇಕಿಸಿ, ಹುಲ್ಲನ್ನೂ ಪಲ್ಯಗಳನ್ನೂ ಫಲಫಲಿಸುವ ವೃಕ್ಷಗಳನ್ನೂ ಭೂಮಿಯೊಳಗಿಂದ ಮೊಳೆಯಿಸಿದನು.

ನಾಲ್ಕನೇ ದಿನದಲ್ಲಿ ದೇವರು ಹಗಲನ್ನಾಳುವ ದೊಡ್ಡ ಬೆಳಕೂ, ರಾತ್ರಿಯನ್ನಾಳುವ ಸಣ್ಣ ಬೆಳಕೂ, ಗ್ರಹಗಳೆಂಬ ನಕ್ಷತ್ರಗಳೂ ಮೊದಲಾದ ಆಕಾಶದಲ್ಲಿರುವ ಬೆಳಕುಗಳನ್ನು ಭೂಮಿಯಲ್ಲಿ ಕಾಲಗಳನ್ನೂ ದಿವಸಗಳನ್ನೂ ಸಂವತ್ಸರಗಳನ್ನೂ ವಿಶೇಷಿಸುವದಕ್ಕೋಸ್ಕರ ನಿರ್ಮಿಸಿದನು. ಐದನೇ ದಿನದಲ್ಲಿ ದೇವರು ದೊಡ್ಡ ಮೀನುಗಳನ್ನೂ, ಹರಿದಾಡುವ ಜಲಜಂತುಗಳನ್ನೂ, ವಿಧಾವಿಧವಾದ ಪಕ್ಷಿಗಳನ್ನೂ ಉಂಟು ಮಾಡಿ, ನೀವು ಪ್ರವರ್ಧಮಾನವಾಗಿ ಹೆಚ್ಚಿರಿ ಎಂದು ಆಶೀರ್ವದಿಸಿದನು. ಆರನೇ ದಿನದಲ್ಲಿ ದೇವರು ವಿಧಾವಿಧವಾದ ಜೀವಜಂತುಗಳನ್ನು ಭೂಮಿಯೊಳಗಿಂದ ಉಂಟು ಮಾಡಿದ ತರುವಾಯ, — ಸಮುದ್ರದಲ್ಲಿರುವ ಮೀನುಗಳಿಗೂ, ಪಶು ಪಕ್ಷಿ ಮೃಗಗಳೆಲ್ಲಕ್ಕೂ, ಸಕಲ ಭೂಮಿಗೂ ಯಜಮಾನರಾದ ಮನುಷ್ಯರನ್ನು ನಮ್ಮ ಹಾಗೆಯೂ, ನಮ್ಮ ಸ್ವರೂಪದ ಪ್ರಕಾರವೂ ನಿರ್ಮಿಸುವ ಎಂದು ಹೇಳಿ, ಒಬ್ಬ ಗಂಡಸನ್ನೂ ಒಬ್ಬ ಹೆಂಗಸನ್ನೂ ನಿರ್ಮಿಸಿ, ಅವರಿಗೆ ಆಶೀರ್ವದಿಸಿ ಹೇಳಿದ್ದು — ನೀವು ಪ್ರವರ್ಧಮಾನರಾಗಿ ಹೆಚ್ಚಿ, ಭೂಮಿಯನ್ನು ತುಂಬಿಸಿ, ನಿಮಗೆ ಸ್ವಾಧೀನ ಮಾಡಿಕೊಳ್ಳಿರಿ. ಈ ಪ್ರಕಾರ ಆರನೇ ದಿನವು ತೀರಲಾಗಿ, ದೇವರು ತಾನು ಮಾಡಿದ್ದನ್ನೆಲ್ಲಾ ನೋಡುವಾಗ್ಯೆ, ಇಗೋ, ಅದು ಅತ್ಯುತ್ತಮವಾಗಿತ್ತು.

ಏಳನೇ ದಿನದಲ್ಲಿ ದೇವರು ಮಾಡಿದ್ದೇನಂದರೆ — ಆತನು ಸಬ್ಬಾತೆಂಬ ದಿವನ್ನು ನೇಮಿಸಿ, ನಮಗೆ ವಿಶ್ರಾಂತಿಯ ದಿವಸವನ್ನುಂಟು ಮಾಡಿದ್ದಾನೆ; ಹ್ಯಾಗಂದರೆ ಆ ಏಳನೇ ದಿನದಲ್ಲಿ ದೇವರು ತಾನು ಮಾಡಿದ ಸಕಲ ಕ್ರಿಯೆಗಳಿಂದ ವಿಶ್ರಾಂತನಾಗಿದ್ದು; ಅದರಲ್ಲೇ ತಾನು ವಿಶ್ರಾಂತನಾದಕಾರಣ ಆ ಏಳನೇ ದಿನವನ್ನು ಆಶೀರ್ವದಿಸಿ ಪರಿಶುದ್ಧ ಮಾಡಿದನು.

೨. ಪಾಪವು.



ದೇವರು ರಮ್ಯವಾದ ತೋಟವನ್ನು ಮಾಡಿ, ಅದರೊಳಗೆ ಮನುಷ್ಯರನ್ನು ಇಟ್ಟನು. ಆ ತೋಟದಲ್ಲಿ ನೋಟಕ್ಕೆ ಸೌಂದರ್ಯವಾಗಿಯೂ, ಊಟಕ್ಕೆ ಯುಕ್ತವಾಗಿಯೂ ಇರುವ ನಾನಾವಿಧವಾದ ವೃಕ್ಷಗಳಿದ್ದವು. ತೋಟದ ಮಧ್ಯದಲ್ಲಿ ಜೀವವೃಕ್ಷವೂ, ಮೇಲು ಕೀಳುಗಳು ತಿಳಿಸುವ ಜ್ಞಾನವೃಕ್ಷವೂ, ಈ ವಿಶೇಷವಾದ ವೃಕ್ಷಗಳಿದ್ದವು. ಆ ಜ್ಞಾನವೃಕ್ಷದ ವಿಷಯವಾಗಿ ದೇವರು ಮನುಷ್ಯನಿಗೆ ಹೇಳಿದ್ದೇನಂದರೆ — ನೀನು ತೋಟದಲ್ಲಿರುವ ಸಕಲ ವೃಕ್ಷಗಳ ಫಲಗಳನ್ನು ತಿನ್ನಬಹುದು; ಆದರೆ ಮೇಲು ಕೀಳುಗಳು ತಿಳಿಸುವ ಜ್ಞಾನವೃಕ್ಷದ ಫಲವನ್ನು ತಿನ್ನಬಾರದು; ತಿಂದರೆ, ಅಂದೇ ನೀನು ಸಾಯುವಿ.

ಇದಲ್ಲದೆ ಸರ್ಪವು ತಂತ್ರವುಳ್ಳದಾಗಿ ಸ್ತ್ರೀಗೆ — ನೀವು ತೋಟದ ಸಕಲ ವೃಕ್ಷಗಳ ಫಲಗಳನ್ನು ಭಕ್ಷಿಸಬಾರದೆಂದು ದೇವರು ಹೇಳಿದ್ದುಂಟೋ? ಎಂದಿತು. ಆ ಸ್ತ್ರೀಯು ಸರ್ಪಕ್ಕೆ ಹೇಳಿದ್ದು — ನಾವು ತೋಟದಲ್ಲಿರುವ ವೃಕ್ಷಗಳ ಫಲಗಳನ್ನು ತಿನ್ನುತ್ತೇವೆ, ಆದರೆ ತೋಟದ ಮಧ್ಯದಲ್ಲಿರುವ ವೃಕ್ಷದ ಫಲಗಳನ್ನು ನಾವು ಸಾಯದ ಹಾಗೆ ತಿನ್ನಲೂ ಮುಟ್ಟಲೂ ಬಾರದೆಂದು, ದೇವರು ಹೇಳಿದ್ದಾನೆ. ಸರ್ಪವು ಸ್ತ್ರೀಗೆ ಹೇಳಿದ್ದು — ನಿಶ್ಚಯವಾಗಿ ನೀವು ಸಾಯಲಿಕ್ಕಿಲ್ಲಾ, ಆದರೆ ತಿಂದ ದಿವಸ ನಿಮ್ಮ ಕಣ್ಣುಗಳು ತೆರೆಯುವವು, ನೀವು ಮೇಲು ಕೀಳುಗಳನ್ನು ತಿಳಿದು, ದೇವರ ಹಾಗಿರುವಿರಿ ಎಂದು, ದೇವರು ಅರಿತಿ

ದ್ದಾನೆ. ಆಗಲು ಆ ಸ್ತ್ರೀಯು ಕಣ್ಣು ಬಿಟ್ಟು, ಆ ವೃಕ್ಷವು ಊಟಕ್ಕೆ ಯುಕ್ತವಾದದ್ದೂ, ನೋಟಕ್ಕೆ ರಮ್ಯವಾದದ್ದೂ, ಜ್ಞಾನವನ್ನು ಹುಟ್ಟಿಸುವದರಿಂದ ಇಚ್ಛೈಸತಕ್ಕದ್ದೂ ಎಂದು, ಆ ಫಲವನ್ನು ಹರಕೊಂಡು ತಿಂದು, ಗಂಡನಿಗೆ ಕೊಟ್ಟಳು; ಅವನು ತಿಂದನು. ಆಗ್ಯೆ ಅವರ ಕಣ್ಣುಗಳು ತೆರದು, ತಾವು ದಿಗಂಬರರಾಗಿರುವದನ್ನು ನೋಡಿದರು. ಮತ್ತು ಅಂಜೂರದ ಎಲೆಗಳನ್ನು ಹೊಲಕೊಂಡು, ಉಡಿಗೆಗಳನ್ನು ಮಾಡಿ ಕೊಂಡರು.

ಆ ದಿನದ ಸಂಜೆಯ ತಂಪು ಹೊತ್ತಿನಲ್ಲಿ ತೋಟದಲ್ಲಿ ತಿರುಗಾಡುವ ಕರ್ತನಾದ ದೇವರ ಶಬ್ದವನ್ನು ಅವರು ಕೇಳಲಾಗಿ, ಆದಮನೂ ಅವನ ಹೆಂಡತಿಯೂ ದೇವರ ಸಮ್ಮುಖಕ್ಕೆ ಮರೆಯಾಗಿ, ತೋಟದ ವೃಕ್ಷಗಳೊಳಗೆ ಅಡಗಿಕೊಂಡರು.

ಮತ್ತು ಕರ್ತನಾದ ದೇವರು ಆದಮನಿಗೆ—ನೀನು ಎಲ್ಲಿದ್ದಿ ಎಂದು ಕರೆದನು. ಆದಮನು—ನಾನು ತೋಟದೊಳಗೆ ನಿನ್ನ ಶಬ್ದವನ್ನು ಕೇಳಿ, ದಿಗಂಬರನಾದಕಾರಣ ಅಂಜಿ ಅಡಗಿದ್ದೇನೆಂದನು. ದೇವರು ಹೇಳಿದ್ದು—ನೀನು ದಿಗಂಬರನಾಗಿದ್ದಿ ಎಂದು ನಿನಗೆ ಯಾರು ತಿಳಿಸಿದರು? ತಿನ್ನಬಾರದೆಂದು ನಾನು ನಿನಗೆ ಹೇಳಿದ್ದ ವೃಕ್ಷದ ಫಲವನ್ನು ನೀನು ತಿನ್ನಲಿಲ್ಲವೋ?—ಆದಮನು ಹೇಳಿದ್ದು—ನೀನು ನನಗೆ ಕೂಡಿಸಿದ ಸ್ತ್ರೀಯು ಆ ವೃಕ್ಷದ ಫಲವನ್ನು ನನಗೆ ಕೊಟ್ಟದರಿಂದ, ನಾನು ತಿಂದೆನು. ದೇವರು ಸ್ತ್ರೀಗೆ—ನೀನು ಅದನ್ನು ಯಾಕೆ ಮಾಡಿದಿ ಎಂದನು. ಆ ಸ್ತ್ರೀಯು—ನಾನು ತಿನ್ನುವ ಹಾಗೆ ಸರ್ಪವು ನನಗೆ ಮೋಸ ಮಾಡಿತೆಂದಳು. ಆಗಲು ಕರ್ತನಾದ ದೇವರು ಸರ್ಪಕ್ಕೆ ಹೇಳಿದ್ದು—ನೀನು ಇದನ್ನು ಮಾಡಿದದರಿಂದ, ಸಮಸ್ತ ಪ್ರಾಣಿಗಳಲ್ಲಿ ನೀನು ಶಪಿತನಾಗು! ನೀನು ಜೀವಿಸುವವರೆಗೆ ನಿನ್ನ ಹೊಟ್ಟೆಯಿಂದ ನಡೆದು, ಮಣ್ಣು ತಿನ್ನುವಿ. ಮತ್ತು ನಿನಗೂ ಸ್ತ್ರೀಗೂ, ನಿನ್ನ ಸಂತಾನಕ್ಕೂ ಸ್ತ್ರೀಯ ಸಂತಾನಕ್ಕೂ ನಾನು ಹಗೆಯನ್ನು ಹುಟ್ಟಿಸುವೆನು. ಆ ಸ್ತ್ರೀಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು, ಆದರೆ ನೀನು ಅದರ ಹಿಮ್ಮಡವ ಕಡಿಯುವಿ. ಸ್ತ್ರೀಗೆ ದೇವರು ಹೇಳಿದ್ದು—ನೀನು ಹಡಿಯುವ ಸಮಯದಲ್ಲಿ ನಿನ್ನ ತ್ರ

ಮೆಯನ್ನು ಬಹಳವಾಗ ಮಾಡುವೆನು; ಶ್ರಮೆಯಿಂದ ನೀನು ಮಕ್ಕಳನ್ನು ಹೆರುವಿ; ನಿನ್ನ ಚಿತ್ತವು ನಿನ್ನ ಗಂಡನ ಆಧೀನವಾಗಿರುವದು; ಅವನೇ ನಿನ್ನ ಕರ್ತನು. ಆದಮನಿಗೆ ದೇವರು ಹೇಳಿದ್ದು — ನೀನು ನಿನ್ನ ಹೆಂಡತಿಯ ಮಾತನ್ನು ಕೇಳಿ, ತಿನ್ನಬಾರದೆಂದು ನಾನು ಆಜ್ಞಾಪಿಸಿದ ವೃಕ್ಷದ ಫಲವನ್ನು ತಿಂದದರಿಂದ, ನಿನಗೋಸ್ಕರ ಹೊಲದ ಮೇಲೆ ಶಾಪವಿರಲಿ; ನೀನು ಜೀವಿಸುವವರೆಗೆ ಅದರಲ್ಲಿ ಕಷ್ಟ ಪಟ್ಟು ಬದುಕುವಿ; ಅದು ಮುಳ್ಳುಗಳನ್ನೂ ದತ್ತೂರಿಗಳನ್ನೂ ನಿನಗೆ ಮೊಳೆಯಿಸುವದು; ನೀನು ಹುಟ್ಟಿದ ಮಣ್ಣಿನಲ್ಲಿ ಬೆರೆಯುವವರೆಗೆ, ನಿನ್ನ ಹಣೆಯ ಬೆವರಿನಿಂದ ನಿನ್ನ ರೊಟ್ಟಿಯನ್ನು ತಿನ್ನುವಿ; ಯಾಕಂದರೆ ನೀನು ಮಣ್ಣಾಗಿದ್ದಿ, ಇನ್ನೂ ಮಣ್ಣಾಗಬೇಕು. ಈ ಪ್ರಕಾರ ಮನುಷ್ಯನು ಪರದೈಸದಿಂದ ಹೊರಡಿಸಲ್ಪಟ್ಟನು. ಅವನು ಹೊರಟ ಮೇಲೆ ಜ್ವಲಿಸುವ ಖಡ್ಗವನ್ನು ಹಿಡಿದು, ಖೆರೂಬರು ಜೀವವೃಕ್ಷಕ್ಕೆ ಹೋಗುವ ದಾರಿಯನ್ನು ಕಾಯುತ್ತಾ ನಿಂತರು.



೩. ಕಾಯಿನನೂ ಆಬೇಲನೂ.

ಆದಮನ ಮಕ್ಕಳಲ್ಲಿ ಚೊಚ್ಚಲಮಗನು ಕಾಯಿನನು. ಎರಡನೆಯವನು ಆಬೇಲನು. ಕಾಯಿನನು ಹೊಲದ ಕೆಲಸದವನು, ಆಬೇಲನು ಕುರುಬನು. ಒಂದು ದಿವಸದಲ್ಲಿ ಈ ಇಬ್ಬರು ಕರ್ತನಿಗೆ ಬಲಿಯನ್ನರ್ಪಿಸಿದರು.

ಕಾಯಿನನು ಹೊಲದ ಫಲಗಳಲ್ಲಿ, ಆಬೆಲನು ಮಂದೆಯ ಚೊಚ್ಚಲದಲ್ಲಿ ಕಾಣಿಕೆ ತೆಗದುಕೊಂಡು ಬಂದರು. ದೇವರಿಗೆ ಕಾಯಿನನ ಕಾಣಿಕೆ ಅಲ್ಲ, ಆಬೆಲನ ಬಲಿಯೇ ಸಮರ್ಪಕವಾಗಿತ್ತು; ಯಾಕಂದರೆ ಆಬೆಲನು ವಿಶ್ವಾಸದಿಂದ ದಹನಬಲಿಯನ್ನು ಅರ್ಪಿಸಿದನು. ಆಬೇಲನ ಬಲಿಯನ್ನು ದೇವರು ಅಂಗೀಕರಿಸಿದನೆಂದು ಕಾಯಿನನು ನೋಡುವಾಗ, ಅವನ ಮುಖವು ಕಳೆಗುಂದಿ ಹೋಗಲಾಗಿ, ಕರ್ತನು ಕಾಯಿನನಿಗೆ ಹೇಳಿದ್ದು — ಯಾಕೆ ಕೋಪ ಮಾಡುತ್ತೀ? ಯಾಕೆ ನಿನ್ನ ಮುಖವು ಕಳೆಗುಂದಿ ಹೋಗಿದೆ? ಇದರ ಕಾರಣವೇನು? ನಿನಗೆ ಒಳ್ಳೇ ಮನಸ್ಸು ಇರುವಾಗ್ಯೆ, ಸಮರ್ಪಕನಾಗಿರುತ್ತಿ; ಕಾಡು ಮನಸ್ಸು ಇರುವಾಗ್ಯೆ, ಪಾಪವು ಬಾಗಲ ಮುಂದೆ ಕೂತಿರುತ್ತದೆ; ಆದರೂ ನೀನು ಅದಕ್ಕೆ ಸ್ವಾಧೀನನಾಗಿರದೆ ಅಧಿಕಾರಿಯಾಗಿರಬೇಕು. ಆ ಮೇಲೆ ಕಾಯಿನನು ತನ್ನ ತಮ್ಮನಾದ ಆಬೆಲನ ಸಂಗಡ ತಿರುಗಿ ಸಂಭಾಷಣೆ ಮಾಡಿದನು. ಆದರೆ ಇಬ್ಬರೂ ಹೊಲದಲ್ಲಿರುವಾಗ್ಯೆ, ಕಾಯಿನನು ತಮ್ಮನ ಮೇಲೆ ಬಿದ್ದು ಅವನನ್ನು ಕೊಂದು ಹಾಕಿದನು.




ಆಗಲು ಕರ್ತನು ಕಾಯಿನನಿಗೆ — ನಿನ್ನ ತಮ್ಮನಾದ ಆಬೆಲನು ಎಲ್ಲಿ? ಎಂದನು. ಕಾಯಿನನು — ನಾನರಿಯೆ; ನಾನು ತಮ್ಮನಿಗೆ ಕಾವಲಿಗನೋ? ಎಂದನು. ದೇವರು ಹೇಳಿದ್ದು — ನೀನು ಮಾಡಿದ್ದೇನು? ನಿನ್ನ ತಮ್ಮನ ರಕ್ತದ ಶಬ್ದವು ಭೂಮಿಯಿಂದ ನನಗೆ ಮೊರೆಯಿಡುತ್ತದೆ? ಇನ್ನು ಮೇಲೆ ನಿನ್ನ ಕೈ ಚೆಲ್ಲಿದ ನಿನ್ನ ತಮ್ಮನ ರಕ್ತವನ್ನು ಕುಡಿಯಲಿಕ್ಕೆ ತನ್ನ ಬಾಯಿಯನ್ನು ತೆರದ ಭೂ

ಮಿಯ ಮೇಲೆ ಶಪಿಸಲ್ಪಟ್ಟವನಾಗಿರುವಿ. ನೀನು ಹೊಲದಲ್ಲಿ ಕೃಷಿ ಮಾಡುವಾಗ, ಆ ಹೊಲವು ತನ್ನ ರಸದ ಫಲವನ್ನು ನಿನಗೆ ಕೊಡದು. ಭೂಮಿಯ ಮೇಲೆ ಸ್ಥಿರವಿಲ್ಲದೇ ತಿರುಗಾಡುವಿ. ಕಾಯಿನನು ಕರ್ತನಿಗೆ — ನನ್ನ ಪಾಪವು ಪರಿಹರವಾಗದ ಹಾಗೆ ಮಹಾ ದೊಡ್ಡದಾಗಿದೆ; ಯಾವನಾದರೂ ನನ್ನನ್ನು ಕಂಡರೆ ಕೊಂದು ಹಾಕುವನು ಎಂದನು. ಕರ್ತನು ಹೀಗಲ್ಲವೆಂದು, ಕಾಯಿನನನ್ನು ಯಾರೂ ಕೊಲ್ಲದ ಹಾಗೆ ಅವನ ಮೇಲೆ ಒಂದು ಗುರುತನ್ನು ಹಾಕಿದನು. ಆ ಮೇಲೆ ಕಾಯಿನನು ತನ್ನ ಹೆಂಡರು ಮಕ್ಕಳನ್ನು ಕರಕೊಂಡು, ಕರ್ತನ ಸಮ್ಮುಖದಿಂದ ಹೊರಟು ಹೋಗಿ, ಒಂದು ಪಟ್ಟಣವನ್ನು ಕಟ್ಟಿ, ಅದಕ್ಕೆ ತನ್ನ ಮಗನಾದ ಹೆನೋಖನ ಹೆಸರನ್ನಿಟ್ಟನು. ಆದಮನು ನೂರು ಮೂವತ್ತು ವರುಷದವನಾಗಿರುವಾಗ್ಗೆ, ಇದು ಸಂಭವಿಸಿತು. ತರುವಾಯ ಹವ್ವಳು ಮತ್ತೊಬ್ಬ ಮಗನನ್ನು ಹೆತ್ತು, ಕಳಕೊಂಡದ್ದಕ್ಕೆ ಪ್ರತಿಯಾಯಿತೆಂದು ಸೇಥೆಂಬ ಹೆಸರನ್ನು ಅವನಿಗೆ ಇಟ್ಟಳು.

---

೪. ಜಲಪ್ರಳಯವು.




ಪೂರ್ವಕಾಲದ ಮನುಷ್ಯರು ಈಗಿನವರಿಗಿಂತ ಅತಿಕ್ಷೇಮವುಳ್ಳವರಾಗಿ ಹತ್ತಷ್ಟು ಪ್ರಾಯವನ್ನು ಹೊಂದುತ್ತಿದ್ದರು. ಆದಮನ ವರ್ಷಗಳು ೯೩೦.

ಅವನು ತೀರುವಾಗ ಸೇಥನ ವಂಶದ ಒಂಭತ್ತನೇ ತಲೆಯವರೂ, ಕಾಯಿನನ ವಂಶದ ಹತ್ತನೇ ತಲೆಯವರೂ ಇದ್ದರು. ಅದೇ ಪ್ರಕಾರ ನೋಹನು ಒಂಭೈನೂರು ಐವತ್ತು ವರ್ಷದವನಾಗಿಯೂ, ಮೆಥೂಸಲನು ಒಂಭೈನೂರು ಅರವತ್ತೊಂಭತ್ತು ವರ್ಷದವನಾಗಿಯೂ ತೀರಿದರು. ಆ ಮನುಷ್ಯರಿಗೆ ಇಷ್ಟು ಪ್ರಾಯ ಬಂದದರಿಂದ, ಆದಮನ ಮಕ್ಕಳ ಲೆಖ್ಖವು ಅವರ ತಂದೆಯು ಸಾಯುವದಕ್ಕಿಂತ ಮುಂಚೆ ಈಗ ಭೂಮಿಯ ಮೇಲೆ ಇರುವ ಜನರೆಲ್ಲರ ಲೆಖ್ಖಕ್ಕೆ ಸರಿಯಾಗಿತ್ತೆಂದು ನೆನಸಬಹುದು. ಆದರೆ ಮನುಷ್ಯರಿಗೆ ಭೂಮಿಯ ಮೇಲೆ ಅಧಿಕವಾಗಿ ಪ್ರವೃದ್ಧಿಯಾಗುವಾಗ್ಯೆ, ಅನ್ಯಾಯವೂ ದುಷ್ಟತ್ವವೂ ಪ್ರವೃದ್ಧಿಯಾದವು. ಹೀಗಿರಲಿಕ್ಕಾಗಿ ಮನುಷ್ಯರು ಮಾಂಸಮಯರಾಗಿ, ದೇವರ ಆತ್ಮದ ಶಿಕ್ಷೆಗೆ ಕಿವಿ ಕೊಡದೆ ಇರುವದರಿಂದ, ದೇವರು ಅವರನ್ನು ನೂರು ಇಪ್ಪತ್ತು ವರ್ಷ ಪರ್ಯಂತರವೇ ತಾಳುವೆನು ಎಂದನು. ಏನಂದರೆ ಆ ಯುಗದಲ್ಲಿ ದೇವರು ಮನುಷ್ಯರನ್ನು ಬರ, ಶಿಡಲು, ವ್ಯಾಧಿ, ಭೂಕಂಪ, ಇತ್ಯಾದಿ ಕಷ್ಟಗಳಿಂದ ಶಿಕ್ಷಿಸುತ್ತಿರಲಿಲ್ಲ. ಆ ಯುಗದಲ್ಲಿ ಧರ್ಮಶಾಸ್ತ್ರವಾದರೂ ವೇದಗಳಾದರೂ ಅರಸುಗಳ ಅಧಿಕಾರವಾದರೂ ಒಂದೂ ಇರಲಿಲ್ಲವು. ದೇವರ ಆತ್ಮದಿಂದ ಮನಸ್ಸಿನಲ್ಲಿ ಹುಟ್ಟುವ ಶಿಕ್ಷೆಯೇ ಹೊರ್ತು ಬೇರೊಂದು ಶಿಕ್ಷೆಯು ಮನುಷ್ಯರಿಗೆ ಆಗಲಿಲ್ಲವು. ಆಗಲು ದೇವರು—ನಾನು ಉಂಟುಮಾಡಿದ ಮನುಷ್ಯರನ್ನು ಭೂಮಿಯಲ್ಲಿ ಇರದ ಹಾಗೆ ಸಂಹರಿಸುವೆನೆಂದನು. ಆದರೆ ನೋಹನು ಭಕ್ತಿಯುಳ್ಳವನಾಗಿ ದೇವರಿಗೆ ಸರಿಯಾಗಿ ನಡಕೊಳ್ಳುತ್ತಿರುವದರಿಂದ, ಆತನಿಂದ ಕಟಾಕ್ಷವನ್ನು ಹೊಂದಿದನು. ಆದ್ದರಿಂದ ದೇವರು ನೋಹನಿಗೆ ಹೇಳಿದ್ದು — ಮುನ್ನೂರು ಮೊಳ ಉದ್ದವೂ, ಐವತ್ತು ಮೊಳ ಅಗಲವೂ, ಮೂವತ್ತು ಮೊಳ ಎತ್ತರವೂ, ಪ್ರತ್ಯೇಕವಾದ ಕಾತಡಿಗಳೂ ಉಳ್ಳ ಹಡಗವನ್ನು ಕಟ್ಟಿಸು. ಏನಂದರೆ ನಾನು ಜಲಪ್ರಳಯವನ್ನು ಭೂಮಿಯ ಮೇಲೆ ಬರಮಾಡುವೆನು. ಅದು ಬರುವಾಗ ನೀನು ನಿನ್ನ ಮಕ್ಕಳ ಸಂಗಡಲೂ ನಿನ್ನ ಹೆಂಡತಿಯ ಸಂಗಡಲೂ ನಿನ್ನ ಸೊಸೆಯರ ಸಂಗಡಲೂ ಹಡಗದೊಳಗೆ ಪ್ರವೇಶಿಸಿ, ಸಮಸ್ತ ಭೂಮಿಯ ಮೇಲೆ ಬೀಜವು

ಉಳಿಯುವ ಹಾಗೆ ನಾನಾವಿಧದ ಪ್ರಾಣಿಗಳನ್ನು ಜೋಡು ಜೋಡಾಗಿ ಸೇರಿಸಿ, ನಿನಗೂ ಅವುಗಳಿಗೂ ಭೋಜನಕ್ಕೆ ಬೇಕಾದ ಆಹಾರವನ್ನು ಒಳಗೆ ಇಟ್ಟುಕೊಳ್ಳಬೇಕು. ಆದಮನು ತೀರಿಹೋದ ಏಳುನೂರು ಇಪ್ಪತ್ತಾರನೇ ವರ್ಷದಲ್ಲಿ, ನೋಹನು ಆರುನೂರು ವರ್ಷದವನಾಗಿ ಹಡಗದಲ್ಲಿ ಸೇರುವಾಗ, ಜಲಪ್ರಳಯದ ನೀರು ಭೂಮಿಯ ಮೇಲೆ ಬಂತು. ಹ್ಯಾಗಂದರೆ ಆಳದ ಬುಗ್ಗಗಳು ಭೂಮಿಯಿಂದ ಒಡೆದು, ಆಕಾಶದ ಕಿಟಕಿಗಳು ತೆರದು, ನಾಲ್ವತ್ತು ದಿವಸ ಮಳೆಯು ಭೂಮಿಯಲ್ಲಿ ಬಿದ್ದು, ಪ್ರವಾಹಗಳು ವೃದ್ಧಿಯಾಗಿ ಹಡಗವು ನೀರಿನ ಮೇಲೆ ತೇಲಿತು. ಮತ್ತು ಆಕಾಶದ ಕೆಳಗೆ ಇರುವ ಉನ್ನತವಾದ ಪರ್ವತಗಳೆಲ್ಲಾ ಮುಚ್ಚಿ ಹೋಗುವಹಾಗೆ ನೀರು ಹೆಚ್ಚಿತು. ಆ ಜಲವು ಮಹೋನ್ನತವಾದ ಪರ್ವತಗಳ ಮೇಲೆ ಹದಿನೈದು ಮೊಳ ಎತ್ತರ ಏರಿ, ನೂರು ಐವತ್ತು ದಿವಸ ಪರ್ಯಂತರ ಭೂಮಿಯಲ್ಲಿ ನಿಂತ ತರುವಾಯ ಇಳಿಯಲಾರಂಭಿಸಿತು. ಎರಡನೇ ತಿಂಗಳಿನ ಹತ್ತನೇ ದಿವಸದಲ್ಲಿ ನೋಹನು ಹಡಗದಲ್ಲಿ ಸೇರಿದನು. ಆ ತಿಂಗಳಿನ ಹದಿನೇಳನೇ ದಿವಸದಲ್ಲಿ ಆಳದ ಬುಗ್ಗೆಗಳು ಒಡೆದವು. ಹತ್ತನೇ ತಿಂಗಳಿನ ಮೊದಲನೇ ದಿವಸದಲ್ಲಿ ಪರ್ವತಗಳ ಅಗ್ರಗಳು ತಿರಿಗಿ ನೀರಿನೊಳಗಿಂದ ಕಾಣ ಬಂದವು. ಆ ಮೇಲೆ ನೋಹನು ನಾಲ್ವತ್ತು ದಿವಸಗಳು ಗತಿಸಿದ ತರುವಾಯ, ಹಡಗದ ಕಿಟಕಿಯನ್ನು ತೆರದು, ಒಂದು ಕಾಗೆಯನ್ನು ಹೊರಗೆ ಬಿಟ್ಟನು; ಆ ಕಾಗೆಯು ಹಾರಿ ತಿರುಗುತ್ತಾ ಹಡಗದಲ್ಲಿ ಸೇರಲಿಲ್ಲ. ಆ ಮೇಲೆ ಒಂದು ಪಾರಿವಾಳವನ್ನು ಹೊರಗೆ ಬಿಟ್ಟನು. ಅದು ತಿರಿಗಿ ಬಂತು.



ಏಳು ದಿವಸವಾದ ಮೇಲೆ ಮರಳಿ ಒಂದು ಪಾರಿವಾಳವನ್ನು ಬಿಟ್ಟನು. ಅದು ತಿರಿಗಿ ಬರುವಾಗ, ಇಗೋ, ಒಂದು ಇಪ್ಪೆಯ ಹಸಿ ಎಲೆಯನ್ನು ಮೋತಿಯಲ್ಲಿ ಹಿಡುಕೊಂಡು ಬಂತು. ಮತ್ತು ಏಳನೇ ದಿನದ ತರುವಾಯ, ಮೊದಲನೇ ತಿಂಗಳಿನ ಮೊದಲನೇ ದಿವಸದಲ್ಲಿ ಮತ್ತೊಂದು ಪಾರಿವಾಳವನ್ನು ಹೊರಗೆ ಬಿಟ್ಟನು. ಅದು ತಿರಿಗಿ ಬರಲಿಲ್ಲ. ಆಗ್ಗೆ ನೋಹನು ಹಡಗದ ಮಾಳಿಗೆಯನ್ನು ಬಿಚ್ಚಿ ಹಾಕಿ, ನೀರು ಒಣಗಿತೆಂದು ನೋಡಿದನು.




ಆ ಮೇಲೆ ಭೂಮಿಯ ನೆಲವು ನೋಹನು ಹಡಗದಿಂದ ಹೊರಡುವ ಹಾಗೆ, ವೊಣಗುವನಕ ಎರಡನೇ ತಿಂಗಳಿನ ಇಪ್ಪತ್ತೇಳನೇ ದಿವಸದ ಪರ್ಯಂತರ ತಡವಾಯಿತು. ನೋಹನು ಹೊರಟಾಗ ದೇವರಿಗೆ ಸ್ತುತಿಯ ಬಲಿಯನ್ನು ಅರ್ಪಿಸಿದನು. ದೇವರು ಅದನ್ನು ನೋಡಿ ಹೇಳಿದ್ದು — ಇನ್ನು ಮೇಲೆ ನಾನು ಮನುಷ್ಯರಿಗೋಸ್ಕರ ಪೃಥ್ವಿಗೆ ಶಾಪ ಕೊಡೆನು, ಏನಂದರೆ ಮನುಷ್ಯನ ಹೃದಯಾಲೋಚನೆಯು ಚಿಕ್ಕತನದಿಂದಲೇ ಕೆಟ್ಟದ್ದಾಗಿದೆ. ಇನ್ನು ಮೇಲೆ ಪೃಥ್ವಿ ನಿಲ್ಲುವನಕ ಬಿತ್ತುವದೂ ಕೊಯ್ಯುವದೂ, ಶೀತವೂ ಉಷ್ಣವೂ, ಬೇಸಿಗೆಯೂ ಮಳೆಗಾಲವೂ, ರಾತ್ರಿಯೂ ಹಗಲೂ ಇಲ್ಲದೇ ಹೋಗವು. ಇ

ದಲ್ಲದೆ ದೇವರು ನೋಹನನ್ನು ಆಶೀರ್ವದಿಸಿ, ಅವನ ಸಂಗಡ ಒಡಂಬಡಿಕೆಯನ್ನು ಮಾಡಿ, ತಾನು ಮಾಡಿದ ಒಡಂಬಡಿಕೆಯ ಗುರ್ತಿಗೆ ಆ ಸೌಂದರ್ಯವಾದ ಏಳು ವರ್ಣವುಳ್ಳ ಮಳೇಬಿಲ್ಲನ್ನು ಮೇಘಗಳಲ್ಲಿ ಇಟ್ಟುಕೊಂಡನು. ದೇವರು ಅದನ್ನು ಇಟ್ಟುಕೊಂಡು — ನಾನು ನನಗೂ ಭೂಮಿಯಲ್ಲಿರುವ ಸಮಸ್ತ ಮಾಂಸಕ್ಕೂ ಮಧ್ಯದಲ್ಲಿ ಸ್ಥಾಪಿಸಿದ ಒಡಂಬಡಿಕೆಯ ಗುರ್ತು ಇದೇ ಎಂದನು.

---

೫. ಬಾಬೇಲದ ಗೋಪುರವು.



ಜಲಪ್ರಳಯವಾದ ಮೇಲೆ ನೋಹನು ಇನ್ನೂ ಮುನ್ನೂರು ವರ್ಷ ಪರ್ಯಂತರ ಬದುಕಿದ್ದನು. ನೋಹನ ಮೇಲೆ ಹುಟ್ಟಿದ ಜನರ ಆಯುಷ್ಯವು ಕಡಿಮೆಯಾಯಿತು. ಅವನ ಮಗನಾದ ಶೇಮನು ಜಲಪ್ರಳಯದ ಮೇಲೆ ಐನೂರು ವರ್ಷ ಪರ್ಯಂತರ ಬದುಕಿ, ಮಕ್ಕಳೂ ಮೊಂಮಕ್ಕಳೂ ಮೊದಲಾದ ದೊಡ್ಡ ಜನಸಮೂಹವನ್ನು ಕಂಡನು. ನೋಹನ ಮೊಮ್ಮಗನಾದ ಅರ್ಪಕ್ಷದನ ಆಯುಷ್ಯವು ನಾನೂರ ಮೂವತ್ತೆಂಟು ವರ್ಷವು. ಅವನ ಮಗನ ಆಯುಷ್ಯವು ನಾನೂರ ಮೂವತ್ತಮೂರು. ಅವನ ಮೊಮ್ಮಗನ ಆಯುಷ್ಯವು ನಾನೂರ ಆರವತ್ತನಾಲ್ಕು. ಇವನ ತರುವಾಯ ಯಾವನಾದರೂ

ಇನ್ನೂರ ಐವತ್ತು ವರ್ಷಕ್ಕಿಂತ ಹೆಚ್ಚಾದ ಆಯುಷ್ಯವನ್ನು ಹೊಂದದಹಾಗೆ, ಮನುಷ್ಯರ ತ್ರಾಣವು ಕಡಿಮೆಯಾಯಿತು. ಸೇಮನು ತನ್ನ ಹತ್ತನೇ ತಲಾಂತರದವರು ಸಾಯುವ ಪರ್ಯಂತರಕ್ಕೂ ಬದುಕಿದ್ದನು. ಆ ಕಾಲದಲ್ಲಿ ರಾಜರು ಜನರನ್ನು ತಮ್ಮ ವಶಮಾಡಿಕೊಂಡು, ಬಲಾತ್ಕಾರದಿಂದ ಆಳಿಕೊಳ್ಳಲಿಕ್ಕೆ ಆರಂಭಿಸಿದರು. ಸ್ಥೈರ್ಯವುಳ್ಳ ಮೊದಲನೇ ರಾಜನಾದ ನಿಮ್ರೋದನು ಹಾಮನ ಮೊಮ್ಮಗನೂ ನೋಹನ ಮರಿಮಗನೂ ಆಗಿದ್ದನು. ಅವನು ಬಾಬೇಲಿನಲ್ಲಿ ತನ್ನ ರಾಜ್ಯವನ್ನುಂಟುಮಾಡಿದ್ದು, ಜಲಪ್ರಳಯವು ಆದ ನೂರ ಎಂಭತ್ತನೇ ವರ್ಷದಲ್ಲಿ ಸಂಭವಿಸಿತು. ಹುಡಗರೇ, ಪೃಥ್ವಿ ಉಂಟಾದಾರಭ್ಯ ನಿಮ್ರೋದನು ಎಷ್ಟನೇ ವರ್ಷದಲ್ಲಿ ತನ್ನ ರಾಜ್ಯವನ್ನುಂಟುಮಾಡಿದನೆಂಬದನ್ನು ನನಗೆ ಹೇಳಿರಿ. ಆ ಕಾಲದಲ್ಲಿ ಭೂಮಿಯ ಮೇಲೆ ಒಂದೇ ಭಾಷೆ ಇತ್ತು. ಮನುಷ್ಯರು ತಮಗೆ ಹೆಸರನ್ನುಂಟುಮಾಡಬೇಕೆಂದೂ, ಭೂಮಿಯ ಮೇಲೆ ಹರಡಿ ಬೀಳಬಾರದೆಂದೂ, ಫ್ರಾತನದಿಯ ಬೈಲಿನಲ್ಲಿ ಒಂದು ಪಟ್ಟಣವನ್ನು ಕಟ್ಟಿ, ಅದರಲ್ಲಿ ಆಕಾಶಕ್ಕೆ ಮುಟ್ಟುವ ಗೋಪುರವನ್ನು ಮಾಡುವ ಆಲೋಚನೆಯಲ್ಲಿದ್ದರು. ಅವರ ಆಲೋಚನೆಯು ಕರ್ತನಿಗೆ ಸರಿಯಾಗಿ ಕಾಣಲಿಲ್ಲ. ಆತನು ಕೆಳಗೆ ಇಳಿದು, ಒಬ್ಬರ ಭಾಷೆ ಒಬ್ಬರಿಗೆ ತಿಳಿಯದಹಾಗೆ ಗಲಿಬಿಲಿ ಮಾಡುವ ಎಂದನು. ಆ ಪ್ರಕಾರವಾಗಿ ದೇವರು ಮನುಷ್ಯರನ್ನು ಸಕಲ ದೇಶಗಳಿಗೆ ಚದರಿಸಿ ಆ ಪಟ್ಟಣ ಕಟ್ಟಿಸುವದನ್ನು ನಿಲ್ಲಿಸಿದನು.

---

೬. ಅಬ್ರಹಾಮನ ಕರೆಯುವಿಕೆ.

ನೋಹನು ತೀರುವದಕ್ಕಿಂತ ಸ್ವಲ್ಪ ಮುಂಚೆ ಸೇಮನ ಹತ್ತನೇ ತಲಾಂತರದಲ್ಲಿ ಅಬ್ರಹಾಮನು ಹುಟ್ಟಿದನು. ಆ ವೇಳೆಯಲ್ಲಿ ಮನುಷ್ಯರು ಬೇರೆ ಬೇರೆ ಜನಾಂಗಗಳಾಗಿ ಪ್ರತ್ಯೇಕಿಸಲ್ಪಟ್ಟು, ವಿಗ್ರಹಾರಾಧನೆಗಳಲ್ಲಿ ಬಿದ್ದರು. ಆ



ದದರಿಂದ ದೇವರು ಅಬ್ರಹಾಮನಿಗೆ ಹೇಳಿದ್ದೇನಂದರೆ — ನಿನ್ನ ಸ್ವದೇಶವನ್ನೂ ನಿನ್ನ ಸ್ವಜನರನ್ನೂ ಬಿಟ್ಟು, ನಿನ್ನ ತಂದೆಯ ಮನೆಯಿಂದ ಹೊರಟು, ನಾನು ನಿನಗೆ ತೋರಿಸುವ ದೇಶಕ್ಕೆ ಹೋಗು; ನಿನ್ನಿಂದ ಜನಸಮೂಹವನ್ನುಂಟುಮಾಡಿ, ನಿನ್ನನ್ನು ಆಶೀರ್ವದಿಸಿ, ನಿನಗೆ ದೊಡ್ಡ ಹೆಸರನ್ನು ಎಬ್ಬಿಸುವೆನು. ಆಶೀರ್ವಾದವೇ ನಿನ್ನಲ್ಲಿರುವದು. ನಿನ್ನನ್ನು ಆಶೀರ್ವದಿಸುವವರನ್ನು ನಾನು ಆಶೀರ್ವದಿಸುವೆನು; ನಿನ್ನನ್ನು ಶಪಿಸುವವರನ್ನು ನಾನು ಶಪಿಸುವೆನು. ನಿನ್ನದೆಶೆಯಿಂದ ಭೂಮಿಯ ಮೇಲೆ ಇರುವ ಸಮಸ್ತ ವಂಶದವರು ಆಶೀರ್ವದಿಸಲ್ಪಡುವರು. ಅಬ್ರಹಾಮನು ಎಪ್ಪತ್ತೈದು ವರ್ಷದವನಾಗಿ ಈ ಮಾತು ಕೇಳಿ, ತನ್ನ ನೆಂಟನಾದ ಲೋಟನನ್ನು ಕರಕೊಂಡು ಹೊರಟು ಹೋದನು.



ಆದರೆ ಅಬ್ರಹಾಮನ ಕುರುಬರಿಗೂ ಲೋಟನ ಕುರುಬರಿಗೂ ಜಗಳ ಹುಟ್ಟಿತು. ಯಾಕಂದರೆ ಇವರಿಗೆ ಬಹಳ ಮಂದೆಗಳು ಇರುವದರಿಂದ, ಅವರು ಕೂಡಾ ಇರುವದಕ್ಕೆ ದೇಶವು ಸಾಲದೇ ಹೋಯಿತು. ಅದುಕಾರಣ ಅಬ್ರಹಾಮನು ಲೋಟನಿಗೆ ಹೇಳಿದ್ದು—ಪ್ರಿಯನೇ, ನಾವು ನೆಂಟರಾಗಿರುವದರಿಂದ, ನನ್ನ ಕುರುಬರಿಗೂ ನಿನ್ನ ಕುರುಬರಿಗೂ ಜಗಳವಿರಬಾರದು; ಸಮಸ್ತ ದೇಶವು ನಿನ್ನ ಮುಂದೆ ಬೈಲಾಗಿರುವದಿಲ್ಲವೋ? ನನ್ನನ್ನು ಬಿಟ್ಟು ಪ್ರತ್ಯೇಕವಾಗಿರು. ನೀನು ಎಡಗಡೆಗೆ ಹೋದರೆ, ನಾನು ಬಲಗಡೆಗೆ ಹೋಗುವೆನು; ನೀನು ಬಲಗಡೆಗೆ ಹೋದರೆ, ನಾನು ಎಡಗಡೆಗೆ ಹೋದೇನು. ಆಗಲು ಲೋಟನು ಸಿದ್ದಿಮೆಂಬ ಒಳ್ಳೇ ತಗ್ಗಾದ ಸೀಮೆಯನ್ನು ನೋಡಿ, ಸೊದೋಮೂ ಗಮೋರವೂ ಎಂಬ ಈ ಎರಡು ಪಟ್ಟಣಗಳು ಇರುವ ದಿಕ್ಕಿಗೆ ಹೋದನು. ಅಬ್ರಹಾಮನು ಕಾನಾನ ದೇಶದಲ್ಲಿ ವಾಸ ಮಾಡಿದನು.

---

೭. ಅಬ್ರಹಾಮನ ವಿಶ್ವಾಸವು.

ಅಬ್ರಹಾಮನು ಹೀಗೆ ಮಾಡಿದದರಿಂದ, ದೇವರು ಅವನನ್ನು ಆಶೀರ್ವದಿಸಿ—ನೀನು ಭಯ ಪಡಬೇಡ; ನಾನು ನಿನ್ನ ಡಾಲೂ, ನಿನ್ನ ಅತ್ಯಧಿಕವಾದ ಸಂಬಳವೂ ಆಗಿದ್ದೇನೆಂದನು. ಆದರೆ ಅಬ್ರಹಾಮನು ಮಗನಿಲ್ಲದೇ ಇರುವದರಿಂದ, ಅಧಿಕ ದುಃಖದಲ್ಲಿದ್ದನು. ಆಗಲು ದೇವರು ಅವನನ್ನು ಹೊರಗೆ ಕರೆದು—ನೀನು ಆಕಾಶಕ್ಕೆ ಕಣ್ಣು ಎತ್ತಿ ನಕ್ಷತ್ರಗಳನ್ನು ನೋಡು, ಅವುಗಳನ್ನು ಎಣಿಸ ಬಹುದೋ? ಅವುಗಳ ಹಾಗೆಯೇ ನಿನ್ನ ಸಂತಾನವು ಆಗುವದೆಂದನು. ಅಬ್ರಹಾಮನು ಕರ್ತನ ಮಾತನ್ನು ವಿಶ್ವಾಸಿಸಿದದರಿಂದ, ಕರ್ತನು ಆ ವಿಶ್ವಾಸವನ್ನು ಅವನಿಗೆ ನೀತಿಯೆಂದೆಣಿಸಿದನು.

ಅಬ್ರಹಾಮನು ತೊಂಭತ್ತೊಂಭತ್ತು ವರ್ಷದವನಾಗಿರುವಾಗ್ಯೆ, ದೇವರು ಅವನಿಗೆ ಪ್ರತ್ಯಕ್ಷವಾಗಿ ಹೇಳಿದ್ದು—ನಾನೇ ಸರ್ವತ್ರಾಣಿಯಾದ ದೇವರು, ನೀನು

ನನ್ನ ಮುಂದೆ ನಡಕೊಂಡು ಸದ್ಗುಣನಾಗಿರು! ನಾನು ನಿನ್ನಸಂಗಡ ನನ್ನ ಒಡಂಬಡಿಕೆಯನ್ನು ಸ್ಥಿರಮಾಡಿ, ನಿನ್ನನ್ನು ಅತ್ಯಧಿಕವಾಗಿ ಹೆಚ್ಚಿಸುವೆನು. ಅದು ಕಾರಣ ಇನ್ನು ಮೇಲೆ ಅಬ್ರಾಮನೆಂಬ ಹೆಸರನ್ನು ಬಿಟ್ಟು, ಅಬ್ರಹಾಮನೆಂಬ ಹೆಸರನ್ನು ಧರಿಸಿಕೊಳ್ಳಬೇಕು. ಏನಂದರೆ ನಾನು ನಿನ್ನನ್ನು ಅನೇಕ ಜನಾಂಗಗಳ ತಂದೆಯಾಗಿ ಇಟ್ಟಿದ್ದೇನೆ. ಈ ಒಡಂಬಡಿಕೆಯ ಗುರುತಾಗಿ ದೇವರು ಆವಾಗಲೇ ಸುನ್ನತಿಯನ್ನು ನೇಮಿಸಿದನು.



ಆ ಮೇಲೆ ಮಮ್ರೇತೋಪಿನಲ್ಲಿ ಹೊತ್ತು ಬಿಸಿಲಾಗಿರುವ ಸಮಯದಲ್ಲಿ ತನ್ನ ಗುಡಾರದ ಬಾಗಲಲ್ಲಿ ಕೂತುಕೊಂಡಿರುವ ಅಬ್ರಹಾಮನಿಗೆ ಕರ್ತನು ಪ್ರತ್ಯಕ್ಷವಾದನು. ಅವನು ತನ್ನ ಕಣ್ಣುಗಳನ್ನೆತ್ತುವಾಗ, ಮೂರು ಮಂದಿಯನ್ನು ಕಂಡು, ಅವರನ್ನು ಎದುರುಗೊಂಡು, ನೆಲಮುಟ್ಟಿ ವಂದಿಸಿ ಹೇಳಿದ್ದು — ಕರ್ತನೇ ನಿನ್ನ ಕಟಾಕ್ಷವು ನನ್ನ ಮೇಲೆ ಇದ್ದರೆ, ದಾಟಿಹೋಗದೇ ಇರು. ಸ್ವಲ್ಪ ನೀರನ್ನು ತರಿಸಿ ನಿಮ್ಮ ಪಾದಗಳನ್ನು ತೊಳಕೊಂಡು, ಈ ಮರದ ಕೆಳಗೆ ವಿಶ್ರಮಿಸಿಕೊಳ್ಳಿರಿ. ಈ ಮಾತು ಹೇಳಿ, ತ್ವರೆಯಾಗಿ ತನ್ನ ಗುಡಾರದಲ್ಲಿ ಸೇರಿ, ಸಾರಳಿಗೆ — ಶೀಘ್ರವಾಗಿ ಹಿಟ್ಟನ್ನು ನಾದಿ ಸುಡು ಎಂದು, ಎಳೇ ಕರುವನ್ನು ತರಿಸಿ ಪಕ್ವಮಾಡಿಸಿ, ಬೆಣ್ಣೆಯನ್ನೂ ಹಾಲನ್ನೂ ಅವರ ಮುಂದೆ ಇಟ್ಟನು. ಅವರು ತಕ್ಕೊಂಡು ಭಕ್ಷಿಸಿದರು. ಆಗಲು ಕರ್ತನು — ಬರುವ ವರ್ಷದ ಇದೇ ಸಮಯದಲ್ಲಿ ನಾನು ತಿರುಗಿ ಬರುವೆನು, ಆವಾಗ ಸಾರಳು ಒಬ್ಬ ಮಗನನ್ನು ಹೆತ್ತು

ಇರುವಳು ಎಂದನು. ಸಾರಳು ಗುಡಾರದ ಬಾಗಲ ಹಿಂದೆ ನಿಂತು, ಇದನ್ನು ಕೇಳಿ ತನ್ನಲ್ಲೇ ನಕ್ಕಳು. ಕರ್ತನು — ಸಾರಳು ನಗುವದೇನು? ದೇವರಿಗೆ ಏನಾದರೂ ಅಸಾಧ್ಯವಾಗಿರುವದೋ? ಎಂದನು. ಸಾರಳು — ನಾನು ನಗಲಿಲ್ಲವೆಂದಳು. ಆತನು — ಅಲ್ಲ, ನೀನು ನಕ್ಕೆ ಎಂದನು.

ತರುವಾಯ ಆ ಜನರು ಎದ್ದು ಸೊದೋಮಿನ ಕಡೆಗೆ ಹೋದರು. ಅಬ್ರಹಾಮನು ಅವರನ್ನು ಕಳುಹಿಸಲಿಕ್ಕೆ ಅವರ ಸಂಗಡ ಹೋದನು. ಆಗ್ಗೆ ಕರ್ತನು ಅಂದುಕೊಂಡದ್ದು — ನಾನು ಮಾಡುವ ಕಾರ್ಯವನ್ನು ಅಬ್ರಹಾಮನಿಗೆ ಯಾಕೆ ಮರೆಮಾಡಲಿ? ಏನಂದರೆ ಕರ್ತನು ಅಬ್ರಹಾಮನಿಗೆ ಹೇಳಿದ್ದು ಉಂಟಾಗುವ ಹಾಗೆ, ಅವನು ತನ್ನ ಮಕ್ಕಳಿಗೂ ತನ್ನ ತರುವಾಯ ಹುಟ್ಟುವ ಕುಟುಂಬಕ್ಕೂ ನೀತಿಯನ್ನೂ ನ್ಯಾಯವನ್ನೂ ಮಾಡಿ, ಕರ್ತನ ಮಾರ್ಗವನ್ನು ಕೈಕೊಳ್ಳ ಬೇಕೆಂದು ಆಜ್ಞಾಪಿಸುವನು. ಆಗಲು ಕರ್ತನು ಅಬ್ರಹಾಮನಿಗೆ — ಸೊದೋಮಿನಲ್ಲಿರುವವರನ್ನು ಶಿಕ್ಷಿಸಿ ನಾಶನ ಮಾಡ ಬೇಕೆಂಬ ಆಲೋಚನೆಯನ್ನು ತಿಳಿಸಿದನು. ಅಬ್ರಹಾಮನು ಅವರಿಗೋಸ್ಕರ ಬೇಡಿಕೊಂಡು ಹೇಳಿದ್ದು — ಒಂದು ವೇಳೆ ಆ ಪಟ್ಟಣದಲ್ಲಿ ಐವತ್ತು ಮಂದಿ ಸತ್ಯವಂತರು ಇದ್ದಾರು; ಅಸತ್ಯವಂತರ ಸಂಗಡ ಸತ್ಯವಂತರನ್ನು ಕೊಲೆಮಾಡಿಸುವದು ನಿನಗೆ ದೂರವಾಗಿರಲಿ. ಕರ್ತನು ಹೇಳಿದ್ದು — ನಾನು ಅಲ್ಲಿ ಐವತ್ತು ಮಂದಿ ಸತ್ಯವಂತರನ್ನು ಕಂಡರೆ, ಅದರ ನಿಮಿತ್ತವಾಗಿ ಆ ಸ್ಥಳವನ್ನೆಲ್ಲಾ ಮನ್ನಿಸುವೆನು. ಅಬ್ರಹಾಮನು ಮತ್ತೂ ಹೇಳಿದ್ದು — ನಾಲ್ವತ್ತೈದು ಮಂದಿ ಸತ್ಯವಂತರು ಇದ್ದರೆ, ಐದು ಮಂದಿ ಕಡಿಮೆಯಾಗಿರುವದರಿಂದ ಆ ಪಟ್ಟಣವನ್ನು ನಾಶನ ಮಾಡುವಿಯೋ? ಮತ್ತು ಒಂದು ವೇಳೆ ನಾಲ್ವತ್ತು, ಇಲ್ಲವೆ ಮೂವತ್ತು, ಇಲ್ಲವೆ ಇಪ್ಪತ್ತು, ಇಲ್ಲದಿದ್ದರೆ ಹತ್ತು ಮಂದಿ ಸತ್ಯವಂತರು ಇದ್ದಾರು, ಎಂದು ಅಬ್ರಹಾಮನು ಮುಂದೆ ಮುಂದೆ ಹೇಳಿದ್ದಲ್ಲಿ, ಕರ್ತನು — ಹತ್ತು ಮಂದಿಯನ್ನಾದರೂ ಕಂಡರೆ, ಆ ಸ್ಥಳವನ್ನು ನಾಶನ ಮಾಡೆನೆಂದನು. ಮಾತಾಡಿ ಆದ ಮೇಲೆ ಕರ್ತನು ಹೊರಟು ಹೋದನು. ಅಬ್ರಹಾಮನು ತನ್ನ ಸ್ಥಳಕ್ಕೆ ತಿರುಗಿದನು.

---

೮. ಸೊದೋಮು ಗಮೋರವು ಎಂಬ ಪಟ್ಟಣಗಳ ನಾಶನವು.



ಆ ಇಬ್ಬರೂ ದೂತರು ಸೊದೋಮಿಗೆ ಬರುವಾಗ, ಸಂಜೆಯಾಯಿತು. ಲೋಟನು ಅವರನ್ನು ನೋಡಿ, ದೇಶಾಂತರಿಗಳೆಂದು ನೆನಸಿಕೊಂಡು, ಎದುರು ಹೋಗಿ, ತನ್ನ ಹತ್ತರ ಈ ರಾತ್ರಿ ಉಳಕೊಳ್ಳ ಬೇಕೆಂದು ಮರ್ಯಾದೆಯಿಂದ ಕರಕೊಂಡು ಬಂದನು. ಸೊದೋಮಿನವರು ಆ ರಾತ್ರಿಯಲ್ಲಿ ಅಸಂಖ್ಯವಾದ ದುಷ್ಟತನವನ್ನು ಮಾಡಿದದರಿಂದ, ಆ ದೂತರು ಲೋಟನ ಮನೆಯ ಬಾಗಲು ಕಾಣದ ಹಾಗೆ ಅವರಿಗೆ ದೃಷ್ಟಿಬಂಧ ಮಾಡಿದರು. ಇದಲ್ಲದೆ ಲೋಟನಿಗೆ — ನಿನಗೆ ನೆಂಟರು ಇದ್ದರೆ, ಅವರನ್ನು ಈ ಪಟ್ಟಣದಿಂದ ಹೊರಗೆ ಕರಕೊಂಡು ಹೋಗು; ಎನಂದರೆ ನಾವು ಈ ಸ್ಥಳವನ್ನು ನಾಶನ ಮಾಡುತ್ತೇವೆ, ಎಂದರು. ಲೋಟನು ಆ ವರ್ತಮಾನವನ್ನು ತನ್ನ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಕೊಡುತ್ತೇನೆಂದು ಹೇಳಿದ ಇಬ್ಬರು ಪುರುಷರಿಗೆ ಹೇಳಿದನು. ಅವರು ಕೇಳಿ ಹಾಸ್ಯ ಮಾಡಿದರು.

ಅರುಣೋದಯದಲ್ಲಿ ಆ ದೂತರು ಲೋಟನನ್ನು ಎಚ್ಚರಿಸಿದರು. ಅವನು ತಡ ಮಾಡುವಾಗ, ಅವರು ಅವನನ್ನೂ ಅವನ ಹೆಂಡತಿಯನ್ನೂ ಅವನ ಇಬ್ಬರು ಹೆಣ್ಣುಮಕ್ಕಳನ್ನೂ ಹಿಡಿದುಕೊಂಡು, ಆಪಟ್ಟಣದಿಂದ ಹೊರಗೆ ಒಯ್ದರು. ಆಗಲು ಕರ್ತನ ದೂತನು ಹೇಳಿದ್ದು — ನಿನ್ನ ಪ್ರಾಣವನ್ನು ರಕ್ಷಿಸಿಕೋ, ಹಿಂದಕ್ಕೆ ತಿರಿಗಿ ನೋಡದೇ ಇರು; ಈ ಸ್ಥಳದಲ್ಲೆಲ್ಲಿಯೂ ನಿಲ್ಲಲಾಗದು! ಸೂರ್ಯನು ಉದಯಿಸಿದಾಗಲೇ ಲೋಟನು ಚೋವಾರಿಗೆ ಬಂದಾಗ, ಕರ್ತನು

ಸೊದೋಮು ಗಮೋರವೂ ಎಂಬ ಪಟ್ಟಣಗಳ ಮೇಲೆ ಆಕಾಶದಿಂದ ಗಂಧಕವನ್ನೂ ಅಗ್ನಿಯನ್ನೂ ಸುರಿಸಿ, ಆಸ್ಥಳವನ್ನೆಲ್ಲಾ ನಾಶನ ಮಾಡಿದನು.

ಆ ಒಳ್ಳೆ ಸೊದೋಮಿನ ತಗ್ಗು ಮುಂಚೆ ಇದ್ದಲ್ಲಿ ಈಗ ಸತ್ತಸಮುದ್ರವೆಂದೂ, ಉಪ್ಪಿನ ಸಮುದ್ರವೆಂದೂ ಕರೆಯಲ್ಪಟ್ಟ ಸಮುದ್ರವು ಉಂಟು. ಈಗಿನ ಕಾಲದಲ್ಲಿ ಆ ಸೀಮೆಯನ್ನು ನೋಡುವ ಪ್ರಯಾಣಸ್ಥರು, ದೇವರು ಭಯಂಕರ ರೀತಿಯಾಗಿ ಪಾಪಕ್ಕೆ ಶಿಕ್ಷೆ ಕೊಡುತ್ತಾನೆಂದು ಜ್ಞಾಪಕ ಮಾಡುತ್ತಾರೆ. ಲೋಟನ ಹೆಂಡತಿಯು ಹಿಂದಕ್ಕೆ ತಿರುಗಿ ನೋಡಿದದರಿಂದ, ಉಪ್ಪಿನ ಸ್ತಂಭವಾದಳು.

---

೯. ಇಷ್ಮಾಯೇಲನು.



ಅಬ್ರಹಾಮನು ಎಂಭತ್ತಾರು ವರ್ಷದವನಾಗಿರುವಾಗ, ಹಾಗರಳಿಂದ ಇಷ್ಮಾಯೇಲನೆಂಬ ಮಗನು ಅವನಿಗೆ ಹುಟ್ಟಿದನು.

ಆಮೇಲೆ ಅಬ್ರಹಾಮನು ನೂರು ವರ್ಷದವನಾಗಿರುವಾಗ, ದೇವರು ಸಾರಳನ್ನು ಕಟಾಕ್ಷದಿಂದ ನೋಡಿದರಿಂದ, ಅವಳು ಇಸಾಕನನ್ನು ಹೆತ್ತಳು. ಸಾರಳು ಇಷ್ಮಾಯೇಲನು ಹಾಸ್ಯಗಾರನೆಂದು ಕಂಡು, ಅಬ್ರಹಾಮನಿಗೆ—ಈ ದಾಸಿಯನ್ನೂ ಇವಳ ಮಗನನ್ನೂ ಹೊರಗೆ ಹಾಕು! ಎಂದಳು. ಈ ಮಾತು

ಅಬ್ರಹಾಮನಿಗೆ ಸರಿ ಬೀಳಲಿಲ್ಲ. ಆದರೆ ದೇವರು ಅವನಿಗೆ ಹೇಳಿದ್ದು — ಆ ಹುಡುಗನಿಗೋಸ್ಕರವೂ, ನಿನ್ನ ದಾಸಿಗೋಸ್ಕರವೂ ಚಿಂತೆ ಪಡಬೇಡ; ಸಾರಳು ನಿನಗೆ ಹೇಳಿದ್ದನ್ನೆಲ್ಲಾ ಮಾಡು; ಯಾಕಂದರೆ ಇಸಾಕನಿಂದ ನಿನ್ನ ಸಂತಾನವು ಹುಟ್ಟುವದು; ಆದಾಗ್ಯೂ ದಾಸಿಯ ಮಗನು ನಿನ್ನ ಸಂತಾನವಾಗಿರುವ ಕಾರಣ, ಅವನಿಂದಲೂ ಒಂದು ಜನಾಂಗವನ್ನು ಉಂಟು ಮಾಡುವೆನು.

ಆಗಲು ಅಬ್ರಹಾಮನು ದಾಸಿಯಾದ ಹಾಗರಳಿಗೆ ರೊಟ್ಟಿಯನ್ನೂ, ಒಂದು ಪಖಾಲಿ ನೀರನ್ನೂ ಕೊಟ್ಟು, ಅವಳನ್ನು ಮಗನ್ನ ಸಹವಾಗಿ ಕಳುಹಿಸಿ ಬಿಟ್ಟನು. ಅವಳು ಹೋಗಲಾಗಿ, ಅರಣ್ಯದಲ್ಲಿ ಮಾರ್ಗ ತಪ್ಪಿದಳು. ತೊಗಲ ಪಖಾಲಿಯಲ್ಲಿ ಇದ್ದ ನೀರು ಮುಗಿದ ತರುವಾಯ ಭಾವಿ ಕಾಣದೇ ಇರುವದರಿಂದ, ಹಾಗರಳು — ನೀರಡಿಕೆಯಿಂದ ಸಾಯುವ ಹುಡುಗನನ್ನು ನೋಡಲಾರೆನೆಂದು, ದೂರದಲ್ಲಿ ಕೂತಳು. ಆಗ ದೇವರು ಹುಡುಗನ ಶಬ್ದವನ್ನು ಆಲೈಸಲಾಗಿ, ದೇವದೂತನು ಆಕಾಶದೊಳಗಿಂದ ಹಾಗರಳಿಗೆ — ಹಾಗರಳೇ, ನಿನಗೇನಾಯಿತು? ಭಯ ಪಡಬೇಡ! ಎಂದು ಕೂಗಿ ಹೇಳಿದನು. ಮತ್ತು ದೇವರು ಅವಳ ಕಣ್ಣುಗಳನ್ನು ತೆರದು, ಒಂದು ಭಾವಿಯನ್ನು ತೋರಿಸಿದನು. ಆಗಲವಳು ತನ್ನ ಮಗನಿಗೆ ಕುಡಿಸಿದಳು.

ಅರಣ್ಯದಲ್ಲಿ ದೇವರು ಅವನ ಸಂಗಡಲಿದ್ದದರಿಂದ, ಅವನು ಒಳ್ಳೇ ಬಿಲ್ಲುಗಾರನಾದನು. ಈ ಇಷ್ಮಾಯೇಲನು ಇಷ್ಮಾಯೇಲಿಯ ವಂಶದವರಾದ ಅರಬಿಯರಿಗೂ ತುರ್ಕರಿಗೂ ಹಿರಿಯರಾಗಿರುವ ಹನ್ನೆರಡು ಜನ ಮುಖ್ಯಸ್ಥರಿಗೆ ತಂದೆಯಾದನು.

---

೧೦ ಇಸಾಕನು.

ಈ ಕಾರ್ಯಗಳಾದ ಮೇಲೆ ದೇವರು ಅಬ್ರಹಾಮನ ಮನಸ್ಸನ್ನು ಶೋಧಿಸುವದಕ್ಕೆ ಹೇಳಿದ್ದೇನಂದರೆ — ನಿನ್ನ ಒಬ್ಬನೇ ಪ್ರಿಯ ಮಗನಾದ ಇಸಾಕನ



ನ್ನು ಕರಕೊಂಡು, ಮೊರೀಯ ಸೀಮೆಗೆ ಹೋಗಿ, ನಾನು ನಿನಗೆ ತೋರಿಸುವ ಒಂದು ಗುಡ್ಡದ ಮೇಲೆ ಅವನನ್ನು ನನಗೆ ದಹನಬಲಿಯಾಗಿ ಅರ್ಪಿಸು. ಅಬ್ರಹಾಮನು ಬೆಳಿಗ್ಗೆ ಎದ್ದು, ತನ್ನ ಕತ್ತೆಗೆ ತಡಿ ಹಾಕಿ, ಎರಡು ಜನ ಸೇವಕರನ್ನೂ ತನ್ನ ಮಗನಾದ ಇಸಾಕನನ್ನೂ ಕರಕೊಂಡು ಹೋದನು. ಮೂರನೇ ದಿವಸದಲ್ಲಿ ಆ ಸ್ಥಳವು ದೂರದಿಂದ ಕಾಣುವಾಗ, ಅವನು ಸೇವಕರಿಗೆ—ನೀವು ಇಲ್ಲಿ ಕತ್ತೆಯನ್ನು ನಿಲ್ಲಿಸಿ ಕೂತಿರಿ! ಎಂದು ಹೇಳಿ, ತನ್ನ ಮಗನಾದ ಇಸಾಕನ ಹೆಗಲಿನ ಮೇಲೆ ದಹನಬಲಿಯ ಕಟ್ಟಿಗೆಗಳನ್ನು ಹೊರಿಸಿ, ತನ್ನ ಕೈಯಲ್ಲಿ ಬೆಂಕಿಯನ್ನು ತೆಗದು ಕೊಂಡು, ಇಬ್ಬರೂ ಕೂಡಾ ಹೋದರು. ಆಗಲು ಇಸಾಕನು—ತಂದೆಯೇ, ಇಗೋ, ಬೆಂಕಿಯೂ ಕಟ್ಟಿಗೆಯೂ ಉಂಟು; ಆದರೆ ದಹನಬಲಿಗೆ ಬೇಕಾದ ಕುರಿಮರಿ ಎಲ್ಲಿ? ಎಂದನು. ಅದಕ್ಕೆ ಅಬ್ರಹಾಮನು—ಮಗನೇ, ದೇವರು ತನಗೆ ದಹನಬಲಿಗಾದ ಕುರಿಮರಿಯನ್ನು ವಿಚಾರಿಸಿ ಕೊಂಬುವನು ಎಂದನು. ಹಾಗೆಯೇ ಅವರಿಬ್ಬರೂ ಸುಮ್ಮನೇ ನಡದು ಹೋದರು.

ದೇವರು ಅಬ್ರಹಾಮನಿಗೆ ಹೇಳಿದ ಸ್ಥಳಕ್ಕೆ ಅವರು ಬಂದ ತರುವಾಯ, ಅಬ್ರಹಾಮನು ಒಂದು ಪೀಠವನ್ನು ಕಟ್ಟಿ, ಕಟ್ಟಿಗೆಗಳನ್ನು ಒಟ್ಟಿ, ತನ್ನ ಮಗನಾದ ಇಸಾಕನನ್ನು ಕಟ್ಟಿ, ಆ ಪೀಠದ ಕಟ್ಟಿಗೆಗಳ ಮೇಲೆ ಮಲಗಿಸಿ, ತನ್ನ ಕೈಯನ್ನು ಚಾಚಿ, ತನ್ನ ಮಗನನ್ನು ಕಡಿಯುವದಕ್ಕೆ ಕತ್ತಿಯನ್ನು ತೆಗದುಕೊಂಡನು. ಆಗಲು ಕರ್ತನ ದೂತನು ಆಕಾಶದಿಂದ—ಅಬ್ರಹಾಮನೇ, ಅಬ್ರಹಾಮನೇ, ಚಿಕ್ಕವನ ಮೇಲೆ ನಿನ್ನ ಕೈಯನ್ನು ಹಾಕಬೇಡ, ಯಾಕಂದರೆ ನೀನು ನನಗೋ



ಸ್ಕರ ನಿನ್ನ ಒಬ್ಬನೇ ಪ್ರಿಯ ಮಗನನ್ನು ನೋಡದೇ ಹೋದದರಿಂದ, ನೀನು ದೇವರಿಗೆ ಭಯಪಡುತ್ತಿದ್ದೀ ಎಂದು ಈಗ ತಿಳಿದಿದ್ದೇನೆ ಎಂದನು. ಅಬ್ರಹಾಮನು ತನ್ನ ಕಣ್ಣುಗಳನ್ನೆತ್ತಲಾಗಿ, ಒಂದು ಪೊದೆಯಲ್ಲಿ ಕೊಂಬು ಸಿಕ್ಕಿಕೊಂಡ ಒಂದು ಹೋತನ್ನು ಕಂಡು, ಅದನ್ನು ಹಿಡಿದು, ತನ್ನ ಮಗನಿಗೆ ಪ್ರತಿಯಾದ ದಹನಬಲಿಯಾಗಿ ಅರ್ಪಿಸಿದನು.

ಮತ್ತು ಕರ್ತನ ದೂತನು ಎರಡನೇ ಸಾರಿ ಆಕಾಶದಿಂದ ಅಬ್ರಹಾಮನನ್ನು ಕರದು ಹೇಳಿದ್ದೇನಂದರೆ—ನೀನು ನನ್ನ ವಾಕ್ಯವನ್ನು ಕೇಳಿ, ಈ ಕಾರ್ಯವನ್ನು ಮಾಡಿ, ನನಗೋಸ್ಕರ ನಿನ್ನ ಒಬ್ಬನೇ ಮಗನನ್ನು ಪ್ರೀತಿಸದೇ ಹೋದದರಿಂದ, ನಾನು ನಿನ್ನನ್ನು ಆಶೀರ್ವದಿಸಲೇ ಆಶೀರ್ವದಿಸಿ, ನಿನ್ನ ಸಂತಾನವನ್ನು ಆಕಾಶದ ನಕ್ಷತ್ರಗಳ ಹಾಗೆಯೂ ಸಮುದ್ರದ ಉಸುಬಿನ ಹಾಗೆಯೂ ವರ್ಧಿಸಲೇ ವರ್ಧಿಸ ಮಾಡುವೆನು. ನಿನ್ನ ಸಂತಾನದಿಂದ ಭೂಮಿಯ ಮೇಲಿರುವ ಸಮಸ್ತ ಜನಾಂಗಗಳು ಆಶೀರ್ವಾದವನ್ನು ಹೊಂದುವವೆಂದು ನನ್ನ ಮೇಲೆ ಆಣೆಯಿಟ್ಟು ಕೊಂಡೆನೆಂಬದಾಗಿ, ಕರ್ತನು ಹೇಳುತ್ತಾನೆಂದನು.

೧೧. ಸಾರಳಿನ ಮರಣವು ಹೂಳಿಡೋಣವು.



ಅಬ್ರಹಾಮನು ನೂರಮೂವತ್ತೇಳು ವರ್ಷದವನಾಗಿರುವಾಗ, ಸಾರಳು ಹೆಬ್ರೋನಿನಲ್ಲಿ ಸತ್ತಳು. ಅಬ್ರಹಾಮನು ಕಾನಾನ್ ದೇಶದಲ್ಲಿ ಅರುವತ್ತು ವರುಷ ಪರ್ಯಂತರ ವಾಸಿಸಿದ್ದಾಗ್ಯೂ, ಅವನಿಗೆ ಸ್ವಂತ ಭೂಮಿಯು ಸ್ವಲ್ಪವಾದರೂ ಇರಲಿಲ್ಲ. ಅವನು ತನ್ನ ದೊಡ್ಡ ಮಂದೆಗಳನ್ನು ಹುಲ್ಲುಗಾವಲ ಭೂಮಿಗಳಲ್ಲಿ ಮೇಯಿಸಿ, ಪರದೇಶಿಯಾಗಿ ಕಾನಾನ್ಯರೊಳಗೆ ವಾಸವಾಗಿದ್ದನು. ಈಗ ಸತ್ತು ಹೋದ ತನ್ನ ಹೆಂಡತಿಯನ್ನು ಸ್ವಂತ ಭೂಮಿಯಲ್ಲಿ ಹೂಳಿಡ ಬೇಕಾಗಿರುವದರಿಂದ, ಒಂದು ಹೊಲವನ್ನು ಕ್ರಯಕ್ಕೆ ತಕ್ಕೊಳ್ಳ ಮನಸ್ಸು ಮಾಡಿ, ಅವನು ಬಹು ಮರ್ಯಾದೆಯಿಂದ ಹೇತಿಯರ ಪ್ರಭುಗಳ ಸಂಗಡ ಸಂಭಾಷಣೆ ಮಾಡಿದನು. ಅವನು ಹೊಲವನ್ನು ತನಗೆ ಕ್ರಯಕ್ಕೆ ಕೊಡ ಬೇಕೆಂದು ಬಿನ್ನೈಸಲಾಗಿ, ಇವರು ಉಚಿತವಾಗಿ ಅದನ್ನು ತೆಗೆಯ ಬೇಕೆಂದು ಹೇಳಿದರು. ಹ್ಯಾಗಾದರೂ ಹೇತಿಯರ ಪ್ರಭುವಾದ ಎಫ್ರೋನನು ಕಡೆಯಲ್ಲಿ ಅಬ್ರಹಾಮನಿಗೆ ಒಪ್ಪಿ, ಆಗಿನ ತೂಕದ ಪ್ರಕಾರ ಬೆಳ್ಳಿಯ ನಾನೂರು ಷೇಕಲುಗಳನ್ನು ತಕ್ಕೊಂಡನು. ಅದರ ಮೇಲೆ ಅಬ್ರಹಾಮನು ತನ್ನ ಹೆಂಡತಿಯಾದ ಸಾರಳನ್ನು ಹೆಬ್ರೋನಿನ ಸಮೀಪದಲ್ಲಿ ಮಮ್ರೆ ತೋಪಿಗೆ ಎದುರಾಗಿರುವ ಮಕ್ಪೇಲವೆಂಬ ಗವಿಯಲ್ಲಿ ಹೂಳಿಟ್ಟನು.

೧೨. ಇಸಾಕನ ಮದಿವೆ.

ಅಬ್ರಹಾಮನು ಬಹಳ ವೃದ್ಧನಾಗಿರುವಾಗ, ತನ್ನ ಸೇವಕರಲ್ಲಿ ಹಿರಿಯನಾದ ಎಲಿಯೇಜರನೆಂಬವನನ್ನು ತನ್ನ ಮಗನಾದ ಇಸಾಕನಿಗೆ ಹೆಣ್ಣು ಕರಕೊಂಡು ಬರುವದಕ್ಕೆ, ನದಿಗಳ ಅರಾಮಿಗೆ ಕಳುಹಿಸಿದನು.

ಆ ಸೇವಕನು ಹತ್ತು ಒಂಟೆಗಳ ಮೇಲೆ ಸಾಮಾನುಗಳನ್ನೂ, ಕರ್ತನು ಇಸಾಕನಿಗೆ ದಯಮಾಡಿ ಕೊಡುವ ಹೆಣ್ಣಿಗೆ ಬೇಕಾದ ಅಲಂಕಾರಗಳನ್ನೂ ಹೇರಿಕೊಂಡು, ಹೊರಟು ಹೋಗಿ, ನದಿಗಳ ಅರಾಮಿನಲ್ಲಿರುವ ನಹೋರನ ಪಟ್ಟಣಕ್ಕೆ ಬಂದು, ಸಾಯಂಕಾಲ ವೇಳೆಯಲ್ಲಿ ಜನರು ನೀರು ತರಲಿಕ್ಕೆ ಬರುವಾಗ ಪಟ್ಟಣದ ಹೊರಗಿರುವ ಒಂದು ಬಾವಿಯ ಬಳಿಯಲ್ಲಿ ತನ್ನ ಒಂಟೆಗಳನ್ನು ಮಲಗಿಸಿ,—ನನ್ನ ಯಜಮಾನನಾಗಿರುವ ಅಬ್ರಹಾಮನ ದೇವರಾದ ಕರ್ತನೇ, ನೀನು ಇಂದು ನನ್ನ ಕಾರ್ಯವನ್ನು ಕೈಗೂಡಿಸಿ, ನನ್ನ ಯಜಮಾನನಾದ ಅಬ್ರಹಾಮನ ಮೇಲೆ ಅನುಗ್ರಹವನ್ನು ಮಾಡು. ನಾನು—ನೀರು ಕುಡಿಸ ನಿನ್ನ ಪಾತ್ರೆಯನ್ನು ಬೊಗ್ಗಿಸು ಎಂದು ಕೇಳುವಾಗ, ಯಾವ ಹೆಣ್ಣು—ನೀನು ನೀರು ಕುಡಿ, ನಿನ್ನ ಒಂಟೆಗಳಿಗೂ ಕುಡಿಸುವೆನೆಂದು ಹೇಳುವಳೋ, ಆ ಸ್ತ್ರೀಯೇ ನಿನ್ನ ಸೇವಕನಾದ ಇಸಾಕನಿಗೆ ನೀನು ನೇಮಿಸಿದವಳಾಗಿರಲಿ! ಎಂದನು. ಅವನು ಪ್ರಾರ್ಥನೆ ಮಾಡುವದು ತೀರುವ ಮುಂಚೆ, ಇಗೋ, ಅಬ್ರಹಾಮನ ಸಹೋದರನಾದ ನಹೋರನ ಹೆಂಡತಿಯಾದ ಮಿಲ್ಕಳ ಮಗನಾಗಿರುವ ಬೆಥುವೇಲನಿಗೆ ಹುಟ್ಟಿದ ರೆಬೆಕ್ಕಳೆಂಬವಳು ತನ್ನ ಕೊಡವನ್ನು ಹೆಗಲ ಮೇಲೆ ಇಟ್ಟುಕೊಂಡು, ಹೊರಟು ಬಂದಳು. ಆಗಲು ಆ ಸೇವಕನು ಅವಳ ಎದುರಿಗೆ ಓಡಿ ಹೋಗಿ,—ನೀನು ದಯ ಮಾಡಿ, ನಿನ್ನ ಕೊಡದೊಳಗಿನ ನೀರಿನಲ್ಲಿ ನನಗೆ ಸ್ವಲ್ಪ ಕುಡಿಯ ಕೊಡು! ಎಂದನು. ಅದಕ್ಕೆ ಅವಳು—ಅಯ್ಯಾ, ಕುಡಿ! ಎಂದು ಹೇಳಿ, ಶೀಘ್ರವಾಗಿ ತನ್ನ ಕೊಡವನ್ನು ತನ್ನ ಕೈಯಲ್ಲಿ ಇಳಿಸಿಕೊಂಡು, ಅವನಿಗೆ ಕುಡಿಯ ಕೊಟ್ಟಳು. ಅವಳು ಅವನಿಗೆ ಕುಡಿಯ ಕೊಟ್ಟ ತರುವಾಯ—ನಿನ್ನ ಒಂಟೆಗಳಿಗೆ ಅವು ಕುಡಿದು ತೀರುವ ಪರ್ಯಂತರಕ್ಕೂ ತುಂಬ ಹೊಯ್ಯುವೆನು ಎಂದು, ತನ್ನ ಕೊಡದಲ್ಲಿದ್ದ ನೀರನ್ನು ಶೀಘ್ರವಾಗಿ ದೋ



ಣೆಯಲ್ಲಿ ಹೊಯಿದು, ಮತ್ತು ನೀರು ತರಲಿಕ್ಕೆ ಬಾವಿಗೆ ಓಡಿ ಬಂದು, ಅವನ ಒಂಟೆಗಳಿಗೆಲ್ಲಾ ಸಾಕಾಗುವ ಹಾಗೆ ತುಂಬ ಹೊಯಿದಳು. ಆ ಮನುಷ್ಯನು ಆಕೆಯ ವಿಷಯದಲ್ಲಿ ಆಶ್ಚರ್ಯ ಪಟ್ಟು,—ಕರ್ತನು ತನ್ನ ಪ್ರಯಾಣವನ್ನು ಸಾರ್ಥಕ ಮಾಡಿದನೋ, ಇಲ್ಲವೋ? ಎಂದು ತಿಳಿಯದೇ ಮೌನವಾಗಿದ್ದನು. ಆದರೆ ಒಂಟೆಗಳು ಕುಡಿದ ತರುವಾಯ, ಅವನು ಬಂಗಾರದ ಎರಡು ಕಡಗಗಳನ್ನು ತೆಗದು ಕೊಟ್ಟು,—ನೀನು ಯಾರ ಮಗಳು ದಯಮಾಡಿ ನನಗೆ ತಿಳಿಸು! ಎಂದು ಕೇಳಿದ್ದಕ್ಕೆ, ಅವಳು ಅವನಿಗೆ—ನಾನು ನಹೋರನಿಗೆ ಮಿಲ್ಕಳು ಹೆತ್ತ ಮಗನಾದ ಬೆಥುವೇಲನ ಮಗಳು, ಎಂದು ಹೇಳಿದಳು. ಆಗಲು ಆ ಪುರುಷನು ತಲೆ ಬಾಗಿ,—ನನ್ನ ಯಜಮಾನನ ವಿಷಯದಲ್ಲಿ ಕರುಣವನ್ನೂ ವಿಶ್ವಾಸವನ್ನೂ ಮರೆಯದೇ, ನನ್ನ ಯಜಮಾನನ ಸಹೋದರನ ಮನೆಗೆ ಹೋಗುವ ಮಾರ್ಗವನ್ನು ನನಗೆ ತೋರಿಸಿದ ಕರ್ತನಿಗೆ ಸ್ತುತಿಯು ಎಂದನು.

ಮರು ದಿವಸ ಬೆಳಿಗ್ಗೆ ಅವನು ರೆಬೆಕ್ಕಳ ಸಹೋದರನಾದ ಲಬಾನನ್ನು ಒಡಂಬಡಿಸಿ,—ರೆಬೆಕ್ಕಳನ್ನು ನನಗೆ ಒಪ್ಪಿಸಿ ಕೊಟ್ಟು, ನನ್ನನ್ನು ಯಜಮಾನನ ಬಳಿಗೆ ಕಳುಹಿಸಿರಿ ಎಂದು ಬಿನ್ನೈಸಲಾಗಿ, ಅವನು ರೆಬೆಕ್ಕಳನ್ನು ಕರದು,—ಈ ಮನುಷ್ಯನ ಸಂಗಡ ಹೋಗಲಿಕ್ಕೆ ಮನಸ್ಸುಂಟೋ? ಎಂದು ಕೇಳಿದನು. ಅದಕ್ಕೆ ಅವಳು—ಹೋಗುತ್ತೇನೆ ಅಂದಳು. ಆಗಲು ಅವರು ರೆಬೆಕ್ಕಳಿಗೆ

—ನಮ್ಮ ಸಹೋದರಿಯೇ, ಸಹಸ್ರ ಸಹಸ್ರಗಳಾಗಿ ಪ್ರವೃದ್ಧಿಯಾಗು; ನಿನ್ನ ಸಂತಾನದವರು ತಮ್ಮನ್ನು ವಿರೋಧಿಸುವ ಶತ್ರುಗಳ ಬಾಗಲುಗಳನ್ನು ಸ್ವತಂತ್ರಿಸಿ ಕೊಳ್ಳಲಿ! ಎಂದು ಹೇಳಿ, ಅವಳನ್ನು ಆಶೀರ್ವದಿಸಿ, ಕಳುಹಿಸಿ ಕೊಟ್ಟರು.

ಈ ಪ್ರಕಾರ ಇಸಾಕನು ತನ್ನ ತಾಯಿಯ ಮರಣದನಂತರ ದುಃಖೋಪಶಮನವನ್ನು ಹೊಂದಿದನು.

---

೧೩. ಯಕೋಬನೂ ಏಸಾವನೂ.

ಇಸಾಕನು ನಾಲ್ವತ್ತು ವರ್ಷದವನಾಗಿ ರೆಬೆಕ್ಕಳನ್ನು ಮದುವೆ ಮಾಡಿ ಕೊಂಡನು. ಅವನು ಅರವತ್ತು ವರ್ಷದವನಾದಾಗ, ಜವಳಿಶಿಶುಗಳು ಹುಟ್ಟಿದವು. ಮೊದಲಿನವನು ಕೆಂಪಾದವನಾಗಿ, ಕೂದಲವಸ್ತ್ರವನ್ನು ಹೊದ್ದಿದವನ ಹಾಗೆ ಶರೀರವೆಲ್ಲಾ ರೋಮಮಯವಾಗಿದ್ದನು. ಎರಡನೆಯವನು ರೋಮವಿಲ್ಲದವನು. ಅವನ ಹೆಸರು ಏಸಾವನು; ಇವನ ಹೆಸರು ಯಕೋಬನು. ಈ ಹುಡುಗರು ಬೆಳೆದಾಗ, ಏಸಾವನು ಬೇಟೆಯಲ್ಲಿ ಸಮರ್ಥನಾಗಿ ಅಡವಿಯ ಮನುಷ್ಯನಾದನು. ಆದರೆ ಯಕೋಬನು ಗುಡಾರಗಳಲ್ಲಿ ವಾಸಿಸಿ ಸಾತ್ವಿಕನಾದನು. ಇಸಾಕನು ಏಸಾವನ ಮೇಲೆ ಪ್ರೀತಿಯಾಗಿದ್ದನು, ಏನಂದರೆ ಇವನು ಬೇಟೆಯಾಡಿದ ಮೃಗಗಳ ಮಾಂಸವು ಅವನಿಗೆ ರುಚಿಕರವಾಗಿತ್ತು. ಆದರೆ ರೆಬೆಕ್ಕಳು ಯಕೋಬನ ಮೇಲೆ ಪ್ರೀತಿಯಾಗಿದ್ದಳು.

ಏಸಾವನು ಒಂದು ದಿವಸ ಅರಣ್ಯದಿಂದ ಆಯಾಸಪಟ್ಟು ಮನೆಗೆ ಬಂದಾಗ, ಯಕೋಬನು ಒಂದು ವಿಧದ ಪದಾರ್ಥವನ್ನು ಅಡಿಗೆ ಮಾಡಿದನು. ಆಗಲು ಏಸಾವನು ಯಕೋಬನಿಗೆ—ನಾನು ಆಯಾಸ ಪಡುತ್ತೇನೆ, ಆ ಕೆಂಪಾದ ಪದಾರ್ಥವನ್ನು ನನಗೆ ಭೋಜಿಸುವದಕ್ಕೆ ಕೊಡು, ಎಂದನು. ಅದುಕಾರಣ ಅವನ ಹೆಸರು ಎದೋಮನೆಂದು ಕರೆಯಲ್ಪಟ್ಟಿತು. ಆಗಲು

ಯಕೋಬನು ನಿನ್ನ ಚೊಚ್ಚಲತನದ ಸ್ವತಂತ್ರಿಕೆಯನ್ನು ಇಂದು ನನಗೆ ಮಾರು, ಎನ್ನಲಾಗಿ, ಏಸಾವನು — ಇಗೋ, ನಾನು ಸಾಯುತ್ತೇನೆ, ಈ ಚೊಚ್ಚಲತನದ ಸ್ವತಂತ್ರವು ನನಗೆ ಏನು ಪ್ರಯೋಜನವು? ಅಂದನು. ಯಕೋಬನು ಅವನಿಗೆ — ನನಗೋಸ್ಕರ ಇಂದು ಪ್ರಮಾಣ ಮಾಡು! ಎಂದದರಿಂದ, ಅವನು ಪ್ರಮಾಣವನ್ನು ಮಾಡಿ, ತನ್ನ ಚೊಚ್ಚಲತನದ ಸ್ವತಂತ್ರಿಕೆಯನ್ನು ಯಕೋಬನಿಗೆ ಮಾರಿದನು. ಆಗಲು ಯಕೋಬನು ಏಸಾವನಿಗೆ ರೊಟ್ಟಿಯನ್ನೂ ಅವರೆಯ ತೋವೆಯನ್ನು ಕೊಟ್ಟನು. ಅವನು ಭೋಜಿಸಿ ಕುಡಿದು, ಎದ್ದು ಹೋದನು. ಈ ಪ್ರಕಾರ ಏಸಾವನು ತನ್ನ ಚೊಚ್ಚಲತನದ ಸ್ವತಂತ್ರಿಕೆಯನ್ನು ಅಲ್ಪವೆಂದು ಎಣಿಸಿದನು. ಇಸಾಕನು ತನ್ನ ಮಕ್ಕಳು ಮಾಡಿದ ಒಡಂಬಡಿಕೆಗೆ ಒಪ್ಪಲಿಲ್ಲದರಿಂದ, ಹ್ಯಾಗಾದರೂ ತನ್ನ ಆಶೀರ್ವಾದವನ್ನು ಏಸಾವನಿಗೆ ಕೊಡ ಬಹುದಾಗಿದ್ದನು.



ಇಸಾಕನು ಮುದಕನಾದದರಿಂದ ಕಣ್ಣುಗಳು ಮೊಬ್ಬಾಗಿ, ತಾನು ಸಾಯುತ್ತೇನೆಂದು ನೆನಸುವಾಗ್ಗೆ ಆದದ್ದೇನಂದರೆ — ತನ್ನ ಹಿರಿಯಮಗನಾದ ಏಸಾವನಿಗೆ — ನನ್ನ ಮಗನೇ! ಎಂದು ಕರದನು. ಅದಕ್ಕವನು — ಏನು? ಅಂದನು. ಆಗಲವನು ಹೇಳಿದ್ದೇನಂದರೆ — ಇಗೋ, ನಾನು ವೃದ್ಧನಾದೆನು; ನನ್ನ ಮರಣದ ದಿನವನ್ನು ಅರಿಯೆನು; ಈಗ ನೀನು ನಿನ್ನ ಅಂಬು ಬಿಲ್ಲನ್ನು ತೆಗದುಕೊಂಡು ಹೋಗಿ, ನನಗೋಸ್ಕರ ಇಷ್ಟವಾದ ಬೇಟೆಯಾಡಿ, ನನಗೆ ಸವಿಯುಳ್ಳ ಪದಾರ್ಥವನ್ನು ಮಾಡಿ, ನಾನು ಭೋಜಿಸಲಿಕ್ಕೂ ಸಾಯುವ ಮುಂಚೆ ನನ್ನ ಆತ್ಮವು ನಿನ್ನನ್ನು ಆಶೀರ್ವದಿಸಲಿಕ್ಕೂ ನನ್ನ ಬಳಿಗೆ ತಾ! ಎಂದನು.

ಆದರೆ ಇಸಾಕನು ತನ್ನ ಮಗನಾದ ಏಸಾವನ ಸಂಗಡ ಮಾತಾಡುವದನ್ನು ರೆಬೆಕ್ಕಳು ಕೇಳಿಕೊಂಡು, ಅವನಿಗೆ ಇಷ್ಟವಾದ ಹಾಗೆಯೇ ಸವಿಯುಳ್ಳ ಪಾಕವನ್ನು ಮಾಡಿದಳು. ತರುವಾಯ ರೆಬೆಕ್ಕಳು ಮನೆಯೊಳಗೆ ತನ್ನ ಬಳಿಯಲ್ಲಿದ್ದ ತನ್ನ ಚೊಚ್ಚಲಮಗನಾದ ಏಸಾವನ ಒಳ್ಳೇ ವಸ್ತ್ರಗಳನ್ನು ತಕ್ಕೊಂಡು, ತನ್ನ ಚಿಕ್ಕ ಮಗನಾದ ಯಕೋಬನಿಗೆ ತೊಡಿಸಿ, ಮೇಕೆಯ ಮರಿಗಳ ತೊಗಲನ್ನು ಅವನ ಕೈಗಳ ಮೇಲೆಯೂ ಕೂದಲಿಲ್ಲದ ಅವನ ಕುತ್ತಿಗೆಯ ಮೇಲೆಯೂ ಕಟ್ಟಿ, ತಾನು ಮಾಡಿದ ಸವಿಯುಳ್ಳ ಪದಾರ್ಥವನ್ನೂ ಭಕ್ಷ್ಯವನ್ನೂ ತನ್ನ ಕುಮಾರನಾದ ಯಕೋಬನ ಕೈಯಲ್ಲಿ ಕೊಟ್ಟಳು. ಅವನು ತನ್ನ ತಂದೆಯ ಬಳಿಗೆ ಬಂದು—ತಂದೆಯೇ! ಎನ್ನುವಾಗ, ಅವನು—ಇಗೋ, ಇದ್ದೇನೆ, ನನ್ನ ಮಗನೇ! ನೀನು ಯಾರು? ಎಂದನು. ಆಗ ಯಕೋಬನು ತನ್ನ ತಂದೆಗೆ — ನಾನೇ ನಿನ್ನ ಚೊಚ್ಚಲಮಗನಾದ ಏಸಾವನು; ನೀನು ನನಗೆ ಹೇಳಿದ ಪ್ರಕಾರವೇ ಮಾಡಿದೆನು. ಈಗ ನಿನ್ನ ಆತ್ಮವು ನನ್ನನ್ನು ಆಶೀರ್ವದಿಸುವ ಹಾಗೆ, ನೀನು ದಯಮಾಡಿ, ಎದ್ದು, ಕೂತು, ನಾನು ಬೇಟೆಯಾಡಿದ ಪದಾರ್ಥವನ್ನು ಭೋಜಿಸು! ಎಂದನು. ಇಸಾಕನು ಮಗನಿಗೆ—ನನ್ನ ಮಗನೇ, ಇದು ನಿನಗೆ ಇಷ್ಟು ತ್ವರೆಯಾಗಿ ಹ್ಯಾಗೆ ಸಿಕ್ಕಿತು? ಎಂದು ಕೇಳಿದ್ದಕ್ಕೆ, ಅವನು — ನಿನ್ನ ದೇವರಾದ ಕರ್ತನು ನನಗೆ ದೊರಕ ಮಾಡಿದನೆಂದನು. ಮತ್ತು ಇಸಾಕನು ಯಕೋಬನಿಗೆ — ನನ್ನ ಮಗನೇ, ನೀನು ನನ್ನ ಕುಮಾರನಾದ ಏಸಾವನು ಅಹುದೋ, ಅಲ್ಲವೋ? ಎಂದು, ನಾನು ನಿನ್ನನ್ನು ಮುಟ್ಟಿ ನೋಡುವಹಾಗೆ ಸಮೀಪಕ್ಕೆ ಬಾ! ಎಂದು ಹೇಳಿದನು. ಆಗಲು ಯಕೋಬನು ತನ್ನ ತಂದೆಯಾದ ಇಸಾಕನ ಸಮೀಪಕ್ಕೆ ಹೋದನು. ಅವನು ಇವನನ್ನು ಮುಟ್ಟಿ ನೋಡಲಾಗಿ — ಶಬ್ದವು ಯಕೋಬನದು, ಆದರೆ ಕೈಗಳು ಏಸಾವನ ಕೈಗಳು ಎಂದು ಹೇಳಿ, ಅವನ ಕೈಗಳು ಅವನ ಸಹೋದರನಾದ ಏಸಾವನ ಕೈಗಳ ಹಾಗೆ ಕೂದಲಮಯವಾಗಿದ್ದದರಿಂದ, ಇವನನ್ನು ತಿಳಿಯದೇ ಆಶೀರ್ವದಿಸಿ — ನೀನು ನಿಶ್ಚಯವಾಗಿ ನನ್ನ ಮಗನಾದ ಏಸಾವನೋ? ಎಂದು ಕೇಳಿದನು. ಇವನು — ನಾನೇ! ಎಂದನು. ಆಗಲವನು — ನನ್ನ ಮಗನೇ, ನೀನು ಬೇಟೆಯಾಡಿದ

ಮೃಗದ ಮಾಂಸವನ್ನು ನಾನು ಭೋಜಿಸಿದ ಮೇಲೆ, ನನ್ನ ಆತ್ಮವು ನಿನ್ನನ್ನು ಆಶೀರ್ವದಿಸುವಹಾಗೆ, ಅದನ್ನು ನನ್ನ ಸಮೀಪಕ್ಕೆ ತಕ್ಕೊಂಡು ಬಾ, ಎಂದನು. ಇವನು ಅದನ್ನು ಸಮೀಪಕ್ಕೆ ತಂದು, ತಂದೆಯು ಭೋಜಿಸಿದ ತರುವಾಯ ದ್ರಾಕ್ಷೆಯರಸವನ್ನು ಅವನಿಗೆ ಕೊಟ್ಟನು. ಅವನು ಕುಡಿದ ತರುವಾಯ ಇವನಿಗೆ — ನನ್ನ ಮಗನೇ, ನೀನು ಸಮೀಪಕ್ಕೆ ಬಂದು ನನ್ನನ್ನು ಮುದ್ದಿಟ್ಟುಕೋ! ಎಂದನು. ಇವನು ಸಮೀಪಕ್ಕೆ ಬಂದು, ಅವನನ್ನು ಮುದ್ದಿಟ್ಟುಕೊಂಡನು. ಆಗಲು ಅವನು ಇವನ ವಸ್ತ್ರಗಳ ವಾಸನೆಯನ್ನು ಮೂಸಿ ನೋಡಿ, ಇವನನ್ನು ಆಶೀರ್ವದಿಸಿ ಹೇಳಿದ್ದೇನಂದರೆ — ಇಗೋ, ಕರ್ತನು ಆಶೀರ್ವದಿಸಿದ ಹೊಲದ ಸುವಾಸನೆಯ ಹಾಗೆ ನನ್ನ ಮಗನ ವಾಸನೆಯು ಅದೆ. ಆದ್ದರಿಂದ ದೇವರು ನಿನಗೆ ಆಕಾಶದ ಮಂಜನ್ನೂ, ಭೂಮಿಯ ಸಾರವನ್ನೂ, ಅನೇಕ ಧಾನ್ಯವನ್ನೂ ದ್ರಾಕ್ಷರಸವನ್ನೂ ಕೊಡಲಿ; ಜನಸಂಘಗಳು ನಿನ್ನನ್ನು ಸೇವಿಸಿ, ಜನಾಂಗಗಳು ನಿನ್ನನ್ನು ವಂದಿಸಲಿ; ನಿನ್ನ ಸಹೋದರರಿಗೆ ನೀನು ಯಜಮಾನನಾಗಿರುವಿ; ನಿನ್ನ ತಾಯಿಯ ಮಕ್ಕಳು ನಿನ್ನನ್ನು ವಂದಿಸಲಿ; ನಿನ್ನನ್ನು ಶಪಿಸುವವರು ಶಪಿಸಲ್ಪಟ್ಟವರೇ; ನಿನ್ನನ್ನು ಆಶೀರ್ವದಿಸುವವರು ಆಶೀರ್ವದಿಸಲ್ಪಟ್ಟವರೇ ಆಗಲಿ! ಎಂದು ಹರಸಿದನು.

ಯಕೋಬನು ಹೊರಟಾಗಲೇ, ಏಸಾವನು ಬೇಟೆಯಾಡಿಕೊಂಡು ಬಂದ ಸವಿಯುಳ್ಳ ಪದಾರ್ಥವನ್ನು ತೆಗೆದುಕೊಂಡು, ಒಳಗೆ ಸೇರಿ, — ನನ್ನ ತಂದೆಯೇ, ಎದ್ದು, ನಿನ್ನ ಕುಮಾರನು ಬೇಟೆಯಾಡಿದ ಮೃಗದ ಮಾಂಸವನ್ನು ಭೋಜಿಸು, ಎಂದನು. ಇಸಾಕನು ಬಹಳ ನಡುಗಿ ಹೇಳಿದ್ದು — ನೀನು ಬರುವದಕ್ಕಿಂತ ಮುಂಚೆ ಬೇಟೆಯಾಡಿದ ಮೃಗದ ಮಾಂಸವನ್ನು ನನಗೆ ತೆಗೆದುಕೊಂಡು ಬಂದವನ್ಯಾವನು? ಅದನ್ನು ನಾನು ಭೋಜಿಸಿ, ಅವನನ್ನು ಆಶೀರ್ವದಿಸಿದೆನು; ಅವನು ಆಶೀರ್ವದಿಸಲ್ಪಟ್ಟವನಾಗಿರುವನು, ಎಂದನು. ಅದನ್ನು ಕೇಳಿ, ಏಸಾವನು ಮಹಾ ಘೋಷವಾದ ಶಬ್ದದಿಂದ ಅತ್ತು — ನನ್ನ ತಂದೆಯೇ, ನನ್ನನ್ನು ಹ್ಯಾಗಾದರೂ ಆಶೀರ್ವದಿಸು! ಎಂದು ಬೇಡಿಕೊಳ್ಳಲಾಗಿ, ಇಸಾಕನು — ನಿನ್ನ ಸಹೋದರನು ಕಪಟದಿಂದ ಬಂದು, ನಿನ್ನ ಆಶೀರ್ವಾದವನ್ನು ತೆಗೆದುಕೊಂ

ಡನು, ಎಂದನು. ಆಗಲು ಏಸಾವನು ಬಹಳವಾಗಿ ಅಳುವಾಗ, ಇಸಾಕನು ಹೇಳಿದ್ದು — ಇಗೋ, ಆಕಾಶದ ಮಂಜಿನಿಂದಲೂ ಭೂಮಿಯ ಸಾರದಿಂದಲೂ ನಿನ್ನ ವಾಸಸ್ಥಾನವು ಉಂಟಾಗುವದು. ಇದಲ್ಲದೆ ನೀನು ನಿನ್ನ ಖಡ್ಗದಿಂದ ಬದುಕಿ, ನಿನ್ನ ತಮ್ಮನನ್ನು ಸೇವಿಸುವಿ. ಜಯಶಾಲಿಯಾಗುವ ಕಾಲವು ಬರುವಾಗ, ನೀನು ನಿನ್ನ ಹೆಗಲಲ್ಲಿರುವ ಅವನ ನೊಗವನ್ನು ಮುರಿದು ಹಾಕುವಿ. ಏಸಾವನು ಪೂರ್ವ ಎದೋಮ್ಯರಿಗೂ ಅರಬಿಯರಿಗೂ ಬೆದುವೀನರಿಗೂ ತಂದೆಯಾದನು.

ಮತ್ತು ಏಸಾವನು ಯಕೋಬನಿಗೆ ಆ ಆಶೀರ್ವಾದದ ನಿಮಿತ್ತ ಹಗೆಗೊಂಡು, — ತನ್ನ ತಂದೆಗೋಸ್ಕರ ದುಖ್ಖಿಸುವ ದಿವಸಗಳು ಸಮೀಪಿಸುವವು, ಆಗಲು ತನ್ನ ತಮ್ಮನಾದ ಯಕೋಬನನ್ನು ಕೊಂದು ಹಾಕುವೆನೆಂದನು. ಆದದರಿಂದ ರೆಬೆಕ್ಕಳು ಯಕೋಬನನ್ನು ಕರದು — ನನ್ನ ಮಗನೇ, ನಾನು ಹೇಳುವದನ್ನು ಕೇಳಿ! ಎದ್ದು, ನಿನ್ನ ಅಣ್ಣನಾದ ಏಸಾವನಿಗೋಸ್ಕರ ಓಡಿ, ಹಾರಾನಿನಲ್ಲಿರುವ ನನ್ನ ಸಹೋದರನಾದ ಲಬಾನನ ಬಳಿಗೆ ಹೋಗು! ಎಂದಳು. ಯಕೋಬನು ಓಡಿ ಹೋಗಿ, ವಂಚನೆಯಿಂದ ಆಶೀರ್ವಾದವನ್ನು ಹೊಂದ ಬೇಕಾಗಿರುವವರ ಮೇಲೆ ಬರುವ ದುಖ್ಖವನ್ನು ತಿಳುಕೊಂಡನು. ಪ್ರಿಯ ಹುಡುಗರೇ, ಯಕೋಬನೂ ರೆಬೆಕ್ಕಳೂ ಈ ಇಬ್ಬರೂ ಮಾಡಿದ ಮೋಸವು ದೇವರಿಗೆ ಸಮರ್ಪಕವಾಗಿತ್ತೆಂದು ನೆನಸಬೇಡಿರಿ. ಅವರು ಶಾಂತರಾಗಿ, ದೇವರು ತನ್ನ ವಾಗ್ದತ್ತವನ್ನು ಈಡೇರಿಸುವ ಪರ್ಯಂತರ ನಿರೀಕ್ಷಿಸಿದ್ದರೆ, ಅವರಿಗೆ ಒಳ್ಳಿತಾಗಿತ್ತು.

---

೧೪. ಯಕೋಬನ ಪ್ರಯಾಣವು.

ಆಗಲು ಇಸಾಕನು ಯಕೋಬನನ್ನು ಕರದು, ಅವನನ್ನು ಆಶೀರ್ವದಿಸಿ, ಆಜ್ಞಾಪಿಸಿ ಹೇಳಿದ್ದು — ನೀನು ಕನಾನ್ಯರ ಕುಮಾರ್ತೆಗಳಲ್ಲಿ ಹೆಣ್ಣು ತೆಗದು



ಕೊಳ್ಳದೇ ಇರು. ಆದದರಿಂದ ಯಕೋಬನು ಹೊರಟು, ನದಿಗಳ ಅರಾಮಕ್ಕೆ ಹೋಗಿ, ಒಂದು ಸ್ಥಳಕ್ಕೆ ಬಂದಾಗ, ಸೂರ್ಯನು ಅಸ್ತಮಾನವಾದದರಿಂದ ಅಲ್ಲಿಯೇ ಉಳಕೊಂಡು, ಅಲ್ಲಿರುವ ಕಲ್ಲುಗಳೊಳಗೆ ಒಂದು ಕಲ್ಲನ್ನು ತೆಗದುಕೊಂಡು, ತಲೆಗಿಂಬಾಗಿಟ್ಟು, ಅಲ್ಲಿ ಮಲಗಿದ್ದಾಗ, ಒಂದು ಕನಸನ್ನು ಕಂಡನು. ಅದೇನಂದರೆ — ಇಗೋ, ಒಂದು ಏಣಿಯು ಭೂಮಿಯಲ್ಲಿ ಉದ್ದಕ್ಕೆ ಇಟ್ಟಿತ್ತು; ಅದರ ಕೊನೆಯು ಆಕಾಶವನ್ನು ಮುಟ್ಟಿತ್ತು; ಅದರಲ್ಲಿ ದೇವರ ದೂತರು ಇಳಿಯುತ್ತಲೂ ಏರುತ್ತಲೂ ಇದ್ದರು. ಮತ್ತು ಇಗೋ, ಅದರ ಮೇಲೆ ಕರ್ತನು ನಿಂತುಕೊಂಡು ಹೇಳಿದ್ದೇನಂದರೆ — ಕರ್ತನಾದ ನಾನೇ ನಿನ್ನ ತಂದೆಯಾದ ಅಬ್ರಹಾಮನ ದೇವರಾಗಿಯೂ, ಇಸಾಕನ ದೇವರಾಗಿಯೂ ಇದ್ದೇನೆ; ನೀನು ಮಲಗಿರುವ ಭೂಮಿಯನ್ನು ನಿನಗೂ ನಿನ್ನ ಸಂತಾನಕ್ಕೂ ಕೊಡುವೆನು; ಇದಲ್ಲದೆ ನಿನ್ನ ಸಂತಾನವು ಭೂಮಿಯ ಮಳಲಷ್ಟಾಗುವದು; ನೀನು ಮೂಡಲೂ ಪಡುವಲೂ ಬಡಗಲೂ ತೆಂಕಲೂ ವಿಸ್ತರಿಸಿ ಹೋಗುವಿ; ನಿನ್ನಿಂದಲೂ ನಿನ್ನ ಸಂತಾನದಿಂದಲೂ ಭೂಲೋಕದ ವಂಶಗಳೆಲ್ಲವು ಆಶೀರ್ವದಿಸಲ್ಪಡುವವು; ಇಗೋ, ನಾನು ನಿನ್ನ ಸಂಗಡಲಿದ್ದು, ನೀನು ಹೋಗುವ ಎಲ್ಲಾ ಸ್ಥಳಗಳಲ್ಲಿಯೂ ನಿನ್ನನ್ನು ಕಾದು, ಈ ದೇಶಕ್ಕೆ ನಿನ್ನನ್ನು ತಿರಿಗಿ ಬರಮಾಡುವೆನು; ಏನಂದರೆ ನಾನು ನಿನಗೆ ಹೇಳಿದ್ದನ್ನು ಮಾಡುವ ಪರ್ಯಂತರಕ್ಕೂ ನಿನ್ನನ್ನು ಕೈಬಿಡೆನು, ಎಂದನು. ಆಗಲು ಯಕೋಬನು ನಿದ್ರೆಯಿಂದ ಎಚ್ಚತ್ತು — ನಿಶ್ಚಯವಾಗಿ, ಕರ್ತನು ಈ ಸ್ಥಳದಲ್ಲಿ ಇದ್ದಾನೆ. ಇದನ್ನು

ನಾನು ಅರಿಯದೆ ಹೋದೆನೆಂದಂದು ಕೊಂಡನು. ಮತ್ತು ಅವನು ಭಯಪಟ್ಟು—ಈ ಸ್ಥಳವು ಎಷ್ಟು ಭಯಂಕರವಾದದ್ದು; ಇದು ದೇವರ ಮನೆಯೂ, ಪರಲೋಕದ ದ್ವಾರವೂ ಅಲ್ಲದೆ ಇತರದಲ್ಲವೆಂದನು. ತರುವಾಯ ಯಕೋಬನು ಉದಯದಲ್ಲೆದ್ದು, ತನ್ನ ತಲೆಗಿಂಬಾಗಿಟ್ಟು ಕೊಂಡಿದ್ದ ಕಲ್ಲನ್ನು ತೆಗದು ಕೊಂಡು, ಅದನ್ನು ಸ್ತಂಭವಾಗಿ ನಿಲ್ಲಿಸಿ, ಅದರ ಮೇಲೆ ಎಣ್ಣೆಯನ್ನು ಹೊಯಿದು, ಆ ಸ್ಥಳಕ್ಕೆ ಬೇಥೇಲೆಂಬ ಹೆಸರಿಟ್ಟನು.



ಯಕೋಬನು ಬಹಳ ದಿವಸ ಪ್ರಯಾಣದಲ್ಲಿದ್ದ ಮೇಲೆ, ಹರಾನಿನಲ್ಲಿರುವ ಲಬಾನನ ಬಳಿಗೆ ಬಂದನು. ಎಲಿಯೇಜರನು ಮುಂಚೆ ರೆಬೆಕ್ಕಳನ್ನು ಭಾವಿಯ ಹತ್ತರ ನೋಡಿದ ಹಾಗೆ, ಯಕೋಬನು ಸೌಂದರ್ಯವಾದ ರಹೇಲಳನ್ನು ಒಂದು ಭಾವಿಯ ಹತ್ತರ ಕಂಡು, ಅವಳ ಮೇಲೆ ಪ್ರೀತಿ ಇಟ್ಟು, ಅವಳಿಗೋಸ್ಕರ ಲಬಾನನಿಗೆ ಏಳು ವರ್ಷ ಪರ್ಯಂತರ ಸೇವೆ ಮಾಡಿದನು. ಆದರೆ ಲಬಾನನು ಯಕೋಬನಿಗೆ ಮೋಸ ಮಾಡಿ, ರಹೇಲಳ ಬದಲಾಗಿ ಲೇಯಳನ್ನು ಅವನಿಗೆ ಹೆಂಡತಿಯಾಗಿ ಕೊಟ್ಟು,—ಆ ಮತ್ತೊಬ್ಬಳಿಗೋಸ್ಕರ ಇನ್ನೂ ಏಳು ವರ್ಷ ಪರ್ಯಂತರ ನನಗೆ ಸೇವೆ ಮಾಡ ಬೇಕೆಂದನು. ಈ ಇಬ್ಬರು ಹೆಂಡರಲ್ಲಿಯೂ, ಅವರ ದಾಸಿಯರಲ್ಲಿಯೂ, ಯಕೋಬನಿಗೆ ಇಸ್ರಾಯೇಲ್ಯರ ಹನ್ನೆರಡು ಗೋತ್ರಗಳ ಮೂಲತಂದೆಗಳಾದ ಹನ್ನೆರಡು ಮಂದಿ ಗಂಡುಮ

ಕ್ಕಳು ಹುಟ್ಟಿದರು. ಅವರ ಹೆಸರುಗಳು ಯಾವವಂದರೆ — ಯೂದ, ರುಬೇನ್, ಗಾದ್, ಅಸೇರ್, ನೆಫ್ತಲಿಮ್, ಮನಷ್ಷೆ, ಸಿಮೆಯೋನ್, ಲೇವಿ, ಇಸ್ಸಕಾರ್, ಜಬುಲೋನ್, ಯೋಸೇಫ್, ಬೆನ್ಯಮೀನ್, ಎಂಬವುಗಳೇ.

ಹದಿನಾಲ್ಕು ವರ್ಷದ ಸೇವೆ ಮುಗಿದ ತರುವಾಯ, ಯಕೋಬನು ಇನ್ನೂ ಆರು ವರ್ಷ ಪರ್ಯಂತರ ಲಬಾನನ ಸಂಗಡಲಿದ್ದನು. ಆಗಲು ದೇವರ ಆಶೀರ್ವಾದದಿಂದ ಅವನು ದಾಸ, ದಾಸಿ, ಒಂಟೆ, ಕತ್ತೆ, ಕರು, ಕುರಿ, ಇವು ಮೊದಲಾದ ಬಹು ಆಸ್ತಿಯನ್ನು ಸಂಪಾದಿಸಿದನು. ಇದನ್ನು ನೋಡಿ ಲಬಾನನು ತನ್ನ ಅಳಿಯನಿಗೆ ಹೊಟ್ಟೆಕಿಚ್ಚು ಮಾಡಿದನು. ಅದುಕಾರಣ ಯಕೋಬನು ತನ್ನ ಇಬ್ಬರು ಹೆಂಡರನ್ನು ಅರಣ್ಯಕ್ಕೆ ಕರಸಿ, ಲಬಾನನಿಂದ ಅಪ್ಪಣೆ ತೆಗದು ಕೊಳ್ಳದೆ ಪಶುಗಳು ಮೊದಲಾದ ಆಸ್ತಿಯನ್ನು ತೆಗದು ಕೊಂಡು ಹೊರಟನು. ಲಬಾನನು ಮೂರನೇ ದಿವಸದಲ್ಲಿ ಯಕೋಬನು ಓಡಿ ಹೋದನೆಂಬ ವರ್ತಮಾನವನ್ನು ಕೇಳಿ, ಅವನ ಹಿಂದೆ ಹೋಗಿ, ಏಳು ದಿವಸದ ಪ್ರಯಾಣ ಮಾಡಿ, ಅವನನ್ನು ಕಂಡುಕೊಂಡನು. ಆದರೆ ದೇವರು ಲಬಾನನಿಗೆ ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ — ನೀನು ಯಕೋಬನ ಸಂಗಡ ಪ್ರೀತಿಯಿಂದಲೇ ಹೊರತಾಗಿ ಮಾತಾಡದ ಹಾಗೆ ಜಾಗ್ರತೆಯಾಗಿರು, ಎಂದು ಹೇಳಿದನು. ಆಗಲು ಲಬಾನನು ಯಕೋಬನ ಸಂಗಡ ಗಿಲಾದ್ ಪರ್ವತದ ಮೇಲೆ ಒಡಂಬಡಿಕೆಯನ್ನು ಮಾಡಿದ ತರುವಾಯ, ಅವರು ಸಮಾಧಾನದಿಂದ ಅಗಲಿದರು.



ತದನಂತರ ಯಕೋಬನು ಏಸಾವನ ಬಳಿಗೆ ಜನರನ್ನು ಕಳುಹಿಸಿ, ತಾನು ಬರುತ್ತೇನೆಂಬ ವರ್ತಮಾನವನ್ನು ತಿಳಿಸಿದನು. ಏಸಾವನು ಆ ವರ್ತಮಾನವನ್ನು ಕೇಳಿ, ನಾನೂರು ಜನರನ್ನು ಕರಕೊಂಡು, ಅವನಿಗೆ ಎದುರಾಗಿ ಬಂದನು. ಆಗಲು ಯಕೋಬನು ಮಹಾಭಯ ಗೊಂಡು, ತನ್ನ ಬಳಿಯಲ್ಲಿದ್ದ ಜನರನ್ನೂ ಮಂದೆಗಳನ್ನೂ ಒಂಟೆಗಳನ್ನೂ ಎರಡು ಗುಂಪಾಗಿ ಪ್ರತ್ಯೇಕಿಸಿ, ಒಂದು ಗುಂಪಿನ ಸಂಗಡ ಬಂದು,—ಅದು ನಾಶವಾದರೆ, ಉಳಿದ ಇನ್ನೊಂದು ಗುಂಪಾದರೂ ತಪ್ಪಿ ಹೋದೀತು ಎಂದಂದು ಕೊಂಡು, ಪ್ರಾರ್ಥನೆ ಮಾಡಿ ಹೇಳಿದ್ದೇನಂದರೆ—ನನ್ನ ತಂದೆಗಳಾದ ಅಬ್ರಹಾಮನಿಗೂ ಇಸಾಕನಿಗೂ ದೇವರಾಗಿರುವಾತನೇ, ನೀನು ನಿನ್ನ ಸೇವಕನಿಗೆ ತೋರಿಸಿದ ಅನುಗ್ರಹಕ್ಕೂ ವಿಶ್ವಾಸಕ್ಕೂ ನಾನು ಲೇಶಮಾತ್ರವು ಪಾತ್ರನಾಗಿರುವವನಲ್ಲ. ಏನಂದರೆ ನಾನು ಕೈಯಲ್ಲಿ ಈ ಕೋಲನ್ನೇ ಹಿಡಿದುಕೊಂಡು, ಯೊರ್ದಾನನ್ನು ದಾಟಿ ಹೋದೆನು; ಆದರೆ ಈಗ ನಾನು ಎರಡು ಗುಂಪುಗಳುಳ್ಳವನಾದೆನು. ಹಾಗಾದರೆ ಈಗ ದಯಮಾಡಿ, ಏಸಾವನ ಕೈಯಿಂದ ನನ್ನನ್ನು ತಪ್ಪಿಸ ಬೇಕೆಂದು ನಿನಗೆ ಬೇಡಿ ಕೊಳ್ಳುತ್ತೇನೆ. ನೀನು ನನಗೆ ಒಳ್ಳೇದನ್ನೇ ಮಾಡಿ, ನಿನ್ನ ಸಂತಾನವನ್ನು ವಿಸ್ತಾರವಾಗಿಯೂ ಎಣಿಸ ಕೂಡದ ಸಮುದ್ರದ ಉಸುಬಿನ ಹಾಗೆಯೂ ಮಾಡುವೆನೆಂದು ಹೇಳಿದ್ದೀಯಲ್ಲವೋ? ಎಂದು ಪ್ರಾರ್ಥಿಸಿದ ಮೇಲೆ, ತನ್ನ ಮಂದೆಗಳಲ್ಲಿ ಉತ್ತಮವಾದವುಗಳನ್ನು ಆರಿಸಿ,—ಸೇವಕನಾದ ಯಕೋಬನು ತನ್ನ ಯಜಮಾನನಾದ ಏಸಾವನಿಗೆ ಇದನ್ನು ಕೊಡುತ್ತಾನೆಂದು ಅಣ್ಣನಿಗೆ ಹೇಳಿ, ಕಾಣಿಕೆಯಾಗಿ ಕಳುಹಿಸಿದನು. ತರುವಾಯ ತನ್ನ ಆಸ್ತಿಯನ್ನು ಯಬ್ಬೋಕ ಹಳ್ಳದಿಂದ ದಾಟಿಸಿ, ತಾನು ಒಬ್ಬನೇ ಮಾತ್ರ ಹಿಂದೆ ಇದ್ದನು.


ಆಗಲು ಅವನ ಸಂಗಡ ಒಬ್ಬನು ಉದಯವಾಗುವ ಪರ್ಯಂತರಕ್ಕೂ ಹೋರಾಡಿ—ಈಗ ಉದಯವಾಗುತ್ತದೆ, ನನ್ನನ್ನು ಹೋಗ ಗೊಡಿಸು! ಎಂದನು. ಆದರೆ ಯಕೋಬನು—ನನ್ನನ್ನು ಆಶೀರ್ವದಿಸಿದರೆ ಹೊರ್ತಾಗಿ, ನಿನ್ನನ್ನು ಹೋಗ ಗೊಡಿಸೆನು, ಎನ್ನಲಾಗಿ, ಆತನು — ನಿನ್ನ ಹೆಸರು ಇನ್ನು ಮೇಲೆ ಯಕೋಬನೆಂದಲ್ಲ, ಇಸ್ರಾಯೇಲನೆಂದು ಆಗ ಬೇಕು. ಏನಂದರೆ

ನೀನು ದೇವರ ಸಂಗಡಲೂ, ಮನುಷ್ಯರ ಸಂಗಡಲೂ ಹೋರಾಡಿ, ಜಯಿಸಿದಿ, ಎಂದನು.

ಯಕೋಬನು ತನ್ನ ಅಣ್ಣನಾದ ಏಸಾವನು ಎದುರು ಬರುವದನ್ನು ನೋಡಿ, ಏಳು ಸಾರಿ ನೆಲ ಮುಟ್ಟಿ ಒಂದಿಸಿದನು. ಏಸಾವನು ಓಡಿ ಬಂದು, ತನ್ನ ತಮ್ಮನ ಕೊರಳ ಮೇಲೆ ಬಿದ್ದು ಅತ್ತನು. ಮತ್ತು ಯಕೋಬನ ಹೆಂಡರೂ ಮಕ್ಕಳೂ ಏಸಾವನಿಗೆ ಒಂದಿಸಿದರು. ಯಕೋಬನು ಕೊಟ್ಟ ಕಾಣಿಕೆಗಳನ್ನು ಏಸಾವನು ಮೊದಲು ತೆಗದು ಕೊಳ್ಳದೆ, ಯಕೋಬನು ಬಹಳವಾಗಿ ಹೇಳಿ ಕೊಂಡದರಿಂದ ತೆಗದು ಕೊಂಡನು. ಆಮೇಲೆ ಏಸಾವನು ತನ್ನ ಮಾರ್ಗದಿಂದ ಹೋದನು. ಯಕೋಬನು ಕಾನಾನ್ ದೇಶದಲ್ಲಿರುವ ತನ್ನ ತಂದೆಯ ಬಳಿಗೆ ತಿರಿಗಿ ಬಂದನು.

---

೧೫. ಯೋಸೇಫನನ್ನು ಮಾರಿದ್ದು.






ನದಿಗಳ ಅರಾಮದಲ್ಲಿ ಯಕೋಬನಿಗೆ ಹುಟ್ಟಿದ ಮಕ್ಕಳಲ್ಲಿ ರಹೇಲಳ ಮಗನಾದ ಯೋಸೇಫನು ಚಿಕ್ಕವನಾಗಿದ್ದನು. ಇಸ್ರಾಯೇಲನು ಯೋಸೇಫನನ್ನು ತನ್ನ ಎಲ್ಲಾ ಕುಮಾರರಿಗಿಂತ ಅಧಿಕವಾಗಿ ಸ್ನೇಹಿಸಿ, ಚಿತ್ರವಾದ ಅಂಗಿಯನ್ನು ಅವನಿಗೆ ಮಾಡಿಸಿದನು. ಅದುಕಾರಣ ಅವನ ಸಹೋದರರು ಅವನಿಗೆ ಹೊಟ್ಟೆಕಿಚ್ಚು ಮಾಡಿ, ಅವನ ಸಂಗಡ ಸಮಾಧಾನವಾಗಿ ಮಾತಾಡಲಾರದೆ ಇದ್ದರು. ಇದಲ್ಲದೆ ಯೋಸೇಫನು ಒಂದು ಸ್ವಪ್ನವನ್ನು ಕಂಡು, ತನ್ನ ಸಹೋದರರಿಗೆ ಅದನ್ನು ತಿಳಿಸಿದನು. ಅದರ ನಿಮಿತ್ತವಾಗಿ ಅವರು ಅವನನ್ನು ಇನ್ನೂ ಅಧಿಕವಾಗಿ ಹಗೆ ಮಾಡಿದರು. ತರುವಾಯ ಅವನು ಮತ್ತೊಂದು ಸ್ವಪ್ನವನ್ನು ಕಂಡು, ಅದನ್ನು ತನ್ನ ಸಹೋದರರಿಗೆ ತಿಳಿಸಿ,—ಇಗೋ, ಇನ್ನೊಂದು ಸ್ವಪ್ನವನ್ನು ಕಂಡೆನು; ಸೂರ್ಯನೂ ಚಂದ್ರನೂ ಹನ್ನೊಂದು ನಕ್ಷತ್ರಗಳೂ ನನ್ನನ್ನು ಒಂದಿಸಿದವು, ಎಂದನು. ಇದನ್ನು ಅವನು ತನ್ನ ತಂದೆಗೂ ತನ್ನ ಸಹೋದರರಿಗೂ ವಿವರಿಸಿದಾಗ, ಅವನ ತಂದೆಯು ಅವನನ್ನು ಗದರಿಸಿ,—ನೀನು ಕಂಡ ಸ್ವಪ್ನವೇನು? ನಾನೂ ನಿನ್ನ ತಾಯಿಯೂ ನಿನ್ನ ಸಹೋದರರೂ ನಿನಗೆ ನೆಲದ ಪರ್ಯಂತರಕ್ಕೂ ಬೊಗ್ಗಿ ಒಂದಿಸಬೇಕೋ? ಎಂದನು. ಮತ್ತು ಅವನ ಸಹೋದರರು ಅವನನ್ನು ಸಹಿಸಲಾರದೆ ಇದ್ದರು. ಆದರೆ ಅವನ ತಂದೆಯು ಈ ಮಾತನ್ನು ಮನಸ್ಸಿನಲ್ಲಿ ಇಟ್ಟು ಕೊಂಡನು. ಒಂದು ದಿನ ಆ ಸಹೋದರರು ಶಿಖೇಮಿನಲ್ಲಿ ಮಂದೆಯನ್ನು ಮೇಯಿಸುವಾಗ, ಯಕೋಬನು ಅವರನ್ನು ನೋಡುವಬಗ್ಗೆ ಯೋಸೇಫನನ್ನು ಕಳುಹಿಸಲಾಗಿ, ಅವನು ಅವರನ್ನು ದೋಥಾನಿನಲ್ಲಿ ಕಂಡು ಕೊಂಡನು. ಅವರು ಅವನು ದೂರದಲ್ಲಿ ಬರುವದನ್ನು ನೋಡಿ, ಒಬ್ಬರ ಸಂಗಡ ಒಬ್ಬರು—ಇಗೋ, ಆ ಸ್ವಪ್ನದವನು ಇಲ್ಲಿಗೆ ಬರುತ್ತಾನೆ; ಈಗ ಬನ್ನಿ, ನಾವು ಅವನನ್ನು ಕೊಂದು ಹಾಕುವ; ಆಗ ಅವನ ಸ್ವಪ್ನಗಳು ಹ್ಯಾಗಾಗುವವು ಎಂದು ನೋಡುವ! ಎಂದರು.

ಆದರೆ ಹಿರಿಯನಾದ ರುಬೇನನು ಅವನನ್ನು ಅವರ ಕೈಗಳಿಂದ ತಪ್ಪಿಸಿ ಬಿಡುವ ಹಾಗೆ ಯೋಚಿಸಿ, ಅವರಿಗೆ—ನಿಮ್ಮ ತಮ್ಮನ ರಕ್ತವನ್ನು ಚೆಲ್ಲ ಬೇಡಿರಿ; ಅವನನ್ನು ತೆಗದು ಕೊಂಡು, ಒಂದು ಕುಣಿಯಲ್ಲಿ ನೂಕಿ ಬಿಡಿರಿ! ಎನಲು, ಅವ

ರು ಅವನನ್ನು ತೆಗದು ಕೊಂಡು, ಕುಣಿಯಲ್ಲಿ ದೊಬ್ಬಿದ ಮೇಲೆ, ಮಿಸ್ರಕ್ಕೆ ಒಂಟೆಗಳ ಮೇಲೆ ಹೋಗುವ ಇಷ್ಮಾಯೇಲ್ಯರಾದ ವರ್ತಕರ ಗುಂಪು ಬರುವದನ್ನು ನೋಡಿದರು. ಆಗಲು ಯೂದನು ತನ್ನ ಸಹೋದರರಿಗೆ—ಅವನನ್ನು ಇಷ್ಮಾಯೇಲ್ಯರಿಗೆ ಮಾರುವಾ, ಬನ್ನಿ! ಎಂದದರಿಂದ, ಅವರು ಯೋಸೇಫನನ್ನು ಕುಣಿಯಿಂದ ತೆಗದು, ಇಷ್ಮಾಯೇಲ್ಯರಿಗೆ ಇಪ್ಪತ್ತು ರೂಪಾಯಿಗೆ ಮಾರಿ, ಅವನ ಅಂಗಿಯನ್ನು ತಕ್ಕೊಂಡು, ಒಂದು ಹೋತನ್ನು ಕೊಯಿದು, ಆ ಅಂಗಿಯನ್ನು ಅದರ ರಕ್ತದಲ್ಲಿ ಅದ್ದಿ, ತಮ್ಮ ತಂದೆಯ ಬಳಿಗೆ ತೆಗದು ಕೊಂಡು ಹೋಗಿ, ಹೇಳಿದ್ದೇನಂದರೆ — ಇದನ್ನು ನಾವು ಕಂಡು ಕೊಂಡೆವು; ಇದು ನಿನ್ನ ಮಗನ ಅಂಗಿ ಅಹುದೋ, ನೋಡು!



ಯಕೋಬನು ಆ ಚಿತ್ರವಾದ ಅಂಗಿಯನ್ನು ನೋಡಿ,—ಇದು ನನ್ನ ಮಗನದೇ ಸರಿ! ಒಂದು ಮೃಗವು ಅವನನ್ನು ತಿಂದಿತು; ಯೋಸೇಫನನ್ನು ನಿಶ್ಚಯವಾಗಿ ಕಾಡ ಮೃಗವು ಹರಿದು ಬಿಟ್ಟಿತು! ಎಂದು ಹೇಳಿ, ತನ್ನ ವಸ್ತ್ರಗಳನ್ನು ಹರ ಕೊಂಡು, ಗೋಣಿಯನ್ನು ಕಟ್ಟಿ ಕೊಂಡು, ತನ್ನ ಮಗನಿಗೋಸ್ಕರ ಅನೇಕ ದಿವಸ ದುಃಖ ಪಡುತ್ತಿದ್ದನು. ಆಗಲು ಅವನ ಎಲ್ಲಾ ಕುಮಾರರೂ ಕುಮಾರ್ತೆಗಳೂ ಅವನನ್ನು ಸಮಾಧಾನ ಮಾಡ ಬಂದು ನಿಂತರು. ಆದರೆ ಅವನು ಸಮಾಧಾನ ಮಾಡುವವರ ಮಾತನ್ನು ಕೇಳದೆ, — ನಾನು ಗೋಳಾಡುತ್ತಲೇ ಕುಣಿಯಲ್ಲಿ ಬಿದ್ದು, ನನ್ನ ಕುಮಾರನ ಬಳಿಗೆ ಹೋಗುವೆನೆಂದು ಹೇಳಿದನು.



೧೬. ಯೋಸೇಫನು ಮಿಸ್ರದೇಶದಲ್ಲಿ ಇದ್ದದ್ದು.

ಆ ಇಷ್ಮಾಯೇಲ್ಯರು ಯೋಸೇಫನನ್ನು ಮಿಸ್ರಕ್ಕೆ ಒಯ್ದು, ರಾಣುವೆಯ ಅಧಿಪತಿಯಾಗಿರುವ ಪೋತಿಫಾರನಿಗೆ ಮಾರಿ ಬಿಟ್ಟರು. ಇವನು ಯೋಸೇಫನ ಬುದ್ಧಿಯನ್ನೂ ಶಕ್ತಿಯನ್ನೂ ನೋಡಿ, ದೇವರು ಅವನು ಮಾಡುವದನ್ನೆಲ್ಲಾ ಕೈಗೂಡಿ ಬರ ಮಾಡುತ್ತಿದ್ದಾನೆಂದು ತಿಳಕೊಂಡು, ಅವನನ್ನು ತನ್ನ ಮನೆವಿಚಾರಣೇಕರ್ತನಾಗ ಮಾಡಿದನು.

ಈ ಪ್ರಕಾರ ಯೋಸೇಫನು ದಾಸತ್ವದಲ್ಲಿ ಸುಖದಿಂದಿರಲಾಗಿ, ಪೋತಿಫಾರನ ಹೆಂಡತಿಯು ಜಾರೆಯಾಗಿದ್ದು, ಯೋಸೇಫನನ್ನು ಕೆಡಿಸಿ, ದೊಡ್ಡ ಪಾಪದಲ್ಲಿಯೂ ದ್ರೋಹದಲ್ಲಿಯೂ ಬೀಳಿಸುವ ಆಲೋಚನೆಯಲ್ಲಿ ಇದ್ದಳು. ಆದರೆ ಯೋಸೇಫನು—ನಾನು ಇಂಥಾ ಮಹಾದೋಷಕ್ಕೊಳಗಾಗಿ, ದೇವರಿಗೆ ವಿರೋಧವಾಗಿ ಪಾಪ ಮಾಡುವದು ಹ್ಯಾಗೆ! ಎನಲು, ಆಕೆ ಯೋಸೇಫನು ತನಗೆ ವಶವಾಗಿರುವದಿಲ್ಲವೆಂದು ನೋಡಿ, ಅವನಿಗೆ ಬಹಳವಾಗಿ ಹಾಗೆಮಾಡಿ,—ಯೋಸೇಫನು ತನ್ನನ್ನು ಕೆಡಿಸ ಪ್ರಯತ್ನಮಾಡಿದನೆಂದು, ತನ್ನ ಗಂಡನಿಗೆ ಹೇಳಿದಳು. ಆಗಲು ಯೋಸೇಫನ ಯಜಮಾನನು ಅವನನ್ನು ಹಿಡಿದು, ಶೆರೆಯಲ್ಲಿ ಹಾಕಿಸಿದನು. ಯೋಸೇಫನು ಶೆರೆಯಲ್ಲಿರುವಾಗ, ಕರ್ತನು ಅವನ ಸಂಗಡಲಿದ್ದು, ಅವನ ಮೇಲೆ ಕೃಪೆ ಇಟ್ಟು, ಶೆರೆಮನೆಯ ಯಜಮಾನನ ದೃಷ್ಟಿಯಲ್ಲಿ ಅವನಿಗೆ ದಯವು ದೊರಕುವ ಹಾಗೆ ಮಾಡಿದನು. ಆದದರಿಂದ ಶೆರೆಮನೆಯ ಯಜಮಾನನು ಶೆರೆಮನೆಯಲ್ಲಿದ್ದ ಬಂಧಕರೆಲ್ಲರನ್ನು ಯೋಸೇಫನ ಕೈಯಲ್ಲಿ ಒಪ್ಪಿಸಿದನು. ಅವನ ಕೈಕೆಳಗೆ ಇದ್ದದ್ದೊಂದನ್ನಾದರೂ ಶೆರೆಮನೆಯ ಯಜಮಾನನು ವಿಚಾರಿಸುತ್ತಿದ್ದಿಲ್ಲವು. ಯಾಕಂದರೆ ಅವ

ನು ಮಾಡುವದನ್ನೆಲ್ಲಾ ಕರ್ತನು ಆಶೀರ್ವದಿಸಿದನು. ಇವುಗಳಾದ ತರುವಾಯ ಆದದ್ದೇನಂದರೆ—ಮಿಸ್ರದ ಅರಸನ ಸೇವಕರಾದ ಪಾನ ಕೊಡುವವನೂ ರೊಟ್ಟಿಯವನೂ ಅರಸನಾದ ತಮ್ಮ ಕರ್ತನಿಗೆ ಅಪರಾಧವನ್ನು ಮಾಡಿದರು. ಅರಸನು ಅವರಿಬ್ಬರಮೇಲೆ ಕೋಪಿಸಿ ಕೊಂಡು, ಅವರನ್ನು ಯೋಸೇಫನು ಇರುವ ಸೆರೆಮನೆಯಲ್ಲಿ ಇರಿಸಿದನು. ಕಾವಲಿಗರ ಯಜಮಾನನು ಅವರನ್ನು ಯೋಸೇಫನ ವಶಕ್ಕೆ ಕೊಡಲು, ಇವನು ಅವರನ್ನು ಪರಾಮರಿಸಿದನು. ಅವರು ಕೆಲವು ದಿವಸ ಸೆರೆಮನೆಯಲ್ಲಿದ್ದ ಮೇಲೆ, ಒಂದೇ ರಾತ್ರಿಯಲ್ಲಿ ಬೇರೆ ಬೇರೆ ಅರ್ಥವುಳ್ಳ ಕನಸುಗಳನ್ನು ಕಂಡರು. ಉದಯದಲ್ಲಿ ಯೋಸೇಫನು ಅವರ ಬಳಿಗೆ ಬಂದು, ಅವರನ್ನು ನೋಡಿದಾಗ, ಇಗೋ, ಅವರು ವ್ಯಾಕುಲ ಪಡುತ್ತಿದ್ದರು. ಯೋಸೇಫನು ಅವರನ್ನು ನೋಡಿ,—ಇಂದು ನಿಮ್ಮ ಮುಖಗಳು ಬಾಡಿ ಇರುವದೇನೆಂದು ಕೇಳಿದನು. ಅವರು ಅವನಿಗೆ—ನಾವು ಕನಸುಗಳನ್ನು ಕಂಡೆವು, ಅವುಗಳ ಅರ್ಥವನ್ನು ಹೇಳುವವರು ಇಲ್ಲವೆಂದರು.

ಆಗಲು ಯೋಸೇಫನು ಅವನಿಗೆ—ಅರ್ಥ ಹೇಳುವದು ದೇವರ ಕೆಲಸವು; ಹ್ಯಾಗಾದರೂ ದಯಮಾಡಿ ವಿವರಿಸಿರಿ ಯೆನಲು, ಪಾನ ಕೊಡುವವರ ಯಜಮಾನನು ಯೋಸೇಫನಿಗೆ ತನ್ನ ಕನಸನ್ನು ವಿವರಿಸಿ, ಹೇಳಿದ್ದೇನಂದರೆ—ನಾನು ಮೂರು ಕೊಂಬೆಗಳುಳ್ಳ ದ್ರಾಕ್ಷೆಯ ಬಳ್ಳಿಯನ್ನು ಕನಸಿನಲ್ಲಿ ನೋಡಿದೆನು. ಆ ಬಳ್ಳಿಯು ಚಿಗುರಾಗಿ ಬೆಳದು, ಹೂವರಳುವದನ್ನು ನೋಡಿದೆನು. ಅದರ ಗೊಂಚಲುಗಳು ಹಣ್ಣಾದ ಮೇಲೆ, ಫರೋನನ ಪಾತ್ರೆಯನ್ನು ಕೈಯಲ್ಲಿ ಹಿಡಿದು, ಹಣ್ಣುಗಳನ್ನು ತೆಗದು, ಪಾತ್ರೆಯಲ್ಲಿ ಹಿಂಡಿ, ಫರೋನನಿಗೆ ಕೊಟ್ಟೆನು. ಯೋಸೇಫನು ಹೇಳಿದ್ದು—ಮೂರು ಕೊಂಬೆಗಳು ಅಂದರೆ ಮೂರು ದಿನಗಳು; ಮೂರು ದಿನಗಳಾದ ಮೇಲೆ ಫರೋನನು ನಿನ್ನ ತಲೆಯನ್ನು ಎತ್ತಿ, ಮುಂಚಿನ ಕೆಲಸದಲ್ಲಿ ನಿನ್ನನ್ನು ಇಡುವನು. ಹಾಗಾದರೆ ನಿನಗೆ ಸುಖವುಂಟಾಗುವಾಗ, ದಯ ಮಾಡಿ, ನನ್ನನ್ನು ನೆನಸಿಕೊಂಡು, ಫರೋನನಿಗೆ ನನ್ನ ವರ್ತಮಾನವನ್ನು ಅರಿಕೆ ಮಾಡಿ, ನಾನು ಈ ಸೆರೆಮನೆಯಿಂದ ಹೊರಡುವ ಹಾಗೆ ಉಪಾಯ ಮಾಡು. ಏನಂದರೆ ಹೆಬ್ರಾಯರ ದೇಶದಿಂ

ದ ನಾನು ಕಳ್ಳತನವಾಗಿ ತರಲ್ಪಟ್ಟೆನು. ಸೆರೆಗೆ ತಕ್ಕದ್ದು ನಾನೇನೂ ಮಾಡಲಿಲ್ಲವೆಂದು ಹೇಳಿದನು. ಅವನು ಚನ್ನಾಗಿ ಅರ್ಥವನ್ನು ಹೇಳಿದನೆಂದು ರೊಟ್ಟಿಯವರ ಯಜಮಾನನು ನೋಡಿ, ಯೋಸೇಫನಿಗೆ — ನಾನೂ ಕನಸನ್ನು ಕಂಡೆನು; ಅದೇನಂದರೆ — ಇಗೋ, ಮೂರು ಪುಟ್ಟಿಗಳು ನನ್ನ ತಲೆಯ ಮೇಲೆ ಇದ್ದವು; ಮೇಲಿನ ಪುಟ್ಟಿಯಲ್ಲಿ ಫರೋನಿಗೋಸ್ಕರ ಮಾಡಿದ ಸಕಲ ವಿಧವಾದ ಪಾಕದ ಪದಾರ್ಥಗಳಿದ್ದವು. ಪಕ್ಷಿಗಳು ಬಂದು, ಆ ಪುಟ್ಟಿಯೊಳಗಿದ್ದವುಗಳನ್ನು ಭಕ್ಷಿಸಿದವು, ಎಂಬ ಕನಸನ್ನು ಕಂಡೆನೆಂದನು. ಆಗಲು ಯೋಸೇಫನು — ಮೂರು ಪುಟ್ಟಿಗಳು ಅಂದರೆ ಮೂರು ದಿವಸಗಳು; ಇನ್ನು ಮೂರು ದಿವಸಗಳಾದ ಮೇಲೆ, ಫರೋನನು ನಿನ್ನ ತಲೆಯನ್ನು ಎತ್ತಿ, ನಿನ್ನನ್ನು ಮರದಲ್ಲಿ ಉರ್ಲು ಹಾಕಿಸುವನು. ಆಗಲು ಪಕ್ಷಿಗಳು ನಿನ್ನ ಮಾಂಸವನ್ನು ತಿನ್ನುವವು, ಎಂದನು.

ಮೂರನೇ ದಿವಸವು ಫರೋನನ ಜನ್ಮದಿವಸವಾಗಿದ್ದದರಿಂದ ಆದದ್ದೇನಂದರೆ: ಅವನು ತನ್ನ ಸೇವಕರಿಗೆಲ್ಲಾ ಔತಣ ಮಾಡಿಸಿ, ಪಾನ ಕೊಡುವವರ ಯಜಮಾನನ ತಲೆಯನ್ನೂ ರೊಟ್ಟಿಯವರ ಯಜಮಾನನ ತಲೆಯನ್ನೂ ತನ್ನ ಸೇವಕರ ಮಧ್ಯದಲ್ಲಿ ಎತ್ತಿ, ಯೋಸೇಫನು ಅವರಿಗೆ ಅರ್ಥವನ್ನು ಹೇಳಿದಕ್ಕೆ ಸರಿಯಾಗಿಯೇ, ಪಾನವನ್ನು ಕೊಡುವವರ ಯಜಮಾನನನ್ನು ಅವನ ಉದ್ಯೋಗಕ್ಕೆ ತಿರುಗಿ ಬರ ಮಾಡಿ, ರೊಟ್ಟಿಯವರ ಯಜಮಾನನನ್ನು ಉರ್ಲು ಹಾಕಿಸಿದನು. ಆದರೆ ಪಾನವನ್ನು ಕೊಡುವವರ ಯಜಮಾನನು ಯೋಸೇಫನನ್ನು ನೆನಸದೆ, ಅವನನ್ನು ಮರೆತನು. ಆದದರಿಂದ ಯೋಸೇಫನು ಇನ್ನೂ ಎರಡು ವರ್ಷ ಸೆರೆಮನೆಯಲ್ಲಿ ಇದ್ದನು. ದುಖ್ಖವನ್ನು ಕಳದು, ಸುಖವನ್ನು ಕೊಡಲಿಕ್ಕೆ ತಕ್ಕ ಸಮಯವನ್ನು ಅರಿತವನು ದೇವರೇ.

ಎರಡು ವರ್ಷಗಳಾದ ಮೇಲೆ ಫರೋನಿಗೆ ಒಂದು ಕನಸು ಬಿತ್ತು. ಅದರ ಅಭಿಪ್ರಾಯವನ್ನು ತಿಳಿಸಲಿಕ್ಕೆ ಶಕ್ತಿಯುಳ್ಳವನು ಯಾವನೂ ಸಿಕ್ಕಲಿಲ್ಲಾ. ಆಗಲು ಪಾನ ಕೊಡುವವರ ಅಧಿಪತಿಯು ತಾನು ಯೋಸೇಫನಿಗೆ ಹೇಳಿದ ಮಾತನ್ನು ನೆನಸಿ ಕೊಂಡು, — ತಾನೂ ಉರ್ಲು ಹಾಕಲ್ಪಟ್ಟ ರೊಟ್ಟಿಗಾರನೂ ಕಂ

ಡ ಕನಸುಗಳ ಅಭಿಪ್ರಾಯವನ್ನು ಸೆರೆಮನೆಯಲ್ಲಿರುವ ಒಬ್ಬ ಯೌವನಸ್ಥನು ಸತ್ಯದ ಪ್ರಕಾರ ತಿಳಿಸಿದನೆಂದು ಹೇಳಿದನು. ಆದದರಿಂದ ಫರೋಹನು ತನ್ನ ಸೇವಕರಿಗೆ — ಯೋಸೇಫನನ್ನು ಸೆರೆಮನೆಯಿಂದ ತ್ವರೆಯಾಗಿ ಕರಕೊಂಡು ಬರಬೇಕೆಂದು ಆಜ್ಞಾಪಿಸಿದನು.

ಯೋಸೇಫನು ಬಂದ ಮೇಲೆ ಅರಸನು ಹೇಳಿದ್ದು — ನಾನೊಂದು ಕನಸನ್ನು ಕಂಡೆನು; ಅದರ ಅರ್ಥವನ್ನು ಯಾರೂ ಹೇಳಲಾರರು. ಆದರೆ ನೀನು ಕನಸನ್ನು ಕೇಳಿದರೆ, ಅದರ ಅರ್ಥವನ್ನು ಹೇಳಲಾಪೆ, ಎಂದು ನಾನು ಕೇಳಿದೆನು, ಎನಲು, ಯೋಸೇಫನು ಫರೋಹನಿಗೆ ಪ್ರತ್ಯುತ್ತರವಾಗಿ, — ನಾನಲ್ಲ, ದೇವರು ಫರೋಹನಿಗೆ ಸಮಾಧಾನವಾದ ಉತ್ತರವನ್ನು ದಯಪಾಲಿಸುವನು, ಎಂದನು. ಆಗಲು ಫರೋಹನು ಯೋಸೇಫನಿಗೆ ಹೇಳಿದ್ದೇನಂದರೆ, — ಕನಸಿನಲ್ಲಿ ಇಗೋ, ನಾನು ನದಿಯ ಬಳಿಯಲ್ಲಿ ನಿಂತಿದ್ದೆನು. ಆಗಲು ಸುಂದರವಾದ ಸೊಕ್ಕಿದ ಮಾಂಸವುಳ್ಳ ಏಳು ಆಕಳುಗಳು ನದಿಯಿಂದ ಏರಿ, ಹುಲ್ಲಿನಲ್ಲಿ ಮೇಯುತ್ತಿದ್ದವು. ಅದರ ಮೇಲೆ ಬಡವೂ ಅಸಹ್ಯವೂ ಆಗಿರುವ ಬೇರೆ ಏಳು ಆಕಳುಗಳು ಏರಿ ಬಂದವು. ಇವುಗಳ ಹಾಗೆ ಅವಲಕ್ಷಣವುಳ್ಳ ಆಕಳುಗಳನ್ನು ಮಿಸ್ರದೇಶದಲ್ಲೆಲ್ಲಿಯೂ ಎಂದಿಗೂ ನಾನು ಕಂಡದ್ದಿಲ್ಲ. ಆ ಮಾಂಸಹೀನ ಅಸುಂದರವಾದ ಆಕಳುಗಳು ಆ ಕೊಬ್ಬಿದ ಏಳು ಆಕಳುಗಳನ್ನು ಭಕ್ಷಿಸಿದವು. ಭಕ್ಷಿಸಿ ಬಿಟ್ಟ ತರುವಾಯ, ಇವು ಅವುಗಳನ್ನು ಭಕ್ಷಿಸಿ ಬಿಟ್ಟವೆಂದು ತಿಳಿಯ ಕೂಡದ ಹಾಗೆ ಮೊದಲಿನ ಪ್ರಕಾರವೇ ಅಸುಂದರವಾಗಿದ್ದವೆಂದು ಕಾಣುವಷ್ಟರಲ್ಲೇ ಎಚ್ಚತ್ತೆನು. ತರುವಾಯ ನಾನು ನನ್ನ ಕನಸಿನಲ್ಲಿ ಕಂಡದ್ದೇನಂದರೆ — ಇಗೋ, ಭರಿತವಾದ ಏಳು ಒಳ್ಳೇ ತೆನೆಗಳು ಒಂದು ದಂಟಿನಿಂದ ಎದ್ದವು. ಆಗಲು ಮೂಡಣ ಘಾಳಿ ಬಡಿದದರಿಂದ ಸವದು ಹೋದ ಏಳು ತೆನೆಗಳು ಎದ್ದವು. ಈ ತೆನೆಗಳು ಆ ಏಳು ಒಳ್ಳೇ ತೆನೆಗಳನ್ನು ನುಂಗಿ ಬಿಟ್ಟ ಹಾಗೆ ಕಂಡೆನು. ಇದನ್ನು ಬುದ್ಧಿವಂತರಿಗೆ ಹೇಳಿದೆನು; ಆದರೆ ಅರ್ಥವನ್ನು ಹೇಳುವದು ಯಾರಿಂದಲೂ ಆಗದೆ ಹೋಯಿತು, ಎಂದನು.

ಆಗಲು ಯೋಸೇಫನು ಫರೋಹನಿಗೆ ಹೇಳಿದ್ದೇನಂದರೆ — ಫರೋಹನ

ಕನಸು ಒಂದೇ; ದೇವರು ತಾನು ಮಾಡ ಹೋಗುವದನ್ನು ಫರೋಹನಿಗೆ ತಿಳಿಸಿದ್ದಾನೆ. ಏಳು ಕೊಬ್ಬಿದ ಆಕಳುಗಳೂ, ಏಳು ಭರಿತವಾದ ತೆನೆಗಳೂ ಅಂದರೆ — ಸುಫಲದ ಏಳು ವರ್ಷಗಳು. ಆ ಬಡವಾದ ಏಳು ಆಕಳುಗಳೂ, ಸವದು ಹೋದ ಏಳು ತೆನೆಗಳೂ ಅಂದರೆ — ದುರ್ಭಿಕ್ಷದ ಏಳು ವರ್ಷಗಳು. ಇಗೋ, ಮಿಸ್ರದೇಶವೆಲ್ಲಕ್ಕೆ ಧಾನ್ಯದ ಪೂರ್ತಿಯು ಇರುವ ಏಳು ವರ್ಷಗಳೂ, ಅದರ ಮೇಲೆ ಬರವಿರುವ ಏಳು ವರ್ಷಗಳೂ ಬರುವವು. ಈ ಅಭಿಪ್ರಾಯವನ್ನು ಫರೋಹನು ಎರಡು ಸಾರಿ ಕನಸಿನಲ್ಲಿ ನೋಡಿದದರಿಂದ, ದೇವರು ಅದನ್ನು ನಿಶ್ಚಯವಾಗಿಯೂ ಶೀಘ್ರವಾಗಿಯೂ ಮಾಡುವನೆಂದು ಕಾಣುತ್ತದೆ. ಇನ್ನೂ ಯೋಸೇಫನು ಹೇಳಿದ್ದು — ಹೀಗಿರುವದರಿಂದ ಅರಸನು ಬುದ್ಧಿಯೂ ಜ್ಞಾನವೂ ಉಳ್ಳ ಒಬ್ಬ ಮನುಷ್ಯನನ್ನು ನೋಡಿ ಕೊಂಡು, ಮಿಸ್ರದೇಶದ ಅಧಿಕಾರದಲ್ಲಿ ಇಡಲಿ. ಇವನು ಧಾನ್ಯದ ಪೂರ್ತಿ ಇರುವ ಏಳು ವರ್ಷಗಳೊಳಗೆ ಧಾನ್ಯದ ಐದನೇ ಪಾಲನ್ನು ಎಲ್ಲರ ಕೈಯಿಂದ ತೆಗೆದು, ಆ ಬರಗಾಲದಲ್ಲಿ ದೇಶವು ನಾಶವಾಗದ ಹಾಗೆ, ಆ ಧಾನ್ಯವನ್ನು ಉಗ್ರಾಣದ ಮನೆಗಳಲ್ಲಿ ಕೂಡಿಸಿ ಇಡಲಿ.


ಈ ಕನಸಿನ ಅರ್ಥವೂ ಹೇಳಿದ ಆಲೋಚನೆಯೂ ಫರೋಹನಿಗೆ ಒಳ್ಳೆಯವುಗಳೆಂದು ತೋಚಲಾಗಿ, ಫರೋಹನು ತನ್ನ ಸೇವಕರಿಗೆ — ದೇವರ ಆತ್ಮವುಳ್ಳ ಈ ಮನುಷ್ಯನ ಹಾಗೆ ನಮಗೆ ಯಾವನಾದರೂ ದೊರಕುವನೋ? ಎಂದನು. ತರುವಾಯ ಫರೋಹನು ಯೋಸೇಫನಿಗೆ ಹೇಳಿದ್ದೇನಂದರೆ — ದೇವರು ಇದೆಲ್ಲಾ ನಿನಗೆ ತಿಳಿಸಿರುವದರಿಂದ, ನಿನ್ನ ಹಾಗೆ ವಿವೇಕಿಯಾದ ಜ್ಞಾನವುಳ್ಳವನು ಯಾವನೂ ಇಲ್ಲಾ. ನೀನು ನನ್ನ ಮನೆಯ ಮೇಲೆ ಅಧಿಕಾರಿಯಾಗಿರು. ನಿನ್ನ ಮಾತಿಗೆ ನನ್ನ ಜನವೆಲ್ಲಾ ಅನುಕೂಲವಾಗಿ ನಡೆಯಲಿ. ಸಿಂಹಾಸನಕ್ಕೆ ಮಾತ್ರವೇ ನಾನು ನಿನಗಿಂತ ದೊಡ್ಡವನಾಗಿರುವೆನು, ಎಂದನು. ಮತ್ತು ಫರೋಹನು ಯೋಸೇಪನಿಗೆ — ಇಗೋ, ನಾನು ನಿನ್ನನ್ನು ಸಮಸ್ತ ಮಿಸ್ರದೇಶದ ಮೇಲೆ ಅಧಿಕಾರಿಯಾಗ ಮಾಡಿದೆನೆಂದು ಹೇಳಿ, ತನ್ನ ಕೈಯಲ್ಲಿದ್ದ ಮುದ್ರೆಯುಂಗುರವನ್ನು ತೆಗೆದು, ಅದನ್ನು ಯೋಸೇಫನ ಕೈಯಲ್ಲಿಟ್ಟು, ನಯ

ವಾದ ವಸ್ತ್ರಗಳನ್ನು ಅವನಿಗೆ ಧರಿಸ ಕೊಟ್ಟು, ಬಂಗಾರದ ಸರ ಅವನ ಕೊರಳಲ್ಲಿ ಹಾಕಿ, ತನಗೆ ಇದ್ದ ರಥದಮೇಲೆ ಅವನನ್ನು ಕುಂಡ್ರಿಸಿ, ಅವನ ಮುಂದೆ ಮೊಣಕಾಲೂರಬೇಕೆಂದು ಆಜ್ಞಾಪಿಸಿ, ರಾಜಧಾನಿಯೊಳಗೆ ಮೆರಸಿ, ಅವನನ್ನು ಸಮಸ್ತ ಮಿಸ್ರದೇಶದ ಮೇಲೆ ಅಧಿಕಾರಿಯಾಗ ನೇಮಿಸಿದನು. ತರುವಾಯ ಫರೋನನು ಯೋಸೇಫನಿಗೆ — ನೀನು ಹೇಳಿದರೆ ಹೊರ್ತಾಗಿ, ಮಿಸ್ರದೇಶದಲ್ಲಿ ಯಾವನೂ ತನ್ನ ಕೈಯನ್ನಾದರೂ ಕಾಲನ್ನಾದರೂ ಅಲ್ಲಾಡಿಸನು, ಎಂದನು.

ಈ ಪ್ರಕಾರ ದೇವರು ಯೋಸೇಫನನ್ನು ಕಷ್ಟದೊಳಗಿಂದ ಎಬ್ಬಿಸಿದನು. ಅವನ ಮಾರ್ಗವು — ತಂದೆಯ ಮನೆಯಿಂದ ಅಡವಿಯಲ್ಲಿರುವ ಕುಣಿಗೂ, ಆ ಕುಣಿಯಿಂದ ದಾಸತ್ವಕ್ಕೂ, ದಾಸತ್ವದಿಂದ ಸೆರೆಮನೆಗೂ, ಸೆರೆಮನೆಯಿಂದ ಅರಮನೆಗೂ ಆಯಿತು. ಯೋಸೇಫನು ಹೊಟ್ಟುಕಡಿಮೆ ಹದಿನೇಳು ವರ್ಷದವನಾಗಿ ಮಾರಲ್ಪಟ್ಟು, ಮಿಸ್ರದೇಶಕ್ಕೆ ಒಯ್ಯಲ್ಪಟ್ಟನು; ಮೂವತ್ತು ವರ್ಷದವನಾಗಿ ಅರಸನ ಮುಂದೆ ನಿಂತುಕೊಂಡನು.


---

೧೭. ಯೋಸೇಫನ ಸಹೋದರರು ಮಿಸ್ರಕ್ಕೆ ಬಂದದ್ದು.



ದೇವರು ಮುಂತಿಳಿಸಿದ ಹಾಗೆ ಆಯಿತು. ಪರಿಪೂರ್ಣವಾದ ಫಲ ಫಲಿಸುವ ಎಳು ವರ್ಷಗಳು ಬಂದವು. ಆವಾಗ ಯೋಸೇಫನು ಮಿಸ್ರದೇಶ

ದಲ್ಲಿರುವ ಸಮಸ್ತ ಧಾನ್ಯದ ಐದನೇ ಪಾಲನ್ನು, ಅಳೆಯಲಾರದ ಮಟ್ಟಿಗೂ, ಕೂಡಿಸಿ ಇಟ್ಟ ತರುವಾಯ, ಬರವುಳ್ಳ ಏಳು ವರ್ಷಗಳು ಬಂದವು. ಆಗ ಸುತ್ತಲಿರುವ ದೇಶಗಳಿಂದ ಜನರೆಲ್ಲರೂ ಯೋಸೇಫನ ಬಳಿಯಲ್ಲಿ ಧಾನ್ಯವನ್ನು ಕೊಂಡು ಕೊಳ್ಳಲಿಕ್ಕೆ ಮಿಸ್ರಕ್ಕೆ ಬಂದರು; ಏನಂದರೆ ಸಮಸ್ತ ದೇಶಗಳಲ್ಲಿ ಆ ಬರವು ಮಹಾ ದೊಡ್ಡದಾಗಿತ್ತು.



ಆದರೆ ಯಕೋಬನು ಮಿಸ್ರದಲ್ಲಿ ಧಾನ್ಯ ಉಂಟೆಂದು ತಿಳಿದಾಗ, ತನ್ನ ಮಕ್ಕಳಿಗೆ — ನೀವು ಒಬ್ಬರಿಗೊಬ್ಬರು ಮುಖವನ್ನು ನೋಡುವದು ಯಾಕೆ? ಇಗೋ, ಮಿಸ್ರದಲ್ಲಿ ಧಾನ್ಯ ಉಂಟೆಂದು ಕೇಳಿದೆನು; ನಾವು ಸಾಯದೆ ಬದುಕುವಹಾಗೆ, ನೀವು ಅಲ್ಲಿಗೆ ಹೋಗಿ, ನಮಗೋಸ್ಕರ ಧಾನ್ಯವನ್ನು ಕೊಂಡು ಕೊಂಡು ಬನ್ನಿ! ಎಂದನು. ಆಗಲು ಯೋಸೇಫನ ಸಹೋದರರೊಳಗೆ ಹತ್ತುಮಂದಿ ಮಿಸ್ರದಲ್ಲಿ ಧಾನ್ಯವನ್ನುಕೊಂಡು ಕೊಳ್ಳ ಹೊರಟರು. ಯೋಸೇಫನ ತಮ್ಮನಾದ ಬೆನ್ಯಮೀನನನ್ನು ಕಳುಹಿಸಿದರೆ, ಒಂದು ವೇಳೆ ಅವನಿಗೆ ಕೇಡು ಬಂದೀತೆಂದು, ಯಕೋಬನು ಅವನನ್ನು ಸಹೋದರರ ಸಂಗಡ ಕಳುಹಿಸಲಿಲ್ಲ. ಹೀಗೆಯೇ ಕಾನಾನ ದೇಶದಲ್ಲಿ ಬರ ಉಂಟಾದದರಿಂದ, ಇಸ್ರಾಯೇಲನ ಮ

ಕ್ಕಳು ಧಾನ್ಯವನ್ನು ಕೊಂಡು ಕೊಳ್ಳುವದಕ್ಕಾಗಿ ಬರುವವರ ಸಂಗಡ ಬಂದರು. ಆಗಲು ಯೋಸೇಫನು ದೇಶದ ಮೇಲೆ ಅಧಿಕಾರಿಯಾಗಿ, ತಾನೇ ಸಕಲ ದೇಶದ ಜನಕ್ಕೆ ಮಾರುವವನಾಗಿದ್ದನು. ಮತ್ತು ಯೋಸೇಫನ ಸಹೋದರರು ಬಂದು, ನೆಲದ ಪರ್ಯಂತರಕ್ಕೂ ಬೊಗ್ಗಿ ಅವನನ್ನು ಬಂದಿಸಿದರು. ಯೋಸೇಫನು ತನ್ನ ಸಹೋದರರನ್ನು ನೋಡಿದಾಗ, ಅವರ ಗುರ್ತು ತಿಳಿದಾಗ್ಯೂ ಅರಿಯದವನ ಹಾಗೆ ಅವರಿಗೆ ಕಾಣ ಮಾಡಿ, ಅವರ ಸಂಗಡ ಕಠಿಣವಾಗಿ ಮಾತಾಡಿ, — ನೀವು ಎಲ್ಲಿಂದ ಬಂದಿರಿ? ಎಂದು ಕೇಳಲು, ಅವರು — ಧಾನ್ಯವನ್ನು ಕೊಂಡು ಕೊಳ್ಳಲಿಕ್ಕೆ ಕಾನಾನ್ ದೇಶದಿಂದ ಬಂದೆವು, ಎಂದರು. ಯೋಸೇಫನು ತನ್ನ ಸಹೋದರರನ್ನು ಅರಿತರೂ, ಅವರು ಇವನನ್ನರಿಯದೆ ಇದ್ದರು. ಆಗಲು ಯೋಸೇಫನು ಅವರನ್ನು ಕುರಿತು ತಾನು ಕಂಡ ಕನಸುಗಳನ್ನು ನೆನಸಿ, ಅವರಿಗೆ — ನೀವು ಪಾಳತಿಗಾರರಾಗಿ ದೇಶದ ಅತಂತ್ರವನ್ನು ನೋಡಲಿಕ್ಕೆ ಬಂದಿರಿ, ಎಂದನು. ಅದಕ್ಕವರು — ಅಲ್ಲ, ನಮ್ಮ ಕರ್ತನೇ! ಧಾನ್ಯವನ್ನು ಕೊಂಡು ಕೊಳ್ಳಲಿಕ್ಕೆ ನಿನ್ನ ಸೇವಕರಾದ ನಾವು ಬಂದೆವು; ನಾವು ಹನ್ನೆರಡು ಮಂದಿ ಒಬ್ಬನ ಮಕ್ಕಳಾಗಿದ್ದೇವೆ; ನಾವು ಸತ್ಯವಂತರೇ ಹೊರತು ಪಾಳತಿಗಾರರಲ್ಲ, ಎಂದರು. ಆದರೆ ಅವನು ಅವರಿಗೆ — ಅಲ್ಲ, ನಿಶ್ಚಯವಾಗಿ ನೀವು ದೇಶದ ಅತಂತ್ರವನ್ನು ನೋಡುವದಕ್ಕೆ ಬಂದಿದ್ದೀರೆನಲಾಗಿ, ಅವರು ಹೇಳಿದ್ದೇನಂದರೆ — ನಿನ್ನ ಸೇವಕರು ಕಾನಾನ್ ದೇಶದಲ್ಲಿರುವ ಒಬ್ಬನ ಮಕ್ಕಳಾದ ಹನ್ನೆರಡು ಮಂದಿ ಸಹೋದರರಾಗಿದ್ದೇವೆ. ಆದರೆ ಇಗೋ, ಚಿಕ್ಕವನು ಈಗ ನಮ್ಮ ತಂದೆಯ ಬಳಿಯಲ್ಲಿದ್ದಾನೆ; ಒಬ್ಬನು ಮಾತ್ರ ಇಲ್ಲ, ಎಂದರು. ಆದದರಿಂದ ಯೋಸೇಫನು ಅವರಿಗೆ — ನೀವು ಪಾಳತಿಗಾರರೆಂದು ನಾನು ಮೊದಲು ಹೇಳಿದ್ದೇ ನಿಶ್ಚಯವೇ ಸರಿ; ನಿಮ್ಮ ಚಿಕ್ಕ ತಮ್ಮನು ಇಲ್ಲಿ ಬಂದರೇ ಹೊರತು, ನೀವು ಇಲ್ಲಿಂದ ಹೊರಡಲಾರಿರಿ; ಫರೋನನ ಜೀವದಾಣೆ! ಇದೇ ನಿಮಗೆ ಶೋಧನೆ. ನಿಮ್ಮ ಸಹೋದರನನ್ನು ಕರತರಲಿಕ್ಕೆ ನಿಮ್ಮಲ್ಲಿ ಒಬ್ಬನನ್ನು ಕಳುಹಿಸಿರಿ; ಆದರೆ ನಿಮ್ಮಲ್ಲಿ ಸತ್ಯ ಉಂಟೋ, ಇಲ್ಲವೋ? ಎಂದು, ನಿಮ್ಮ ಮಾತುಗಳು ಶೋಧಿಸಲ್ಪಡುವ ಪರ್ಯಂತರಕ್ಕೂ ನೀವು ಸೆರೆಯವರಾಗಿರುವಿರಿ. ಇಲ್ಲವಾದರೆ, ನಿಶ್ಚಯವಾಗಿ ನೀವು

ಪಾಳತಿಗಾರರೆಂದು, ಫರೋನನ ಜೀವದ ಮೇಲೆ ಆಣೆಯನ್ನಿಟ್ಟು ಹೇಳುತ್ತೇನೆಂದು, ಅವರೆಲ್ಲರನ್ನು ಮೂರು ದಿವಸ ತೆರೆಯಲ್ಲಿಟ್ಟನು. ಆಗಲು ಮೂರನೇ ದಿವಸದಲ್ಲಿ ಯೋಸೇಫನು ಅವರಿಗೆ ಹೇಳಿದ್ದೇನಂದರೆ — ನೀವು ಪ್ರಾಣದಿಂದಿರುವ ಹಾಗೆ ಒಂದನ್ನು ಮಾಡಿರಿ! ನಾನು ದೇವರಿಗೆ ಭಯ ಪಡುವವನಾಗಿದ್ದೇನೆ. ನೀವು ಸತ್ಯವಂತರಾದರೆ, ನಿಮ್ಮ ಸಹೋದರರಲ್ಲಿ ಒಬ್ಬನು ನೀವು ಇರುವ ತೆರೆಮನೆಯ ಬಂಧನದಲ್ಲಿರಲಿ; ಆದರೆ ನೀವು ಹೊರಟು, ನಿಮ್ಮ ಮನೆಯವರ ಹಸಿವಿಗೋಸ್ಕರ ಧಾನ್ಯವನ್ನು ಒಯ್ದು, ನಿಮ್ಮ ಚಿಕ್ಕ ತಮ್ಮನನ್ನು ನನ್ನ ಬಳಿಗೆ ಕರಕೊಂಡು ಬನ್ನಿ. ಆಗಲು ನೀವು ಸಾಯದ ಹಾಗೆ, ನಿಮ್ಮ ಮಾತುಗಳು ನಿಜವಾಗಿರುವವು, ಎಂದು ಹೇಳಿದನು. ಅವರು ಆ ಪ್ರಕಾರವೇ ಸಮ್ಮತಿಸಿ, ಹೆಬ್ರಾಯ ಮಾತಿನಿಂದ ಒಬ್ಬರಿಗೊಬ್ಬರು ಹೇಳಿ ಕೊಂಡದ್ದೇನಂದರೆ — ನಿಶ್ಚಯವಾಗಿ, ನಾವು ನಮ್ಮ ಸಹೋದರನ ವಿಷಯದಲ್ಲಿ ಅಪರಾಧಿಗಳಾಗಿದ್ದೇವೆ. ಅವನು ನಮ್ಮನ್ನು ಬೇಡಿ ಕೊಂಡಾಗ, ಅವನ ಆತ್ಮದ ಕಷ್ಟವನ್ನು ನೋಡಿ, ಕೇಳದೆ ಹೋದೆವು. ಆದದರಿಂದ ಈ ಕಷ್ಟವು ನಮ್ಮ ಮೇಲೆ ಬಂತು, ಎಂದರು. ಆದರೆ ರುಬೇನನು ಅವರಿಗೆ ಪ್ರತ್ಯುತ್ತರವಾಗಿ — ಚಿಕ್ಕವನಿಗೆ ವಿರೋಧವಾಗಿ ಪಾಪ ಮಾಡ ಬೇಡಿರಿ ಎಂದು ನಾನು ನಿಮಗೆ ಹೇಳಲಿಲ್ಲವೋ? ಆದರೆ ನೀವು ಕೇಳದೆ ಹೋದಿರಿ; ಆದದರಿಂದ ಇಗೋ, ಅವನ ರಕ್ತದಪರಾಧ ಕೇಳಲ್ಪಟ್ಟಿತ್ತೆಂದನು. ಯೋಸೇಫನು ದ್ವಿಭಾಷೆಗಳ ಮುಖಾಂತರವಾಗಿ ಅವರ ಸಂಗಡ ಮಾತಾಡಿದದರಿಂದ, ಸಹೋದರರು ತಮ್ಮ ಮಾತು ಅವನಿಗೆ ತಿಳಿಯದು ಎಂದು ನೆನಸಲಾಗಿ, ಇವನು ಕೇಳಿದಾಗಲೇ, ಅವರನ್ನು ಬಿಟ್ಟು ಹೋಗಿ, ಅತ್ತು, ಮತ್ತು ಅವರ ಬಳಿಗೆ ಬಂದು, ಅವರ ಸಂಗಡ ಮಾತಾಡಿ, ಅವರಲ್ಲಿ ಸಿಮೆಯೋನನನ್ನು ಹಿಡಿದು, ಅವನನ್ನು ಅವರ ಕಣ್ಣುಗಳ ಮುಂದೆ ಕಟ್ಟಿಸಿದನು. ಉಳಿದವರು ತಮ್ಮ ದೇಶಕ್ಕೆ ತಿರುಗಿ ಹೋದರು. ಮುದುಕನಾದ ತಂದೆಯು ಅದೆಲ್ಲಾ ಕೇಳಿ, ಬಹಳ ದುಃಖದಿಂದ ಹೇಳಿದ್ದು — ನೀವು ನನ್ನನ್ನು ಮಕ್ಕಳಿಲ್ಲದವನಾಗ ಮಾಡುತ್ತೀರಿ. ಯೋಸೇಫನೂ ಇಲ್ಲ, ಸಿಮೆಯೋನನೂ ಇಲ್ಲ, ಬೆನ್ಯಾಮೀನನನ್ನು ಕರಕೊಂಡು ಹೋಗುತ್ತೀರಿ;

ಇವೆಲ್ಲಾ ನನಗೆ ವಿರೋಧವಾಗಿವೆ. ನನ್ನ ಮಗನನ್ನು ನಿಮ್ಮ ಸಂಗಡ ಕಳುಹಿಸೆನು, ಎಂದನು.

---

೧೮. ಯೋಸೇಫನ ಸಹೋದರರ ಎರಡನೇ ಪ್ರಯಾಣವು.



ಆದರೆ ಆ ಬರವು ದೇಶದಲ್ಲಿ ಮಹಾ ಘೋರವಾಗಿದ್ದದರಿಂದ, ಅವರು ಎರಡನೇ ವರ್ಷದಲ್ಲಿ ತಿರುಗಿ ಮಿಸ್ರಕ್ಕೆ ಹೋಗುವ ಅವಶ್ಯವಾಯಿತು. ಯಕೋಬನು ಬಹಳ ಕರಕರೆಯಿಂದ ಬೆನ್ಯಮೀನನನ್ನು ಅವರ ಸಂಗಡ ಕಳುಹಿಸಿ ಬಿಟ್ಟನು. ಮತ್ತು ಅವರಿಗೆ ಕಾನಾನ ದೇಶದಲ್ಲಿ ಉತ್ತಮ ವಸ್ತುಗಳಾದ ಸ್ವಲ್ಪ ಗುಗ್ಗುಳವನ್ನೂ, ಜೇನುತುಪ್ಪವನ್ನೂ, ಪರಿಮಳಸರಕನ್ನೂ, ಗಂಧದ ತೈಲವನ್ನೂ, ಖರ್ಜೂರವನ್ನೂ; ಬದಾಮಿಯನ್ನೂ, ಯೋಸೇಫನಿಗೆ ಕಾಣಿಕೆಯಾಗಿ ಕೊಡಬೇಕೆಂದು ಕೊಟ್ಟು, ಸರ್ವಶಕ್ತಿಯುಳ್ಳ ದೇವರು ನಿಮ್ಮ ಮತ್ತೊಬ್ಬ ಸಹೋದರನನ್ನೂ, ಬೆನ್ಯಮೀನನನ್ನೂ ನಿಮ್ಮ ಸಂಗಡ ಕಳುಹಿಸಿ ಬಿಡುವ ಹಾಗೆ, ಆ ಮನುಷ್ಯನ ದೃಷ್ಟಿಯಲ್ಲಿ ನಿಮಗೆ ದಯೆ ಕೊಡಲಿ. ಹ್ಯಾಗಾದರೂ ನಾನು ಮಕ್ಕಳಿಲ್ಲದವನ ಪ್ರಕಾರವಾಗಿದ್ದೇನೆಂದನು.

ಯೋಸೇಫನು ತನ್ನ ಸಹೋದರರು ಬಂದದ್ದನ್ನು ಕೇಳಿ, ಅವರನ್ನು ಕರಸಿಕೊಂಡು, ಪ್ರೀತಿಯಿಂದ ಅವರ ಸಂಗಡ ಮಾತಾಡಿ,—ನೀವು ಹೇಳಿದ ಮುದು

ಕನಾದ ನಿಮ್ಮ ತಂದೆಯು ಕ್ಷೇಮವಾಗಿದ್ದಾನೋ? ಅವನು ಇನ್ನೂ ಪ್ರಾಣದಿಂದಿದ್ದಾನೋ? ಎಂದು ವಿಚಾರಿಸಿದನು. ಅವರು ಅದಕ್ಕೆ — ನಿನ್ನ ಸೇವಕನಾದ ನಮ್ಮ ತಂದೆಯು ಕ್ಷೇಮವಾಗಿದ್ದಾನೆ; ಇನ್ನೂ ಪ್ರಾಣದಿಂದಿದ್ದಾನೆಂದು ಹೇಳಿ, ಬಾಗಿ ನಮಸ್ಕರಿಸಿದರು. ಆಗಲವನು ತನ್ನ ಕಣ್ಣುಗಳನ್ನೆತ್ತಿ, ತನ್ನ ತಾಯಿಯ ಮಗನಾದ ತನ್ನ ಸಹೋದರನಾಗಿರುವ ಬೆನ್ಯಾಮೀನನನ್ನು ನೋಡಿ, — ನೀವು ಹೇಳಿದ ನಿಮ್ಮ ಚಿಕ್ಕ ಸಹೋದರನು ಇವನೋ ಎಂದು ಕೇಳಿ—ನನ್ನ ಮಗನೇ, ದೇವರ ಕೃಪೆ ನಿನಗೆ ಉಂಟಾಗಲೆಂದು ಹರಸಿದನು. ಆದರೆ ಯೋಸೇಫನ ಅಂತರಂಗದಲ್ಲಿ ತನ್ನ ಸಹೋದರನ ಮೇಲೆ ಕರುಣ ಹುಟ್ಟಿದದರಿಂದ ಅವನು ಅಳುವದಕ್ಕೆ ತ್ವರೆಯಿಂದ ಸ್ಥಳವನ್ನು ಹುಡುಕಿ ಕೋಠಡಿಗೆ ಹೋಗಿ ಅತ್ತನು.

ತರುವಾಯ ತನ್ನ ಮುಖವನ್ನು ತೊಳೆದು ಕೊಂಡು ಹೊರಟು ಬಂದು, ತನ್ನ ದುಃಖವನ್ನು ತಾನೇ ಬಿಗಿ ಹಿಡು ಕೊಂಡು,—ಊಟವನ್ನು ಇಡಿರಿ! ಎಂದನು. ಆಗಲವರು ಅವನಿಗೆ ಬೇರೆಯಾಗಿಯೂ, ಅವನ ಸಂಗಡ ಭೋಜಿಸುವ ಮಿಸ್ರದವರಿಗೆ ಬೇರೆಯಾಗಿಯೂ ಇಟ್ಟರು. ಯಾಕಂದರೆ ಹೆಬ್ರಾಯರ ಸಂಗಡ ಊಟ ಮಾಡುವದು ಮಿಸ್ರದವರಿಗೆ ಅಯೋಗ್ಯವಾಗಿತ್ತು. ವಯಸ್ಸಿನ ಕ್ರಮದಿಂದ ತಮಗೆ ಊಟಕ್ಕೆ ಸ್ಥಳ ಮಾಡಿದ್ದನ್ನು ಯೋಸೇಫನ ಸಹೋದರರು ನೋಡಿ, ಆಶ್ಚರ್ಯ ಪಟ್ಟು ಮಹಾ ಸಂತೋಷವಾದರು. ಆಗಲು ಯೋಸೇಫನು ಅವರ ಗೋಣಿಗಳನ್ನು ಗೋಧಿಯಿಂದ ತುಂಬಿಸ ಬೇಕೆಂದೂ, ಒಬ್ಬೊಬ್ಬನ ಗೋಣಿಯ ಬಾಯಲ್ಲಿ ಹಣವನ್ನು ಇಡ ಬೇಕೆಂದೂ ಆಜ್ಞಾಪಿಸಿ, ಬೆನ್ಯಾಮೀನನ ಗೋಣಿಯಲ್ಲಿ ತನ್ನ ಬೆಳ್ಳಿಯ ಪಂಚಪಾತ್ರೆಯನ್ನು ಇಡಲಿಕ್ಕೆ ಹೇಳಿದನು.

ಈ ಪ್ರಕಾರ ಅವರು ಹೊರಟ ಸ್ವಲ್ಪ ಹೊತ್ತಿನ ಮೇಲೆ, ಯೋಸೇಫನು ತನ್ನ ಮನೆಯ ಉಗ್ರಾಣದವನನ್ನು ಅವರ ಹಿಂದೆ ಕಳುಹಿಸಿದನು. ಇವನು ಅವರನ್ನು ಹಿಡಿದು — ಮಾಡಿದ ಉಪಕಾರಕ್ಕೆ ನೀವು ಅಪಕಾರ ಮಾಡುವದೇನು? ಎನಲು, ಸಹೋದರರು ಒಬ್ಬರೊಬ್ಬರ ಮುಖಗಳನ್ನು ನೋಡಿ, ಅವನು ಹೇಳುವದೇನೆಂದು ತಿಳಿಯದೆ ಇದ್ದರು. ಉಗ್ರಾಣದವನು — ನಾನು ಹೇಳುವ

ಅಭಿಪ್ರಾಯವು ತಿಳಿಯದೆ ಇದ್ದೀತೇ? ನನ್ನ ಯಜಮಾನನು ಕುಡಿಯುವಂಥಾದ್ದು ಎಲ್ಲಿ? ಆ ಪಂಚಪಾತ್ರೆಯನ್ನು ಕದ್ದವರು ಯಾರು? ಎನಲಾಗಿ, ಅವರು—ಇಂಥಾ ಮಾತು ಯಾಕೆ? ನಾವು ಸತ್ಯವಂತರೇ; ಆ ಪಂಚಪಾತ್ರೆಯು ಯಾವನಲ್ಲಿ ಸಿಕ್ಕುವದೋ, ಅವನು ಸಾಯಲಿ! ನಾವೆಲ್ಲರೂ ನಿನ್ನ ಯಜಮಾನನ ದಾಸರಾಗಲಿ! ಎಂದರು. ಆಗಲು ಗೋಣಿಗಳನ್ನೆಲ್ಲಾ ತೆರದು ನೋಡುವಾಗ, ಬೆನ್ಯಮೀನನ ಗೋಣಿಯಲ್ಲಿ ಪಂಚಪಾತ್ರೆಯು ಸಿಕ್ಕಿದದರಿಂದ, ಅವರು ಭಯಪಟ್ಟು, ತಮ್ಮ ವಸ್ತ್ರಗಳನ್ನು ಹಾರಕೊಂಡು, ಎಲ್ಲರೂ ಕೂಡ ತಿರುಗಿ ಬಂದರು. ಯೋಸೇಫನು ಅವರಿಗೆ—ನೀವು ಮಾಡಿದ ಕೃತ್ಯವೇನು? ನಾನು ಶಕುನವನ್ನು ಹೇಳಲಾಪೆನೆಂದು ನೀವು ಅರಿಯಿರಾ? ಎಂದನು. ಆಗಲು ಯೂದನು — ನಮ್ಮ ಕರ್ತನಿಗೆ ನಾವು ಏನು ಹೇಳುವಾ ಏನು ಮಾತಾಡುವಾ? ನಾವು ನಿರಪರಾಧಿಗಳೆಂದು ತೋರಿಸುವದು ಹ್ಯಾಗೆ? ದೇವರು ನಿನ್ನ ಸೇವಕರ ಅಕೃತ್ಯವನ್ನು ಕಂಡು ಹಿಡಿದಿದ್ದಾನೆ. ಈಗೋ, ಪಾತ್ರೆಯು ಯಾವನ ಬಳಿಯಲ್ಲಿ ದೊರಕಿತೋ, ಅವನೂ ನಾವೂ ನಿನಗೆ ಸೇವಕರಾಗಿರುವೆವು! ಎನಲು, ಯೋಸೇಫನು—ನೀವು ಸಮಾಧಾನದಿಂದ ನಿಮ್ಮ ತಂದೆಯ ಬಳಿಗೆ ಹೋಗಿ ಸೇರಿರಿ! ಆ ಪಂಚಪಾತ್ರೆಯು ಯಾವನಲ್ಲಿ ಸಿಕ್ಕಿತೋ, ಅವನು ಮಾತ್ರ ನನ್ನ ದಾಸನಾಗಿರಲಿ! ಎಂದನು. ಆಗಲು ಯೂದನು—ಇದು ಮಾತ್ರ ಆಗ ಬಾರದೆಂದು, ಬಹಳ ಮಾತುಗಳನ್ನಾಡಿ,—ತಮ್ಮನು ಇಲ್ಲದೆ ನಾವು ತಂದೆಯ ಮನೆಗೆ ತಿರುಗಿ ಹೋದದ್ದಾದರೆ, ತಂದೆಯ ನರೆಕೂದಲು ಮನೋವ್ಯಥೆಯಿಂದಲೇ ಗೋರಿಯಲ್ಲಿ ಬಿದ್ದಾವು; ನಿನ್ನ ದಾಸನಾದ ನಾನು ಆ ಹುಡುಗನಿಗೋಸ್ಕರ ಹೊಣೆಯಾಗಿದ್ದೇನೆ; ನಾನು ಅವನನ್ನು ತಿರುಗಿ ತಾರದೆ ಹೋದರೆ, ನಾನು ಜೀವಿಸುವ ಪರ್ಯಂತರ ನನ್ನ ಮೇಲೆ ತಪ್ಪು! ಎಂದನು. ಆದದರಿಂದ ಆ ಹುಡಗನಿಗೆ ಬದಲಾಗಿ ನಾನು ನಿನ್ನ ದಾಸನಾಗಿ ಉಳಿಯುವ ಹಾಗೆ ಅಪ್ಪಣೆ ಕೊಟ್ಟು, ಅವನನ್ನು ಸಹೋದರರ ಸಂಗಡ ಕಳುಹಿಸು. ತಮ್ಮನು ಇಲ್ಲದೆ ನಾನು ಸ್ವದೇಶಕ್ಕೆ ಏರಿ ಹೋಗುವದೂ, ನನ್ನ ತಂದೆಯ ಮೇಲೆ ಬರುವ ವ್ಯಥೆಯನ್ನು ನೋಡುವದೂ ಹ್ಯಾಗೆ? ಎಂದನು.

ಆಗಲು ಯೋಸೇಫನು ಇನ್ನೂ ತಾಳಲಾರದೆ, ಮಿಸ್ರದವರೆಲ್ಲರೂ ಹೊರಗೆ ಹೋಗ ಬೇಕೆಂದು ಅಪ್ಪಣೆ ಕೊಟ್ಟು, ಬಿಕ್ಕಿಬಿಕ್ಕಿ ಅತ್ತು — ನಾನೇ ಯೋಸೇಫನು! ನನ್ನ ತಂದೆಯು ಇನ್ನೂ ಬದುಕುತ್ತಾನೋ? ಎಂದು ಅಳುತ್ತಲೇ ಕೂಗಿದನು. ಆದರೆ ಅವನ ಸಹೋದರರು ಅವನ ಮುಂದೆ ಕಳವಳಗೊಂಡು, ಅವನಿಗೆ ಪ್ರತ್ಯುತ್ತರವನ್ನು ಕೊಡಲಾರದೆ ಇದ್ದರು. ಮತ್ತು ಯೋಸೇಫನು ತನ್ನ ಸಹೋದರರಿಗೆ — ನೀವು ದಯ ಮಾಡಿ ನನ್ನ ಸಮೀಪಕ್ಕೆ ಬನ್ನಿ! ಎಂದನು. ಅವರು ಸಮೀಪಕ್ಕೆ ಹೋದರು. ಆಗಲವನು ಹೇಳಿದ್ದೇನಂದರೆ — ನೀವು ಮಿಸ್ರಕ್ಕೆ ಮಾರಿದ ನಿಮ್ಮ ಸಹೋದರನಾದ ಯೋಸೇಫನು ನಾನೇ; ಈಗ ನೀವು ನನ್ನನ್ನು ಇಲ್ಲಿಗೆ ಮಾರಿದದರಿಂದ ದುಃಖವೂ ಶೋಕವೂ ಪಡ ಬೇಡಿರಿ. ಏನಂದರೆ ನಿಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳುವದಕ್ಕೋಸ್ಕರ ದೇವರು ನನ್ನನ್ನು ಮುಂಚೆ ಕಳುಹಿಸಿದನು. ಇದಲ್ಲದೆ ಮಿಸ್ರದಲ್ಲಿ ನನಗಿರುವ ಸಮಸ್ತ ಘನವನ್ನೂ, ನೀವು ಕಂಡದ್ದೆಲ್ಲವನ್ನೂ ನನ್ನ ತಂದೆಗೆ ತಿಳಿಸಿ, ತ್ವರೆಯಾಗಿ ನನ್ನ ತಂದೆಯನ್ನು ಇಲ್ಲಿಗೆ ಕರದು ತನ್ನಿ! ಎಂದು ಹೇಳಿ, ತನ್ನ ತಮ್ಮನಾದ ಬೆನ್ಯಾಮೀನನ ಕುತ್ತಿಗೆಯ ಮೇಲೆ ಬಿದ್ದು ಅತ್ತನು. ಮತ್ತು ಬೆನ್ಯಾಮೀನನು ಅವನ ಕುತ್ತಿಗೆ ಅಪ್ಪಿ ಹಿಡಿದು ಅತ್ತನು. ಇದಲ್ಲದೆ ಅವನು ತನ್ನ ಸಹೋದರರೆಲ್ಲರನ್ನು ಮುದ್ದಿಟ್ಟು, ಅವರ ಮುಂದೆ ಅತ್ತನು. ತರುವಾಯ ಅವನ ಸಹೋದರರು ಅವನ ಸಂಗಡ ಮಾತಾಡಿದರು. ಅರಸನು ಮುದುಕನಾದ ಯಕೋಬನು ತನ್ನದೇಶಕ್ಕೆ ಬರ ಬೇಕೆಂದು ಅಪ್ಪಣೆ ಕೊಟ್ಟನು. ಮತ್ತು ಯೋಸೇಫನು ತನ್ನ ತಂದೆಗೆ ಉತ್ತಮ ಕಾಣಿಕೆಗಳನ್ನೂ ಪ್ರಯಾಣಕ್ಕೆ ಬೇಕಾದ ರಥಗಳನ್ನೂ ಕಳುಹಿಸಿದನು. ಹನ್ನೊಂದು ಮಂದಿ ಸಹೋದರರು ಹೊರಟು ಹೋಗುವಾಗ — ಹಾದಿಯಲ್ಲಿ ಜಗಳವಾಡ ಬೇಡಿರೆಂದು ಯೋಸೇಫನು ಅವರಿಗೆ ಎಚ್ಚರಿಸಿ, ಅವರನ್ನು ಕಳುಹಿಸಿದನು.

---

೧೮. ಯಕೋಬನು ಮಿಸ್ರದೇಶಕ್ಕೆ ಪೋದದ್ದು.

ಯೋಸೇಫನು ಇನ್ನೂ ಪ್ರಾಣದಿಂದಿದ್ದಾನೆಂದೂ, ಅವನು ಸಮಸ್ತಮಿಸ್ರಕ್ಕೆ ಅಧಿಪತಿಯಾಗಿದ್ದಾನೆಂದೂ, ಹನ್ನೊಂದು ಮಂದಿ ಮಕ್ಕಳು ತಮ್ಮ ತಂದೆಗೆ ತಿರುಗಿ ಬಂದು ಹೇಳಿದಾಗ, ಯಕೋಬನ ಹೃದಯವು ಕಳವಳ ಗೊಂಡಿತು. ಏನಂದರೆ ಅವನು ಮಕ್ಕಳ ಮಾತನ್ನು ನಂಬದೆ ಹೋದನು. ತರುವಾಯ ಅವರು ಯೋಸೇಫನು ತಮ್ಮ ಸಂಗಡ ಆಡಿದ ಸಕಲ ಮಾತುಗಳನ್ನು ಅವನಿಗೆ ಹೇಳಿದರು. ಮತ್ತು ತನ್ನನ್ನು ಒಯ್ಯುವದಕ್ಕೆ ಯೋಸೇಫನು ಕಳುಹಿಸಿದ ಬಂಡಿಗಳನ್ನು ನೋಡಿದಾಗ, ತಂದೆಯಾದ ಯಕೋಬನ ಆತ್ಮಕ್ಕೆ ಚೈತನ್ಯ ಬಂತು. ಆಗಲು ಇಸ್ರಯೇಲನು — ನನ್ನ ಕುಮಾರನಾದ ಯೋಸೇಫನು ಜೀವದಿಂದಿರುವದು ಸಾಕು. ನಾನು ಸಾಯುವ ಮುಂಚೆ ಹೋಗಿ, ಅವನನ್ನು ನೋಡುವೆನೆಂದನು. ಹೀಗೆ ಯಕೋಬನು ತನ್ನ ಅರವತ್ತಾರು ಮಂದಿ ಮಕ್ಕಳನ್ನೂ ಮೊಂಮಕ್ಕಳನ್ನೂ, ಅನೇಕ ದಾಸರನ್ನೂ ದಾಸಿಗಳನ್ನೂ, ಈ ಮೊದಲಾದ ಸಮಸ್ತ ಆಸ್ತಿಯನ್ನು ತೆಗೆದು ಕೊಂಡು, ಮಿಸ್ರಕ್ಕೆ ಹೋದನು. ಯೋಸೇಫನು ರಥವನ್ನೇರಿ, ತನ್ನ ತಂದೆಗೆ ಎದುರು ಹೋಗಿ, ಅವನನ್ನು ಕಂಡು, ಅವನನ್ನು ಅಪ್ಪಿ ಹಿಡಿದು ಬಹಳವಾಗಿ ಅತ್ತನು.



ಆಗಲು ಇಸ್ರಯೇಲನು ಯೋಸೇಫನಿಗೆ—ನೀನು ಜೀವದಿಂದಿರುವದನ್ನು ನಾನು ಕಂಡದರಿಂದ ಇನ್ನು ಮೇಲೆ ನನಗೆ ಮರಣವು ಬಂದರೆ ಚಿಂತೆ ಇಲ್ಲ,

ಎಂದನು. ಯೋಸೇಫನು ತನ್ನ ತಂದೆಯಾದ ಯಕೋಬನನ್ನು ಕರಕೊಂಡು ಬಂದು, ಫರೋನನ ಮುಂದೆ ನಿಲ್ಲಿಸಿದಾಗ, ಯಕೋಬನು ಫರೋನನನ್ನು ಆಶೀರ್ವದಿಸಿದನು. ಫರೋನನು ಯಕೋಬನನ್ನು—ನಿನ್ನ ವಯಸ್ಸು ಎಷ್ಟೆಂದು ಕೇಳಿದನು. ಅದಕ್ಕೆ ಯಕೋಬನು—ನಾನು ಸಂಚರಿಸಿದ ವರ್ಷಗಳು ನೂರಮೂವತ್ತು; ಆದರೆ ನಮ್ಮ ತಂದೆಗಳು ಸಂಚರಿಸಿದ ದಿವಸಗಳಿಗಿಂತ ನನ್ನ ವಯಸ್ಸಿನ ದಿವಸಗಳು ಕಡಿಮೆಯಾದವುಗಳೂ ಕಷ್ಟವಾದವುಗಳೂ ಆಗಿ, ಅವರ ವಯಸ್ಸಿನ ದಿವಸಗಳಿಗೆ ಸರಿ ಬಾರದೆ ಹೋದವೆಂದನು. ಯಕೋಬನು ಮಿಸ್ರದಲ್ಲಿ ಹದಿನೇಳು ವರ್ಷ ಜೀವಿಸಿದನು. ಆದದರಿಂದ ಯಕೋಬನ ಆಯುಷ್ಯದ ದಿವಸಗಳು ನೂರ ನಾಲ್ವತ್ತೇಳು ವರ್ಷಗಳಾಗಿದ್ದವು. ಇಸ್ರಾಯೇಲನಿಗೆ ಮರಣಕಾಲವು ಸಮೀಪಿಸಿದಾಗ, ಯೋಸೇಫನು ಎಫ್ರಾಯೀಮನೂ ಮನಷ್ಷೆಯೂ ಎಂಬ ತನ್ನ ಇಬ್ಬರು ಮಕ್ಕಳನ್ನು ಕರಕೊಂಡು, ಮುದುಕನಾದ ತನ್ನ ತಂದೆಯ ಬಳಿಗೆ ಬಂದನು. ಆಗ ಇಸ್ರಾಯೇಲನು ಯೋಸೇಫನಿಗೆ—ನಿನ್ನ ಮುಖವನ್ನು ನೋಡುವೆನೆಂದು ನೆನಸದೆ ಇದ್ದೆನು. ಆದರೆ ಇಗೋ, ನಿನ್ನ ಸಂತಾನವನ್ನು ನೋಡುವ ಹಾಗೆ, ದೇವರು ನನಗೆ ದಯ ಮಾಡಿದ್ದಾನೆಂದನು. ಆಗಲು ಯೋಸೇಫನು ತನ್ನ ಮಕ್ಕಳನ್ನು ತಂದು, ಇಸ್ರಾಯೇಲನು ತನ್ನ ಕೈಗಳನ್ನು ಅವರ ಮೇಲೆ ಇಟ್ಟು, ಅವರನ್ನು ಆಶೀರ್ವದಿಸುವ ಹಾಗೆ ನಿಲ್ಲಿಸಿದನು. ಇಸ್ರಾಯೇಲನು ತಮ್ಮನಾದ ಎಫ್ರಾಯೀಮನ ತಲೆಯ ಮೇಲೆ ಬಲಗೈಯನ್ನೂ, ಚೊಚ್ಚಲಾದ ಮನಷ್ಷೆಯ ಮೇಲೆ ಎಡಗೈಯನ್ನೂ ಇಟ್ಟು, ಅವರಿಗೆ ಹರಸಿ ಹೇಳಿದ್ದೇನಂದರೆ—ನಮ್ಮ ತಂದೆಗಳಾದ ಅಬ್ರಹಾಮನೂ ಇಸಾಕನೂ ಯಾವ ದೇವರ ಮುಂದೆ ನಡದು ಕೊಳ್ಳುತ್ತಿದ್ದರೋ, ನಾನು ಹುಟ್ಟಿದಂದಿನಿಂದ ಇಂದಿನ ಪರ್ಯಂತರಕ್ಕೂ ನನ್ನನ್ನು ಆದರಿಸಿದವನ್ಯಾವನೋ, ಆ ಪರಾತ್ಪರನಾದವನೂ, ನನ್ನನ್ನು ಸಕಲ ಉಪದ್ರಗಳಿಂದ ವಿಮೋಚನೆ ಮಾಡಿ ತಪ್ಪಿಸಿದ ದೂತನಾದವನೂ ಈ ಚಿಕ್ಕವರನ್ನು ಆಶೀರ್ವದಿಸಲಿ. ಇವರು ನನ್ನ ಹೆಸರನ್ನೂ ನನ್ನ ತಂದೆಗಳಾದ ಅಬ್ರಹಾಮನೂ ಇಸಾಕನೂ ಎಂಬವರ ಹೆಸರುಗಳನ್ನೂ ಧರಿಸಿ ಕೊಂಡು, ಭೂಮಿಯ ಮೇಲೆ ವೃದ್ಧಿಯಾಗಲಿ! ಎಂದನು. ಹಾಗೆಯೇ ಅವನು ಅಂ

ದು, ಅವರನ್ನು ಆಶೀರ್ವದಿಸಿ—ಇನ್ನು ಮೇಲೆ ಇಸ್ರಾಯೇಲ್ಯರು ಒಬ್ಬರಿಗೊಬ್ಬರು—ಎಫ್ರಾಯೀಮನ ಹಾಗೆಯೂ, ಮನಸ್ಸೆಯ ಹಾಗೆಯೂ ದೇವರು ನಿನ್ನನ್ನು ಇರ ಮಾಡಲಿ ಎಂದು, ನಿಮ್ಮನ್ನು ನೆನಸಿ ಹರಸುವರೆಂಬದಾಗಿ ಹೇಳಿದನು. ಆ ಮೇಲೆ ಯಕೋಬನು ತನ್ನ ಮಕ್ಕಳೆಲ್ಲರನ್ನು ತನ್ನ ಬಳಿಗೆ ಕರಸಿ ಕೊಂಡು, ಒಬ್ಬೊಬ್ಬನಿಗೆ ಒಂದೊಂದು ಆಶೀರ್ವಾದವನ್ನು ಕೊಟ್ಟು, ಮುಂದೆ ಆಗುವ ಸಂಗತಿಗಳನ್ನು ತಿಳಿಸಿ, ತನ್ನ ಕಡೇ ಆಜ್ಞೆಯನ್ನು ಹೇಳಿ, ಮಂಚದ ಮೇಲೆ ಮಲಗಿ ಕೊಂಡು ತೀರಿ ಹೋದನು. ಆಗಲು ಯೋಸೇಫನು ತನ್ನ ತಂದೆಯ ಮೋರೆಯ ಮೇಲೆ ಬಿದ್ದು ಅತ್ತು, ಅವನನ್ನು ಮುದ್ದಿಟ್ಟು ಕೊಂಡನು. ತರುವಾಯ ತನ್ನ ತಂದೆಗೆ ಗಂಧವರ್ಗಗಳನ್ನು ತುಂಬಿಸಲಿಕ್ಕೆ ತನ್ನ ಸೇವಕರಾದ ವೈದ್ಯರಿಗೆ ಆಜ್ಞಾಪಿಸಿದನು. ಹಾಗೆಯೇ ವೈದ್ಯರು ಆ ಹೆಣಕ್ಕೆ ಗಂಧವರ್ಗಗಳನ್ನು ತುಂಬಿ, ನಾಲ್ವತ್ತು ದಿವಸಗಳನ್ನು ಕಳದರು. ಆದರೆ ಮಿಸ್ರದವರು ಅವನಿಗೋಸ್ಕರ ಎಪ್ಪತ್ತು ದಿವಸಗಳ ತನಕ ದುಃಖ ಪಟ್ಟರು. ಅವನಿಗೋಸ್ಕರ ದುಃಖ ಪಡುವದು ತೀರಿದ ತರುವಾಯ, ಯೋಸೇಫನು ಫರೋನನ ಮನೆಯವರಿಗೆ ಹೇಳಿದ್ದೇನಂದರೆ—ನಿಮ್ಮ ಕಣ್ಣುಗಳಲ್ಲಿ ನನಗೆ ದಯೆ ದೊರಕಿತಾದರೆ, ನೀವು ಫರೋನನಿಗೆ ನನ್ನ ವಿಜ್ಞಾಪನೆಯನ್ನು ತಿಳಿಸ ಬೇಕು. ಅದೇನಂದರೆ, ನನ್ನ ತಂದೆಯು—ಇಗೋ ಸಾಯುತ್ತೇನೆ; ಕಾನಾನ್ ದೇಶದಲ್ಲಿ ಮಾಡಿಸಿಟ್ಟ ಸಮಾಧಿಯಲ್ಲಿ ತನ್ನನ್ನು ಹೂಳಿಡ ಬೇಕೆಂದು ನನ್ನ ಕೈಯಿಂದ ಆಣೆ ತೆಗದು ಕೊಂಡದರಿಂದ ಈಗ ನಾನು ಹೋಗಿ ತಂದೆಯನ್ನು ಹೂಳಿಟ್ಟು ಬರ ಬೇಕೆಂದು ಬೇಡಿ ಕೊಳ್ಳುತ್ತೇನೆಂಬದಾಗಿ ಆತನಿಗೆ ಹೇಳಿರೆಂದನು. ಅದಕ್ಕೆ ಫರೋನನು—ನಿನ್ನ ತಂದೆ ನಿನಗೆ ಆಣೆ ಹಾಕಿದ ಪ್ರಕಾರವೇ ನೀನು ಹೋಗಿ ಅವನನ್ನು ಹೂಳಿಡು ಎನಲು ಯೋಸೇಫನು ತನ್ನ ತಂದೆಯನ್ನು ಹೂಳಿಡಲಿಕ್ಕೆ ಹೋದನು. ಮತ್ತು ಅವನ ಸಂಗಡ ಫರೋನನ ಮನೆಯ ಹಿರಿಯರಾದ ಅವನ ಸಕಲ ಸೇವಕರೂ ಮಿಸ್ರದ ಸಕಲ ಹಿರಿಯರೂ ಹೋದರು. ಮತ್ತು ಯೋಸೇಫನ ಮನೆಯವರೆಲ್ಲರೂ ಅವನ ಸಹೋದರರೂ ಅವನ ತಂದೆಯ ಮನೆಯವರೂ ತಮ್ಮ ಪಿಳ್ಳೆಗಳನ್ನೂ ತಮ್ಮ ಕುರಿದನಗಳನ್ನೂ ಮಾತ್ರವೇ ಗೋಷೆನ್ ದೇ

ಶದಲ್ಲಿಟ್ಟು, ಅವನ ಸಂಗಡ ಹೋದದರಿಂದಲೂ, ರಥಗಳೂ ಕುದುರೆಗಳೂ ಸಹ ಹೋದದರಿಂದಲೂ, ಮಹಾ ಸಮೂಹವಾಯಿತು. ಅವರು ಯೊರ್ದಾನ್ ನದಿಗೆ ಆಚೇಲಿ ಇರುವ ಅಟಾದ್ ಎಂಬ ಕಣಕ್ಕೆ ಬಂದಾಗ, ಅಲ್ಲಿ ಮಹಾ ಘೋರವಾದ ದುಃಖದಿಂದ ಗೋಳಾಡಿದರು. ಅಲ್ಲಿ ಯೊಸೇಫನು ತನ್ನ ತಂದೆಗೋಸ್ಕರ ಏಳು ದಿವಸಗಳ ಪರ್ಯಂತರ ದುಃಖ ಪಟ್ಟನು. ಆ ದೇಶವಾಸಿಗಳಾದ ಕನಾನ್ಯರು ಅಟಾದ್ ಎಂಬ ಕಣದಲ್ಲಿ ಆದ ಘೋರವಾದ ದುಃಖವನ್ನು ಕಂಡಾಗ ಇದು ಮಿಸ್ರಗೋಳಾಟವೆಂದದರಿಂದ, ಆ ಸ್ಥಳಕ್ಕೆ ಏಬೆಲ್ ಮಿಸ್ರವೆಂಬ ಹೆಸರಾಯಿತು. ಈ ಪ್ರಕಾರ ಅವರು ಅಬ್ರಹಾಮನು ಸ್ವಾಸ್ಥ್ಯವಾಗಿ ಸಂಪಾದಿಸಿದ ಮಕ್ಪೇಲವೆಂಬ ಗವಿಯಲ್ಲಿ ಇಸ್ರಾಯೇಲನನ್ನು ಹೂಳಿಟ್ಟು ತಿರುಗಿ ಬಂದಾಗ, ಯೊಸೇಫನ ಸಹೋದರರು ತಮ್ಮ ತಂದೆಯು ಸತ್ತದ್ದನ್ನು ನೋಡಿ — ಒಂದು ವೇಳೆ ಯೊಸೇಫನು ಹಗೆ ಮಾಡಿ, ನಾವು ತನಗೆ ಮಾಡಿದ ಎಲ್ಲಾ ಕೆಟ್ಟತನಕ್ಕೆ ಮುಯ್ಯಿ ಕಾಡುವನೇನೋ ಎಂದು ನೆನಸಲಾಗಿ, ಯೊಸೇಫನು — ನೀವು ಭಯ ಪಡ ಬೇಡಿರಿ; ನಾನು ದೇವರಿಗೆ ಒಳಗಾಗಿದ್ದೇನೆ. ನೀವು ನನಗೆ ಕೇಡನ್ನು ಮಾಡಲಾಲೋಚಿಸಿದಾಗ್ಯೂ ದೇವರು ನನಗೆ ಒಳ್ಳೇದನ್ನೇ ಯೋಚಿಸಿದನು. ಆತನು ಅನೇಕ ಜನಗಳಿಗೆ ಸಂರಕ್ಷಣೆ ಮಾಡುತ್ತಾನೆಂಬುವದು ಈಗ ಪ್ರಸಿದ್ಧಿಯಾಯಿತಲ್ಲವೋ, ಎಂದು ಹೇಳಿದನು. ಹೀಗೆ ಯೊಸೇಫನು ತನ್ನ ಸಹೋದರರ ಸಂಗಡ ಮಿಸ್ರದಲ್ಲಿ ಸುಖದಿಂದಿದ್ದು, ಮೊಮ್ಮಕ್ಕಳನ್ನೂ ಮರಿಮಕ್ಕಳನ್ನೂ ಕಂಡನು. ಯೊಸೇಫನು ತನ್ನ ಸಹೋದರರಿಗೆ ಮುಯ್ಯಿಗೆ ಮುಯ್ಯಿ ಮಾಡಲಿಕ್ಕೆ ನೆನಸದೆ ಇದ್ದಾಗ್ಯೂ, ಅವರು ತಮ್ಮ ಮೇಲೆಯೂ ತಂದೆಯ ಮೇಲೆಯೂ ತನ್ನ ಮೇಲೆಯೂ ಯಾವ ಮನಸ್ಸಿನಿಂದಿದ್ದಾರೋ ಎಂದು ಶೋಧಿಸಿ ವಿಚಾರಿಸಿ, ಅವರಿಗೆ ಸುಖವನ್ನುಂಟು ಮಾಡುವದು ಅವನಿಗೆ ಅವಶ್ಯವಾಗಿತ್ತು.

---

೨೦. ಇಯ್ಯೋಬನು.

ಊಚ ದೇಶದಲ್ಲಿ ಇಯ್ಯೋಬನೆಂಬ ಒಬ್ಬ ಮನುಷ್ಯನಿದ್ದನು. ಅವನು ಸಾಧುವಾಗಿಯೂ ಸತ್ಯವಂತನಾಗಿಯೂ ದೇವರಿಗೆ ಭಕ್ತಿಯುಳ್ಳವನಾಗಿಯೂ ದುರ್ಮಾರ್ಗತನಕ್ಕೆ ದೂರವಾಗಿಯೂ ಇದ್ದನು. ಅವನಿಗೆ ಏಳುಮಂದಿ ಕುಮಾರರೂ ಮೂರುಮಂದಿ ಕುಮಾರ್ತೆಯರೂ ಹುಟ್ಟಿದರು. ಇದಲ್ಲದೆ ಏಳು ಸಾವಿರ ಕುರಿಗಳೂ ಮೂರು ಸಾವಿರ ಒಂಟೆಗಳೂ ಐನೂರು ಜೋಡು ಎತ್ತುಗಳೂ ಐನೂರು ಹೆಣ್ಣು ಕತ್ತೆಗಳೂ ಅನೇಕ ಪರಿವಾರದ ಜನವೂ ಅವನಿಗೆ ಉಂಟಾಗಿ ಇದ್ದವು. ಆದದರಿಂದ ಮೂಡಣ ದೇಶದಲ್ಲಿರುವವರೆಲ್ಲರಿಗಿಂತ ಇವನು ದೊಡ್ಡವನಾಗಿದ್ದನು. ಅವನ ಕುಮಾರರು ತಮ್ಮ ತಮ್ಮ ದಿವಸಗಳಲ್ಲಿ ತಮ್ಮ ತಮ್ಮ ಮನೆಗಳೊಳಗೆ ಔತಣವನ್ನು ಮಾಡಿಸಿ, ತಮ್ಮ ಸಂಗಡ ಊಟ ಮಾಡುವದಕ್ಕೆ ತಮ್ಮ ಮೂರು ಮಂದಿ ಸಹೋದರಿಗಳನ್ನು ಕರಿಸುತ್ತಿದ್ದರು. ಅವರ ಔತಣದ ದಿವಸಗಳಾದ ತರುವಾಯ ಇಯ್ಯೋಬನು ಅವರನ್ನು ಕರೆಯ ಕಳುಹಿಸಿ, ಅವರನ್ನು ಪವಿತ್ರ ಮಾಡುವದಕ್ಕೆ ಉದಯ ಕಾಲದಲ್ಲಿ ಯೆದ್ದು, ಅವರ ಲೆಖ್ಖದ ಪ್ರಕಾರಕ್ಕೆ ದಹನಬಲಿಗಳನ್ನು ಅರ್ಪಿಸುತ್ತಿದ್ದನು. ಏನಂದರೆ ತನ್ನ ಕುಮಾರರು ಪಾಪ ಮಾಡಿ, ದೇವರನ್ನು ತಮ್ಮ ಹೃದಯಗಳಲ್ಲಿ ಶಪಿಸಿರುವರೇನೋ ಯೆಂದು ನೆನಸಿ, ಇಯ್ಯೋಬನು ಈ ಪ್ರಕಾರ ಯಾವಾಗಲೂ ಮಾಡುತ್ತಿದ್ದನು. ಆದರೆ ಒಂದಾನೊಂದು ದಿವಸದಲ್ಲಿ ದೇವರ ಮಕ್ಕಳು ಕರ್ತನಾದ ದೇವರ ಸಮುಖಕ್ಕೆ ಬರುವಾಗ ಅವರ ಮಧ್ಯದಲ್ಲಿ ಸೈತಾನನು ಸಹಾ ಬಂದನು ಆಗಲು ಕರ್ತನು ಸೈತಾನನನ್ನು ನೋಡಿ—ಯೆಲ್ಲಿಂದ ಬಂದಿ ಎಂದು ಕೇಳಿದನು. ಸೈತಾನನು ಕರ್ತನಿಗೆ ಪ್ರತ್ಯುತ್ತರವಾಗಿ—ನಾನು ಭೂಮಿಯಲ್ಲಿ ಸಂಚರಿಸಿ ಅದರಲ್ಲಿ ತಿರುಗಾಡಿ ಇಲ್ಲಿಗೆ ಬಂದೆನೆಂದನು. ಮತ್ತು ಕರ್ತನು ಸೈತಾನನಿಗೆ—ನೀನು ನನ್ನ ಸೇವಕನಾದ ಇಯ್ಯೋಬನನ್ನು ಕಂಡ್ಯಾ? ನಿಶ್ಚಯವಾಗಿ ಇವನ ಹಾಗೆ ಸಾಧುವಾಗಿಯೂ ಸತ್ಯವಂತನಾಗಿಯೂ ದೇವರಿಗೆ ಭಕ್ತಿಯುಳ್ಳವನಾಗಿಯೂ ದುರ್ಮಾರ್ಗತನಕ್ಕೆ ದೂರವಾಗಿಯೂ ಇರುವಂ

ಥವನು ಭೂಮಿಯಲ್ಲಿ ಒಬ್ಬನೂ ಇಲ್ಲವೆಂದನು. ಆಗಲು ಸೈತಾನನು ಕರ್ತನಿಗೆ ಪ್ರತ್ಯುತ್ತರವಾಗಿ—ಇಯ್ಯೋಬನ ಭಕ್ತಿಯೇನು? ನೀನು ಅವನ ಸುತ್ತಲೂ ಅವನ ಮನೆಯ ಸುತ್ತಲೂ ಅವನಿಗುಂಟಾದದ್ದೆಲ್ಲಾದರ ಸುತ್ತಲೂ ಸಮಸ್ತ ಕಡೆಯಲ್ಲಿ ಒಂದು ಪ್ರಾಕಾರವನ್ನಿಡಲಿಲ್ಲವೋ? ನೀನು ಅವನ ಕೈಗಳ ಕೆಲಸವನ್ನು ಆಶೀರ್ವದಿಸಿದದರಿಂದ ಅವನ ಸ್ಥಿತಿಯು ಭೂಮಿಯಲ್ಲಿ ಹೆಚ್ಚಾಯಿತು. ಆದರೆ ಈಗ ನೀನು ನಿನ್ನ ಕೈಯನ್ನು ಚಾಚಿ ಅವನಿಗುಂಟಾದದ್ದನ್ನೆಲ್ಲಾ ಮುಟ್ಟಿದರೆ ಅವನು ನಿಶ್ಚಯವಾಗಿ ನಿನ್ನ ಯೆದುರಿನಲ್ಲಿ ನಿನ್ನನ್ನು ಶಪಿಸನ್ಯೋ, ಎಂದನು. ಕರ್ತನು ಸೈತಾನನ ಸಂಗಡ—ಇಗೋ ಅವನಿಗುಂಟಾದದ್ದೆಲ್ಲಾ ನಿನ್ನ ವಶವಾಗಿದೆ; ಆದರೆ ಅವನ ಮೇಲೆ ಮಾತ್ರ ನಿನ್ನ ಕೈಯನ್ನು ಹಾಕದಿರು ಯೆನಲು, ಸೈತಾನನು ಕರ್ತನ ಸಮ್ಮುಖದಿಂದ ಹೊರಟು ಹೋದನು. ತರುವಾಯ ಒಂದು ದಿವಸದಲ್ಲಿ ಇಯ್ಯೋಬನ ಕುಮಾರರೂ ಕುಮಾರ್ತೆಗಳೂ ಯೆಲ್ಲರು ತಮ್ಮ ಹಿರೇ ಸಹೋದರನ ಮನೆಯಲ್ಲಿ ಭೋಜಿಸುತ್ತಾ ದ್ರಾಕ್ಷೆಯ ರಸವನ್ನು ಕುಡಿಯುತ್ತಾ ಇದ್ದಾಗ, ಒಬ್ಬ ಸೇವಕನು ಇಯ್ಯೋಬನ ಬಳಿಗೆ ಬಂದು—ಯೆತ್ತುಗಳು ನೇಗಲು ಹೊಡಿಯುತ್ತಾ, ಕತ್ತೆಗಳು ಅವುಗಳ ಬಳಿಯಲ್ಲಿ ಮೇಯುತ್ತಾ ಇರುವಾಗ, ಷೆಬಾಯರು ಅವುಗಳ ಮೇಲೆ ಬಿದ್ದು, ಸುಲು ಕೊಂಡು, ಸೇವಕರೆಲ್ಲರನ್ನು ಖಡ್ಗದಿಂದ ಕೊಂದು ಹಾಕಿದರು; ಇದನ್ನು ನಿನಗೆ ತಿಳಿಸಲಿಕ್ಕೆ ನಾನೊಬ್ಬನು ಮಾತ್ರ ತಪ್ಪಿಸಿ ಕೊಂಡು ಬಂದೆನೆನಲಾಗಿ, ಮತ್ತೊಬ್ಬನು ಬಂದು—ದೇವರ ಅಗ್ನಿಯು ಆಕಾಶದಿಂದಿಳಿದು ಕುರಿಗಳನ್ನೂ ಸೇವಕರನ್ನೂ ದಹಿಸಿ ಬಿಟ್ಟಿತು; ಇದನ್ನು ನಿನಗೆ ತಿಳಿಸಲಿಕ್ಕೆ ನಾನೊಬ್ಬನೇ ಮಾತ್ರ ಉಳಿದು ಬಂದೆನೆಂದನು. ಅವನು ಹೇಳುವಾಗ, ಮತ್ತೊಬ್ಬನು ಬಂದು—ಕಸ್ದೀಯರು ಮೂರು ಗುಂಪಾಗಿ ಬಂದು, ಒಂಟೆಗಳ ಮೇಲೆ ಬಿದ್ದು, ಅವುಗಳನ್ನು ಕೊಳ್ಳೆ ಇಟ್ಟು, ಸೇವಕರೆಲ್ಲರನ್ನು ಖಡ್ಗದಿಂದ ಕೊಂದು ಹಾಕಿದರು; ಇದನ್ನು ನಿನಗೆ ತಿಳಿಸಲಿಕ್ಕೆ ನಾನೊಬ್ಬನೇ ಮಾತ್ರ ತಪ್ಪಿಸಿ ಕೊಂಡು ಬಂದೆನೆನಲಾಗಿ, ಇನ್ನೊಬ್ಬನು ಬಂದು—ನಿನ್ನ ಕುಮಾರರೂ ಕುಮಾರ್ತೆಯರೂ ತಮ್ಮ ಹಿರೇ ಸಹೋದರನ ಮನೆಯಲ್ಲಿ ಭೋಜಿಸುತ್ತಾ, ದ್ರಾಕ್ಷೆಯ ರಸವ

ನ್ನು ಕುಡಿಯುತ್ತಾ, ಇರುವಾಗ, ಇಗೋ! ಅರಣ್ಯದೊಳಗಿಂದ ಮಹಾ ಗಾಳಿಯು ಬಂದು, ಮನೆಯ ನಾಲ್ಕು ಮೂಲೆಗಳಿಗೆ ಬಡಿಯಿತು. ಆ ಮನೆಯು ನಿನ್ನ ಮಕ್ಕಳ ಮೇಲೆ ಬಿದ್ದದರಿಂದ ಅವರು ಸತ್ತು ಹೋದರು; ನಾನೊಬ್ಬನೇ ಮಾತ್ರ ಇದನ್ನು ನಿನಗೆ ತಿಳಿಸಲಿಕ್ಕೆ ತಪ್ಪಿಸಿ ಕೊಂಡು ಬಂದೆನೆಂದನು. ಆಗಲು ಇಯ್ಯೋಬನು ಯೆದ್ದು, ತನ್ನ ವಸ್ತ್ರವನ್ನು ಹರಕೊಂಡು, ತನ್ನ ತಲೆಯನ್ನು ಬೋಳಿಸಿ ಕೊಂಡು, ಸಾಷ್ಟಾಂಗವೆರಗಿ ಹೇಳಿದ್ದು — ನಾನು ಬತ್ತಲೆಯಾಗಿ ನನ್ನ ತಾಯಿಯ ಗರ್ಭದೊಳಗಿಂದ ಬಂದು, ಬತ್ತಲೆಯಾಗಿ ತಿರುಗಿ ಹೋಗುವೆನು. ಕರ್ತನು ಕೊಟ್ಟನು, ಕರ್ತನು ತಕ್ಕೊಂಡನು, ಕರ್ತನ ನಾಮವು ಸ್ತುತಿಸಲ್ಪಡಲಿ. ಇದೆಲ್ಲಾದರಲ್ಲಿ ಇಯ್ಯೋಬನು ಪಾಪ ಮಾಡದೆ ದೇವರಿಗೆ ಅಸಮರ್ಪಕವಾದದ್ದೊಂದನ್ನಾದರೂ ಹೇಳದೆ ಇದ್ದನು.

ಮತ್ತು ಒಂದಾನೊಂದು ದಿವಸದಲ್ಲಿ ದೇವರ ಮಕ್ಕಳು ಕರ್ತನ ಸಮ್ಮುಖಕ್ಕೆ ಬರುವಾಗ, ಅವರ ಮಧ್ಯದಲ್ಲಿ ಸೈತಾನನೂ ಬಂದನು. ಆಗಲು ಕರ್ತನು ಸೈತಾನನನ್ನು ನೋಡಿ — ನೀನು ಯೆಲ್ಲಿಂದ ಬಂದಿ, ಎಂದು ಕೇಳಿದನು. ಸೈತಾನನು ಕರ್ತನಿಗೆ ಪ್ರತ್ಯುತ್ತರವಾಗಿ — ನಾನು ಭೂಮಿಯಲ್ಲಿ ಸಂಚರಿಸಿ, ಅದರಲ್ಲಿ ತಿರುಗಾಡಿ ಇಲ್ಲಿಗೆ ಬಂದೆನೆಂದನು. ಅದಕ್ಕೆ ಕರ್ತನು ಸೈತಾನನಿಗೆ, ನನ್ನ ಸೇವಕನಾದ ಇಯ್ಯೋಬನನ್ನು ಕಂಡ್ಯಾ? ನಿಶ್ಚಯವಾಗಿ ಇವನ ಹಾಗೆ ಸಾಧುವಾಗಿಯೂ ಸತ್ಯವಂತನಾಗಿಯೂ ದೇವರಿಗೆ ಭಕ್ತಿಯುಳ್ಳವನಾಗಿಯೂ ದುರ್ಮಾರ್ಗತನಕ್ಕೆ ದೂರವಾಗಿಯೂ ಇರುವವನು ಭೂಮಿಯಲ್ಲಿ ಮತ್ತೊಬ್ಬನಿಲ್ಲವು. ನೀನು ನಿರ್ನಿಮಿತ್ತವಾಗಿ ಅವನನ್ನು ಕೆಡಿಸ ನನ್ನನ್ನು ಪ್ರೇರೇಪಿಸಿದ್ದರೂ ತನ್ನ ಶುದ್ಧತ್ವವನ್ನು ಘಟ್ಟಿಯಾಗಿ ಹಿಡಕೊಂಡಿದ್ಧಾನೆಂದನು. ಸೈತಾನನು ಕರ್ತನಿಗೆ ಪ್ರತ್ಯುತ್ತರವಾಗಿ, ತೊಗಲಿಗೆ ತೊಗಲು! ನಿಶ್ಚಯವಾಗಿ ಮನುಷ್ಯನು ತನ್ನ ಪ್ರಾಣವನ್ನು ರಕ್ಷಿಸಿ ಕೊಳ್ಳುವದಕ್ಕೆ ತನಗುಂಟಾದದ್ದೆಲ್ಲಾ ಕೊಡುವನು. ಆದರೆ ನೀನು ನಿನ್ನ ಕೈಯನ್ನು ಚಾಚಿ, ಅವನ ಯೆಲುವನ್ನೂ ಮಾಂಸವನ್ನೂ ಮುಟ್ಟಿದರೆ, ನಿಶ್ಚಯವಾಗಿ ನಿನ್ನೆದುರಿನಲ್ಲಿ ನಿನ್ನನ್ನು ಶಪಿಸನೇ ಎಂದನು. ಅದಕ್ಕೆ ಕರ್ತನು ಸೈತಾನನಿಗೆ — ಇಗೋ ಅವನು ನಿನ್ನ ಕೈಯಲ್ಲಿದ್ಧಾನೆ; ಅವನ ಪ್ರಾ

ಣವನ್ನು ಮಾತ್ರ ಕಾಯಿ, ಎಂದನು. ಆಗಲು ಸೈತಾನನು ಕರ್ತನ ಸಮುಖದಿಂದ ಹೊರಟು ಹೋಗಿ, ಇಯ್ಯೋಬನ ಅಂಗಾಲಿನಿಂದ ನಡುನೆತ್ತಿಯ ಮಟ್ಟಿಗೂ ಕೆಟ್ಟ ವ್ರಣಗಳಿಂದ ತುಂಬ ಮಾಡಿದನು. ಆದದರಿಂದ ಇಯ್ಯೋಬನು ತನ್ನನ್ನು ತುರಿಸಲಿಕ್ಕೆ ಬೋಕಿಯನ್ನು ತೆಗದು ಕೊಂಡು ಬೂದಿಯಲ್ಲಿ ಕೂತು ಕೊಂಡನು. ಆಗಲು ಅವನ ಹೆಂಡತಿಯು ಅವನಿಗೆ—ಇಷ್ಟರೊಳಗೆ ನಿನ್ನ ಶುದ್ಧತ್ವವನ್ನು ಘಟ್ಟಿಯಾಗಿ ಹಿಡಕೊಂಡಿ; ದೇವರನ್ನು ಶಪಿಸಿ ಸಾಯಿ! ಯೆಂದಳು. ಆದರೆ ಅವನು ಅವಳಿಗೆ—ಮೂಢರೊಳಗೊಬ್ಬಳಾಗಿ ಮಾತಾಡುತ್ತಿ. ದೇವರಿಂದ ಮೇಲನ್ನು ತಕ್ಕೊಂಡು, ಕೇಡನ್ನು ತಕ್ಕೊಳ್ಳ ಬೇಡವೋ? ಯೆಂದನು. ಇದೆಲ್ಲಾದರಲ್ಲಿ ಇಯ್ಯೋಬನು ತನ್ನ ತುಟಿಗಳಿಂದ ಪಾಪವನ್ನು ಮಾಡದೆ ಇದ್ದನು. ಇಯ್ಯೋಬನ ಮೂರು ಮಂದಿ ಸ್ನೇಹಿತರಾಗಿರುವ ತೇಮಾನ್ಯನಾದ ಎಲೀಫಸನೂ ಶೂಹ್ಯನಾದ ಬಿಲ್ದಾದನೂ ನಹಾಮ್ಯನಾದ ಚೋಫಾರನೂ ಇವನ ಮೇಲೆ ಬಂದ ಶ್ರಮವನ್ನು ಕೇಳಿದಾಗ, ಅವನ ಕೂಡಾ ದುಖ್ಖ ಪಡುವದಕ್ಕೂ ಅವನನ್ನು ಸಮಾಧಾನ ಪಡಿಸುವದಕ್ಕೂ ಬರ ನಿಶ್ಚೈಸಿ, ತಮ್ಮ ತಮ್ಮ ಸ್ಥಳಗಳಿಂದ ಬಂದರು. ಅವರು ಇನ್ನೂ ದೂರದಲ್ಲಿರುವಾಗ, ತಮ್ಮ ಕಣ್ಣುಗಳನ್ನೆತ್ತಿ, ಅವನನ್ನರಿಯದೆ ಇದ್ದದರಿಂದ, ತಮ್ಮ ಶಬ್ದವನ್ನೆತ್ತಿ ಅತ್ತರು. ಇದಲ್ಲದೆ ಅವರು ತಮ್ಮ ತಮ್ಮ ವಸ್ತ್ರಗಳನ್ನು ಹರಕೊಂಡು, ಧೂಳಿಯನ್ನು ತಮ್ಮ ತಲೆಗಳ ಮೇಲೆ ಹಾಕಿ ಕೊಂಡರು. ತರುವಾಯ ಅವರು ಯೇಳು ದಿನ ಹಗಲಿರಳು ಅವನ ಸಂಗಡ ನೆಲದ ಮೇಲೆ ಕೂತು ಕೊಂಡರು. ಅವನ ದುಖ್ಖವು ಬಹಳವಾಯಿತೆಂದು ಅವರು ನೋಡಿದದರಿಂದ, ಯಾವನೂ ಒಂದು ಮಾತಾದರೂ ಅವನ ಸಂಗಡ ಆಡದೆ ಇದ್ದನು. ಆ ಸ್ನೇಹಿತರು ಇಯ್ಯೋಬನ ದುಖ್ಖವನ್ನು ನೋಡಿ, ಅವನು ಗೋಳಾಡುವದನ್ನು ಕೇಳಿ, ಅವನ ಮೇಲೆ ಅಪರಾಧ ಹೊರಿಸಿ—ನಿನ್ನ ಪಾಪಗಳಿಗೋಸ್ಕರ ನೀನು ದೇವರಿಂದ ಶಿಕ್ಷೆ ಹೊಂದಿದಿ, ಎಂದು ಹೇಳಿದರು. ಇಯ್ಯೋಬನು ತನ್ನ ನೀತಿಯನ್ನು ಪ್ರಕಟ ಮಾಡುವ ಪ್ರಯತ್ನದಲ್ಲಿದ್ದದರಿಂದ ಅವರು ಅವನನ್ನು ಅಧಿಕವಾಗಿ ಗದರಿಸಿದರು. ಆ ಮೇಲೆ ದೇವದೂತನು ಇಯ್ಯೋಬನ ಸ್ನೇಹಿತರಿಗೆ ಗದರಿಸಿ, ದೇವರ ನೀತಿಯನ್ನೂ ಮ

ಹಿಮೆಯನ್ನೂ ಸರ್ವತ್ರಾಣವನ್ನೂ ಸರ್ವಜ್ಞಾನವನ್ನೂ ಕುರಿತು ಪ್ರಸಂಗ ಮಾಡಿದ ಮೇಲೆ ಇಯ್ಯೋಬನು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ, ನೀನು ಸರ್ವತ್ರಾಣವುಳ್ಳವನಾಗಿದ್ದಿ ಯೆಂದೂ, ನಿನಗೆ ದಾವ ಆಲೋಚನೆಯಾದರೂ ಮರೆಯಾಗಿರ ಕೂಡದೆಂದೂ, ನಾ ಬಲ್ಲೆನು. ಬುದ್ಧಿಯನ್ನು ಹೀನೈಸುವವನ್ಯಾವನು? ಹಾಗೆಯೇ ನಾನು ತಿಳಿಯದೆ ನನಗೆ ಆಶ್ಚರ್ಯವಾದವುಗಳನ್ನು ಅರಿಯದವನಾಗಿ ಮಾತಾಡಿದೆನು; ಈಗಲು ನೀನು ದಯ ಮಾಡಿ ಕೇಳು. ನಾನು ಮಾತಾಡಿ ನಿನ್ನಿಂದ ಕೇಳುವೆನು; ನೀನು ನನಗೆ ತಿಳಿಯ ಮಾಡು; ಶ್ರುತಿಯಿಂದ ನಾನು ನಿನ್ನ ಸಮಾಚಾರವನ್ನು ಕೇಳಿದೆನು: ಆದರೆ ಈಗ ನನ್ನ ಕಣ್ಣು ನಿನ್ನನ್ನು ನೋಡುತ್ತದೆ. ಅದುಕಾರಣ ನಾನು ನನ್ನನ್ನು ಅಸಂಹಿಸಿ, ಧೂಳಿಯಲ್ಲಿಯೂ ಬೂದಿಯಲ್ಲಿಯೂ ನಿಟ್ಟುಸುರು ಬಿಡುತ್ತೇನೆಂದನು. ಈ ಸಂಭಾಷಣೆ ಆದ ತರುವಾಯ ಸಂಭವಿಸಿದ್ದೇನಂದರೆ. ಕರ್ತನು ತೇಮಾನ್ಯನಾದ ಎಲೀಫಸನಿಗೆ—ನಿನ್ನ ಮೇಲೆಯೂ ನಿನ್ನ ಇಬ್ಬರು ಸ್ನೇಹಿತರ ಮೇಲೆಯೂ ನನ್ನ ಕೋಪವೆದ್ದಿರುತ್ತದೆ. ಯೇನಂದರೆ ನನ್ನ ಸೇವಕನಾದ ಇಯ್ಯೋಬನು ನನ್ನನ್ನು ಕುರಿತು ಹೇಳಿದ ಹಾಗೆ ನೀವು ಯುಕ್ತವಾಗಿ ಹೇಳದ ಕಾರಣ ನಾನು ನಿಮಗೆ ನಿಮ್ಮ ಹುಚ್ಚತನಕ್ಕೆ ತಕ್ಕದಾಗಿ ಮಾಡದ ಹಾಗೆ ನೀವು ಏಳು ಎತ್ತುಗಳನ್ನೂ ಏಳು ಕುರಿಹೋತುಗಳನ್ನೂ ತೆಗದು ಕೊಂಡು, ನನ್ನ ಸೇವಕನಾದ ಇಯ್ಯೋಬನ ಬಳಿಗೆ ಹೋಗಿ, ನಿಮಗೋಸ್ಕರ ಸರ್ವಾಂಗದಹನಬಲಿಯನ್ನು ಅರ್ಪಿಸಿರಿ! ಆಗಲು ನನ್ನ ಸೇವಕನಾದ ಇಯ್ಯೋಬನು ನಿಮಗೋಸ್ಕರ ಪ್ರಾರ್ಥಿಸುವನು; ಅವನನ್ನು ನಾನು ಅಂಗೀಕರಿಸುವೆನು; ಯಾತಕ್ಕಂದರೆ ನನ್ನ ಸೇವಕನಾದ ಇಯ್ಯೋಬನು ಹೇಳಿದ ಹಾಗೆ ನನ್ನ ವಿಷಯವಾಗಿ ನೀವು ಯುಕ್ತವಾದದ್ದನ್ನು ಹೇಳಲಿಲ್ಲವೆಂದನು. ಹಾಗೆಯೇ ತೇಮಾನ್ಯನಾದ ಎಲಿಫಸನೂ ಶೂಹ್ಯನಾದ ಬಿಲ್ದಾದನೂ ನಹಾಮ್ಯನಾದ ಚೋಫಾರನೂ ಹೋಗಿ, ಕರ್ತನು ತಮಗೆ ಹೇಳಿದ ಹಾಗೆ ಮಾಡಿದರು. ಇಯ್ಯೋಬನು ತನ್ನ ಸ್ನೇಹಿತರಿಗೋಸ್ಕರ ಬೇಡಿ ಕೊಳ್ಳುವಾಗ ಕರ್ತನು ಅವನನ್ನು ಅಂಗೀಕರಿಸಿದನು. ಅದರ ಮೇಲೆ ಕರ್ತನು ಅವನನ್ನು ಇಕ್ಕಟ್ಟಿನಿಂದ ತಪ್ಪಿಸಿದನು. ಇದಲ್ಲದೆ ಕರ್ತನು ಇಯ್ಯೋ

ಬನಿಗೆ ಮುಂಚೆ ಇದ್ದದಕ್ಕಿಂತ ಯೆರಡಷ್ಟಾಗಿ ಕೊಟ್ಟನು. ಆಗಲು ಅವನ ಸಮಸ್ತ ಸಹೋದರರೂ ಸಹೋದರಿಗಳೂ ಮುಂಚೆ ಇದ್ದ ಪರಿಚಿತಿಯವರೂ ಅವನ ಬಳಿಗೆ ಬಂದು, ಮನೆಯಲ್ಲಿ ಅವನ ಸಂಗಡ ಊಟ ಮಾಡಿ, ಕರ್ತನು ಅವನ ಮೇಲೆ ಬರ ಮಾಡಿದ ಸಕಲ ಕೇಡನ್ನು ಕುರಿತು ಅವನ ಸಂಗಡ ದುಖ್ಖ ಪಟ್ಟು, ಅವನನ್ನು ಸಮಾಧಾನ ಪಡಿಸಿದರು. ಇದಲ್ಲದೆ ಪ್ರತಿಮನುಷ್ಯನು ಒಂದೊಂದು ಹಣವನ್ನೂ ಬಂಗಾರದ ಒಂದು ಮುರುವನ್ನೂ ಅವನಿಗೆ ಕೊಟ್ಟನು. ಹೀಗೆಯೇ ಕರ್ತನು ಇಯ್ಯೋಬನ ಮೊದಲಿನ ಸ್ಥಿತಿಗಿಂತ ಕಡೇ ಸ್ಥಿತಿಯನ್ನು ಹೆಚ್ಚಾಗಿ ಆಶೀರ್ವದಿಸಿದನು. ಯೇನಂದರೆ ಅವನಿಗೆ ಹದಿನಾಲ್ಕು ಸಾವಿರ ಕುರಿಗಳೂ ಆರು ಸಾವಿರ ಒಂಟೆಗಳೂ ಸಾವಿರ ಜೋಡು ಯೆತ್ತುಗಳೂ ಸಾವಿರ ಕತ್ತೆಗಳೂ ಉಂಟಾದವು. ಇದಲ್ಲದೆ ಅವನಿಗೆ ಯೇಳು ಮಂದಿ ಕುಮಾರರೂ ಮೂರು ಮಂದಿ ಕುಮಾರ್ತೆಗಳೂ ಹುಟ್ಟಿದರು. ಸಮಸ್ತ ದೇಶಲ್ಲಿ ಇಯ್ಯೋಬನ ಕುಮಾರ್ತೆಗಳ ಹಾಗೆ ಸೌಂದರ್ಯವುಳ್ಳ ಹೆಣ್ಣುಗಳು ಕಾಣಿಸಲಿಲ್ಲ. ಅವರ ತಂದೆಯು ಅವರ ಸಹೋದರರಲ್ಲಿ ಅವರಿಗೆ ಸ್ವಾಸ್ಥ್ಯವನ್ನು ಕೊಟ್ಟನು. ಇದರ ತರುವಾಯ ಇಯ್ಯೋಬನು ನಾಲ್ಕು ತಲಾಂತರದ ಪರ್ಯಂತರಕ್ಕೂ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಕಂಡು, ನೂರ ನಾಲ್ವತ್ತು ವರ್ಷಗಳ ಮುದುಕನಾಗಿಯೂ ಪ್ರಾಯ ತುಂಬಿದವನಾಗಿಯೂ ತೀರಿ ಹೋದನು.

---

೨೧. ಮೋಶೆಯು.

ಮಿಸ್ರಕ್ಕೆ ಹೋದ ಯಕೋಬನ ಮಗಂದ್ರಾದ ಹನ್ನೆರಡು ಮಂದಿ ಸಹೋದರರ ಮಕ್ಕಳು ಕೆಲವು ನೂರು ವರ್ಷಗಳೊಳಗೆ ಹನ್ನೆರಡು ಗೋತ್ರವಾದ ದೊಡ್ಡ ಜನಾಂಗವಾದರು. ಆದರೆ ಯೋಸೇಫನು ಸತ್ತು ಹೋದ ಮೇಲೆ ಅವರು ಮುಂಚಿನ ಹಾಗೆ ಸುಖದಿಂದಿರಲಿಲ್ಲ. ಇಸ್ರಾಯೇಲನು ಮಿಸ್ರಕ್ಕೆ ಹೋಗುವ ಸಮಯದಲ್ಲಿ ದೇವರು—ನಾನು ನಿನ್ನನ್ನು ದೊಡ್ಡ ಜನಾಂಗವಾ

ಗ ಮಾಡುವೆನೆಂದು, ಹೇಳಿದ ಪ್ರಕಾರವೇ ಆಯಿತು. ಹಾಗಾದರೆ ಅವರು ಅನೇಕರೂ ಬಲಿಷ್ಟರೂ ಆಗುವ ಸಮಯದಲ್ಲಿ ಮಿತ್ರದ ಅರಸುಗಳು ಅವರಿಗೆ ಭಯ ಪಡುತ್ತಿದ್ದರು. ಆದದರಿಂದ ಯೋಸೇಫನನ್ನು ಅರಿಯದ ಒಬ್ಬ ಹೊಸ ಅರಸನು ಮಿತ್ರದಲ್ಲಿ ಎದ್ದು ತನ್ನ ಜನರ ಸಂಗಡ ಹೇಳಿದ್ದೇನಂದರೆ — ಇಗೋ! ಇಸ್ರಯೇಲನ ಮಕ್ಕಳಾದ ಜನರು ನಮಗಿಂತ ಅಧಿಕರಾಗಿಯೂ ಬಲಿಷ್ಟರಾಗಿಯೂ ಇದ್ದಾರೆ. ಆದದರಿಂದ ಅವರು ಹೆಚ್ಚಿದ ಹಾಗೆಯೂ, ಒಂದು ವೇಳೆ ಯುದ್ಧ ಉಂಟಾದರೆ, ಅವರು ನಮ್ಮ ಶತ್ರುಗಳ ಸಂಗಡ ಕೂಡಿ ನಮಗೆ ವಿರೋಧವಾಗಿ ಯುದ್ಧವನ್ನು ಮಾಡಿ, ದೇಶದಿಂದ ಹೊರಟು ಹೋಗದ ಹಾಗೆಯೂ, ನಾವು ಅವರ ನಿಮಿತ್ತ ಯುಕ್ತಿವಂತರಾಗಿರುವಾ, ಬರ್ರಿ! ಎಂದು ಅವರನ್ನು ಭಾರವಾದ ಹೊರೆಗಳಿಂದ ದುಖ್ಖ ಪಡಿಸುವ ಹಾಗೆ ಅವರ ಮೇಲೆ ಬಿಟ್ಟಿ ಮಾಡಿಸುವಂಥಾ ಯಜಮಾನರನ್ನು ಇಟ್ಟನು. ಅವರು ದ್ರವ್ಯಗಳನ್ನು ಇಡುವ ಪಟ್ಟಣಗಳಾದ ಪಿಥೋನ್, ರಮ್ಸೇಸ್, ಎಂಬವುಗಳನ್ನು ಫರೋನನಿಗೋಸ್ಕರವಾಗಿ ಕಟ್ಟಿದರು. ಆದರೆ ಆ ಜನರನ್ನು ಯೆಷ್ಟು ಉಪದ್ರ ಪಡಿಸಿದರೋ, ಅಷ್ಟು ವರ್ಧಮಾನವಾಗಿ ಬೆಳೆಯುತ್ತಿದ್ದರು. ಮತ್ತು ಅವರು ಇಸ್ರಯೇಲ್ಯರ ಮಕ್ಕಳನ್ನು ನೋಡಿ, ಸಹಿಸಲಾರದೆ ಹೋದರು; ಆದದರಿಂದ ಮಿತ್ರದವರು ಇಸ್ರಯೇಲನ ಮಕ್ಕಳನ್ನು ಮಹಾ ಕಠಿಣವಾಗಿ ಸೇವೆ ಮಾಡನಡಿಸಿ, ಅವರ ಪ್ರಾಣಗಳು ವಿಷವಾಗ ಮಾಡಿದರು.



ಇದಲ್ಲದೆ ಮಿಸ್ರದವರ ಅರಸನು ಹೆಬ್ರಾಯರಿಗೆ ಹುಟ್ಟುವ ಗಂಡುಮಕ್ಕಳನ್ನೆಲ್ಲಾ ಕೊಂದು ಹಾಕಿಸಿ, ಹೆಣ್ಣು ಮಕ್ಕಳನ್ನು ಮಾತ್ರ ಉಳಿಸ ಬೇಕೆಂದು ಆಲೋಚಿಸಿ, ಮೊದಲು ಇಸ್ರಯೇಲ್ಯರ ಸೂಲಗಿತ್ತಿಯರಿಗೆ ಇಂಥಾ ಅಪ್ಪಣೆಯನ್ನು ಕೊಟ್ಟನು. ಆದರೆ ಇವರು ದೇವರಿಗೆ ಭಯ ಪಟ್ಟು, ಮಕ್ಕಳನ್ನು ಪ್ರಾಣದಿಂದುಳಿಸುತ್ತಿದ್ದರು. ಆಗಲವನು ಸಮಸ್ತ ಮಿಸ್ರದವರಿಗೆ ಹೆಬ್ರಾಯರ ಹೆಂಗಸರು ಹೆತ್ತ ಗಂಡು ಮಕ್ಕಳನ್ನು ವ್ಯೈದು ನೀರಿನಲ್ಲಿ ಬಿಸಾಡ ಬೇಕೆಂಬ ಅಪ್ಪಣೆಯನ್ನು ಕೊಟ್ಟನು.



ಆ ಸಮಯದಲ್ಲಿ ಇಸ್ರಯೇಲ್ಯಳಾದ ಒಬ್ಬ ಸ್ತ್ರೀಯು ಒಂದು ಒಳ್ಳೇ ಗಂಡು ಕೂಸನ್ನು ಹೆತ್ತು, ಮಹಾ ಭಯ ಪಟ್ಟು, ಮೂರು ತಿಂಗಳು ಪರ್ಯಂತರ ಅದನ್ನು ಅಡಗಿಸಿ, ಇನ್ನು ಮೇಲೆ ಅಡಗಿಸ ಕೂಡದೆ ಇರುವದರಿಂದ ಆಪಿನ ಪೆಟ್ಟಿಗೆಯನ್ನು ಮಾಡಿ, ಅದಕ್ಕೆ ರಾಳವನ್ನೂ ಜೇಡಿಯನ್ನೂ ಹಚ್ಚಿ, ಅದರಲ್ಲಿ ಶಿಶುವನ್ನಿಟ್ಟು, ನದಿಯ ಅಂಚಿನಲ್ಲಿ ಆಪಿನ ಮಧ್ಯದಲ್ಲಿಟ್ಟಳು. ಆದರೆ ಅದಕ್ಕೆ ಏನು ಸಂಭವಿಸುವದೆಂದು ತಿಳಿಯಲಿಕ್ಕೆ ಅದರ ಅಕ್ಕ ದೂರದಿಂದ ನೋ

ಡುತ್ತಾ ನಿಂತಿದ್ದಳು. ಆಗಲು ಫರೋಹನನ ಮಗಳು ನದಿಯಲ್ಲಿ ಸ್ನಾನ ಮಾಡಲಿಕ್ಕೆ ಬಂದಳು. ಅವಳ ದಾಸಿಗಳು ನದಿಯ ತೀರದಲ್ಲಿ ತಿರುಗುತ್ತಾ ಇರುವಾಗ, ಅವಳು ಆಪಿನ ಮಧ್ಯದಲ್ಲಿರುವ ಪೆಟ್ಟಿಗೆಯನ್ನು ಕಂಡು, ಅದನ್ನು ತೆಗದುಕೊಂಡು ಬರಲಿಕ್ಕೆ ತನ್ನ ದಾಸಿಗಳಲ್ಲಿ ಒಬ್ಬಳನ್ನು ಕಳುಹಿಸಿದಳು. ಅವಳು ಅದನ್ನು ತೆಗದು, ಶಿಶುವನ್ನು ನೋಡಿದಾಗ, ಇಗೋ ಶಿಶುವು ಅತ್ತಿತು.



ಆಗಲವಳು ಅದನ್ನು ಕರುಣಿಸಿ—ಇದು ಹೆಬ್ರಿಯರ ಶಿಶುವುಗಳಲ್ಲಿ ಒಂದು, ಎಂದಳು. ಆಗಲು ಅದರ ಅಕ್ಕ ಫರೋಹನನ ಮಗಳ ಸಂಗಡ—ನಿನ್ನ ಬಳಿಯಲ್ಲಿ ಈ ಶಿಶುವಿಗೆ ಮೊಲೆ ಕೊಡುವ ಹಾಗೆ ನಾನು ಹೋಗಿ ಹೆಬ್ರಿಯರ ಸ್ತ್ರೀಯರಲ್ಲಿ ಒಬ್ಬ ದಾದಿಯನ್ನು ಕರಕೊಂಡು ಬರಲೋ? ಎಂದಳು. ಅದಕ್ಕೆ ಫರೋಹನನ ಮಗಳು ಅವಳಿಗೆ—ಹೋಗು ಎನಲು ಅವಳು ಹೋಗಿ ಶಿಶುವಿನ ತಾಯಿಯನ್ನು ಕರಕೊಂಡು ಬಂದಳು! ಆಗಲು ಫರೋಹನನ ಮಗಳು ಅವಳ ಸಂಗಡ—ನೀನು ಈ ಶಿಶುವನ್ನು ತೆಗದು ಕೊಂಡು ಹೋಗಿ ನನಗೋಸ್ಕರ ಅದಕ್ಕೆ ಮೊಲೆಯನ್ನು ಕೊಡು; ನಾನು ನಿನಗೆ ಕೂಲಿಯನ್ನು ಕೊಡುವೆನು, ಎಂದಳು. ಹಾಗೆಯೇ ಆ ಸ್ತ್ರೀಯು ಶಿಶುವನ್ನು ತೆಗದು ಕೊಂಡು ಹೋಗಿ ಅದಕ್ಕೆ ಮೊಲೆ ಕೊಟ್ಟು, ಸಾಕಿದಳು. ಆ ಹುಡುಗನು ಬೆಳದಾಗ, ಅವಳು ಅವನನ್ನು ಫರೋಹನನ ಮಗಳ ಬಳಿಗೆ ವೈದಳು. ಅವನು ಅವಳಿಗೆ

ಮಗನಾದನು. ಮತ್ತು ಅವಳು—ನಾನು ಇವನನ್ನು ನೀರಿನಿಂದ ತೆಗದು ಕಾಂಡೆನೆಂದು, ಅವನಿಗೆ ಮೋಶೆ ಯೆಂದು ಹೆಸರಿಟ್ಟಳು.

ಮೋಶೆಯು ಬೆಳೆಯುವಾಗ, ಇಸ್ರಾಯೇಲ್ಯರ ಕಷ್ಟವು ಹೆಚ್ಚಾಗುತ್ತಿತ್ತು. ಅವನು ಫರೋಹನನ ಮಗಳ ಮಗನೆಂದು ಕರೆಯಲ್ಪಟ್ಟರೂ, ತನ್ನಸ್ವಜನರ ಶ್ರಮೆಗಳನ್ನುನೋಡಿ, ತನ್ನ ಮನಸ್ಸಿನಲ್ಲಿ ವ್ಯಥೆ ಪಡುತ್ತಿದ್ದನು. ಒಂದು ದಿವಸದಲ್ಲಿ ಆದದ್ದೇನಂದರೆ—ಅವನು ತನ್ನಸಹೋದರರ ಬಳಿಗೆ ಹೊರಟು ಹೋಗಿ, ಅವರ ಭಾರವಾದ ಕೆಲಸಗಳನ್ನು ನೋಡಿ, ಹೆಬ್ರಾಯರಾದ ತನ್ನಸಹೋದರರಲ್ಲಿ ಒಬ್ಬನನ್ನು ಬಡಿಯುತ್ತಾ ಇರುವ ಮಿಸ್ರದವನನ್ನು ಕಂಡು, ಈಚೇಲಿ ಆಚೇಲಿ ತಿರುಗಿ ನೋಡಿ, ಬೇರೆ ಯಾರೂ ಇಲ್ಲದಿರುವಾಗ, ಆ ಮಿಸ್ರದವನನ್ನು ಕೊಂದು ಉಸುಬಿನಲ್ಲಿ ಮುಚ್ಚಿಟ್ಟನು. ಇದಲ್ಲದೆ—ತನ್ನ ಕೈಯಿಂದ ದೇವರು ತಮ್ಮನ್ನು ರಕ್ಷಿಸುವನೆಂಬದಾಗಿ, ತನ್ನಸಹೋದರರು ತಿಳಿದು ಕೊಳ್ಳುವರೆಂದು, ಅವನು ನೆನಸಿದನು. ಆದರೆ ಅವರು ತಿಳಿದು ಕೊಳ್ಳದೆ ಹೋದರು. ಫರೋಹನು ಈ ಕಾರ್ಯವನ್ನು ಕೇಳಿದಾಗ, ಮೋಶೆಯನ್ನು ಕೊಂದು ಹಾಕಲಿಕ್ಕೆ ಹುಡುಕಿದನು; ಆದರೆ ಮೋಶೆಯು ಫರೋಹನನಿಗೆ ಸಿಕ್ಕದೆ, ತಪ್ಪಿಸಿ ಕೊಂಡು, ಮಿದ್ಯಾನ ದೇಶದಲ್ಲಿ ವಾಸವಾಗಿರಲಿಕ್ಕೆ ಓಡಿ ಹೋಗಿ, ಅಲ್ಲಿ ಭಾವಿಯ ಬಳಿಯಲ್ಲಿ ಕೂತು ಕೊಂಡನು. ಆದರೆ ಮಿದ್ಯಾನ ದೇಶದ ಯಾಜಕನಿಗೆ ಯೇಳುಮಂದಿ ಹೆಣ್ಣುಮಕ್ಕಳು ಇದ್ದರು. ಅವರು ತಮ್ಮ ತಂದೆಯ ಮಂದೆಗಳಿಗೆ ನೀರು ಕುಡಿಸಲಿಕ್ಕೆ ಅಲ್ಲಿಗೆ ಬಂದು, ದೋಣಿಗಳನ್ನು ನೀರಿನಿಂದ ತುಂಬಿಸಿದರು. ಕುರುಬರು ಬಂದು ಅವರನ್ನು ಹೊರಡಿಸುವಾಗ, ಮೋಶೆಯು ಯೆದ್ದು ನಿಂತು, ಅವರಿಗೆ ಸಹಾಯ ಮಾಡಿ, ಅವರ ಮಂದೆಗಳಿಗೆ ನೀರು ಕುಡಿಸಿದನು. ತರುವಾಯ ಅವರು ತಮ್ಮ ತಂದೆಯಾದ ಯೆತ್ರೋನನ ಬಳಿಗೆ ಬಂದಾಗ, ಅವನು—ನೀವು ಇಂದು ಇಷ್ಟು ತ್ವರೆಯಾಗಿ ಬಂದದ್ದೇನು? ಎನಲು, ಅದಕ್ಕವರು—ಒಬ್ಬ ಮಿಸ್ರದವನು ಕುರುಬರ ಕೈಯಿಂದ ನಮ್ಮನ್ನು ತಪ್ಪಿಸಿ, ನಮಗೆ ನೀರು ತುಂಬಿ ಕೊಟ್ಟು, ಕುರಿಗಳಿಗೆ ನೀರು ಕುಡಿಸಿದನು, ಎಂದರು. ಆಗಲವನು ತನ್ನ ಕುಮಾರ್ತೆಗಳಿಗೆ—ಅವನು ಎಲ್ಲಿ? ಆ ಮನುಷ್ಯನನ್ನು ನೀವು ಬಿಟ್ಟು ಬಂದದ್ದೇ

ನು? ಅವನನ್ನು ಊಟಕ್ಕೆ ಕರೆಯಿರಿ, ಎಂದನು. ಆಗಲು ಮೋಶೆಯು ಬಂದು, ಅವನ ಬಳಿಯಲ್ಲಿ ವಾಸವಾಗಿರಲಿಕ್ಕೆ ಸಮ್ಮತಿಸಿದನು. ತರುವಾಯ ಅವನು ಮೋಶೆಗೆ ತನ್ನ ಮಗಳಾದ ಚಿಪ್ಪೋರಳನ್ನು ಕೊಟ್ಟನು. ಅವಳು ಒಬ್ಬ ಮಗನನ್ನು ಹೆತ್ತಳು. ಆಗಲು ಮೋಶೆಯು — ನಾನು ಅನ್ಯದೇಶದಲ್ಲಿ ಪರದೇಶಿಯಾಗಿದ್ದೇನೆಂದು ಹೇಳಿ, ಅವನಿಗೆ ಗೆರ್ಷೋಮನೆಂಬ ಹೆಸರಿಟ್ಟನು. ಮೋಶೆಯು ನಾಲ್ವತ್ತು ವರ್ಷದವನಾಗಿ ಮಿಸ್ರದಿಂದ ಓಡಿ ಹೋದನು. ಇನ್ನೂ ನಾಲ್ವತ್ತು ವರ್ಷಗಳು ಗತಿಸಿದ ಮೇಲೆ ಅವನು ಮಿದ್ಯಾನದ ಯಾಜಕನಾದ ಯೆಥ್ರೋನನೆಂಬ ತನ್ನ ಮಾವನ ಹಿಂಡನ್ನು ಕಾಯುತ್ತಾ, ಮಂದೆಯನ್ನು ಅರಣ್ಯದ ಹಿಂಭಾಗವಾಗಿ ದೇವರ ಪರ್ವತವೆಂಬ ಹೋರೇಬಿಗೆ ಹೊಡಕೊಂಡು ಬರುವಾಗ, ಕರ್ತನ ದೂತನು ಒಂದು ಪೊದೆಯ ಮಧ್ಯದಲ್ಲಿ ಉಂಟಾದ ಅಗ್ನಿಜ್ವಾಲೆಯಲ್ಲಿ ಅವನಿಗೆ ಪ್ರತ್ಯಕ್ಷವಾದನು. ಇಗೋ, ಅವನು ಕಂಡಾಗ, ಪೊದೆಯು ಉರಿಯುತ್ತಾ ಸುಟ್ಟು ಹೋಗದೆ ಇತ್ತು. ಆಗಲು ಮೋಶೆಯು ಸಮೀಪಕ್ಕೆ ಹೋಗಿ — ಯಾತಕ್ಕೆ ಆ ಮುಳ್ಳಿನ ಪೊದೆಯು ಸುಟ್ಟು ಹೋಗಲಿಲ್ಲ? ಆ ದೊಡ್ಡ ದರ್ಶನವನ್ನು ನಾನು ನೋಡ ಬೇಕೆಂದನು. ಅವನು ಹತ್ತರ ಬರುವಾಗ, ಆ ಪೊದೆಯೊಳಗಿಂದ ಒಂದು ಶಬ್ದವು — ಮೋಶೆಯೇ ಮೋಶೆಯೇ! ಎಂದು ಕೂಗಲಾಗಿ, ಅವನು — ನಾನಿದ್ದೇನೆಂದಲ್ಲಿ, ಆ ಶಬ್ದವು — ನೀನು ಹತ್ತರ ಬರ ಬೇಡ! ನೀನು ನಿಂತಿರುವ ಸ್ಥಾನವು ಪರಿಶುದ್ಧವಾಗಿರುವದರಿಂದ ನಿನ್ನ ಕಾಲುಗಳ ಪಾದರಕ್ಷೆಗಳನ್ನು ತೆಗಿ. ನಾನು ಅಬ್ರಹಾಮನೂ ಇಸಾಕನೂ ಯಕೋಬನೂ ಮೊದಲಾದ ನಿನ್ನ ತಂದೆಗಳ ದೇವರಾಗಿದ್ದೇನೆಂದಿತು. ಆಗಲು ಮೋಶೆಯು ದೇವರನ್ನು ನೋಡಲಿಕ್ಕೆ ಭಯ ಪಟ್ಟು, ತನ್ನ ಮುಖವನ್ನು ಮುಚ್ಚಿ ಕೊಂಡನು. ಮತ್ತು ದೇವರು — ನನ್ನ ಜನಾಂಗವು ಮಿಸ್ರದಲ್ಲಿ ಪಡುವ ಶ್ರಮೆಯನ್ನು ನೋಡಿ, ಮಿಸ್ರದವರ ಕೈಯಿಂದ ಈಗ ತಪ್ಪಿಸಲಿಕ್ಕೂ, ಹಾಲೂ ಜೇನೂ ಹರಿಯುವ ದೇಶಕ್ಕೆ ಅವರನ್ನು ಒಯ್ಯಲಿಕ್ಕೂ, ಮನಸ್ಸಾಗಿದ್ದೇನೆ. ಅದರಿಂದ ನೀನು ಹೋಗು! ಯೇನಂದರೆ ನೀನು ಇಸ್ರಯೇಲ ಮಕ್ಕಳಾದ ನನ್ನ ಜನಾಂಗವನ್ನು ಮಿಸ್ರದೊಳಗಿಂದ ಒಯ್ಯುವ ಹಾಗೆ ನಿನ್ನನ್ನು ಫರೋನನ ಹತ್ತರ ಕಳು

ಹಿಸುತ್ತೇನೆಂದಿತು. ಮೋಶೆಗೆ ಇದು ಬಹು ದೊಡ್ಡ ಕೆಲಸವಾಗಿರುವದರಿಂದ, ಅವನು—ನಾನು ಫರೋನನ ಹತ್ತರ ಹೋಗಿ ಇಸ್ರಾಯೇಲ ಮಕ್ಕಳನ್ನು ಮಿಶ್ರದೊಳಗಿಂದ ಹೊಯ್ಯುವ ಹಾಗೆ ನಾನು ಎಷ್ಟರವನು? ಎಂದು ಹೇಳಿದನು. ದೇವರು—ನಾನೇ ನಿನ್ನ ಸಂಗಡಲಿರುವೆನೆನಲಾಗಿ, ಮೋಶೆಯು—ಹ್ಯಾಗಾದರೂ ಇಸ್ರಾಯೇಲ ಮಕ್ಕಳು ನನ್ನನ್ನು ನಂಬರು! ಕರ್ತನು ನಿನಗೆ ಪ್ರತ್ಯಕ್ಷವಾಗಲಿಲ್ಲ ಎಂದಾರು, ಎನಲು, ಕರ್ತನು—ನಿನ್ನ ಕೈಯಲ್ಲಿರುವದೇನು? ಎಂದನು. ಮೋಶೆಯು—ಒಂದು ಕೋಲು ಉಂಟೆಂದನು. ಕರ್ತನು—ಅದನ್ನು ಬಿಸಾಡು! ಎನಲು, ಮೋಶೆಯು ಆ ಕೋಲನ್ನು ಬಿಸಾಡಿದನು. ಆಗಲದು ಸರ್ಪವಾಯಿತು. ಮೋಶೆಯು ಅದಕ್ಕೆ ಓಡಿ ಹೋದನು. ಆದರೆ ಕರ್ತನು—ನೀನು ಕೈಯನ್ನು ಚಾಚಿ, ಅದರ ಬಾಲವನ್ನು ಹಿಡಿ, ಎನಲಾಗಿ, ಅವನು ಆ ಪ್ರಕಾರವೇ ಮಾಡಿದದರಿಂದ ಅದು ತಿರಿಗಿ ಕೋಲಾಯಿತು. ಮತ್ತು ಕರ್ತನು—ನಿನ್ನ ಕೈಯನ್ನು ಎದೆಯಲ್ಲಿ ಇಡು, ಎನಲಾಗಿ, ಹಾಗೆ ಅವನು ಮಾಡಿದಾಗಲೇ ಅದಕ್ಕೆ ಹಿಮದಂತೆ ಕುಷ್ಠರೋಗ ಹತ್ತಿತು. ತಿರುಗಿ ಅದನ್ನು ಎದೆಗೆ ಇಡುವಾಗ, ಅದು ಉಳಿದ ಮಾಂಸದ ಹಾಗೆಯೇ ಆಯಿತು. ಈ ಯೆರಡು ಗುರ್ತುಗಳಿಗೆ ಅವರು ನಂಬದ ಪಕ್ಷದಲ್ಲಿ ನೀನು ನದಿಯೊಳಗಿಂದ ನೀರು ತೆಗೆದು, ಒಣಗಿದ ಭೂಮಿಯ ಮೇಲೆ ಹೊಯಿ; ಆಗಲದು ರಕ್ತವಾಗುವದೆಂದು, ಕರ್ತನು ಹೇಳಿದನು. ಆದರೆ ಮೋಶೆಯು ಕರ್ತನಿಗೆ—ನನ್ನ ಕರ್ತನೇ, ನಾನು ಹ್ಯಾಗಾದರೂ ಬಾಯಾಳಿಯಲ್ಲ ಮಂದನಾಲಿಗೆಯವನಾಗಿದ್ದೇನೆಂದನು. ಕರ್ತನು ಅವನಿಗೆ ಹೇಳಿದ್ದು—ಮನುಷ್ಯನಿಗೆ ಬಾಯನ್ನುಂಟು ಮಾಡಿದವನ್ಯಾವನು? ಕರ್ತನಾದ ನಾನೇ ಅಲ್ಲವೇ? ನೀನ್ನು ಹೋಗು! ನಾನು ನಿನ್ನ ಬಾಯಿಯ ಸಂಗಡಲಿದ್ದು, ನೀನು ಹೇಳ ತಕ್ಕವುಗಳನ್ನು ನಿನಗೆ ಬೋಧಿಸುವೆನು. ಮತ್ತು, ಇಗೋ, ನಿನ್ನ ಅಣ್ಣನಾದ ಆರೋನನು ನಿನಗೆದುರಾಗಿ ಬರುವನು. ನೀನು ಅಭಿಪ್ರಾಯಗಳನ್ನು ಅವನ ಬಾಯಲ್ಲಿ ಇಡುವಿ; ಅವನು ನಿನ್ನ ಬದಲಾಗಿ ಮಾತಾಡುವನು, ಯೆಂದನು.


ದೇವರು ಅಪ್ಪಣೆ ಕೊಟ್ಟ ಪ್ರಕಾರವೇ ಮೋಶೆಯೂ ಆರೋನನೂ ಇ

ಸ್ರಾಯೇಲ ಮಕ್ಕಳ ಹಿರಿಯರನ್ನು ಕೂಡಿಸಿ — ದೇವರು ನಿಮ್ಮನ್ನು ಮಿಸ್ರದೊಳ
ಗಿಂದ ವೈಯ್ಸು ಮನಸ್ಸಾಗಿದ್ದಾನೆಂದರು. ಆಗಲವರು ಅರಸನ ಹತ್ತಿರ ಹೋ
ಗಿ — ಇಸ್ರಾಯೇಲ ದೇವರಾದ ಕರ್ತನು ಹೇಳುವದೇನಂದರೆ — ನನ್ನ ಜನಾಂಗವು
ಅರಣ್ಯದಲ್ಲಿ ನನಗೊಂದು ಹಬ್ಬವನ್ನಾಚರಿಸುವ ಹಾಗೆ ಅದನ್ನು ಕಳುಹಿಸಿ ಬಿ
ಡು, ಎಂದರು. ಆದರೆ ಅರಸನು — ನಾನು ವಿಧೇಯನಾಗ ತಕ್ಕ ಕರ್ತನು ಯಾ
ವನು? ನಾನು ಕರ್ತನನ್ನರಿಯೆನು! ಇಸ್ರಾಯೇಲ ಜನಾಂಗವನ್ನು ನಾನು ಕಳುಹಿಸಿ
ಬಿಡೆನೆಂದನು. ಅಂದಿನಿಂದ ಫರೋನನು ಇಸ್ರಾಯೇಲ್ಯರಿಗೆ ಮುಂಚೆಗಿಂತ
ಕಠಿಣವಾದ ಬಿಟ್ಟಿಯನ್ನು ಮಾಡಿಸ ಬೇಕೆಂಬ ಅಪ್ಪಣೆಯನ್ನು ಕೊಟ್ಟು — ಹೆ
ಬ್ರಾಯರಿಗೆ ಬಹು ಸುಖವಾಗಿದೆ; ಇನ್ನು ಮುಂದೆ ಅವರು ಮಾಡುವ ಇ
ಟ್ಟಿಗೆಗಳಿಗೋಸ್ಕರ ಅವರಿಗೆ ಹುಲ್ಲನ್ನು ಕೊಡ ಬಾರದು; ಅವರೇ ಹುಲ್ಲನ್ನು
ಕೂಡಿಸಿ ಮುಂಚಿನಷ್ಟು ಇಟ್ಟಿಗೆಗಳನ್ನು ಕೊಡ ಬೇಕಂದನು.



ಮೋಶೆಯು ತನ್ನ ಕೋಲಿನಿಂದ ಫರೋನನ ಮುಂದೆ ಆಶ್ಚರ್ಯಗಳನ್ನು
ತೋರಿಸಿದಾಗ್ಯೂ, ಮಿಸ್ರದವರಾದ ಮಂತ್ರಗಾರರು ಅದೇ ಪ್ರಕಾರದ ಕಾರ್ಯಗಳ
ನ್ನು ತೋರಿಸುವದರಿಂದ, ಅರಸನು ಲಕ್ಷ್ಯ ಇಡಲಿಲ್ಲ.

ಹಾಗಾದರೆ ಅರಸನು ಕಿವಿಗೊಡದ ಕಾರಣ ದೇವರು ಮೋಶೆಯ ಕೈಯಿಂ
ದ ಮಿಸ್ರದಲ್ಲಿ ಅಘೋರವಾದ ಆಶ್ಚರ್ಯಗಳನ್ನು ನಡಿಸಿ, ಕಷ್ಟದ ಮೇಲೆ
ಕಷ್ಟವು ಬರುವ ಹಾಗೆ ಮಾಡಿದನು. ಮೋಶೆಯು ತನ್ನ ಕೋಲನ್ನು ನೀಲ



ನದಿಯ ಮೇಲೆ ಚಾಚಲಾಗಿ, ಅದರ ನೀರು ರಕ್ತವಾಗಿ ಹೋಯಿತು. ಏಳು ದಿವಸ ಪರ್ಯಂತರ ಆ ಮಹಾನದಿಯು ರಕ್ತಮಯವಾಗಿ ಹರಿದದರಿಂದ, ಅದರ ನೀರನ್ನು ಯಾರೂ ಕುಡಿಯಲಾರದಿದ್ದರು; ಮೀನುಗಳೆಲ್ಲಾ ಸತ್ತವು. ಇದು ಮೊದಲನೇ ಕಷ್ಟವು.

ಆರೋನನು ತನ್ನ ಕೈಯನ್ನು ಮಿಸ್ರದಲ್ಲಿರುವ ನೀರುಗಳ ಮೇಲೆ ಚಾಚಲಾಗಿ, ಕಪ್ಪೆಗಳು ಮಿಸ್ರವೆಲ್ಲವನ್ನು ಮುಚ್ಚಿ, ಮನೆಗಳಲ್ಲಿಯೂ ಕೊಠಡಿಗಳಲ್ಲಿಯೂ ಮಂಚಗಳಲ್ಲಿಯೂ ರೊಟ್ಟಿ ಸುಡುವ ಒಲೆಗಳಲ್ಲಿಯೂ ಹಿಟ್ಟು ನಾದುವ ಮರಿಗೆಗಳಲ್ಲಿಯೂ ಹೊಕ್ಕವು. ಆಗಲು ಫರೋನನು—ಈ ಕಪ್ಪೆಗಳನ್ನು ನನ್ನಿಂದ ಪರಿಹರಿಸ ಬೇಕೆಂದು ಕರ್ತನಿಗೆ ಬೇಡಿ ಕೊಳ್ಳಿರಿ; ಆಗಲು ನಾನು ಜನಾಂಗವನ್ನು ಕಳುಹಿಸಿ ಬಿಡುವೆನೆನಲು, ಮೋಶೆಯು ಕರ್ತನಿಗೆ ಬೇಡಿ ಕೊಂಡದರಿಂದ, ಆ ಕಪ್ಪೆಗಳೆಲ್ಲಾ ಒಂದೇ ದಿನದಲ್ಲಿ ಸತ್ತವು. ಜನರು ಅವುಗಳನ್ನು ಗುಡಿಸಿ, ರಾಶಿ ಮಾಡಿದರು; ಅವುಗಳ ನಾತವು ದೇಶವೆಲ್ಲಾದರಲ್ಲಿತ್ತು. ಆದರೂ ಫರೋನನು ತನ್ನ ಹೃದಯವನ್ನು ಕಠಿಣ ಪಡಿಸಿ, ಇಸ್ರಾಯೇಲ ಮಕ್ಕಳನ್ನು ಕಳುಹಿಸಿ ಬಿಡದೆ ಇರುವದರಿಂದ, ಮೂರನೇದು ಒಂದು ಕಷ್ಟವು ಬರುವದು ಅವಶ್ಯವಾಯಿತು.

ಆಗಲು ಆರೋನನು ಕೋಲನ್ನು ಚಾಚಲಾಗಿ, ದೇಶದಲ್ಲಿರುವ ಯೆಲ್ಲಾ ಧೂಳಿನಿಂದ ಮನುಷ್ಯರಿಗೂ ಪಶುಗಳಿಗೂ ಉಪದ್ರ ಪಡಿಸುವ ನುಸಿಗಳಾ

ದವು; ಮಂತ್ರಗಾರರು ಇದೇ ದೇವರ ಬೆರಳು ಯೆಂದು ಹೇಳಿದಾಗ್ಯೂ, ಫರೋಹನು ತನ್ನ ಹೃದಯವನ್ನು ಕಠಿಣ ಪಡಿಸಿದನು.

ನುಸಿಗಳಾದ ಮೇಲೆ ಹೇನುಗಳು ದೇಶದಲ್ಲಿ ತುಂಬಿದವು. ಇವುಗಳಾದ ತರುವಾಯ ವ್ಯಾಧಿಯುಂಟಾಗಿ, ಒಂಟೆ, ಎತ್ತು, ಕುರಿ, ಕತ್ತೆ, ಕುದುರೆಗಳು ಅನೇಕವಾಗಿ ಸತ್ತವು; ಅಷ್ಟಾದರೂ ಅರಸನ ಹೃದಯವು ಕಾಠಿಣ್ಯದಲ್ಲಿಯೇ ಇತ್ತು.

ಮೋಶೆಯು ಬೂದಿಯನ್ನು ತನ್ನ ಕೈಗಳಲ್ಲಿ ತುಂಬಿ ಕೊಂಡು, ಅರಸನ ಕಣ್ಣುಗಳ ಮುಂದೆ ಅದನ್ನು ಫಾಳಿಯಲ್ಲಿ ಚೆಲ್ಲಲಾಗಿ, ಮನುಷ್ಯರಲ್ಲಿಯೂ ಪಶುಗಳಲ್ಲಿಯೂ ಕರ್ರೆ ಹುಣ್ಣುಗಳು ಯೆದ್ದವು. ಆ ಕಷ್ಟಗಳೆಲ್ಲಾ ಆರಂಭಿಸಲಿಕ್ಕೂ ಮುಗಿಯಲಿಕ್ಕೂ ತಕ್ಕ ಸಮಯವನ್ನು ಮೋಶೆಯು ಮುಂತಿಳಿಸಿದಾಗ್ಯೂ, ಫರೋಹನು ತಿರಿಗಿ ತಿರಿಗಿ ತನ್ನ ಹೃದಯವನ್ನು ಕಠಿಣ ಪಡಿಸಿದನು.

ಅದರ ಮೇಲೆ ಮೋಶೆಯು ತನ್ನ ಕೋಲನ್ನು ಆಕಾಶಕ್ಕೆ ಎತ್ತಲಾಗಿ, ಸಿಡಿಲೂ ಕಲ್ಲುಮಳೆಯೂ ಕೂಡಿದ ಭಯಂಕರವಾದ ಗುಡುಗು ಮಿಂಚುಗಳುಂಟಾದವು.



ಮಿಸ್ರದಲ್ಲಿ ಮನುಷ್ಯರು ವಸತಿಯಾದಾರಭ್ಯ ಅಂಥಾ ಗುಡುಗು ಮಿಂಚುಗಳು ಬರಲಿಲ್ಲ; ಮರಗಳು ಮುರಿದು ಹೋದವು. ಮನುಷ್ಯರೂ ಪಶುಗಳೂ ಹೊಲದಲ್ಲಿ ಕಲ್ಲುಮಳೆಯಿಂದ ಸತ್ತು ಹೋದವು; ಆಗಲು ಫರೋ

ನನು ಮೋಶೆಯನ್ನೂ ಆರೋನನನ್ನೂ ತ್ವರೆಯಾಗಿ ಕರಸಿ—ಇದು ಒಂದೇ ಸಾರಿ ನಾನು ಪಾಪ ಮಾಡಿದ್ದೇನೆ. ಈ ಭಯಂಕರವಾದ ಗುಡುಗೂ ಕಲ್ಲುಮಳೆಯೂ ನಿಂತು ಹೋಗುವ ಹಾಗೆ ಕರ್ತನಿಗೆ ನನಗೋಸ್ಕರ ಬೇಡಿಕೊಳ್ಳಿರಿ, ಯೆನಲಾಗಿ, ಮೋಶೆಯು ಹೊರಟು, ಆಕಾಶಕ್ಕೆ ತನ್ನ ಕೈಗಳನ್ನು ಚಾಚಿದನು. ಆಗಲು ಆ ಕಲ್ಲುಮಳೆಯು ನಿಂತು ಹೋಯಿತು. ಆದಾಗ್ಯೂ ಫರೋನನು ಮುಂಚಿನ ಪ್ರಕಾರವೇ ತನ್ನ ಹೃದಯವನ್ನು ಕಠಿಣ ಪಡಿಸಿದನು.

ಅದರ ಮೇಲೆ ಮೂಡಣ ಗಾಳಿಯು ಬೀಸಿ, ಮಿಡಿತೆಗಳನ್ನು ತರಲಾಗಿ, ಆ ಮಿಡಿತೆಗಳು ದೇಶವನ್ನು ಮುಚ್ಚಿ ಕಲ್ಲುಮಳೆಯಿಂದ ಉಳಿದ ಸಮಸ್ತ ಗಿಡಗಳನ್ನು ತಿಂದವು. ಫರೋನನು ಮೋಶೆಗೂ ಆರೋನನಿಗೂ—ಇದು ಒಂದೇ ಸಾರಿ ನನ್ನ ಪಾಪವನ್ನು ಮನ್ನಿಸಬೇಕೆನಲಾಗಿ, ಕರ್ತನು ಮಿಡಿತೆಗಳನ್ನು ವೈದು, ಕೆಂಪು ಸಮುದ್ರದಲ್ಲಿ ಬಿಸಾಡುವ ಪಡುವಣ ಗಾಳಿಯನ್ನು ಕಳುಹಿಸಿದನು. ಆದರೂ ಫರೋನನು ಕಾಠಿಣ್ಯದಲ್ಲಿಯೇ ಇದ್ದನು.

ಮೋಶೆಯು ಆಕಾಶಕ್ಕೆ ತನ್ನ ಕೈಯನ್ನು ಚಾಚಲಾಗಿ, ಮೂರು ದಿವಸ ಪರ್ಯಂತರ ಸಮಸ್ತ ಮಿಶ್ರದಲ್ಲಿ ಕಗ್ಗತ್ತಲೆಯುಂಟಾಗಿ, ಒಬ್ಬರು ಮತ್ತೊಬ್ಬರನ್ನು ನೋಡಲಿಕ್ಕೂ ತಾವು ಇದ್ದ ಸ್ಥಳದಿಂದ ಎಳಲಿಕ್ಕೂ ಕೂಡದ ಹಾಗೆ ಆಯಿತು. ಇಸ್ರಯೇಲ್ಯರು ಇದ್ದ ಗೋಷೇನದಲ್ಲಿ ಮಾತ್ರ ಬೆಳಕಿತ್ತು. ಇನ್ನೂ ಫರೋನನು ಮಾನಸಾಂತರವಾಗದೆ ಮೋಶೆಗೆ—ನೀನು ನನ್ನಿಂದ ದೂರ ಹೋಗಿ ನನ್ನ ಸನ್ನಿಧಾನಕ್ಕೆ ಬಾರದ ಹಾಗೆ ನೋಡು! ಬಂದರೆ, ಸಾಯಬೇಕಾದೀತೆಂದನು.

---

೨೨. ಇಸ್ರಯೇಲ್ಯರು ಮಿಶ್ರದಿಂದ ಹೊರಟು ಹೋದದ್ದು.

ಆಗಲು ಫರೋನನ ಕಾಠಿಣ್ಯವು ಪೂರ್ಣವಾದದರಿಂದ ದೇವರು ಮೋಶೆಗೆ ಹೇಳಿದ್ದು—ಇನ್ನೂ ಒಂದು ಶ್ರಮೆಯನ್ನು ಮಿಶ್ರದ ಮೇಲೆ ಬರಮಾಡುವೆನು; ಆ ತರುವಾಯ ಫರೋನನು ನಿಮ್ಮನ್ನು ಹೋಗಗೊಡಿಸುವದಲ್ಲದೆ ನಿಮ್ಮನ್ನು ಹೊಡೆದು ಹೊರಡಿಸುವನು. ಯೇನಂದರೆ ನಾನು ಸಾವಿನ

ದೂತನನ್ನು ಮಿಸ್ರಕ್ಕೆ ಕಳುಹಿಸಿ, ಅವರ ಚೊಚ್ಚಲ ಮಕ್ಕಳನ್ನು ಕೊಂದು ಹಾ ಕಿಸುವೆನು. ಆಗಲು ಮೋಶೆಯು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದ್ದೇನಂದರೆ—ಮನೆಗೆ ಒಂದು ಕುರಿಮರಿಯ ಪ್ರಕಾರವಾಗಿ ಅವರವರು ಒಂದು ಕುರಿಮರಿಯನ್ನು ತೆಗೆದು ಕೊಳ್ಳಲಿ. ಅಂಗಹೀನವಾಗದ ಒಂದು ವರ್ಷದ ಗಂಡು ಮರಿಯು ನಿಮಗಿರಲಿ; ಅದರ ಮಾಂಸವನ್ನು ನೀವು ಕಾಸಿ ಹುಳಿಯಿಲ್ಲದ ರೊಟ್ಟಿಗಳನ್ನೂ ಕಹಿಯಾದ ಪಲ್ಯಗಳನ್ನೂ ಅದರ ಸಂಗಡ ತಿನ್ನಿರಿ; ಅದನ್ನು ತಿನ್ನುವಾಗ ನಿಮ್ಮ ನಡುವುಗಳನ್ನು ಕಟ್ಟಿ, ಕಾಲುಗಳಿಗೆ ಪಾದರಕ್ಷೆಗಳನ್ನು ಹಾಕಿ, ಕೈಗಳಲ್ಲಿ ಕೋಲುಗಳನ್ನು ಹಿಡಿದು, ಪ್ರಯಾಣಕ್ಕೆ ತ್ವರೆ ಪಡುವವರಾಗಿ ಉಣ್ಣಬೇಕು. ಮತ್ತು ಆ ವ್ಯಾಧಿಯು ನಿಮ್ಮ ಮೇಲೆ ಬಾರದ ಹಾಗೆ ಆ ಕುರಿಮರಿಯ ರಕ್ತವು ನಿಮ್ಮ ಮನೆಗಳಲ್ಲಿ ಗುರ್ತಾಗಿರ ಬೇಕು.

ತರುವಾಯ ನೇಮಿಸಿದ ದಿನವು ಬಂದಾಗ, ಇಸ್ರಾಯೇಲ್ಯರೆಲ್ಲರು ಪ್ರಯಾಣಕ್ಕೆ ಸಿದ್ಧವಾಗುವಾಗ, ಮಧ್ಯರಾತ್ರಿಯಲ್ಲಿ ಸಾವಿನ ದೂತನು ಹೊರಟು, ಫರೋನನ ಮಗನ ಮೊದಲುಗೊಂಡು ಅತಿದರಿದ್ರಳಾದ ದಾಸಿಯ ಮಗನ ಪರ್ಯಂತರಕ್ಕೂ, ಸಕಲ ಪಶುಗಳ ಚೊಚ್ಚಲದ ಪರ್ಯಂತರಕ್ಕೂ, ಮಿಸ್ರದಲ್ಲಿರುವ ಚೊಚ್ಚಲಾದದ್ದೆಲ್ಲವನ್ನು ಹೊಡೆದನು. ಆಗಲು ಮಿಸ್ರದವರಲ್ಲಿ ದುಃಖವೂ ಗೋಳಾಟವೂ, ಫರೋನನ ಮನೆಯಲ್ಲಿ ಭಯವೂ, ಉಂಟಾದವು. ಫರೋನನು ರಾತ್ರಿಯಲ್ಲಿಯೇ ಮೋಶೆಗೂ ಆರೋನನಿಗೂ—ನೀವೂ ನಿಮ್ಮ ಮಕ್ಕಳೂ ನಿಮ್ಮ ಪಶುಗಳೂ ತ್ವರೆಯಾಗಿ ದೇಶವನ್ನು ಬಿಟ್ಟು ಹೋಗಲೆಂದು ಹೇಳಿ ಕಳುಹಿಸಿದನು. ಮಿಸ್ರದವರು—ನಾವೆಲ್ಲರು ಸಾಯುತ್ತೇವೆಂದು ಹೇಳಿ, ಜನಾಂಗವನ್ನು ದೇಶದೊಳಗಿಂದ ಹೊರಡಿಸಿದರು. ಈ ಪ್ರಕಾರ ಇಸ್ರಾಯೇಲ್ಯರು ತಮ್ಮ ದಾಸತ್ವದ ದೇಶವನ್ನು ಬಿಟ್ಟು, ಹಬ್ಬಕ್ಕಾಗಿ ಮಿಸ್ರದವರ ಕೈಯಿಂದ ತಮಗೆ ಸಿಕ್ಕಿದ ಅನೇಕ ಚಿನ್ನದ ಪಾತ್ರೆಗಳನ್ನೂ ಬೆಳ್ಳಿಪಾತ್ರೆಗಳನ್ನೂ ವಸ್ತ್ರಗಳನ್ನೂ ತೆಗೆದು ಕೊಂಡು, ಹೊರಟರು. ತಾವು ಮಾಡಿದ ರೊಟ್ಟಿಹಿಟ್ಟನ್ನು ಸುಡಲಿಕ್ಕೆ ಸಮಯ ಸಾಲದ ಕಾರಣ ಅದನ್ನು ಹುಳಿಯಿಲ್ಲದೆ ತೆಗೆದು ಕೊಂಡು ಹೋದರು.

ಇಸ್ರಾಯೇಲ್ಯರು ಹೊರಟು ಒಂದು ದಿನದ ಪ್ರಯಾಣ ಅರಣ್ಯದಲ್ಲಿ ಶೇರಿದ್ದಾರೆಂದು ಫರೋಹನು ಕೇಳಿದಾಗಲೇ ಅವರನ್ನು ಕಳುಹಿಸಿ ಬಿಟ್ಟದರಿಂದ ಪಶ್ಚಾತ್ತಾಪ ಪಡಲಾರಂಭಿಸಿ, ತ್ವರೆಯಾಗಿ ತನ್ನ ಸೈನ್ಯವನ್ನು ಕೂಡಿಸಿ, ಅವರ ಬೆನ್ನಹತ್ತಿ ಕೆಂಪು ಸಮುದ್ರದ ಸಮೀಪದಲ್ಲಿರುವ ಒಂದು ಇಕ್ಕಟ್ಟಾದ ತಗ್ಗಿನಲ್ಲಿ ಅವರನ್ನು ಸಮೀಪಿಸಿದನು. ಆ ಸಮೀಪಿಸುವ ಮಿಸ್ರದವರ ಸಮೂಹಗಳನ್ನು ಇಸ್ರಾಯೇಲ್ಯರು ನೋಡುವಾಗ, ಭಯ ಪಟ್ಟು ನಡುಗಿದರು. ಆದರೆ ಮೋಶೆಯು—ನೀವು ಭಯ ಪಡದಿರಿ! ಕರ್ತನು ನಿಮಗೋಸ್ಕರ ಹೋರಾಡುವನು; ನೀವು ಶಾಂತರಾಗಿರಿ! ಎಂದು ಅವರಿಗೆ ಧೈರ್ಯ ಪಡಿಸಿದನು. ಆದರೂ ಮುಂದಗಡೆಯಲ್ಲಿ ಆಳವಾದ ಸಮುದ್ರವೂ ಉಭಯ ಪಾರ್ಶ್ವಗಳಲ್ಲಿ ಯೆತ್ತರವಾದ ಗುಡ್ಡಗಳೂ ಹಿಂದಗಡೆಯಲ್ಲಿ ಮಿಸ್ರದವರ ಸೈನ್ಯವೂ ಇರುವದರಿಂದ ಅವರ ಸ್ಥಿತಿಯು ಅತಿಭಯಂಕರವಾಗಿತ್ತೆಂದು ನೆನಸ ಬಹುದು. ಹೀಗಿರಲಾಗಿ ಕರ್ತನು ಮೋಶೆಗೆ—ನೀನು ನನಗೆ ಕೂಗುವದ್ಯಾಕೆ? ಇಸ್ರಾಯೇಲ ಮಕ್ಕಳಿಗೆ ಪ್ರಯಾಣವಾಗ ಬೇಕೆಂದು ಆಜ್ಞಾಪಿಸುವ ನಾನೇ ಕರ್ತನಾಗಿದ್ದೇನೆಂಬುವದನ್ನು ಮಿಸ್ರದವರು ತಿಳಿದು ಕೊಳ್ಳುವರು. ಫರೋಹನಲ್ಲಿಯೂ ಅವನ ರಥರಾವುತರಲ್ಲಿಯೂ ನಾನು ಘನವನ್ನು ಸಂಪಾದಿಸಿ ಕೊಳ್ಳುವೆನೆಂದನು. ಆಗಲು ಕರ್ತನು ರಾತ್ರಿಯೆಲ್ಲಾ ಒಂದು ಘಾಳಿಯನ್ನು ಬೀಸ ಮಾಡಿದನು. ಆ ಘಾಳಿಯು ನೀರನ್ನು ಹಿಂಗಡಿಸಿ, ಸಮುದ್ರದ ನೆಲವನ್ನು ಒಣಗ ಮಾಡಿತು. ಮತ್ತು ಯೆರಡು ಸೈನ್ಯಗಳ ಮಧ್ಯದಲ್ಲಿ ಇಸ್ರಾಯೇಲ್ಯರ ಪಾರ್ಶ್ವದಲ್ಲಿ ಪ್ರಕಾಶವಾಗಿಯೂ ಮಿಸ್ರದವರ ಪಾರ್ಶ್ವದಲ್ಲಿ ಕತ್ತಲೆಯಾಗಿಯೂ ಇರುವ ಮಂದವಾದ ಮೇಘವು ಇಸ್ರಾಯೇಲ್ಯರ ದಂಡನ್ನು ಮಿಸ್ರದವರ ದಂಡಿನಿಂದ ಹಿಂಗಡಿಸಿ ಮರೆ ಮಾಡಿತು. ಈ ಪ್ರಕಾರ ಅವರು ಮಧ್ಯರಾತ್ರಿಯಲ್ಲಿ ಸಮುದ್ರದಲ್ಲಿ ಪ್ರವೇಶಿಸಲಾಗಿ, ಎಡಬಲ ಪಾರ್ಶ್ವಗಳಲ್ಲಿ ಅದರ ನೀರು ಅವರಿಗೆ ಗೋಡೆಯಾಗಿತ್ತು.

ಫರೋಹನು ಅವರಿಗೆ ಹಿಂಬಾಲಿಸಿದದರಿಂದ, ಉದಯವಾಗುವ ಸಮಯದಲ್ಲಿ ಇಸ್ರಾಯೇಲ್ಯರು ದಾಟಿದ ಮೇಲೆ ಮಿಸ್ರದವರು ಸಮುದ್ರದ ಮಧ್ಯ

೨೨. ಇಸ್ರಾಯೇಲ್ಯರು ಮಿಸ್ರದಿಂದ ಹೊರಟದ್ದು.



ದಲ್ಲಿ ಇರಲಾಗಿ, ಕರ್ತನು ಆ ಮೇಘಸ್ತಂಭದಲ್ಲಿ ಬೆಂಕಿಯನ್ನು ತೋರಿಸಿ, ಮಿಸ್ರದವರಿಗೆ ಹೆದರಿಸಿದನು. ಅವರು ನಡುಗಿ—ನಾವು ಓಡಿ ಹೋಗುವಾ! ಇಸ್ರಾಯೇಲ್ಯರ ಸಹಾಯಕ್ಕಾಗಿಯೂ ಮಿಸ್ರದವರಿಗೆ ವಿರೋಧವಾಗಿಯೂ ಕರ್ತನು ಹೋರಾಡುತ್ತಾನೆಂದು, ಕೂಗಿದರು. ಆಗಲು ಕರ್ತನು ಮೋಷೆಗೆ—ನೀನು ನಿನ್ನ ಕೈಯನ್ನು ಸಮುದ್ರದ ಮೇಲೆ ಚಾಚು! ಎನಲಾಗಿ, ಅವನು ಚಾಚಿದ ಕೂಡಲೇ ಸಮುದ್ರದ ತೆರೆಗಳು ಮಿಸ್ರದವರ ಮೇಲೆ ಬಿದ್ದವು. ಮಿಸ್ರದವರು ಆ ತೆರೆಗಳಿಗೆದುರಾಗಿ ಓಡಿ ಹೋಗುವದರಿಂದ ಅವರಲ್ಲಿ ಒಬ್ಬನಾದರೂ ಉಳಿಯದ ಹಾಗೆ ತೆರೆಗಳಿಂದ ಮುಚ್ಚಲ್ಪಟ್ಟರು. ಈ ಪ್ರಕಾರ ಫರೋನನೂ ಅವನ ಸೈನ್ಯವೂ ಕೂಡಾ ನಾಶನವಾದವು.

---

೨೩. ಇಸ್ರಾಯೇಲ್ಯರು ಅರಣ್ಯದಲ್ಲಿ ಸಂಚರಿಸಿದ್ದು.

ತರುವಾಯ ಮೋಷೆಯು ಇಸ್ರಾಯೇಲ್ಯರನ್ನು ಕೆಂಪು ಸಮುದ್ರವನ್ನು ಬಿಟ್ಟು ಪ್ರಯಾಣವಾಗಿ ಹೊರಡ ಮಾಡಿದದರಿಂದ, ಅವರು ಚೂರೆಂಬ ಅರಣ್ಯಕ್ಕೆ ಹೋಗಿ, ಮೂರು ದಿವಸ ಅರಣ್ಯದಲ್ಲಿ ನಡೆದು, ನೀರು ಕಾಣದೆ ಹೋದರು. ಅಲ್ಲಿಂದ ಮಾರಕ್ಕೆ ಬಂದರು. ಆದರೆ ಮಾರದ ಜಲವು ವಿಷವಾಗಿದ್ದದರಿಂದ, ಅವರು ಅದನ್ನು ಕುಡಿಯ ಕೂಡದೆ ಇದ್ದ ಕಾರಣ, ಆ ಸ್ಥಳಕ್ಕೆ ಮಾರವೆಂಬ ಹೆಸರಾಯಿತು. ಆಗಲು ಜನರು ಮೋಷೆಗೆ ವಿರೋಧವಾಗಿ ಗುಣುಗುಟ್ಟುತ್ತಾ—ನಾವೇನು ಕುಡಿಯುವಾ ಎಂದರು. ಆದದರಿಂದ ಅವನು


ಕರ್ತನಿಗೆ ಮೊರೆಯಿಟ್ಟು ಕೂಗಿದನು. ಆಗಲು ಕರ್ತನು ಅವನಿಗೆ ಒಂದು ಗಿಡವನ್ನು ತೋರಿಸಿದನು. ಅದನ್ನು ಅವನು ಆ ನೀರಿನಲ್ಲಿ ಹಾಕಿದಾಗ, ಆ ನೀರು ಸೀಯಾಯಿತು. ಆತನು ಅಲ್ಲಿ ಅವರಿಗೆ ಪ್ರಮಾಣವನ್ನೂ ನ್ಯಾಯವನ್ನೂ ನೇಮವನ್ನೂ ಮಾಡಿ, ಅಲ್ಲಿ ಅವರನ್ನು ಶೋಧಿಸಿ ಹೇಳಿದ್ದೇನಂದರೆ—ನೀವು ನಿಮ್ಮ ದೇವರಾದ ಕರ್ತನ ಶಬ್ದವನ್ನು ಜಾಗ್ರತೆಯಾಗಿ ಕೇಳಿ, ಆತನ ಕಟ್ಟಳೆಗಳನ್ನೆಲ್ಲಾ ಕೈಕೊಂಡರೆ, ನಾನು ಮಿಸ್ರದವರ ಮೇಲೆ ಬರಮಾಡಿದ ವ್ಯಾಧಿಗಳನ್ನು ನಿಮ್ಮ ಮೇಲೆ ಬರಮಾಡೆನು. ಏನಂದರೆ ನಾನೇ ನಿಮ್ಮನ್ನು ವಾಸಿಮಾಡುವ ಕರ್ತನೆಂದನು. ತರುವಾಯ ಅವರು ಏಲೀಮಿಗೆ ಬಂದರು; ಅಲ್ಲಿ ಹನ್ನೆರಡು ಬುಗ್ಗೆಗಳೂ ಯೆಪ್ಪತ್ತು ಖರ್ಜೂರದ ಗಿಡಗಳೂ ಇದ್ದದರಿಂದ, ನೀರಿನ ಬಳಿಯಲ್ಲಿ ಇಳಿಕೊಂಡರು. ಮತ್ತು ಇಸ್ರಯೇಲನ ಮಕ್ಕಳ ಸಭೆಯೆಲ್ಲಾ ಏಲೀಮನ್ನು ಬಿಟ್ಟು ಪ್ರಯಾಣವಾಗಿ ಹೊರಟಿತು. ಅವರು ಮಿಸ್ರದಿಂದ ಹೊರಟ ಎರಡನೇ ತಿಂಗಳ ಹದಿನೈದನೇ ದಿವಸದಲ್ಲಿ ಅವರ ಸಭೆ ಎಲ್ಲಾ ಏಲೀಮಿಗೂ ಸೀನಾಯಕ್ಕೂ ಮಧ್ಯದಲ್ಲಿರುವ ಸೀನ್ ಅರಣ್ಯಕ್ಕೆ ಬಂತು. ಆ ಅರಣ್ಯದಲ್ಲಿ ಇಸ್ರಯೇಲನ ಮಕ್ಕಳ ಸಭೆಯವರೆಲ್ಲರು ಮೋಶೆಗೂ ಆರೋನನಿಗೂ ವಿರೋಧವಾಗಿ ಹಲುಬಿ ಕೊಂಡು, ಅವರ ಸಂಗಡ ಹೇಳಿದ್ದೇನಂದರೆ—ನಾವು ಮಾಂಸದ ಗಡಿಗೆಗಳ ಬಳಿಯಲ್ಲಿ ಕುಳಿತು ಕೊಂಡು ಭಕ್ಷ್ಯವನ್ನು ತೃಪ್ತಿಯಾಗಿ ಭೋಜನ ಮಾಡಿದ ಮಿಸ್ರದಲ್ಲಿ ಕರ್ತನ ಕೈಯಿಂದ ಸತ್ತುಹೋದೆವಾದರೆ, ಉತ್ತಮವಾಗಿತ್ತು. ಏನಂದರೆ ಈ ಸಭೆಯನ್ನೆಲ್ಲಾ ಹಸಿವೆಯಿಂದ ಕೊಂದು ಹಾಕಲಿಕ್ಕೆ ನಮ್ಮನ್ನು ಹೊರಡ ಮಾಡಿ, ಈ ಅರಣ್ಯದಲ್ಲಿ ಕರೆಕೊಂಡು ಬಂದಿರಿ, ಎನಲು, ಆ ಸಾಯಂಕಾಲದಲ್ಲಿ ಆದದ್ದೇನಂದರೆ—ಲಾವಕ್ಕಿಗಳು ಬಂದು ದಂಡನ್ನು ಮುಚ್ಚಿದವು—ಮತ್ತು ಉದಯಕಾಲದಲ್ಲಿ ದಂಡಿನ ಸುತ್ತಲೂ ಮಂಜು ಕವಿದಿತ್ತು. ಮಂಜು ತೆರವಾದ ತರುವಾಯ ಇಗೋ ಅರಣ್ಯದ ಮೇಲೆ ಬಿಂದುವಿನಷ್ಟು ಸಣ್ಣದಾಗಿ ಗುಂಡುಗುಂಡಾದ ಹುಡಿ ಚದುರುಗಳು ಬಿದ್ದಿದ್ದವು. ಇಸ್ರಯೇಲನ ಮಕ್ಕಳು ಅದನ್ನು ನೋಡಿ, ತಾವು ಅದನ್ನು ಅರಿಯದೆ ಇದದ್ದರಿಂದ ಒಬ್ಬರಿಗೊಬ್ಬರು—ಇದೇ

ನೆಂದಂದು ಕೊಂಡರು. ಆಗಲು ಮೋಶೆಯು ಅವರ ಸಂಗಡ ಹೇಳಿದ್ದೇನಂದರೆ — ಇದು ಕರ್ತನು ನಿಮಗೆ ಭೋಜಿಸ ಕೊಟ್ಟ ಆಹಾರವು. ಇಸ್ರಯೇಲಿನ ಜನರು ಅದಕ್ಕೆ ಇದೇನೆಂಬ ಅರ್ಥವಾದ ಮನ್ನವೆಂಬ ಹೆಸರಿಟ್ಟರು. ಅದು ಬಿಳುಪಾಗಿ, ಕೊತ್ತುಂಬ್ರಿ ಬೀಜದಷ್ಟು ಇತ್ತು. ಅದರ ರುಚಿಯು ಜೇನತುಪ್ಪದಿಂದ ಮಾಡಲ್ಪಟ್ಟ ಕಜ್ಜಾಯಕ್ಕೆ ಸಮಾನವಾಗಿತ್ತು.




ತರುವಾಯ ಇಸ್ರಯೇಲನ ಮಕ್ಕಳ ಸಭೆಯೆಲ್ಲವು ಸೀನ ಅರಣ್ಯದಿಂದ ಕರ್ತನ ಕಟ್ಟಳೆಯ ಪ್ರಕಾರವೇ ಪ್ರಯಾಣವಾಗಿ ರಫಿದೀಮಕ್ಕೆ ಬಂದು ಇಳಿಕೊಂಡಿತು. ಅಲ್ಲಿ ಜನರಿಗೆ ಕುಡಿಯ ನೀರಿಲ್ಲದೆ ಹೋದದರಿಂದ ಜನರು ಮೋಶೆಯನ್ನು ಕಾಡಿ — ಕುಡಿಯಲಿಕ್ಕೆ ನಮಗೆ ನೀರು ತೋರಿಸು, ಎಂದರು. ಅದಕ್ಕೆ ಮೋಶೆಯು — ನೀವು ನನ್ನ ಸಂಗಡ ವಿವಾದ ಮಾಡುತ್ತೀರಿ; ಕರ್ತನನ್ನು ಯಾತಕ್ಕೆ ಪರೀಕ್ಷೆ ಮಾಡುತ್ತೀರಿ? ಎಂದನು. ಆದರೆ ಜನರು ಆ ಸ್ಥಳದಲ್ಲಿ ದಾಹದಿಂದ ಆತುರ ಪಟ್ಟು, ಮೋಶೆಗೆ ವಿರೋಧವಾಗಿ ಹಲುಬಿ — ನಮ್ಮನ್ನೂ ನಮ್ಮ ಪಿಳ್ಳೆಗಳನ್ನೂ ನಮ್ಮ ದನಕರುಗಳನ್ನೂ ದಾಹದಿಂದ ಕೊಲ್ಲಲಿಕ್ಕೆ ಮಿಶ್ರದಿಂದ ಬರ ಮಾಡಿದಿಯಾ? ಎನಲಾಗಿ, ಮೋಶೆಯು ಕರ್ತನಿಗೆ ಮೊರೆ ಇಟ್ಟು, ಕೂಗಿ — ಈ ಜನರಿಗೆ ಏನು ಮಾಡಲಿ; ಅವರು ನನ್ನನ್ನು ಕಲ್ಲೆಸೆಯಲಿಕ್ಕೆ ಇದ್ಧಾರೆಂದನು. ಅದಕ್ಕೆ ಕರ್ತನು ಮೋಶೆಯ ಸಂಗಡ ಹೇಳಿದ್ದೇನಂದರೆ — ನೀನು ಇಸ್ರಯೇಲ್ಯರ ಹಿರಿಯರಲ್ಲಿ ಕೆಲಬರನ್ನು ನಿನ್ನ ಸಂಗಡ ಕರಕೊಂಡು, ನೀನು ನದಿಯನ್ನು ಬಡಿದ ನಿನ್ನ ಕೋಲನ್ನು ಕೈಯಲ್ಲಿ ಹಿಡಕೊಂಡು, ಜನರ

ಮುಂದಾಗಿ ನಡೆದು ಹೋಗು. ಇಗೋ ನಾನು ಹೋರೆಬಿನಲ್ಲಿ ನಿನ್ನ ಮುಂದೆ ಬಂಡೆಯಮೇಲೆ ನಿಲ್ಲುವೆನು. ಅಲ್ಲಿ ನೀನು ಬಂಡೆಯನ್ನು ಬಡಿಯುವಾಗ, ಅದರಿಂದ ಜನರಿಗೆ ಕುಡಿಯಲಿಕ್ಕೆ ನೀರು ವಶೇಯಾಗಿ ಬರುವದೆಂದನು. ಈ ಪ್ರಕಾರ ಮೋಶೆಯು ಇಸ್ರಯೇಲ್ಯರ ಹಿರಿಯರ ಕಣ್ಣುಗಳ ಮುಂದೆ ಮಾಡಿದನು.



ತರುವಾಯ ಅಮಲೇಕ್ಯರು ಇಸ್ರಯೇಲ್ಯರ ಸಂಗಡ ರಫಿದೀಮದಲ್ಲಿ ಯುದ್ಧ ಮಾಡಲಿಕ್ಕೆ ಬಂದರು. ಆಗಲು ಮೋಶೆಯು ಯೋಶುವನ ಸಂಗಡ—ನೀನು ಮನುಷ್ಯರನ್ನು ಆರಿಸಿ ತೆಗದು ಕೊಂಡು ಅಮಲೇಕ್ಯರ ಸಂಗಡ ಯುದ್ಧ ಮಾಡಲಿಕ್ಕೆ ಹೊರಟು ಹೋಗು; ನಾನು ಗುಡ್ಡದ ತುದಿಯಲ್ಲಿ ದೇವರ ಕೋಲನ್ನು ಕೈಯಲ್ಲಿ ಹಿಡಕೊಂಡು ನಿಲ್ಲುವೆನೆನಲು, ಯೋಶುವನು ಮೋಶೆಯ ಮಾತಿನ ಪ್ರಕಾರ ಮಾಡಿ, ಅಮಲೇಕ್ಯರ ಸಂಗಡ ಯುದ್ಧ ಮಾಡುವಾಗ್ಯೆ, ಮೋಶೆಯೂ ಆರೋನನೂ ಹೂರನೂ ಇವರು ಗುಡ್ಡದ ತುದಿಗೆ ಹೋದರು. ಆಗಲು ಆದದ್ದೇನಂದರೆ—ಮೋಶೆಯು ತನ್ನ ಕೈಗಳನ್ನು ಎತ್ತಿರುವಾಗ್ಯೆ ಇಸ್ರಯೇಲ್ಯರಿಗೆ ಜಯವಾಯಿತು. ಅವನು ಕೈಗಳನ್ನು ಕೆಳಗಿಳಿಸಿದಾಗ್ಯೆ ಅಮಲೇಕ್ಯರಿಗೆ ಜಯವಾಯಿತು. ಆದದರಿಂದ ಮೋಶೆಯ ಕೈಗಳು ಸೋತ ಕಾರಣ ಒಂದು ಕಲ್ಲನ್ನು ತೆಗದು, ಅವನನ್ನು ಅದರ ಮೇಲೆ ಕುಂಡ್ರಿಸಿ, ಅವನ ಕೈಗಳಿಗೆ ಆಧಾರ ಕೊಟ್ಟರು.




ಹೀಗೆ ಅವನ ಕೈಗಳು ಸೂರ್ಯನು ಅಸ್ತಮಯವಾಗುವ ಪರ್ಯಂತರ ಸ್ಥಿರವಾಗಿದ್ದದರಿಂದ, ಯೋಷುವನು ಅಮಲೇಕ್ಯರನ್ನು ಖಡ್ಗದ ಮೊನೆಯಿಂದ ಹೊಡದನು. ಇಸ್ರಯೇಲ್ಯರಿಗೆ ಮಾರ್ಗ ತೋರಿಸುವದಕ್ಕೂ ರಾತ್ರಿಕಾಲದಲ್ಲಿ ಅವರಿಗೆ ಪ್ರಕಾಶವಿರುವದಕ್ಕೂ ಕರ್ತನು ತಾನೇ ಹಗಲಿನಲ್ಲಿ ಮೇಘಸ್ತಂಭವಾಗಿಯೂ ರಾತ್ರಿಯಲ್ಲಿ ಅಗ್ನಿಸ್ತಂಭವಾಗಿಯೂ ಅವರ ಮುಂದೆ ನಡೆಯುತ್ತಿದ್ದನು.

---

೨೪. ನ್ಯಾಯವು.

ಇಸ್ರಯೇಲಿನ ಮಕ್ಕಳು ಮಿಸ್ರದಿಂದ ಹೊರಟ ಮೂರನೇ ತಿಂಗಳಲ್ಲಿ ಸೀನಾಯಿ ಪರ್ವತದ ಅರಣ್ಯಕ್ಕೆ ಬಂದು, ಆ ಘಟ್ಟಗಳೊಳಗೆ ಇರುವ ಹುಲ್ಲು ಬೆಳದ ಹಳ್ಳ ತಗ್ಗುಗಳಲ್ಲಿ ತಮ್ಮ ಬಹಳವಾದ ಮಂದೆಗಳ ಸಂಗಡ ಒಂದು ವರ್ಷ ಉಳಕೊಂಡರು. ಆ ವರ್ಷದಲ್ಲಿ ಇಸ್ರಯೇಲ್ಯರೊಳಗೆ ದೊಡ್ಡ ಕಾರ್ಯ ಉಂಟಾಯಿತು. ಎನಂದರೆ ಇಸ್ರಯೇಲ್ಯರು ಗೋತ್ರಗಳಾಗಿಯೂ ವಂಶಗಳಾಗಿಯೂ ವಿಭಾಗಿಸಲ್ಪಟ್ಟು, ಜನರ ಲೆಖ್ಖವು ತೆಗದು ಕೊಳ್ಳಲ್ಪಟ್ಟು, ಅಧಿಪತಿಗಳೂ ಹಿರಿಯರೂ ನ್ಯಾಯಾಧಿಕಾರಿಗಳೂ ನೇಮಿಸಲ್ಪಟ್ಟರು. ಆ ಸಮ

ಯದಲ್ಲಿ ಯುದ್ಧಕ್ಕೆ ಸಿದ್ಧವಾದ ಜನರ ಲೆಖ್ಖವು ಆರು ಲಕ್ಷಕ್ಕಿಂತ ಹೆಚ್ಚಾಗಿ
ಯೂ, ಹೆಂಡರೂ ಮಕ್ಕಳೂ ಎಲ್ಲಾ ಕೂಡಿಸಿ ಮೂವತ್ತು ಲಕ್ಷವಾಗಿಯೂ,
ಇತ್ತು. ಆ ಸ್ಥಳದಲ್ಲಿ ದೇವರು, ಅವರಿಗೆ ತನ್ನ ಆಜ್ಞೆಗಳನ್ನು ತಿಳಿಸಿ, ರಾಜ್ಯದ ಕ
ಟ್ಟಳೆಗಳನ್ನೂ ಗೋತ್ರಮರ್ಯಾದೆಗಳನ್ನೂಯೆಲ್ಲಾ ನೇಮಿಸಿದನು. ಈ ಪ್ರಕಾ
ರ ಇಸ್ರಯೇಲ್ಯರು ದೇವರ ಸ್ವಜನವಾದರು. ಜನರು ಅರಣ್ಯದಲ್ಲಿ ಉಳ
ಕೊಂಡ ಮೇಲೆ ಮೋಶೆಯು ಆ ಪರ್ವತದ ಮೇಲೆ ಎರಿ ಹೋದನು.
ಇದಲ್ಲದೆ ಕರ್ತನು ಮೋಶೆಗೆ ಹೇಳಿದ್ದೇನಂದರೆ — ನೀನು ಜನರ ಬಳಿಗೆ
ಹೋಗಿ, ಇಂದು ನಾಳೆ ಅವರನ್ನು ಪರಿಶುದ್ಧರನ್ನು ಮಾಡು. ಅವರು ತಮ್ಮ
ವಸ್ತ್ರಗಳನ್ನು ಒಗದು ಕೊಂಡು, ಮೂರನೇ ದಿವಸದಲ್ಲಿ ಸಿದ್ಧವಾಗಲಿ; ಯೇನಂದ
ರೆ ಮೂರನೇ ದಿವಸದಲ್ಲಿ ಕರ್ತನು ಸಮಸ್ತ ಜನರ ಕಣ್ಣುಗಳ ಮುಂದೆ ಸೀ
ನಾಯ ಪರ್ವತದ ಮೇಲೆ ಇಳಿಯುವನು. ನೀನು ಪರ್ವತದ ಸುತ್ತಲು
ಒಂದು ಬೇಲಿಯನ್ನು ಮಾಡು. ಯಾಕಂದರೆ ಆ ಪರ್ವತವನ್ನು ಮುಟ್ಟು
ವವನು ಸತ್ತೇ ಸಾಯುವನು ಎಂದನು.



ಮೂರನೇ ದಿವಸವು ಬಂದಾಗ, ಪರ್ವತದ ಮೇಲೆ ಮಂದವಾದ ಮೇ
ಘವು ಎದ್ದು ಬಂದು, ಗುಡುಗುಮಿಂಚೂ ದೊಡ್ಡ ತುತೂರಿಯ ಶಬ್ದವೂ ಉಂ
ಟಾಯಿತು. ಸೀನಾಯಿ ಪರ್ವತವೆಲ್ಲಾ ಹೊಗೆ ಹಾಯುತ್ತಾ, ತುತೂರಿಯ ಶಬ್ದ
ವು ದೊಡ್ಡದೊಡ್ಡದಾಗಿ ಬರುತ್ತಾ ಇತ್ತು. ಮೋಶೆಯು ಪರ್ವತದ ಮೇಲೆ

ದೇವರ ಮುಂದೆ ನಿಂತಿರಲಾಗಿ, ಜನಾಂಗವೆಲ್ಲಾ ಶುಭ್ರವಸ್ತ್ರಗಳನ್ನು ಧರಿಸಿ ಕೊಂಡು ಹೆದರುತ್ತಾ ನಡುಗುತ್ತಾ ಕೆಳಗೆ ನಿಂತಿತ್ತು. ಆಗಲು ದೇವರು ಮಾತಾಡಿ ಹೇಳಿದ್ದೇನಂದರೆ—ನಿನ್ನನ್ನು ದಾಸತ್ವದ ಮನೆಯಾದ ಮಿಸ್ರದಿಂದ ಹೊರಡ ಮಾಡಿದ ನಿನ್ನ ದೇವರಾದ ಕರ್ತನು ನಾನೇ; ನನ್ನ ಮುಂದೆ ನಿನಗೆ ಅನ್ಯ ದೈವಗಳನ್ನಿಟ್ಟು ಕೊಳ್ಳ ಬೇಡ. ನೀನು ಕೆತ್ತಿದ ವಿಗ್ರಹವನ್ನಾದರೂ ಪ್ರತಿಮೆಯನ್ನಾದರೂ ಆರಾಧಿಸುವದಕ್ಕಾಗಿ ನಿನಗೆ ಮಾಡಿ ಕೊಳ್ಳ ಬೇಡ. ನಿನ್ನ ದೇವರಾದ ಕರ್ತನ ನಾಮವನ್ನು ನೀನು ವ್ಯರ್ಥವಾಗಿ ಸ್ಮರಿಸ ಬೇಡ; ಯಾಕಂದರೆ ಕರ್ತನು ತನ್ನ ನಾಮವನ್ನು ವ್ಯರ್ಥವಾಗಿ ಸ್ಮರಿಸುವವನನ್ನು ನಿಷ್ಪಾಪಿ ಯೆಂದು ಯೆಣಿಸನು. ಸಬ್ಬತ್ ದಿವಸವನ್ನು ಪರಿಶುದ್ಧವಾಗಿ ಆಚರಿಸ ನೆನಸು. ನೀನು ಆರು ದಿವಸಗಳು ಕಷ್ಟ ಪಟ್ಟು, ನಿನ್ನ ಕೆಲಸಗಳನ್ನೆಲ್ಲಾ ತೀರಿಸಿಕೋ; ಆದರೆ ಏಳನೇ ದಿವಸವು ನಿನ್ನ ದೇವರಾದ ಕರ್ತನ ಸಬ್ಬತ್ ದಿವಸವಾಗಿ ಅದೆ. ಅದರಲ್ಲಿ ನೀನಾದರೂ ನಿನ್ನ ಮಗನಾದರೂ ನಿನ್ನ ಮಗಳಾದರೂ ನಿನ್ನ ದಾಸನಾದರೂ ನಿನ್ನ ದಾಸಿಯಾದರೂ ನಿನ್ನ ದನವಾದರೂ ನಿನ್ನ ಬಾಗಲುಗಳಲ್ಲಿ ಪ್ರವೇಶಿಸಿದ ದೇಶಾಂತರಿಯಾದರೂ ಏನೂ ಕೆಲಸ ಮಾಡದೆ ಇರಲಿ. ಏನಂದರೆ ಕರ್ತನು ಆರು ದಿವಸಗಳಲ್ಲಿ ಪರಲೋಕ ಭೂಲೋಕಗಳನ್ನೂ ಸಮುದ್ರವನ್ನೂ ಅದರಲ್ಲಿರುವ ಸಮಸ್ತವನ್ನೂ ನಿರ್ಮಿಸಿ, ಏಳನೇ ದಿವಸದಲ್ಲಿ ತೀರ್ವಿಕೆಯಾಗಿದ್ದದರಿಂದ ಏಳನೇ ದಿವಸವನ್ನು ಆಶೀರ್ವದಿಸಿ ಪರಿಶುದ್ಧ ಮಾಡಿದನು. ನಿನ್ನ ದೇವರಾದ ಕರ್ತನು ನಿನಗೆ ಕೊಡುವ ದೇಶದಲ್ಲಿ ನೀನು ಬಹಳ ಆಯುಷ್ಯವನ್ನು ಹೊಂದುವ ಹಾಗೆ ನಿನ್ನ ತಾಯಿ ತಂದೆಗಳನ್ನು ಸನ್ಮಾನಿಸು. ನರಹತ್ಯ ಮಾಡ ಬೇಡ. ವ್ಯಭಿಚಾರ ಮಾಡ ಬೇಡ. ಕಳ್ಳತನ ಮಾಡ ಬೇಡ. ನಿನ್ನ ನೆರೆಯವನಿಗೆ ಉಂಟಾದದರಲ್ಲಿ ಒಂದನ್ನಾದರೂ ಇಚ್ಛೈಸ ಬೇಡ. ನಿನ್ನ ನೆರೆಯವನ ಹೆಂಡತಿಯನ್ನಾದರೂ ದಾಸಿಯನ್ನಾದರೂ ಎತ್ತನ್ನಾದರೂ ಕತ್ತೆಯನ್ನಾದರೂ ನಿನ್ನ ನೆರೆಯವನಿಗೆ ಉಂಟಾದದರಲ್ಲಿ ಒಂದನ್ನಾದರೂ ಇಚ್ಛೈಸ ಬೇಡ. ಈ ಸಕಲ ಮಾತುಗಳನ್ನು ಕರ್ತನು ಹೇಳಿದ ತರುವಾಯ ಜನರೆಲ್ಲರು ಗುಡುಗು ಮಿಂಚುಗಳನ್ನೂ ತುತೂರಿಯ

ಧ್ವನಿಯನ್ನೂ ಪರ್ವತದಲ್ಲಿ ಹೊಗೆ ಏಳುವದನ್ನೂ ನೋಡಿದಾಗ, ಹಿಂಜರಿದು, ದೂರದಲ್ಲಿ ನಿಂತು, ಮೋಶೆಗೆ—ನಾವು ಸಾಯದ ಹಾಗೆ ದೇವರು ನಮ್ಮ ಸಂಗಡ ಮಾತಾಡದೆ ಇರಲಿ; ನೀನೇ ನಮ್ಮ ಸಂಗಡ ಮಾತಾಡು; ಆಗಲು ನಿನ್ನ ಮಾತನ್ನು ಕೇಳುವೆವು, ಎಂದರು. ಆಗಲು ದೇವರು ಆ ಜನರಿಗೆ—ನನಗೆ ಭಯ ಪಟ್ಟು ಸಕಲ ಆಜ್ಞೆಗಳನ್ನು ಕೈಕೊಳ್ಳುವ ಹೃದಯವು ಇದ್ದರೆ, ಅವರಿಗೂ ಅವರ ಮಕ್ಕಳಿಗೂ ಎಂದೆಂದಿಗೂ ಉತ್ತಮವಾಗಿರುವದೆಂದನು.

ಆದರೆ ಮೋಶೆಯು ಪರ್ವತದಲ್ಲಿರುವ ಮೇಘದ ಮಧ್ಯದಲ್ಲಿ ಪ್ರವೇಶಿಸಿ, ಹಗಲಿರುಳು ನಾಲ್ವತ್ತು ದಿನ ಅಲ್ಲಿ ಇದ್ದನು. ದೇವರು ಮೋಶೆಯ ಸಂಗಡ ಮಾತಾಡಿ ಆದ ಮೇಲೆ ತನ್ನ ಬೆರಳಿನಿಂದಲೇ ಬರೆದ ಎರಡು ಕಲ್ಲಿನ ಹಲಿಗೆಗಳನ್ನು ಕೊಟ್ಟನು. ಆಗಲು ಮೋಶೆಯು ಪರ್ವತದಿಂದಿಳಿದು, ದೇವರು ತಾನೇ ಮಾಡಿದ ಒಡಂಬಡಿಕೆಯ ಹಲಿಗೆಗಳನ್ನು ತೆಗದು ಕೊಂಡು, ದಂಡಿಗೆ ಸಮೀಪಿಸಲಾಗಿ, ಅಯ್ಯೋ, ಯೆಂಥಾ ನೋಟವಾಯಿತು! ಇಸ್ರಾಯೇಲ್ಯರು ಕರುವಿನ ಪ್ರತಿಮೆಯನ್ನು ಮಾಡಿ, ಹಾಡುತ್ತಾ ಬಾರಿಸುತ್ತಾ ಅದರ ಸುತ್ತಲು ನಾಟ್ಯವಾಡುತ್ತಿದ್ದರು. ಆಗಲು ಮೋಶೆಯು ಕೋಪಿಸಿ, ಆ ಹಲಿಗೆಗಳನ್ನು ಕೈಯಿಂದ ಬಿಸಾಡಿದನು. ಅವು ಪರ್ವತದ ಅಡಿಯಲ್ಲಿ ಒಡೆದು ಬಿದ್ದವು.



ಆಮೇಲೆ ಮೋಶೆಯು ಆರೋನನಿಗೆ ಹೇಳಿದ್ದೇನಂದರೆ—ನೀನು ಈ ಜನಾಂಗದ ಮೇಲೆ ಇಷ್ಟು ದೊಡ್ಡ ಅಪರಾಧವನ್ನು ಹೊರಿಸುವ ಹಾಗೆ ಅ

ವರು ನಿನಗೆ ಯೇನು ಮಾಡಿದರು? ಆರೋನನು—ನನ್ನ ಯಜಮಾನನ ಕೋಪವು ಪ್ರಜ್ವಲಿಸದಿರಲಿ! ಈ ಜನವು ಕೆಟ್ಟದ್ದೇ ಎಂದು ನೀನು ಬಲ್ಲೆ; ಹಾಗಾದರೆ ಅವರು—ಮಿಸ್ರದೊಳಗಿಂದ ನಮ್ಮನ್ನು ತಂದ ಈ ಮೋಶೆಗೆ ಯೇನಾಯಿತೆಂದು ನಾವರಿಯೆವು. ನಮ್ಮ ಮುಂದೆ ನಡೆದು ಬರುವ ದೇವರುಗಳನ್ನು ನಮಗುಂಟು ಮಾಡು, ಎನಲಾಗಿ, ನಾನು ಅವರಿಗೆ—ಚಿನ್ನವುಂಟಾದವರು ಅದನ್ನು ತಂದು ಕೊಡಲಿ, ಎಂದಾಗ, ಅವರು ತಮ್ಮ ಹೆಂಡರು ಮಕ್ಕಳ ಚಿನ್ನದ ಮುರುವುಗಳನ್ನು ನನಗೆ ತಂದು ಕೊಟ್ಟರು. ಅವುಗಳನ್ನು ನಾನು ಬೆಂಕಿಯಲ್ಲಿ ಕರಗಿಸಿದೆನು. ಈ ಪ್ರಕಾರವೇ ಆ ಕರು ಉಂಟಾಯಿತೆಂದನು. ಆಗಲು ಮೋಶೆಯು ಆ ಕರುವನ್ನು ತೆಗದು ಕೊಂಡು, ಸುಟ್ಟು, ಭಸ್ಮಮಾಡಿ, ನೀರಿನಲ್ಲಿ ಚೆಲ್ಲಿ, ಆ ನೀರನ್ನು ಇಸ್ರಯೇಲ್ಯರಿಗೆ ಕುಡಿಸಿದನು. ಆಗಲು ಮೋಶೆಯು—ದೇವರೇ, ಅಯ್ಯೋ! ಈ ಜನಾಂಗವು ದೊಡ್ಡ ಪಾಪವನ್ನು ಮಾಡಿತು; ಅವರು ಮಾಡಿದ ಪಾಪವನ್ನು ನೀನು ಮನ್ನಿಸು. ಮನ್ನಿಸ ಕೂಡದಿದ್ದರೆ, ನನ್ನನ್ನು ಸಹಾ ನಿನ್ನ ಪುಸ್ತಕದೊಳಗಿಂದ ಅಳಿಸಿ ಬಿಡು, ಯೆನಲು, ಕರ್ತನು—ನೀನು ಹೋಗಿ ಈ ಜನಾಂಗವನ್ನು ನಾನು ಹೇಳಿದ ಸ್ಥಳಕ್ಕೆ ವೊಯ್ಯಿ; ಇಗೋ ನನ್ನ ದೂತನು ನಿನ್ನ ಮುಂದಾಗಿ ಹೋಗುವನು. ಪರಾಮ್ಮರಿಸುವ ಸಮಯವು ಬಂದಾಗ, ನಾನು ಅವರ ಪಾಪವನ್ನು ಪರಾಮ್ಮರಿಸುವೆನೆಂದನು. ಮತ್ತು ದೇವರು ಮೋಶೆಗೆ—ಆ ಮುಂಚಿನ ಹಲಿಗೆಗಳು ಇದ್ದ ಪ್ರಕಾರವೇ ಕಲ್ಲಿನ ಯೆರಡು ಹಲಿಗೆಗಳನ್ನು ಕೆತ್ತಿಸಿ ಕೊಂಡು, ಆ ಮೊದಲಿನ ಹಲಿಗೆಗಳಲ್ಲಿದ್ದ ಮಾತುಗಳನ್ನು ತಾನು ಅವುಗಳ ಮೇಲೆ ಬರೆಯುವ ಹಾಗೆ, ನಾಳೆ ಅವುಗಳನ್ನು ಪರ್ವತದ ಮೇಲೆ ತರ ಬೇಕೆಂದಾಜ್ಞಾಪಿಸಿದನು. ಈ ಪ್ರಕಾರ ಮೋಶೆಯು ತಿರಿಗಿ ನಾಲ್ವತ್ತು ದಿನ ಹಗಲಿರಳು ಉಣ್ಣದೆ ಕುಡಿಯದೆ ಕರ್ತನ ಸನ್ನಿಧಿಯಲ್ಲಿ ಪರ್ವತದ ಮೇಲೆ ಇದ್ದನು. ಆ ಯೆರಡು ಹಲಿಗೆಗಳ ಮೇಲೆ ದೇವರು ಒಡಂಬಡಿಕೆಯ ವಾಕ್ಯಗಳಾದ ಹತ್ತು ಆಜ್ಞೆಗಳನ್ನು ಬರೆದನು.

---

೨೫. ರಾಜಾಜ್ಞೆಗಳೂ ಮತಕಟ್ಟಳೆಗಳೂ.

ದೇವರು ತನ್ನ ಜನರಿಗೆ ಕೊಟ್ಟ ಆಜ್ಞೆಗಳಲ್ಲಿ ರಾಜ್ಯದ ಕಟ್ಟಳೆಗಳ ಮಾರ್ಗವನ್ನೂ ಮನೆಮರ್ಯಾದೆಯ ಮಾರ್ಗವನ್ನೂ ವಿವರವಾಗಿ ನಿಶ್ಚಯಿಸಿದನು. ಈ ಕಟ್ಟಳೆಗಳಲ್ಲಿ ಅಭಕ್ಷ್ಯ ಊಟಗಳು ಅಶುದ್ಧವಾಗಿರುವದರಿಂದ ತಿನ್ನಬಾರದವುಗಳಾಗಿ ವಿವರಿಸಲ್ಪಟ್ಟವು. ವ್ಯವಸಾಯ ಕುರುಬತನ ಮೊದಲಾದ ಜೀವನಗಳ ನೇಮಗಳೂ ಮದುವೆ ಸ್ವತಂತ್ರಿಕೆಗಳ ಧರ್ಮಗಳೂ ಕಳ್ಳತನ ನರಹತ್ಯ ಮೊದಲಾದ ಅಕ್ರಮಗಳಿಗೆ ತಕ್ಕ ಶಿಕ್ಷೆಗಳೂ ಯುದ್ಧಕ್ರಮಗಳೂ ತಂದೆ ತಾಯಿಗಳಿಗೂ ಮಕ್ಕಳಿಗೂ ವಿಧವೆಯರಿಗೂ ಪರದೇಶಿಗಳಿಗೂ ದರಿದ್ರ ಕುರುಡ ಕಿವಡ ಮೊದಲಾದವರಿಗೂ ದಾಸರಿಗೂ ತಕ್ಕ ಪದ್ಧತಿಗಳೂ ಅತಿಸ್ಪಷ್ಟವಾಗಿ ವಿವರಿಸಿ ಇದ್ದವು. ಪಕ್ಷಿಗೂಡುಗಳೂ ಹಣ್ಣುಗಳನ್ನು ಫಲಿಸುವ ಮರಗಳೂ ಕಣ ತುಳಿಯುವ ಯೆತ್ತುಗಳೂ ಮೊದಲಾದವುಗಳಿಗೆ ಸಹಾ ಅವವುಗಳ ಪದ್ಧತಿ ಇತ್ತು. ಹಾಗಂದರೆ ಕಣ ತುಳಿಯುವ ಯೆತ್ತಿನ ಬಾಯಿಯನ್ನು ಕಟ್ಟಬಾರದೂ ಫಲದ ಮರಗಳನ್ನು ಕೆಡಿಸಬಾರದೂ ಪಕ್ಷಿಗೂಡು ಸಿಕ್ಕಿದರೆ ಮರಿಗಳ ಸಂಗಡ ತಾಯಿಯನ್ನು ತೆಗಿಯದೆ, ನೀನು ಸುಖದಿಂದ ದೀರ್ಘಾಯುಷ್ಯವಂತನಾಗುವ ಹಾಗೆ ತಾಯಿಯನ್ನು ಬಿಟ್ಟು ಬಿಡಬೇಕೂ, ಒಂದು ಯೆತ್ತಾದರೂ ಕತ್ತೆಯಾದರೂ ತನ್ನ ಹೊರೆಯಿಂದ ಬೀಳುವದನ್ನು ನೀನು ನೋಡಿದರೆ ಅದಕ್ಕೆ ಸಹಾಯ ಮಾಡಬೇಕೂ, ನೀನು ನಿನ್ನ ದೇವರಿಗೆ ಭಯಪಟ್ಟು ಕಿವಡನಿಗೆ ಶಪಿಸಲೂ, ಕುರುಡನ ಮಾರ್ಗದಲ್ಲಿ ಅಡ್ಡಿ ಹಾಕಲೂ, ಬಾರದೂ, ಯೆಂಬ ಈ ಮೊದಲಾದ ಆಜ್ಞೆಗಳಿದ್ದವು.

ಲೇವಿಯ ಮಕ್ಕಳಿಗೆ ಬೇರೆ ಬೇರೆ ಮಾನಗಳು ಕೊಡಲ್ಪಟ್ಟವು. ಮೋಶೆಯ ಮಕ್ಕಳಿಗೆ ತಮ್ಮ ಗೋತ್ರದವರಿಗಿಂತ ಹೆಚ್ಚಾದ ಮಾನಗಳು ಸಿಕ್ಕಲಿಲ್ಲವೆಂದು ಬರೆದದೆ. ಆದರೆ ಅವನ ಸಹೋದರನಿಗೂ ಅವನ ಮಕ್ಕಳಿಗೂ ಯಾಜಕತ್ವವು ನೇಮಿಸಲ್ಪಟ್ಟಿತು. ಮತ್ತು ಲೇವಿಯ ಗೋತ್ರದಿಂದ ಜನರ ಬೋಧಕರೂ ವೈದ್ಯರೂ ಅಧಿಪತಿಗಳೂ ಶ್ರೇಷ್ಠರೂ ಆರಿಸಿ ತೆಗದು ಕೊಳ್ಳಲ್ಪಟ್ಟರು.



ಆರೋನನು ಪ್ರಧಾನಯಾಜಕನಾಗಿ ಅಭಿಷೇಕವನ್ನೂ ಯಾಜಕತ್ವದ ವಸ್ತ್ರವನ್ನೂ ಹೊಂದಿದನು. ಮತ್ತು ದೇವರ ಸೇವೆಗೆ ಬಹು ಸೌಂದರ್ಯವಾದ ಗುಡಾರವು ಕಟ್ಟಲ್ಪಟ್ಟಿತು. ಆ ಗುಡಾರದ ಒಳಕೋಣೆಯಾದ ಅತಿ ಪರಿಶುದ್ಧ ಸ್ಥಳದಲ್ಲಿ ಒಂದು ಬಂಗಾರದ ಪೆಟ್ಟಿಗೆ ಇತ್ತು. ಅದರಲ್ಲಿ ದೇವರು ತಾವೇ ಬರೆದ ಆಜ್ಞೆಗಳ ಕಲ್ಲಿನ ಹಲಿಗೆಗಳು ಇಡಲ್ಪಟ್ಟವು. ಗುಡಾರದ ಹೊರಕೋಣೆಯಾದ ಪರಿಶುದ್ಧ ಸ್ಥಳದಲ್ಲಿ ಪ್ರಧಾನಯಾಜಕನು ದಿನಾಲು ಧೂಪವರ್ಗಗಳನ್ನು ದೇವರಿಗೆ ಅರ್ಪಿಸುತ್ತಿದ್ದನು. ಗುಡಾರದ ಸುತ್ತಲಿರುವ ದೊಡ್ಡ ಪ್ರಾಕಾರದಲ್ಲಿ ಬಲಿಪೀಠವು ಇತ್ತು. ಅದರಲ್ಲಿ ಯಾಜಕರು ಜನರ ಬಲಿಗಳನ್ನು ಕಡಿಯುತ್ತಿದ್ದರು. ಬಲಿಗಳ ಅರ್ಪಣೆಗೋಸ್ಕರ ಉಂಟಾದ ನೇಮವೇನಂದರೆ—ದಾವನಿಗಾದರೂ ಅಗ್ನಿಬಲಿಯನ್ನಾದರೂ ಆಹಾರಬಲಿಯನ್ನಾದರೂ ಸ್ತುತಿಬಲಿಯನ್ನಾದರೂ ಅರ್ಪಿಸುವ ಮನಸ್ಸಾಗಿದ್ದರೆ, ಅದನ್ನು ದೇವರು ಹೊಸತಾಗಿ ಆಜ್ಞಾಪಿಸಿದ ರೀತಿಯಿಂದಲೂ ದೇವರು ಹೊಸತಾಗಿ ನೇಮಿಸಿದ ಸ್ಥಳದಲ್ಲಿಯೂ ಅರ್ಪಿಸ ಬೇಕಾಯಿತು. ಕೆಲವು ಅಪರಾಧಗಳಿ

ಗ್ರಾಸ್ಥರ ಪಾಪಬಲಿಗಳೂ ಪರಿಹಾರಿಕೆಯ ಬಲಿಗಳೂ ನೇಮಿಸಲ್ಪಟ್ಟವು. ಈಗಿನ ಯೆಹೂದ್ಯರು ಬಲಿಗಳನ್ನು ಅರ್ಪಿಸುವದಿಲ್ಲ. ವರ್ಷ ಒಂದಕ್ಕೆ ಮೂರು ಸರ್ತಿ ಹಬ್ಬವು ಆಗುತ್ತಿತ್ತು. ಆವಾಗ ಗಂಡಸರೆಲ್ಲರು ಕೂಡಿ ಬರ ಬೇಕಾಯಿತು. ಮೊದಲನೇ ಹಬ್ಬವಂದರೆ ಇಸ್ರಾಯೇಲ್ಯರು ಮಿಸ್ರದಿಂದ ಹೊರಟು ಹೋದದ್ದನ್ನು ಆಚರಿಸುವದಕ್ಕಾಗಿದ್ದ ಪರಿಪಾಲನೆಯ ಹಬ್ಬವು. ಯೆರಡನೇದು ಸೀನಾಯ ಪರ್ವತದ ಮೇಲೆ ಆದ ನ್ಯಾಯನೇಮಕವನ್ನು ಆಚರಿಸುವದಕ್ಕಾಗಿದ್ದ ಪಂಚಾಶತ್ ಹಬ್ಬವು. ಮೂರನೇದು ಗುಡಾರಗಳ ಹಬ್ಬವು. ಈ ಮೂರು ಹಬ್ಬಗಳು ಬೇಸಾಯದ ಹಬ್ಬಗಳು ಸಹ ಆಗಿದ್ದವು. ಯೇನಂದರೆ ಪರಿಪಾಲನೆಯ ಹಬ್ಬದಲ್ಲಿ ಪೈರಿನ ಮೊದಲನೇ ಶಿವಟು ಪೀಠದಲ್ಲಿ ಇಡಲ್ಪಡ ಬೇಕಾಯಿತು. ಆ ಹಬ್ಬವಾದ ಮೇಲೆ ಪೈರು ಕೊಯ್ಯುವದಕ್ಕೆ ಪ್ರಾರಂಭ ಮಾಡುತ್ತಿದ್ದರು. ಪಂಚಾಶತ್ ಹಬ್ಬವು ಮೊದಲನೇ ಪೈರಿನ ಹಬ್ಬವೆಂದು ಕರೆಯಲ್ಪಟ್ಟಿತು. ಯಾಕಂದರೆ ಸಬಕ್ಕಿ ಕೊಯಿದು ಆದ ಮೇಲೆ ಗೋಧಿಯ ಪೈರನ್ನು ಕೊಯ್ಯಲಿಕ್ಕೆ ಆರಂಭವಾಗುತ್ತಿತ್ತು. ಗುಡಾರದ ಹಬ್ಬವು ದ್ರಾಕ್ಷೆ ಪೈರಿನ ಮೇಲೆ ಆದ ಸ್ತೋತ್ರದ ಹಬ್ಬವಾಗಿತ್ತು. ಈ ಹಬ್ಬಗಳನ್ನು ಯೆಹೂದ್ಯರು ಈಗಿನ ಪರ್ಯಂತರಕ್ಕೂ ಆಚರಿಸುತ್ತಾರೆ.

---

೨೬. ದುರಾಪೇಕ್ಷೆಯ ಸಮಾಧಿಗಳು.

ಇಸ್ರಾಯೇಲ್ಯರು ಸೀನಾಯ ಪರ್ವತದ ಸಮೀಪದಲ್ಲಿ ಸ್ವಲ್ಪ ಕಡಿಮೆ ಒಂದು ವರ್ಷ ನಿಂತು ಕೊಂಡ ಮೇಲೆ, ತಾವು ಮಿಸ್ರದಿಂದ ಹೊರಟದ್ದನ್ನು ನೆನಸುವ ಹಬ್ಬವನ್ನು ಆಚರಿಸಿದ ತರುವಾಯ ಆ ಮೇಘಸ್ತಂಭವು ಸಾಕ್ಷಿಯ ಗುಡಾರದಿಂದ ಯೇರಿ ಇರುವದನ್ನು ನೋಡಿ, ಸಮಸ್ತರು ಪ್ರಯಾಣಕ್ಕೆ ಸಿದ್ಧ ಮಾಡಿ ಕೊಂಡರು. ಆಗಲು ಜನರು — ಈಗ ನಾವು ಜೇನೂ ಹಾಲೂ ಹರಿಯುವ ದೇಶದಲ್ಲಿ ಸೇರುತ್ತೇವೆ ಯೆಂದು ಬಹಳವಾಗಿ ಸಂತೋಷ

ಪಟ್ಟರು. ಆದರೆ ಅವರು ಅರಣ್ಯದಲ್ಲಿ ಮೂರು ದಿವಸ ಪ್ರಯಾಣ ಹೋದ ಮೇಲೆ ಅವರ ಸಂತೋಷವು ಮುಗಿದು, ಇನ್ನೂ ಅನೇಕ ಕಷ್ಟಗಳು ಸಂಭವಿಸಿದವು. ಯೇನಂದರೆ ಅವರೊಳಗಿರುವ ನೀಚರು ಮಾಂಸ ತಿನ್ನುವದಕ್ಕೆ ಅಪೇಕ್ಷೆ ಮಾಡಿ, ನಮಗೆ ತಿನ್ನಲಿಕ್ಕೆ ಮಾಂಸವನ್ನು ಯಾರು ಕೊಡುವರೆಂದೂ, ಮಿಸ್ರದಲ್ಲಿ ನಮಗೆ ಸುಮ್ಮನೆ ಸಿಕ್ಕಿದ ಮೀನು ಸೌತೆಕಾಯಿ ಕಲ್ಲಂಗಡಿ ಕಾಡುಳ್ಳಿ ಬೆಳ್ಳುಳ್ಳಿ ನೀರುಳ್ಳಿ ಮೊದಲಾದವುಗಳು ನೆನಪಾಗುತ್ತವೆಂದೂ, ಈ ಮನ್ನಾ ಯೆಂಬುವದು ಹೊರತು ನಮ್ಮ ಕಣ್ಣುಗಳಿಗೆ ಯೇನೂ ಕಾಣುವದಿಲ್ಲವೆಂದೂ, ಕೂಗಿ ಅಳುವಾಗ್ಯೆ, ದೇವರು ಮೋಶೆಗೆ ಹೇಳಿದ್ದು — ನೀವು ಮಾಂಸವನ್ನು ಭಕ್ಷಿಸಲಿಕ್ಕೆ ನಾಳೆ ನಿಮ್ಮನ್ನು ಶುದ್ಧ ಮಾಡಿ ಕೊಳ್ಳಿರಿ. ನೀವು ಗುಣುಗುಟ್ಟಿ ಅತ್ತ ಕಾರಣ ಕರ್ತನು ನಿಮಗೆ ಮಾಂಸವನ್ನು ಭೋಜಿಸಲಿಕ್ಕೆ ಕೊಡುವನು. ಅದು ಮೂಗಿನ ರಂಧ್ರಗಳಿಂದ ಹೊರಟು ನಿಮಗೆ ಅಸಹ್ಯವಾಗುವ ಪರ್ಯಂತರಕ್ಕೂ, ಒಂದೆರಡು ಐದು ಹತ್ತು ಇಪ್ಪತ್ತು ದಿವಸಗಳಲ್ಲದೆ, ಒಂದು ತಿಂಗಳ ಪರ್ಯಂತರಕ್ಕೂ, ಅದನ್ನು ಭೋಜಿಸುವಿರಿ. ಯಾಕಂದರೆ ನಿಮ್ಮ ಮಧ್ಯದಲ್ಲಿರುವ ಕರ್ತನನ್ನು ಅಶ್ರದ್ಧೆ ಮಾಡಿ, ನಾವು ಯಾತಕ್ಕೆ ಮಿಸ್ರದಿಂದ ಹೊರಟೆವೆಂದು ಹೇಳಿದಿರಿ, ಯೆಂದು ಹೇಳು. ಅದಕ್ಕೆ ಮೋಶೆಯು ಹೇಳಿದ್ದು — ನನ್ನ ಸಂಗಡ ಇರುವ ಜನವು ಆರು ಲಕ್ಷ ಕಾಲಬಲವು. ಆದರೆ ನೀನು ಒಂದು ಪೂರ್ಣ ತಿಂಗಳಿನ ಪರ್ಯಂತರಕ್ಕೂ ಅವರಿಗೆ ಮಾಂಸವನ್ನು ಉಣ್ಣ ಕೊಡುವೆನೆಂದು ಹೇಳಿದ್ದೀ. ಅದಕ್ಕೆ ಕರ್ತನು ಮೋಶೆಯ ಸಂಗಡ — ಕರ್ತನ ಕೈ ಯೇನಾದರೂ ಕೊರತೆಯಾಗಿ ಅದೆಯೋ ಯೆಂದನು. ಆಗಲು ಕರ್ತನ ಬಳಿಯಿಂದ ಗಾಳಿಯು ಹೊರಟು, ಸಮುದ್ರದಿಂದ ಪಕ್ಷಿಗಳನ್ನು ಬಡಕೊಂಡು ಬಂದು, ದಂಡಿನ ಬಳಿಯ ಈಚೇಲಿ ಆಚೇಲಿ ಒಂದು ದಿವಸದ ಪ್ರಯಾಣದ ಪರ್ಯಂತರಕ್ಕೂ ದಂಡಿನ ಸುತ್ತ ಭೂಮಿಯ ಮೇಲೆ ಯೆರಡು ಮೊಳ ಯೆತ್ತರವಾಗಿ ಬೀಳಮಾಡಿತು. ಜನರು ಯೆರಡು ದಿನ ಪಕ್ಷಿಗಳನ್ನು ಕೂಡಿಸಿದರು. ಆದರೆ ಈ ಮಾಂಸವು ಇನ್ನೂ ಅವರ ಹಲ್ಲುಗಳ ನಡುವೆ ಇರುವಾಗ, ದೊಡ್ಡ ರೋಗವು ಅವರ ಮೇಲೆ ಬಿದ್ದದರಿಂದ, ಬಹಳ


ಮಂದಿ ಸತ್ತರು. ಆ ದುರಾಪೇಕ್ಷಿತರಾದ ಜನರನ್ನು ಅಲ್ಲಿಯೇ ಹೂಳಿಟ್ಟದರಿಂದ ಆ ಸ್ಥಳಕ್ಕೆ ದುರಾಪೇಕ್ಷೆಯ ಸಮಾಧಿಗಳೆಂಬ ಹೆಸರಾಯಿತು.



೨೯. ಹೊಂಚುಗಾರರು.

ಇಸ್ರಾಯೇಲ್ಯರು ಪರಾನ ಯೆಂಬ ಅರಣ್ಯದಲ್ಲಿ ಶೇರಿದ ಮೇಲೆ ಮೋಷೆಯು ಒಂದೊಂದು ಗೋತ್ರದಲ್ಲಿ ವೊಬ್ಬೊಬ್ಬ ಮನುಷ್ಯನನ್ನು ಆರಿಸಿ ತೆಗದು ಕೊಂಡು, ಕಾನಾನ್ ದೇಶವನ್ನು ವಿಚಾರಿಸುವದಕ್ಕೆ ಬೇಹಿನವರಾದ ಹನ್ನೆರಡು ಮಂದಿಯನ್ನು ಕಳುಹಿಸಿದನು. ಇವರು ದಕ್ಷಿಣ ದಿಕ್ಕಿನಿಂದ ಹೊರಟು, ಉತ್ತರ ಪ್ರಾಂತ್ಯದ ಪರ್ಯಂತರ ದೇಶವನ್ನೆಲ್ಲಾ ಸಂಚರಿಸಿ ನೋಡಿದರು. ಎಷ್ಕೋಲ ತಗ್ಗಿನಲ್ಲಿ ಅವರು ಒಂದು ಗೊನೆಯುಳ್ಳ ದ್ರಾಕ್ಷೆಯ ಬಳ್ಳಿಯನ್ನು ಕೊಯಿದು, ಅದನ್ನು ಇಬ್ಬರೂ ಒಂದು ಕಟ್ಟಿಗೆಯಲ್ಲಿ ಕಟ್ಟಿ ಹೊತ್ತು ಕೊಂಡು, ಮತ್ತು ಕೆಲವು ದಾಳಿಂಬದ ಹಣ್ಣುಗಳನ್ನೂ ಅಂಜೂರದ ಹಣ್ಣುಗಳನ್ನೂ ಹೊರ ಕೊಂಡು ಬಂದರು.

ನಾಲ್ವತ್ತು ದಿವಸಗಳ ಮೇಲೆ ದಂಡಿನಲ್ಲಿ ತಿರುಗಿ ಬಂದು, ದೇಶದ ಫಲಗಳನ್ನು ತೋರಿಸಿ, ತಾವು ನೋಡಿದ್ದನ್ನು ವಿವರಿಸಿ, ಹೇಳಿದ್ದೇನಂದರೆ—ನೀವು ನಮ್ಮನ್ನು ಕಳುಹಿಸಿದ ದೇಶಕ್ಕೆ ನಾವು ಹೋಗಿ ಬಂದೆವು. ನಿಶ್ಚಯವಾಗಿ ಅದು ಹಾಲೂ ಜೇನುತುಪ್ಪವೂ ಹರಿಯುವ ದೇಶವೇ. ಆದರೆ ಆ ದೇಶದಲ್ಲಿ ವಾಸವಾಗಿರುವ ಜನರು ಬಲಿಷ್ಟರು. ಪಟ್ಟಣಗಳು ಗಡಿಸ್ಥಳಗಳಾ



ಗಿಯೂ ಮಹಾ ದೊಡ್ಡವುಗಳಾಗಿಯೂ ಅವೆ. ಇದಲ್ಲದೆ ಅಲ್ಲಿ ಏನಾಕನ ಮಕ್ಕಳನ್ನು ನೋಡಿದೆವು. ಅಮಲೇಕ್ಯರು ದಕ್ಷಿಣಪಾರ್ಶ್ವದ ದೇಶದಲ್ಲಿ ವಾಸವಾಗಿದ್ದಾರೆ. ಹಿತ್ತಿಯರೂ ಯೆಬೂಜ್ಯರೂ ಅಮೋರ್ಯರೂ ಸಮುದ್ರದ ಬಳಿಯಲ್ಲಿಯೂ ಯೊರ್ದಾನ್ ನದಿಯ ಪ್ರಾಂತ್ಯದಲ್ಲಿಯೂ ವಾಸವಾಗಿದ್ದಾರೆಂದರು. ಆಗಲು ಕಲೇಬನು ಮೋಷೆಯ ಮುಂದೆ ಜನರನ್ನು ಸಮಾಧಾನ ಪಡಿಸಿ, ನಾವು ಈಗಲೇ ಹೋಗಿ ಆ ದೇಶವನ್ನು ಸ್ವತಂತ್ರಿಸಿ ಕೊಳ್ಳುವಾ; ಯೇನಂದರೆ ಅದನ್ನು ಜಯಿಸಲಾಪೆವು, ಯೆನಲು, ಅವನ ಸಂಗಡ ಹೋಗಿ ಬಂದ ಮನುಷ್ಯರು —ನಾವು ಆ ಜನರನ್ನು ಯೆದುರಿಸಲಾರೆವು; ಯೇನಂದರೆ ಅವರು ನಮಗಿಂತ ಬಲಿಷ್ಟರಾಗಿದ್ದಾರೆ; ಇದಲ್ಲದೆ ನಾವು ಹೊಂಚು ನೋಡಿ ಶೋಧಿಸಿ ದಾಟಿ ಬಂದ ಆ ದೇಶವು ತನ್ನ ನಿವಾಸಿಗಳನ್ನು ತಿನ್ನುವ ದೇಶವಾಗಿದೆ. ಅದರಲ್ಲಿ ನಾವು ನೋಡಿದ ಜನರು ಪ್ರಮಾಣಕ್ಕೆ ಮೀರಿದ ಮನುಷ್ಯರಾಗಿದ್ದಾರೆ. ಇದಲ್ಲದೆ ಅಲ್ಲಿ ರಾಕ್ಷಸಸಂತತಿಯವನಾದ ಏನಾಕನ ಮಕ್ಕಳಾಗಿರುವ ರಾಕ್ಷಸರನ್ನು ನೋಡಿದೆವು. ಅವರನ್ನು ನೋಡಿ ಮಿಡತೆಗಳ ಹಾಗಿದ್ದೆವು, ಯೆಂದು ತಾವು ನೋಡಿ ಬಂದ ದೇಶಕ್ಕೆ ಇಸ್ರಯೇಲನ ಮಕ್ಕಳಲ್ಲಿ ಕೆಟ್ಟ ವಾರ್ತೆಗಳನ್ನು ಹುಟ್ಟಿಸಿದರು. ಆದದರಿಂದ ಸಭೆ ಯೆಲ್ಲಾ ಯೆದ್ದು, ಬೊಬ್ಬೆ ಹಾಕಿ, ಯೆಲ್ಲರೂ ಆ ರಾತ್ರಿಯಲ್ಲಿ ಅತ್ತು ಮೋಷೆಗೂ ಆರೋನನಿಗೂ ವಿರೋಧವಾಗಿ ಗುಣುಗುಟ್ಟಿದರು. ಮತ್ತು ಸಭೆಯವರೆಲ್ಲರು ಅವರಿಗೆ ಹೋ

ಳಿದ್ದೇನಂದರೆ—ನಾವು ಮಿಸ್ರದಲ್ಲಿ ಸತ್ತು ಹೋದದ್ದಾದರೂ ಈ ಅರಣ್ಯದಲ್ಲಿ ಈಗ ಸಾಯುವದಾದರೂ ನಮಗೆ ಉತ್ತಮವಾಗಿತ್ತು. ನಾವು ಖಡ್ಗದಿಂದ ಸಾಯುವ ಹಾಗೆಯೂ ನಮ್ಮ ಹೆಂಡರೂ ಮಕ್ಕಳೂ ಕೊಳ್ಳೆಯಾಗುವ ಹಾಗೆಯೂ ಕರ್ತನು ನಮ್ಮನ್ನು ಈ ದೇಶಕ್ಕೆ ಒಯ್ಯುವದೇನು! ಮಿಸ್ರಕ್ಕೆ ತಿರುಗಿ ಹೋಗುವದು ನಮಗೆ ಉತ್ತಮವಲ್ಲವೋ? ಇದಲ್ಲದೆ ಒಬ್ಬರಿಗೊಬ್ಬರು ಹೇಳಿಕೊಂಡದ್ದು—ಒಬ್ಬ ಅಧಿಪತಿಯನ್ನು ನೇಮಿಸಿಕೊಂಡು, ಮಿಸ್ರಕ್ಕೆ ತಿರುಗಿ ಹೋಗುವಾ ಬರ್ರಿ! ಆಗಲು ಮೋಶೆಯೂ ಆರೋನನೂ ಇಸ್ರಯೇಲನ ಮಕ್ಕಳ ಸಭೆಯ ಸಮೂಹದ ಮುಂದೆ ಅಡ್ಡ ಬಿದ್ದರು. ಮತ್ತು ದೇಶವನ್ನು ಶೋಧಿಸಿ ನೋಡಿದವರಲ್ಲಿ ನೂನನ ಮಗನಾದ ಯೋಷುವನೂ ಎಫುನ್ನೆಯ ಮಗನಾದ ಕಲೇಬನೂ ತಮ್ಮ ವಸ್ತ್ರಗಳನ್ನು ಹರಕೊಂಡು, ಇಸ್ರಯೇಲನ ಮಕ್ಕಳಾದ ಸಮಸ್ತ ಸಭೆಗೆ ಹೇಳಿದ್ದೇನಂದರೆ—ನಾವು ಶೋಧಿಸಿ ನೋಡಿ ಹಾದು ಬಂದ ದೇಶವು ಮಹಾ ಉತ್ತಮವಾದದ್ದು. ಕರ್ತನು ನಮ್ಮ ಮೇಲೆ ದಯವಾಗಿದ್ದರೆ, ಹಾಲೂ ಜೇನುತುಪ್ಪವೂ ಹರಿಯುವ ದೇಶಕ್ಕೆ ನಮ್ಮನ್ನು ಒಯ್ದು ಅದನ್ನು ನಮಗೆ ಕೊಡುವನು. ಆದರೆ ನೀವು ಕರ್ತನಿಗೆ ವಿರೋಧವಾಗಿ ಕಲಹ ಮಾಡ ಬೇಡಿರಿ. ಆ ದೇಶದ ಜನರಿಗೆ ಭಯ ಪಡ ಬೇಡಿರಿ. ಯೇನಂದರೆ ಅವರು ನಮಗೆ ಆಹಾರಕ್ಕೆ ಗುರಿಯಾಗಿರುವರು. ಅವರ ಆಸ್ಪದವು ಅವರಿಂದ ಹೋಯಿತು; ಕರ್ತನಾದ ದೇವರು ನಮ್ಮ ಸಂಗಡಲಿದ್ದಾನೆ. ಅವರಿಗೆ ಭಯ ಪಡ ಬೇಡಿರಿ, ಯೆಂದರು. ಸಭೆಯವರೆಲ್ಲರು—ಅವರನ್ನು ಕಲ್ಲೆಸೆಯಿರಿ! ಯೆಂದರು. ಆಗಲು ಕರ್ತನ ಮಹಿಮೆಯು ಸಾಕ್ಷಿಯ ಗುಡಾರದಲ್ಲಿ ಇಸ್ರಯೇಲನ ಮಕ್ಕಳೆಲ್ಲರ ಮುಂದೆ ಕಾಣಿಸಿತು. ಮತ್ತು ಕರ್ತನು ಮೋಶೆಗೆ ಹೇಳಿದ್ದೇನಂದರೆ—ಇನ್ನೂ ಈ ಜನರು ಯೆಷ್ಟು ಪರ್ಯಂತರಕ್ಕೂ ನನಗೆ ಕೋಪವೆಬ್ಬಿಸುವರು? ಅವರ ಮಧ್ಯದಲ್ಲಿ ನಾನು ಮಾಡಿದ ಯೆಲ್ಲಾ ಅದ್ಭುತಗಳಿಗೋಸ್ಕರ ನನ್ನನ್ನು ಯೆಷ್ಟು ಪರ್ಯಂತರಕ್ಕೂ ನಂಬದೆ ಇರುವರು. ನೀವು ನನ್ನ ಕಿವಿಗಳು ಕೇಳುವ ಹಾಗೆ ಹೇಳಿದ ಪ್ರಕಾರವೇ ನಿಮಗೆ ಮಾಡುವೆನೆಂದು ನಿಶ್ಚಯವಾಗಿ ನನ್ನ ಜೀ

ವದ ಮೇಲೆ ಆಜ್ಞೆ ಇಡುತ್ತೇನೆ. ಯೇನಂದರೆ ಇಪ್ಪತ್ತು ವರ್ಷದ ಮೇಲಿನವರಾಗಿ ನಿಮ್ಮ ಲೆಖ್ಖದಲ್ಲಿ ಯೆಣಿಸಲ್ಪಟ್ಟವರೂ ನನಗೆ ವಿರೋಧವಾಗಿ ಗುಣುಗುಟ್ಟಿದವರೂ ಯೆಲ್ಲರು ಅರಣ್ಯದಲ್ಲಿ ಶವಗಳಾಗಿ ಬೀಳುವರು. ಮತ್ತು ನಾನು ನಿಮ್ಮನ್ನು ವಾಸಿಸ ಮಾಡುವೆನೆಂದು ನನ್ನ ಹಸ್ತವನ್ನೆತ್ತಿ ಆಜ್ಞೆ ಇಟ್ಟ ದೇಶದಲ್ಲಿ, ಎಫುನ್ನೆಯ ಮಗನಾದ ಕಲೇಬನೂ ನೂನನ ಮಗನಾದ ಯೋಷುವನೂ ಇವರ ಹೊರತಾಗಿ, ನೀವು ನಿಶ್ಚಯವಾಗಿ ಬಾರದೆ ಇರುವಿರಿ. ಆದರೆ ಕೊಳ್ಳೆಯಾಗಿ ಹೋಗುವರೆಂದು ನೀವು ಹೇಳಿದ ನಿಮ್ಮ ಮಕ್ಕಳನ್ನು ನಾನು ಆ ದೇಶದಲ್ಲಿ ಬರ ಮಾಡುವೆನು. ನೀವು ಅಶ್ರದ್ಧೆ ಮಾಡಿದ ದೇಶವನ್ನು ಅವರು ಅನುಭವಿಸುವರು. ನೀವು ಆ ದೇಶವನ್ನು ಶೋಧಿಸಿ ನೋಡಿದ ನಾಲ್ವತ್ತು ದಿವಸಗಳ ಪ್ರಕಾರ ನಿಮ್ಮ ಮಕ್ಕಳು ನಿಮ್ಮ ಅಕ್ರಮವನ್ನು ಹೊತ್ತು ಕೊಂಡು, ನಿಮ್ಮ ಶರೀರಗಳು ಕ್ಷಯವಾಗುವ ಪರ್ಯಂತರ, ನಾಲ್ವತ್ತು ವರ್ಷ ಈ ಅರಣ್ಯದೊಳು ತಿರುಗುತ್ತಾ ಇರುವರು. ನಿಶ್ಚಯವಾಗಿ ನನಗೆ ವಿರೋಧವಾಗಿ ಗುಂಪು ಕೂಡಿದ ಈ ಕೆಟ್ಟ ಸಭೆಗೆಲ್ಲಾ ಈ ಪ್ರಕಾರ ಮಾಡುವೆನು. ಅವರು ಈ ಅರಣ್ಯದಲ್ಲೇ ತೀರಿ ಹೋಗುವರು. ಈ ಪ್ರಕಾರ ಇಪ್ಪತ್ತು ವರ್ಷದವರಾಗಿ ಮಿತ್ರದಿಂದ ಹೊರಟು ಹೋದ ಇಸ್ರಯೇಲ್ಯರಲ್ಲಿ ಯೋಷುವನೂ ಕಲೇಬನೂ ಈ ಇಬ್ಬರು ಹೊರತು ಯೆಲ್ಲರು ಅರಣ್ಯದಲ್ಲಿ ಸತ್ತು ಹೋದರು. ಇಸ್ರಯೇಲ್ಯರು ಇನ್ನೂ ಮೂವತ್ತೆಂಟು ವರ್ಷ ಅರಣ್ಯದಲ್ಲಿ ತಿರುಗಾಡುತ್ತಾ ಇದ್ದರು. ಸೀನಾಯಿ ಪರ್ವತದ ಕಾಡಿನಲ್ಲಿ ಅವರು ಅನೇಕ ದಿವಸ ಉಳಕೊಂಡರು. ಕಾದೇಷೆಂಬ ಅರಣ್ಯದಲ್ಲಿರುವ ಫರಾನದಲ್ಲಿ ಅವರು ಕೆಲವು ವರ್ಷ ಉಳಕೊಂಡರು. ನಾಲ್ವತ್ತು ವರ್ಷಗಳೊಳಗೆ ಇಪ್ಪತ್ತು ಸ್ಥಳಗಳಲ್ಲಿ ದಂಡಿಳಿಸಿದರು.

---


೨೮. ಇಸ್ರಯೇಲ್ಯರು ಗುಣುಗುಟ್ಟಿದ್ದು.

ಇಸ್ರಯೇಲ್ಯರು ಇನ್ನೂ ಕೆಲವು ಸಾರಿ ಮೋಶೆಗೆ ತಿರುಗಿ ಬಿದ್ದರು. ಲೇವಿ ಗೋತ್ರದ ಹಿರಿಯರಲ್ಲಿ ಒಬ್ಬನಾಗಿಯೂ ಮೋಶೆಯ ದಾಯಾದಿಯಾಗಿ

ಯೂ ಇರುವ ಕೋರಹನೂ ರುಬೇನ ಗೋತ್ರದ ಹಿರಿಯರಾದ ದಥಾನನೂ ಅಬೀರಾಮನೂ ಇಸ್ರಯೇಲ್ಯರಲ್ಲಿ ಶ್ರೇಷ್ಠರಾದ ಇನ್ನೂರೈವತ್ತು ಮಂದಿಯೂ ಯೆಲ್ಲಾ ಸಭೆಗೆ ರಾಜ್ಯದ ಕೆಲಸದಲ್ಲಿಯೂ ಯಾಜಕರ ಕೆಲಸದಲ್ಲಿಯೂ ಸಮನಾದ ಪಾಲು ಉಂಟಾಗ ಬೇಕೆಂದು ಹೇಳಿ, ಇವರೇ ರಾಜ್ಯವನ್ನು ಪಡಕೊಳ್ಳಲಿಕ್ಕೆ ನೋಡುತ್ತಾರೆಂದು ಮೋಶೆಗೂ ಆರೋನನಿಗೂ ವಿರೋಧವಾಗಿ ಗುಂಪು ಕೂಡಿಸಿದರು. ಮೋಶೆಯು—ನೀವು ನಾಳೆ ನಿಮ್ಮ ಧೂಪಾರ್ತಿಗಳನ್ನು ತೆಗದು ಕೊಂಡು ಕರ್ತನ ಸನ್ನಿಧಾನಕ್ಕೆ ಬರ್ರಿ. ಆಗಲು, ಕರ್ತನು ಯಾರನ್ನು ಆರಿಸುವನೋ, ಪ್ರತ್ಯಕ್ಷವಾಗುವದೆಂದನು. ಕೋರಹನು ಮರುದಿವಸದಲ್ಲಿ ಜನಾಂಗವನ್ನೆಲ್ಲಾ ಸಾಕ್ಷಿಯ ಗುಡಾರದ ಮುಂದೆ ಕೂಡಿಸಿದಾಗ, ಕರ್ತನು ಹೇಳಿದ್ದೇನಂದರೆ—ಕೋರಹನೂ ದಥಾನನೂ ಅಬೀರಾಮನೂ ಯೆಂಬವರ ಮನೆಗಳಿಂದ ದೂರ ಹೋಗಿರಿ. ನಾನು ಅವರನ್ನು ಶೀಘ್ರವಾಗಿ ಸಂಹರಿಸ ಬೇಕಾಗುತ್ತದೆ. ಆಗಲು ಭೂಮಿಯು ಅವರ ಕೆಳಗೆ ಬಿರಿದು, ಅವರನ್ನೂ ಅವರ ಯೆಲ್ಲಾ ಆಸ್ತಿಯನ್ನೂ ನುಂಗಿ ಬಿಟ್ಟಿತು. ಆ ಇನ್ನೂರೈವತ್ತು ಮಂದಿಯನ್ನು ಅಗ್ನಿಯು ದಹಿಸಿ ಬಿಟ್ಟಿತ್ತು. ಹೀಗಾದ ಮೇಲೆ ಸಮಸ್ತ ಸಭೆಯು, ಈ ಮನುಷ್ಯರ ನಾಶನಕ್ಕೆ ಮೋಶೆಯೂ ಆರೋನನೂ ಕಾರಣವಾಗಿದ್ದಾರೆಂದು, ಗುಣುಗುಟ್ಟಿದ ಕಾರಣ, ಕರ್ತನದೆಸೆಯಿಂದ ಒಂದು ವ್ಯಾಧಿಯು ಹೊರಟು, ಹದಿನಾಲ್ಕು ಸಾವಿರ ಯೇಳುನೂರು ಮಂದಿಯನ್ನು ಒಂದೇ ಸಾರಿ ದಹಿಸಿ ಬಿಟ್ಟಿತು.



ಕದೇಷದಲ್ಲಿ ಇಸ್ರಾಯೇಲ್ಯರ ಸಭೆಗೆ ನೀರು ಇಲ್ಲದದರಿಂದ ಜನಾಂಗವು ಮೋಶೆಯ ಸಂಗಡ ಕಲಹ ಮಾಡಲಾಗ, ಕರ್ತನು—ನೀನು ನಿನ್ನ ಕೋಲನ್ನು ತೆಗದು ಸಭೆಯನ್ನು ಕೂಡಿಸು. ಅವರು ಕೂಡಿದ ಸಮಯದಲ್ಲಿ, ಆರೋನನೂ ನೀನೂ ಬಂಡೆಯ ಸಂಗಡ ಮಾತಾಡುವಾಗ, ಆ ಬಂಡೆಯು ತನ್ನ ನೀರನ್ನು ಕೊಡುವದೆಂದನು. ಮೋಶೆಯೂ ಆರೋನನೂ ಸಭೆಯನ್ನು ಕೂಡಿಸಿ ಹೇಳಿದ್ದೇನಂದರೆ—ಅವಿಧೇಯರೇ, ಕೇಳಿರಿ! ಈ ಬಂಡೆಯೊಳಗಿಂದ ನಾವು ನಿಮಗೆ ನೀರು ತರುವದುಂಟೇ? ಆಗಲು ಮೋಶೆಯು ಆ ಬಂಡೆಯ ಹತ್ತರ ಮಾತಾಡದೆ, ತನ್ನ ಕೈಯನ್ನು ಯೆತ್ತಿ, ಕೋಲಿನಿಂದ ಆ ಬಂಡೆಯನ್ನು ಯೆರಡು ಸಾರಿ ಹೊಡದನು. ಆಗಲು ಬಹಳ ನೀರು ಹೊರಗೆ ಬಂತು. ಜನರು ಕುಡಿದು, ತಮ್ಮ ದನಗಳಿಗೆ ಸಹ ಕುಡಿಸಿದರು. ಆದರೂ ಕರ್ತನು ಮೋಶೆಗೂ ಆರೋನನಿಗೂ—ನೀವು ಜನಾಂಗದ ಮುಂದೆ ನನ್ನನ್ನು ಸನ್ಮಾನಿಸದೆಯೂ ಪರಿಶುದ್ಧ ಮಾಡದೆಯೂ ಇರುವದರಿಂದ ಜನಾಂಗಕ್ಕೆ ನಾನು ಕೊಡುವ ದೇಶದಲ್ಲಿ ಅದನ್ನು ಸೇರಿಸಲಾರಿರಿ ಯೆಂದನು. ಈ ಪ್ರಕಾರ ಆ ಬುಗ್ಗೆಗೆ ಕಲಹದ ನೀರೆಂಬ ಹೆಸರಾಯಿತು.



ನಾಲ್ವತ್ತನೇ ವರ್ಷದಲ್ಲಿ ಜನರು ಎದೋಮ್ಯರ ದೇಶವನ್ನು ಸುತ್ತಿ ಹೋಗುವಾಗ, ಮಾರ್ಗಕ್ಕೋಸ್ಕರ ಬಹಳ ಅಧೈರ್ಯ ಪಟ್ಟದರಿಂದ, ತಿರುಗಿ ಗುಣುಗುಟ್ಟುತ್ತಾ—ನಾವು ಅರಣ್ಯದಲ್ಲಿ ಸಾಯುವ ಹಾಗೆ ನೀವು ನಮ್ಮನ್ನು ಮಿಸ್ರದಿಂದ ಬರಮಾಡಿದ್ದೇನು? ಇಲ್ಲಿ ಆಹಾರವೂ ಇಲ್ಲ; ಜಲವೂ ಇಲ್ಲ. ಅಲ್ಪವಾದ ಈ ಆಹಾರವು ನಮ್ಮ ಆತ್ಮಕ್ಕೆ ಅಸಹ್ಯವಾಗಿದೆ, ಯೆಂದರು. ಆಗಲು ಕರ್ತನು ಜನರ ಮಧ್ಯದಲ್ಲಿ ಅಗ್ನಿಸರ್ಪಗಳನ್ನು ಕಳುಹಿಸಿದನು. ಅವು ಜನರನ್ನು ಕಚ್ಚಿದದರಿಂದ ಅನೇಕರು ಸತ್ತರು. ಆಗಲು ಜನರು ಮೋಷೆಯ ಬಳಿಗೆ ಬಂದು—ನಾವು ಪಾಪ ಮಾಡಿದೆವು; ಈಗ ನಮ್ಮಿಂದ ಈ ಸರ್ಪಗಳನ್ನು ತೆಗೆದು ಹಾಕುವ ಹಾಗೆ ಕರ್ತನಿಗೆ ವಿಜ್ಞಾಪನೆ ಮಾಡು, ಯೆನಲಾಗಿ, ಮೋಷೆಯು ಜನರಿಗೋಸ್ಕರ ಬೇಡಿಕೊಂಡದರಿಂದ ಕರ್ತನು ಅವನಿಗೆ—ನೀನು ಅಗ್ನಿಸರ್ಪದ ಹಾಗೆ ಒಂದು ರೂಪವನ್ನು ಮಾಡಿಕೊಂಡು, ಅದನ್ನು ಒಂದು ಗಳೆಯ ಮೇಲೆ ಇಡು. ಸರ್ಪ ಕಚ್ಚಿದವನು ಯಾವನಾದರೂ ಅದನ್ನು ನೋಡಿದರೆ, ಬದುಕುವನೆಂದನು. ಅದೇ ಪ್ರಕಾರ ಮೋಷೆಯು ಒಂದು ಹಿತ್ತಾಳಿಯ ಸರ್ಪವನ್ನುಂಟು ಮಾಡಿ, ಅದನ್ನು ಒಂದು ಗಳೆಯ ಮೇಲೆ ಇಟ್ಟನು. ಆಗಲು ಸರ್ಪ ಕಚ್ಚಿದವರು ಆ ಹಿತ್ತಾಳಿಯ ಸರ್ಪವನ್ನು ದೃಷ್ಟಿಸಿದಾಗಲೇ ಜೀವದಿಂದುಳಿದರು.



೨೮. ಬಿಳಾಮನು.



ಇದರ ತರುವಾಯ ಇಸ್ರಾಯೇಲ್ಯರು ತಮ್ಮ ದೇಶದಲ್ಲಿ ಸೇರಿ, ಅದನ್ನು
ತಮಗೆ ವಶ ಮಾಡಿ ಕೊಳ್ಳಲಾರಂಭಿಸಿದರು. ಅಮೋರ್ಯರ ರಾಜನಾದ ಸಿಹೋ
ನನನ್ನೂ ಬಾಷಾನದಲ್ಲಿರುವ ರಾಜನಾದ ಓಗನನ್ನೂ ಹೊಡದು, ಯೊರ್ದಾ
ನಿನ ಹತ್ತಿರ ಇರುವ ಮೋವಾಬವೆಂಬ ಬೈಲಿನಲ್ಲಿ ದಂಡಿಳಿಸಿದರು. ಆಗಲು
ಮೋವಾಬ್ಯರ ಅರಸನಾದ ಬಲಾಕನು ನದಿಗಳ ಅರಾಮದಿಂದ ಬಿಳಾಮನೆಂ
ಬ ಹೆಸರುಳ್ಳ ಒಬ್ಬ ಮಂತ್ರಗಾರನನ್ನು ಕರೆಸಿ ಕೊಂಡು — ನನ್ನ ಯೆದುರಿನಲ್ಲಿರು
ವ ಈ ಜನರನ್ನು ಶಪಿಸು, ಯೆಂದು ಆಜ್ಞಾಪಿಸಿದನು. ಆದರೆ ದೇವರು
ಬಿಳಾಮನಿಗೆ — ಅವರ ಸಂಗಡ ಹೋಗದೆ ಈ ಜನಾಂಗವನ್ನು ಶಪಿಸದೆ
ಇರು; ಯಾತಕ್ಕಂದರೆ ಅದು ಆಶೀರ್ವದಿಸಲ್ಪಟ್ಟದೆ ಯೆಂದನು. ತರುವಾ
ಯ, ಬಲಾಕನು ಮೊದಲು ಕಳುಹಿಸಿದ ಪ್ರಭುಗಳಿಗಿಂತ ಶ್ರೇಷ್ಟರಾದ
ಪ್ರಭುಗಳನ್ನು ತನ್ನ ಹತ್ತಿರ ಕಳುಹಿಸಿದದರಿಂದ, ಬಿಳಾಮನು ಇವರ ಮಾ
ತಿಗೆ ಒಪ್ಪಿ ಕೊಂಡನು. ಆಗಲು ದೇವರ ದೂತನು ಮಾರ್ಗದಲ್ಲಿ ಅವನೆದು
ರಿಗೆ ನಿಂತನು. ಬಿಳಾಮನ ಕತ್ತೆಯು ಬಿಚ್ಚುಗತ್ತಿ ಧರಿಸಿರುವ ದೂತನನ್ನು ನೋ
ಡಿ ಓರೆ ಹೋಯಿತು. ಬಿಳಾಮನು ದೂತನನ್ನು ನೋಡದೆ, ಕತ್ತೆಗೆ ಹೊ
ಡದನು. ಆ ಕತ್ತೆಯು ಮೊಣಕಾಲೂರಿ ಬಿದ್ದದರಿಂದ ಬಿಳಾಮನು ಹೊಟ್ಟಾ

ಗಿ ಹೊಡದನು. ಆಗಲು, ಕರ್ತನು ಕತ್ತೆಯ ಬಾಯಿ ತೆರದದರಿಂದ, ಅದು ಮನುಷ್ಯನ ಶಬ್ದದಿಂದ—ನೀನು ನನಗೆ ಹೊಡೆಯುವದಕ್ಕೆ ಕಾರಣವೇನೆಂದು ಹೇಳಿತು. ಆಗಲು ದೇವರು ಬಿಳಾಮನ ಕಣ್ಣುಗಳನ್ನು ತೆರದದರಿಂದ, ಅವನು ಆ ದೂತನನ್ನು ನೋಡಿದನು. ದೂತನು ಅವನಿಗೆ—ನೀನು ನಡೆದು ಹೋಗು; ಆದರೆ ನಾನು ನಿನಗೆ ಹೇಳುವ ಮಾತನ್ನು ಹೊರತಾಗಿ ಮತ್ತೇನೂ ನುಡಿಯ ಬಾರದು, ಯೆಂದನು. ಬಿಳಾಮನು ಬಲಾಕನ ಹತ್ತರ ಬಂದು, ಅವನಿಗೆ ಗುಡ್ಡದ ಮೇಲೆ ಬಲಿಯನ್ನರ್ಪಿಸಿ, ಪ್ರವಾದನೆಯನ್ನು ಹೇಳಿ, ದೇವರು ಶಪಿಸದವನಿಗೆ ನಾನು ಶಪಿಸುವದು ಹ್ಯಾಗೆ? ದೇವರು ಗದರಿಸದವನಿಗೆ ನಾನು ಗದರಿಸುವದು ಹ್ಯಾಗೆ? ಆಶೀರ್ವಾದವನ್ನು ಕೊಡುವದಕ್ಕಾಗಿ ಇಲ್ಲಿಗೆ ಬಂದು ಆಶೀರ್ವಾದವನ್ನು ಕೊಡುತ್ತೇನೆಂದು, ಯೇಳು ಸಾರಿ ಆಶೀರ್ವದಿಸಿದನು. ಆಗ್ಯೆ ಬಲಾಕನು ಬಿಳಾಮನಿಗೆ ಹೇಳಿದ್ದು—ನನ್ನ ಮೇಲೆ ಯೇನು ಮಾಡುತ್ತಿ? ಶಪಿಸುವದಕ್ಕೆ ನಿನ್ನನ್ನು ಕರಸಿದೆನು. ಇಗೋ, ನೀನು ಆಶೀರ್ವದಿಸುತ್ತಿ. ನಿನಗೆ ಮಾನ ಕೊಡ ಬೇಕೆಂಬ ಆಲೋಚನೆಯಲ್ಲಿದ್ದೆನು. ಆದರೆ, ಇಗೋ, ದೇವರು ನಿನಗೆ ಮಾನವನ್ನು ನಿವಾರಿಸಿದನು. ಬಿಳಾಮನು ತನ್ನ ಸ್ಥಳಕ್ಕೆ ತಿರುಗಿ ಹೋದನು. ಆ ಮೇಲೆ ಇಸ್ರಯೇಲ್ಯರು ಮೋವಾಬ್ಯರನ್ನು ಬಡಿದು, ಕೊಂದು, ಗಂಡಸರೆಲ್ಲರನ್ನು ಹತ ಮಾಡಿದರು.

---

೩೦. ಮೋಶೆಯ ಮರಣವು.

ಮೋಶೆಯು ಮಿಸ್ರದೇಶದಿಂದ ಕರಕೊಂಡು ಬಂದ ಜನರೆಲ್ಲರಲ್ಲಿ ಯೋಶುವನೂ ಕಲೇಬನೂ ಈ ಇಬ್ಬರೇ ಉಳಿದವರಾಗಿ, ಮತ್ತೆಲ್ಲರು ಸತ್ತು ಹೋದ ಮೇಲೆ ಮೋಶೆಯ ಒಂತಿಗೆ ಬಂತು. ಕರ್ತನು ಅವನಿಗೆ ಹೇಳಿದ್ದು—ನಿನ್ನ ನಡುವನ್ನು ಕಟ್ಟಿ ಕೊಂಡು, ನೆಬೋವು ಪರ್ವತದ ಮೇಲೆ ಯೇರು. ಅಲ್ಲಿ ನಾನು ಇಸ್ರಯೇಲ ಮಕ್ಕಳಿಗೆ ಕೊಡ ಹೋಗುವ ಕಾನಾನ್ ದೇಶವನ್ನು ನಿನಗೆ ತೋರಿಸುವೆನು. ನಿನ್ನ ಕಣ್ಣುಗಳು ಆ ದೇಶವನ್ನು ನೋಡುವ

ವು; ನಿನ್ನ ಕಾಲು ಅದರಲ್ಲಿ ಶೇರದು. ಆಗ್ಗೆ ಮೋಶೆಯು ತನ್ನ ಜನರನ್ನು ಬಿಟ್ಟು ಹೋಗುವ ಮುಂಚೆ ದೇವರು ಅವರಿಗೆ ಮಾಡಿದ ಸಮಸ್ತ ಉಪಕಾರಗಳನ್ನು ಅವರ ಜ್ಞಾಪಕಕ್ಕೆ ತಂದು, ಆತನ ಆಜ್ಞೆಗಳನ್ನೆಲ್ಲಾ ತಿರುಗಿ ಪ್ರಸಂಗಿಸಿ, ಶಾಪವನ್ನೂ ಆಶೀರ್ವಾದವನ್ನೂ ಅವರ ಮುಂದೆ ಇಟ್ಟು — ನಿಮ್ಮ ದೇವರಾದ ಕರ್ತನು ನಿಮ್ಮ ಸಹೋದರರಲ್ಲಿ ನನಗೆ ಸಮಾನವಾದ ಪ್ರವಾದಿಯನ್ನು ಯೆಬ್ಬಿಸುವನು; ಆತನನ್ನು ಕೇಳಿರಿ, ಯೆಂಬ ವಾಕ್ಯವನ್ನು ತಿಳಿಸಿದನು. ತರುವಾಯ ಪರ್ವತದ ಮೇಲೆ ಹೋಗಿ, ಸತ್ತುಹೋದನು. ಕರ್ತನು ಅವನನ್ನು ಹೂಳಿಟ್ಟದರಿಂದ ಅವನ ಸಮಾಧಿಯನ್ನು ಯಾರೂ ನೋಡಲಿಲ್ಲ. ಮೋಶೆಯು ಸಾಯುವಾಗ, ನೂರ ಇಪ್ಪತ್ತು ವರ್ಷದವನಾಗಿದ್ದನು. ಅವನ ಕಣ್ಣುಗಳು ಮಂದವಾಗಲಿಲ್ಲ. ಅವನ ಬಲವು ಕುಂದಲಿಲ್ಲ. ಅಂದಿನಿಂದ ಯೇಸುಕ್ರಿಸ್ತನು ಹುಟ್ಟುವ ಪರ್ಯಂತರ ಇಸ್ರಯೇಲ್ಯರೊಳಗೆ ಮೋಶೆಯ ಹಾಗೆ ಇನ್ನೊಬ್ಬ ಪ್ರವಾದಿ ಹುಟ್ಟಲಿಲ್ಲ.

---

೩೧. ಯೋಶುವನು.

ದೇವರು ಮೋಶೆಯ ಸಂಗಡ ಇದ್ದ ಹಾಗೆಯೇ ಯೋಶುವನ ಸಂಗಡಲಿದ್ದನು. ಮೋಶೆಯು ಇಸ್ರಯೇಲ್ಯರನ್ನು ಸಮುದ್ರದಿಂದ ದಾಟಿಸಿದ ಹಾಗೆಯೇ ಯೋಶುವನು ಅವರನ್ನು ಯೊರ್ದಾನ್ ನದಿಯಿಂದ ದಾಟಿಸಿದನು. ಹ್ಯಾಗಂದರೆ ನೀರು ವಿಂಗಡವಾಗಿ, ಕೆಳಗಿನ ನೀರು ಹರಿದು ಹೋಗಿ, ಮೇಲಿನ ನೀರು ಗೋಡೆಯ ಹಾಗೆ ನಿಂತಾಗ, ಜನರು ಮಧ್ಯದಲ್ಲಿ ದಾಟಿ ಹೋದರು. ಯೆರಿಖೋವೆಂಬ ಭದ್ರವಾದ ಪಟ್ಟಣಕ್ಕೆ ಅವರು ಮುಟ್ಟಿದಾಗ, ಕರ್ತನು ಯೋಶುವನ ಸಂಗಡ — ಇಗೋ, ನಾನು ಈ ಪಟ್ಟಣವನ್ನು ಅದರ ಅರಸನ ಸಂಗಡ ನಿನ್ನ ಕೈಗೆ ಒಪ್ಪಿಸಿ ಕೊಟ್ಟಿದ್ಧೇನೆ, ಯೆಂದನು. ಯೋಶುವನು ಅಪ್ಪಣೆ ಕೊಟ್ಟ ಮೇಲೆ ಆಚಾರ್ಯರು ಸಾಕ್ಷಿಯ ಪೆಟ್ಟಿಗೆಯನ್ನು ತೆಗದು ಕೊಂಡು, ಮುಂದೆ ನಡೆದು, ಸೈನ್ಯದವರು ಹಿಂದೆ ಬಂ

ದು, ಇಸ್ರಯೇಲ್ಯರು ಯೇಳು ದಿವಸ ಪಟ್ಟಣದ ಸುತ್ತು ಹೋಗುತ್ತಿದ್ದರು. ಯೇಳನೇ ದಿವಸದಲ್ಲಿ ಆಚಾರ್ಯರು ತುತೂರಿಗಳನ್ನೂದಿದರು. ಮತ್ತು ಯೋಶುವನು ಜನರಿಗೆ—ಯುದ್ಧಶಬ್ದವನ್ನು ಯೆತ್ತಿರಿ; ಕರ್ತನು ಈ ಪಟ್ಟಣವನ್ನು ನನ್ನ ಕೈಗೆ ಒಪ್ಪಿಸಿದ್ಧಾನೆ, ಯೆಂದನು. ಆಗಲಾದದ್ದೇನಂದರೆ—ಜನರು ತುತೂರಿಯ ಧ್ವನಿಯನ್ನು ಕೇಳಿ, ದೊಡ್ಡ ಯುದ್ಧಶಬ್ದವನ್ನು ಯೆತ್ತಿರಲಾಗಿ, ಯೆರಿಖೋ ಪಟ್ಟಣದ ಗೋಡೆಗಳು ಬಿದ್ದವು.



ಇಸ್ರಯೇಲ್ಯರು ಪಟ್ಟಣದಲ್ಲಿ ಪ್ರವೇಶಿಸಿ, ನಿವಾಸಿಗಳನ್ನು ಕೊಂದು ಹಾಕಿ, ಮನೆಗಳನ್ನು ಸುಟ್ಟು ಬಿಟ್ಟರು. ಈ ಪ್ರಕಾರ ಕಾನಾನ್ ದೇಶವನ್ನು ಆಳಿಕೊಂಡ ಮೂವತ್ತೊಂದು ಅರಸುಗಳು ಅಪಜಯವಾಗಿ ಸತ್ತು ಹೋಗುವ ಪರ್ಯಂತರ, ದೇವರು ಯೋಶುವನಿಗೆ ಸಹಾಯ ಮಾಡಿದನು. ಅಮೋರ್ಯರ ಐದು ಮಂದಿ ಅರಸರ ಸಂಗಡ ಗಿಬ್ಯೋನಿನಲ್ಲಿ ಮಹಾ ಯುದ್ಧ ಉಂಟಾದಾಗ, ಯೋಶುವನು ಕರ್ತನ ಸಂಗಡ ಮಾತಾಡಿ, ಜನಾಂಗದ ಸಂನಿಧಿಯಲ್ಲಿ—ಸೂರ್ಯನೇ ಗಿಬ್ಯೋನಿನಲ್ಲಿಯೂ, ಚಂದ್ರನೇ ಅಯಲೋನ ತಗ್ಗಿನಲ್ಲಿಯೂ, ನಿಂತಿರಿ ಯೆಂದನು. ಆಗಲು ಜನಾಂಗವು ತನ್ನ ಶತ್ರುಗಳಿಗೆ ಮುಯ್ಯಿಗೆ ಮುಯ್ಯಿ ತೀರಿಸುವ ಪರ್ಯಂತರ ಸೂರ್ಯಚಂದ್ರರು ನಿಂತರು. ಕರ್ತನು ಇಸ್ರಯೇಲಿಗೋಸ್ಕರ ಹೋರಾಡಿ, ಹಾಬ್ಬ ಮನುಷ್ಯನ ಶಬ್ದವನ್ನು ಆಲೈಸಿದ ಆ ದಿನದ ಹಾಗೆ ಬೇರೆ ಯಾವದೂ ಇದ್ದಿಲ್ಲ. ಹೀಗಿರಲಾಗಿ ದೇವರು ಅಮೋರ್ಯರ ಮೇಲೆ ದೊಡ್ಡ ಕಲ್ಲುಮಳೆಯನ್ನು ಬೀಳ ಮಾಡಿ, ಇಸ್ರಯೇಲ್ಯರು ಕೊಂದವರಿಗಿಂತ



ಬಹು ಹೆಚ್ಚಾದ ಜನರನ್ನು ಕಲ್ಲುಮಳೆಯಿಂದ ಸಂಹಾರಿಸಿದನು. ಕೆಲವು ವರ್ಷದ ಮೇಲೆ ಯೋಷುವನು ತನ್ನ ಸ್ವಾಧೀನ ಮಾಡಿದ ದೇಶವನ್ನು ಹನ್ನೆರಡು ಗೋತ್ರಗಳಿಗೆ ಹಂಚಿ ಕೊಟ್ಟನು. ರೂಬೇನ್ ಗಾದ್ ಅರ್ಧಮನಸ್ಸೆ ಯೆಂಬ ಗೋತ್ರಗಳು ಯೊರ್ದಾನ್ ನದಿಯ ಆಚೆಯಲ್ಲಿ ವಾಸ ಮಾಡಿದವು. ಆದರೆ ಲೇವಿ ಗೋತ್ರಕ್ಕೆ ಪ್ರತ್ಯೇಕವಾದ ಭೂಮಿ ಸಿಕ್ಕಲಿಲ್ಲ. ಈ ಗೋತ್ರದ ಪಟ್ಟಣಗಳು ಬೇರೆ ಗೋತ್ರಗಳ ಭಾಗಗಳಲ್ಲಿ ಇದ್ದವು. ಪರಿಶುದ್ಧ ಗುಡಾರದಲ್ಲಿರುವ ಸಾಕ್ಷಿಪೆಟ್ಟಿಗೆಯು ಶಿಲೋವಿನಲ್ಲಿ ಇಡಲ್ಪಟ್ಟಿತು.

ಯೋಷುವನು ನೂರಹತ್ತು ವರ್ಷದವನಾಗಿದ್ದು, ಯೆಲ್ಲಾ ತೀರಿಸಿದ ಮೇಲೆ, ಸಮಸ್ತ ಇಸ್ರಯೇಲ್ಯರನ್ನು ದೇವಸಭೆಯಾಗಿ ಶಿಖೇಮಿನಲ್ಲಿ ಕೂಡಿಸಿ, ಕಡೇ ಸಾರಿ ಅವರ ಸಂಗಡ ಮಾತಾಡಿ, ದೇವರು ಅವರಿಗೆ ಮಾಡಿದ ಸಮಸ್ತ ಉಪಕಾರಗಳನ್ನು ಅವರ ಜ್ಞಾಪಕಕ್ಕೆ ತಂದು, ಆತನಿಗೆ ಸತ್ಯದಿಂದ ವಿಧೇಯರಾಗಿರ ಬೇಕೆಂದು ಯೆಚ್ಚರಿಸಿ ಹೇಳಿದ್ದು—ಕರ್ತನಿಗೆ ಭಯ ಪಟ್ಟು, ಮೋಶೆಯ ನ್ಯಾಯಗ್ರಂಥಗಳಲ್ಲಿ ಬರದದ್ದೆಲ್ಲಾ ಹಿಡಿದು ಕೊಳ್ಳಲಿಕ್ಕೆ ಜಾಗ್ರತೆಯಾಗಿರ್ರಿ. ಕರ್ತನಿಗೆ ಹತ್ತಿ ಕೊಂಡು, ಬೇರೆ ಜನಾಂಗಗಳ ದೆವ್ವಗಳಿಗೆ ಆರಾಧನೆ ಮಾಡದೆ ಇರ್ರಿ. ಕರ್ತನಿಗಿಂತ ಉತ್ತಮ ದೇವರು ನಿಮಗೆ ಸಿಕ್ಕಿದರೆ, ಸೇವೆ ಮಾಡಲಿಕ್ಕೆ ಯೋಗ್ಯನಾಗಿರುವವನನ್ನು ಇಂದು ಆರಿಸಿರಿ. ಆದರೆ ನಾನೂ ನನ್ನ ಮನೆಯವರೂ ಕರ್ತನಿಗೆ ಸೇವೆ ಮಾಡುತ್ತೇವೆ. ಆಗ್ಯೆ—ಕರ್ತನನ್ನು ಬಿಟ್ಟು ಬೇರೆ ದೇವರುಗ

ಳಿಗೆ ಸೇವೆ ಮಾಡುವದು ನಮಗೆ ದೂರವಾಗಿರಲಿ, ಯೆಂದು ಸಮಸ್ತ ಜನಾಂಗವು ಹೇಳಿತು.

---

೩೨. ನ್ಯಾಯಾಧಿಪತಿಗಳು.

ಯೋಷುವನು ಸತ್ತು ಹೋದ ಮೇಲೆ ಇಸ್ರಾಯೇಲ್ಯರು ತಾವು ಕೊಟ್ಟ ಮಾತಿನ ಪ್ರಕಾರ ನಡೆಯದೆ, ಅನೇಕ ಸಾರಿ ಬೇರೆ ದೇವರುಗಳಿಗೆ ಪತ್ತಿ ಕೊಂಡದರಿಂದ, ಕರ್ತನು ಅವರನ್ನು ಅವರ ಶತ್ರುಗಳ ಕೈಗೆ ಒಪ್ಪಿಸಿ ಕಾಡುತ್ತಿದ್ದನು. ಅವರು ಮಾನಸಾಂತರ ಪಟ್ಟ ಕೂಡಲೇ ದೇವರು ಶೂರರನ್ನೂ ನ್ಯಾಯಾಧಿಪತಿಗಳನ್ನೂ ಅವರಲ್ಲಿ ಯೆಬ್ಬಿಸಿ, ಅವರಿಗೆ ಸಂರಕ್ಷಣೆ ಮಾಡುತ್ತಿದ್ದನು. ಈ ನ್ಯಾಯಾಧಿಪತಿಗಳು ಒಂದು ಗೋತ್ರವನ್ನಾಗಲಿ ಕೆಲವು ಗೋತ್ರಗಳನ್ನಾಗಲಿ ಪರಿಪಾಲನೆ ಮಾಡಿದಾಗ್ಯೂ, ಸಕಲ ಗೋತ್ರಗಳಿಗೆ ಐಕ್ಯವು ಇಲ್ಲದದರಿಂದ, ತಮಗೆ ಅರಸನು ಬೇಕೆಂದು ತಿಳುಕೊಂಡರು.

ಮಿದ್ಯಾನ್ಯರು ಅವರ ಮಂದೆಗಳನ್ನು ಹೊಡಕೊಂಡು, ಅರಣ್ಯದಿಂದ ಕಾನಾನ್ ದೇಶದಲ್ಲಿ ಸೇರಿ, ಹೊಲಗಳನ್ನು ಸುಲುಕೊಂಡು, ದನಗಳನ್ನು ಕೊಳ್ಳೆ ಮಾಡಿ, ಯೇಳು ವರ್ಷ ಪರ್ಯಂತರ ಪ್ರತಿವರ್ಷ ದೇಶದಲ್ಲಿ ಬಿದ್ದಾಗ್ಯೂ, ಯೆದುರಿಗೆ ನಿಂತು ಯುದ್ಧ ಮಾಡುವವರು ಯಾರೂ ಇದ್ದಿಲ್ಲ. ಆಗಲು ದೇವರು ಮನಸ್ಸೆಗೋತ್ರದಲ್ಲಿ ಒಬ್ಬ ಯೌವನಸ್ಥನನ್ನು ಯೆಬ್ಬಿಸಿದನು. ಹ್ಯಾಗಂದರೆ, ಕರ್ತನ ದೂತನು ಅವನಿಗೆ—ಪರಾಕ್ರಮಶಾಲಿಯೇ, ಕರ್ತನು ನಿನ್ನ ಸಂಗಡ ಇದ್ದಾನೆ, ಯೆಂದನು. ಗಿದ್ಯೋನನು ಪ್ರತ್ಯುತ್ತರವಾಗಿ—ಕರ್ತನು ನನ್ನ ಸಂಗಡ ಇದ್ದರೆ, ಈ ಕಷ್ಟವೆಲ್ಲಾ ನಮ್ಮ ಮೇಲೆ ಬಿದ್ದದ್ದು ಯಾಕೆ? ಇದಲ್ಲದೆ ನಮ್ಮ ಪಿತೃಗಳು ನಮಗೆ ಹೇಳಿದ ಆತನ ಅದ್ಭುತಕಾರ್ಯಗಳು ಯೆಲ್ಲಿ? ಯೆಂದನು. ಅದಕ್ಕೆ ಕರ್ತನು ಅವನನ್ನು ನೋಡಿ—ನಿನಗುಂಟಾದ ಈ ತ್ರಾಣದಿಂದಲೇ ಹೋಗು; ನೀನು ಇಸ್ರಾಯೇಲ್ಯರನ್ನು ಮಿದ್ಯಾನ್ಯರ ಕೈಯಿಂದ ತಪ್ಪಿಸುವಿ; ಈಗಾ, ನಿನ್ನನ್ನ ಕಳುಹಿಸಿದಾತನು ನಾನೇ, ಯೆಂದನು. ಗಿದ್ಯೋನನು

ಪ್ರಶ್ನೋತ್ತರವಾಗಿ—ನಾನು ಇಸ್ರಾಯೇಲ್ಯರನ್ನು ರಕ್ಷಿಸುವದು ಹ್ಯಾಗಾದೀತು? ನನ್ನ ಸಹೋದರರಲ್ಲಿ ಸಣ್ಣವನು ನಾನೇ; ಮನಸ್ಸೆ ಗೋತ್ರದ ವಂಶಗಳಲ್ಲಿ ಸಣ್ಣ ವಂಶವು ನನ್ನದೇ, ಯೆನಲಾಗಿ, ಕರ್ತನು—ಒಬ್ಬ ಮನುಷ್ಯನನ್ನು ಬಡಿಯುವ ಪ್ರಕಾರ ನೀನು ಮಿದ್ಯಾನ್ಯರನ್ನು ಬಡಿಯುವ ಹಾಗೆ ನಾನು ನಿನಗೆ ಸಹಾಯ ಮಾಡುವೆನೆಂದನು. ಗಿದ್ಯೋನನು ಆರಂಭ ಮಾಡಿ, ಬಾಳನ ಪೂಜಾಸ್ಥಳವಾದ ತನ್ನ ತಂದೆಯ ವಿಗ್ರಹತೋಪವನ್ನು ಕಡಿದು ಹಾಕಿ, ಬಹಳ ಧೈರ್ಯಮನಸ್ಸನ್ನು ತೋರಿಸಿದನು. ಯೇನಂದರೆ ಆ ದೈವಕ್ಕೆ ಪೂಜೆ ಮಾಡುವವರೆಲ್ಲರು ಅವನು ಮಾಡಿದ್ದನ್ನು ಕೇಳಿ, ಅವನನ್ನು ಕೊಂದು ಹಾಕಲಿಕ್ಕೆ ನೋಡಿದರು. ಆದರೆ ಗಿದ್ಯೋನನು—ನೀವು ಬಾಳನಿಗೋಸ್ಕರ ವ್ಯಾಜ್ಯವಾಡುವದು ಯಾಕೆ? ಅವನು ದೇವರಾದರೆ, ತನ್ನ ವ್ಯಾಜ್ಯವನ್ನು ತಾನೇ ನಿರ್ವಹಿಸಲಿ, ಯೆಂದನು.



ಆಗ ಗಿದ್ಯೋನನು, ತಾನು ಕಂಡ ದರ್ಶನವು ದೇವರಿಂದ ಬಂತೋ ಅಲ್ಲವೋ ಯೆಂದು, ನಿಶ್ಚೈಸುವ ಬಗ್ಗೆ ಒಂದು ಗುರುತು ತನಗುಂಟಾಗ ಬೇಕೆಂದು ಬೇಡಿ ಕೊಂಡು—ನಾನು ಒಂದು ಹೋತಿನ ಚರ್ಮವನ್ನು ನನ್ನ ಹೊಲದಲ್ಲಿ ಇಡುವೆನು; ಆ ಹೊಲದ ಮೇಲೆ ಬೀಳ ತಕ್ಕ ಮಂಜು ಬೆಳಿಗ್ಗೆ ಆ ತೊಗಲಿನಲ್ಲಿ ತೇರಿದ್ದಾದರೆ, ದೇವರು ಇಸ್ರಾಯೇಲ್ಯರನ್ನು ನನ್ನ ಕೈಯಿಂದ ತಪ್ಪಿಸುವನೆಂದು ತಿಳುಕೊಳ್ಳುವೆನೆಂದನು. ಮರುದಿವಸ ಬೆಳಿಗ್ಗೆ ಅವನು ಯೆದ್ದಾಗ, ಆ ತೊಗಲಿನಿಂದ ಮಂಜನ್ನು ಹಿಂಡಿ, ಅದರ ನೀರಿನಿಂ

ದ ಒಂದು ಪಾತ್ರೆಯನ್ನು ತುಂಬಿಸಿದನು. ಅದರ ಮೇಲೆ ಗಿದ್ಯೋನನು ಧೈರ್ಯ ಪಟ್ಟು—ಈ ಚರ್ಮದ ವಿಷಯದಲ್ಲಿ ಇನ್ನೊಮ್ಮೆ ಪರೀಕ್ಷೆ ಮಾಡುತ್ತೇನೆ; ಸಮಸ್ತ ಹೊಲದ ಮೇಲೆ ಮಂಜು ಬೀಳಲಿ; ಚರ್ಮ ಮಾತ್ರ ಒಣಗಿದ್ದಾಗಿರಲಿ, ಯೆಂದು ದೇವರಿಗೆ ಬೇಡಿ ಕೊಂಡನು. ಆ ರಾತ್ರಿಯಲ್ಲಿ ಚರ್ಮವು ಒಣಗಿದ್ದಾಗಿರುವ ಹಾಗೆಯೂ, ಹೊಲವೆಲ್ಲಾದರ ಮೇಲೆ ಮಂಜು ಬಿದ್ದಿರುವ ಹಾಗೆಯೂ, ಮಾಡಿ, ದೇವರು ಅವನಿಗೆ ಸಮ್ಮತಿಸಿದನು. ಆಗಲು ಗಿದ್ಯೋನನು ಯೆದ್ದು, ಮೇಲಿನ ದೇಶದಲ್ಲಿರುವ ಗೋತ್ರಗಳಿಂದ ಮೂವತ್ತೆರಡು ಸಾವಿರ ಜನರ ಸೈನ್ಯವನ್ನು ಕೂಡಿಸಿದನು. ಆದಾಗ್ಯೂ, ಭಯ ಪಡುವವರು ಮತ್ತೊಬ್ಬರಿಗೆ ಭಯ ಹುಟ್ಟಿಸದ ಹಾಗೆ ತಿರುಗಿ ಹೋಗಲಿ ಯೆಂದು, ದೇವರು ಕೊಟ್ಟ ಆಜ್ಞೆಯ ಪ್ರಕಾರ ಅವನು ಸಾರಿ ಹೇಳಿಸಿದ ಮೇಲೆ, ಇಪ್ಪತ್ತೆರಡು ಸಾವಿರ ಜನರು ಅವನನ್ನು ಬಿಟ್ಟು ಹೋದರು. ಆಗಲು ಕರ್ತನು ಗಿದ್ಯೋನನಿಗೆ—ನಿನ್ನ ಕಡೆ ಜನರು ಹೆಚ್ಚಾಗಿ ಉಳಿದಿದ್ದಾರೆ. ನಾನು ಅವರನ್ನು ನಿನಗೋಸ್ಕರ ಶೋಧಿಸುತ್ತೇನೆ, ಯೆಂದನು. ಆಮೇಲೆ ಗಿದ್ಯೋನನು ಮುನ್ನೂರು ಜನರ ಹೊರತಾಗಿ ಯೆಲ್ಲರನ್ನು ಕಳುಹಿಸಿ ಬಿಟ್ಟನು. ಯಾಕಂದರೆ ಹೀಗೆ ಮಾಡದಿದ್ದರೆ, ಇಸ್ರಾಯೇಲ್ಯರು ತಮ್ಮನ್ನು ತಾವೇ ಹೊಗಳಿ ಕೊಂಡು—ನಾವು ನಮ್ಮ ಕೈಯಿಂದಲೇ ನಮ್ಮನ್ನು ರಕ್ಷಿಸಿ ಕೊಂಡೆವೆಂದು ಹೇಳ್ಯಾರೆಂದು, ಕರ್ತನು ಹೇಳಿದನು. ತರುವಾಯ ಗಿದ್ಯೋನನು ತನ್ನ ಸಂಗಡ ಉಳಿದವರಾದ ಮುನ್ನೂರು ಜನರನ್ನು ಮೂರು ಗುಂಪಾಗಿ ಪ್ರತ್ಯೇಕಿಸಿ, ಒಬ್ಬೊಬ್ಬನಿಗೆ ಮಣ್ಣಿನ ಕೊಡದಲ್ಲಿಟ್ಟ ಉರಿಯುವ ಪಂಜನ್ನೂ ಒಂದು ತುತೂರಿಯನ್ನೂ ಕೊಟ್ಟನು. ಈ ಪ್ರಕಾರ ಅವರು ಮೂರು ಕಡೆಯಿಂದ ರಾತ್ರಿಯಲ್ಲಿ ಮಿದ್ಯಾನ್ಯರ ಪಾಳೆಯದೊಳಗೆ ಹೊಕ್ಕು—ಕರ್ತನ ಖಡ್ಗವೂ ಗಿದ್ಯೋನನೂ ಯೆಂದು ಪಕ್ಕನೇ ಕೂಗಿ, ಉರಿಯುವ ಪಂಜಗಳಿಂದಲೂ ತುತೂರಿಯ ಧ್ವನಿಯಿಂದಲೂ ಒಡೆದ ಕೊಡಗಳ ಶಬ್ದದಿಂದಲೂ ಶತ್ರುಗಳನ್ನು ನಿದ್ರೆಯಿಂದೆಚ್ಚರಿಸಿ, ಅವರು ತಮ್ಮೊಳಗೆ ಗಲಿಬಿಲಿಯಾಗಿ, ಸ್ನೇಹಿತರನ್ನು ವಿರೋಧಿಗಳೆಂದೆಣಿಸಿ ಕೊಂಡು, ತಮ್ಮನ್ನು ತಾವೇ ಹತ ಮಾಡುವ ಹಾಗೆ

ಭಯಭ್ರಾಂತರಾಗ ಮಾಡಿದರು. ಆದದರಿಂದ ಮಿದ್ಯಾನ್ಯರು ಓಡಿ ಹೋಗಿ, ಎಫ್ರಯೀಮ ಘಟ್ಟಗಳ ಮೇಲೆ ಇರುವ ಜನರ ಕೈಯಲ್ಲಿ ಬಿದ್ದರು. ಬಹಳ ಸಾವಿರ ಜನರು ಇಸ್ರಯೇಲ್ಯರಿಂದ ಹತವಾಗಿ, ಲೆಕ್ಕವಿಲ್ಲದ ಮಂದೆಗಳು ಕೊಳ್ಳೆಯಾದವು. ಗಿದ್ಯೋನನು ಜಯವನ್ನು ಹೊಂದಿ ತಿರುಗಿ ಬರುವಾಗ, ಇಸ್ರಯೇಲ್ಯರು ಅವನನ್ನು ಅರಸಾಗ ಮಾಡಲಿಕ್ಕೆ ಮನಸ್ಸಾಗಿದ್ದರು. ಆದರೆ ಗಿದ್ಯೋನನು—ಹಾಗಲ್ಲ, ದೇವರು ಒಬ್ಬನೇ ನಿಮ್ಮ ಯಜಮಾನನಾಗಿರಲಿ, ಯೆಂದನು.

---

೩೩. ರೂಥಳು.



ಅನೇಕ ಯುದ್ಧವೃತ್ತಾಂತಗಳ ಮೇಲೆ ಒಂದು ಊರಿನ ಮನೆಯವರ ವೃತ್ತಾಂತ ಬರುತ್ತದೆ. ನ್ಯಾಯಾಧಿಪತಿಗಳು ಆಳಿ ಕೊಳ್ಳುವ ಸಮಯದಲ್ಲಿ ಇಸ್ರಯೇಲ ದೇಶದಲ್ಲಿ ಬರ ಉಂಟಾಯಿತು. ಆಗಲು ಬೆಥ್ಲೆಹೇಮೆಂಬ ಊರಿನ ಒಬ್ಬ ಮನುಷ್ಯನು ತನ್ನ ಹೆಂಡತಿಯ ಸಂಗಡಲೂ ಇಬ್ಬರು ಕುಮಾರರ ಸಂಗಡಲೂ ಮೋವಾಬ್ಯರ ದೇಶದಲ್ಲಿ ವಾಸ ಮಾಡಲಿಕ್ಕೆ ಹೊರಟನು. ಆ ಕುಮಾರರು ಅಲ್ಲಿ ಮೋವಾಬ್ಯರ ಕುಮಾರ್ತೆಗಳಾದ ಅರ್ಪಾಳೂ ರೂಥಳೂ ಈ ಇಬ್ಬರನ್ನು ಮದುವೆ ಮಾಡಿ ಕೊಂಡರು. ನಹೊಮಿಯು, ತನ್ನ ಗಂಡನೂ ತನ್ನ

ಇಬ್ಬರು ಕುಮಾರರೂ ಸತ್ತು ಹೋದ ಮೇಲೆ, ದರಿದ್ರ ವಿಧವೆಯಾಗಿ ತನ್ನ ಸೊಸೆಯರನ್ನು ಕರಕೊಂಡು, ತನ್ನ ದೇಶಕ್ಕೆ ತಿರುಗಿ ಹೋಗಲಿಕ್ಕೆ ಹೊರಟು, ಮಾರ್ಗದಲ್ಲಿರುವಾಗ, ಆಕೆಯು ಸೊಸೆಯರಿಗೆ—ನೀವು ನಿಮ್ಮ ದೇಶದಲ್ಲಿ ನಿಲ್ಲಿರಿ, ಯೆಂದು ಹೇಳಿದದರಿಂದ, ಅರ್ಪಳು ತಿರುಗಿ ಹೋದಳು. ರೂಥಳು ಅವಳ ಮಾತನ್ನು ಕೇಳಿ—ನನಗೆ ನಿವಾರಿಸ ಬೇಡ. ನೀನು ಹೋಗುವಲ್ಲಿಗೆ ನಾನು ಬರುತ್ತೇನೆ. ನಿನ್ನ ಜನಾಂಗವೇ ನನ್ನ ಜನಾಂಗವು. ನಿನ್ನ ದೇವರೇ ನನ್ನ ದೇವರು. ನೀನು ಸಾಯುವಲ್ಲಿ ನಾನು ಸಾಯುತ್ತೇನೆ ಯೆಂದಳು. ಈ ಪ್ರಕಾರ ನವೊಮಿಯು ಬೆಥ್ಲೆಹೇಮಿನಲ್ಲಿ ಸೇರುವಾಗ, ಜನರು ಅವಳ ಗುರ್ತು ತಿಳಿಯದೆ—ಇವಳು ನವೊಮಿಯೋ ಯೆಂದು ಕೇಳಿದರು. ಅವಳು—ನನಗೆ ಇನ್ನು ಮೇಲೆ ನವೊಮಿ ಯೆಂಬ ಹೆಸರು ಬೇಡ; ಯೇನಂದರೆ ನವೊಮಿ ಯೆಂಬ ಮಾತಿನ ಅರ್ಥವು ಸಂತೋಷ ಪಡುವವಳು. ನನಗೆ ದುಃಖವುಳ್ಳವಳೆಂಬ ಅರ್ಥವಾದ ಮಾರಳೆಂಬ ಹೆಸರನ್ನಿಡಿರಿ. ಯಾತಕ್ಕಂದರೆ ಐಶ್ವರ್ಯವುಳ್ಳವಳಾಗಿ ಹೊರಟೆನು; ದರಿದ್ರಳಾದ ನನ್ನನ್ನು ದೇವರು ತಿರುಗಿ ಕರಕೊಂಡು ಬಂದಿದ್ದಾನೆ, ಯೆಂದಳು. ಆಗಲು, ಸುಗ್ಗಿಯ ಪೈರಿನ ಸಮಯವಾಗಿರುವದರಿಂದ, ರೂಥಳು ತೆನೆಗಳನ್ನು ಕೂಡಿಸುವದಕ್ಕೆ ಹೊಲಗಳಿಗೆ ಹೋಗುತ್ತಿದ್ದಳು. ಆಗ್ಗೆ ದೇವರು ಅವಳನ್ನು ಸತ್ತು ಹೋದ ತನ್ನ ಗಂಡನಿಗೆ ನೆಂಟನಾದ ಐಶ್ವರ್ಯವುಳ್ಳ ಒಬ್ಬ ಮನುಷ್ಯನ ಪೈರು ಕೊಯ್ಯುವ ಜನರ ಹತ್ತರ ಬರ ಮಾಡಿದನು. ಬೊವಾಜನೆಂಬ ಆ ಮನುಷ್ಯನು ಪೈರು ಕೊಯ್ಯುವ ತನ್ನ ಜನರು ಇರುವ ಹೊಲಕ್ಕೆ ಬಂದು, ಆ ಹೆಣ್ಣು ಯಾರೆಂದು ಕೇಳಿದನು. ತರುವಾಯ ರೂಥಳ ಸಂಗಡ ಪ್ರೀತಿಯಿಂದ ಮಾತಾಡಿ—ನಿನ್ನ ಗಂಡನು ಸತ್ತು ಹೋದ ಮೇಲೆ ನೀನು ನಿನ್ನ ಅತ್ತೆಗೆ ಮಾಡಿದ್ದನ್ನು ನಾನು ತಿಳಿದಿದ್ದೇನೆ. ನೀನು ಇಸ್ರಯೇಲಿನ ದೇವರ ಬಳಿಗೆ ಬಂದದರಿಂದ, ಆತನು ನಿನ್ನ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವನೆಂದು ಹೇಳಿ, ತನ್ನ ಜನರಿಗೆ—ನೀವು ಆ ಮೊವಾಬ್ಯಳಿಗೆ ಪ್ರೀತಿ ತೋರಿಸಿ, ಬಹಳ ತೆನೆಗಳನ್ನು ಅವಳಿಗೆ ಬಿಡಿರಿ, ಯೆಂದು ಆಜ್ಞಾಪಿಸಿದನು.

ರೂಥಳು ಆದದ್ದೆಲ್ಲವನ್ನು ತನ್ನ ಅತ್ತೆಗೆ ಹೇಳಿದಳು. ಆಕೆಯು ಪ್ರತ್ಯುತ್ತರವಾಗಿ—ಅವನು ನಮಗೆ ನೆಂಟನು. ಅವನು ಜೀವಿತರಿಗೂ ಸತ್ತವರಿಗೂ ಮಾಡಿದ ಉಪಕಾರಕ್ಕೋಸ್ಕರ ದೇವರು ಅವನನ್ನು ಆಶೀರ್ವದಿಸಲಿ, ಯೆಂದಳು.

ಬೋವಾಜನು ದರಿದ್ರಳಾದ ರೂಥಳ ಒಳ್ಳೇ ನಡತೆಯನ್ನು ಪೈರಿನ ಸಮಯದಲ್ಲಿ ನೋಡಿದದರಿಂದ, ಅವಳ ಮೇಲೆ ಪ್ರೀತಿ ಇಟ್ಟನು. ಆದರೆ, ಇಸ್ರಯೇಲ್ಯರಲ್ಲಿ ಮದುವೆ ಮಾಡಿ ಕೊಂಡವನೊಬ್ಬನು ಮಕ್ಕಳು ಇಲ್ಲದವನಾಗಿ ಸತ್ತು ಹೋದರೆ, ಅವನ ತಮ್ಮನಾಗಲಿ, ಬೇರೆ ಕುಟುಂಬದವನಾಗಲಿ, ಒಬ್ಬ ನೆಂಟನು ಆ ವಿಧವೆಯನ್ನು ಮದುವೆ ಮಾಡಿ ಕೊಳ್ಳ ಬೇಕೆಂಬ ಮರ್ಯಾದೆ ನಡದು ಬರುತ್ತಿತ್ತು. ಹೀಗಿರಲಾಗಿ ಅವಳಿಗೆ—ಇವನ ಹತ್ತರ ಹೋಗಿ—ನೀನು ನನ್ನನ್ನು ಮದುವೆ ಮಾಡಿ ಕೋ ಯೆಂದು ಹೇಳುವದು ನ್ಯಾಯವಾಗಿತ್ತು. ಆದ ಕಾರಣ ಅವಳು ಅತ್ತೆ ಬೋಧಿಸಿದ ಪ್ರಕಾರವೂ ಆ ದೇಶದ ಮರ್ಯಾದೆಯ ಪ್ರಕಾರವೂ ಬೋವಾಜನ ಹತ್ತರ ಮಾತಾಡಿದದರಿಂದ, ಪೈರು ತೀರಿದಾಗಲೇ ಮದುವೆಯಾಯಿತು.

ಆ ಮೋವಾಬ್ಯಳಾದ ದರಿದ್ರ ಕುಮಾರ್ತೆಯು ಮುಂದಿನ ಅನೇಕ ಕಥೆಗಳಿಗೆ ಕಾರಣವಾಗುವ ದೊಡ್ಡ ಅರಸನ ಅಜ್ಜಿಯಾದಳು. ಹ್ಯಾಗಂದರೆ ದೇವರ ಆಶೀರ್ವಾದದಿಂದ ಅವಳು ಓಬೇದನೆಂಬ ಮಗನನ್ನು ಹೆತ್ತಳು. ಓಬೇದನು ದಾವೀದನೆಂಬ ಅರಸನ ತಂದೆಯಾದ ಇಸಾಯನನ್ನು ಪಡೆದನು.

---

೩೪. ಏಲಿಯೂ ಸಮುವೇಲನೂ.

ಅನೇಕ ಮಂದಿ ಶೂರರು ಇಸ್ರಯೇಲ ಗೋತ್ರಗಳಿಗೆ ನ್ಯಾಯ ತೀರಿಸಿದ ಮೇಲೆ ಪ್ರಧಾನಯಾಜಕನಾದ ಏಲಿಯು ಇಸ್ರಯೇಲ್ಯರಿಗೆ ನ್ಯಾಯಾಧಿಪತಿಯಾದನು. ಮೋಶೆಯ ನ್ಯಾಯದ ಪ್ರಕಾರ ಪ್ರಧಾನಯಾಜಕರು ಯಾವಾಗಲೂ ನ್ಯಾಯಾಧಿಪತಿಗಳಾಗಿರ ಬೇಕಾಯಿತು. ಸಾಕ್ಷಿಯ ಗುಡಾರವು

ಶಿಲೋವಿನಲ್ಲಿ ನಿಂತದರಿಂದ, ಇಸ್ರಾಯೇಲ್ಯರು ಹಬ್ಬಕ್ಕೋಸ್ಕರ ಅಲ್ಲಿ ಕೂಡಿ ಬರುತ್ತಿದ್ದರು. ಒಂದು ದಿವಸದಲ್ಲಿ ಎಲಿಯು ಗುಡಾರದ ಪ್ರಾಕಾರದಲ್ಲಿ ಪ್ರಾರ್ಥನೆ ಮಾಡುವ ಸ್ತ್ರೀಯನ್ನು ಕಂಡನು. ಅವಳು ಕೈಗಳನ್ನು ಮುಗಿಯುತ್ತಾ, ತುಟಿಗಳನ್ನು ಅಲ್ಲಾಡಿಸುತ್ತಾ, ಒಂದು ಮಾತಾದರೂ ಉಚ್ಚರಿಸದೆ ಇರುವದನ್ನು ನೋಡಿದನು. ಯಾತಕ್ಕಂದರೆ ಅವಳು ತನ್ನ ಹೃದಯದಲ್ಲೇ ಪ್ರಾರ್ಥನೆ ಮಾಡುತ್ತಿದ್ದಳು. ಆದರೆ ಎಲಿಯು, ಆ ಸ್ತ್ರೀಯು ಭೋಜನ ಮಾಡಿ ಬಂದದರಿಂದ, ಅಮಲು ಹತ್ತಿರುತ್ತಾಳೆಂದು ನೆನಸಿ ಕೊಂಡು, ಅವಳಿಗೆ ಗದರಿಸಿ, ಪ್ರಧಾನ ಯಾಜಕನಿಗೆ ಅಯೋಗ್ಯವಾದ ರೀತಿಯಾಗಿ ಆ ದರಿದ್ರಳಾದ ದುಃಖವುಳ್ಳ ಸ್ತ್ರೀಗೆ ಬಹಳ ಅನ್ಯಾಯ ಮಾಡಿದನು. ಯೇನಂದರೆ ಅವಳು ಮದುವೆಯಾಗಿ ಬಹಳ ವರ್ಷ ಒಂದು ಮಗುವನ್ನಾದರೂ ಹೊರದೆ ಇದ್ದದರಿಂದ, ದೇವರಿಗೆ ಪ್ರಾರ್ಥನೆ ಮಾಡಿ, ತನಗೆ ಮಗು ಆಗ ಬೇಕೆಂದು ಬೇಡಿ ಕೊಳ್ಳುತ್ತಿದ್ದಳು. ಎಲಿಯು ಇದನ್ನು ತಿಳಕೊಂಡ ಮೇಲೆ ಆ ಸ್ತ್ರೀಗೆ—ನೀನು ಸಮಾಧಾನದಿಂದ ಹೋಗು. ಇಸ್ರಾಯೇಲ್ಯರ ದೇವರು ನಿನ್ನ ವಿಜ್ಞಾಪನೆಯನ್ನು ಪೂರ್ತಿ ಮಾಡುವನೆಂದನು. ಹನ್ನಳು ತನ್ನ ಹೃದಯವನ್ನು ದೇವರ ಮುಂದೆ ಚೆಲ್ಲಿದದರಿಂದ, ದುಃಖವನ್ನು ಬಿಟ್ಟು ಹೋದಳು. ದೇವರು ಅವಳ ಪ್ರಾರ್ಥನೆಯನ್ನು ಪೂರ್ತಿ ಮಾಡಿ, ಅವಳಿಗೆ ಒಬ್ಬ ಮಗನನ್ನು ಕೊಟ್ಟನು. ಆ ಮಗನಿಗೆ ಅವಳು, ದೇವರು ಪ್ರಾರ್ಥನೆ ಕೇಳಿದ್ದಾನೆಂಬ ಅರ್ಥವಾದ, ಸಮುವೇಲನೆಂಬ ಹೆಸರನ್ನು ಇಟ್ಟಳು.



ಕೆಲವು ವರ್ಷಗಳ ಮೇಲೆ ಅವನ ತಂದೆತಾಯಿಗಳು ಈ ಹುಡುಗನನ್ನು
ಕರಕೊಂಡು, ಹಬ್ಬಕ್ಕೋಸ್ಕರ ಶೀಲೋವಿಗೆ ಬಂದಾಗ, ಅವನ ತಾಯಿ ಅವನನ್ನು
ಯಾಜಕನ ಕೈಗೆ ಒಪ್ಪಿಸಿ ಕೊಟ್ಟಳು. ತರುವಾಯ ಅವರು ವರ್ಷವರ್ಷ ಹ
ಬ್ಬಕ್ಕೆ ಬರುವಾಗ, ಅವನು ಒಳ್ಳೆಯವನೆಂದು ತಿಳುಕೊಳ್ಳುತ್ತಿದ್ದರು. ಇದಲ್ಲದೆ
ಸ್ವಲ್ಪ ಕಾಲದ ಮೇಲೆ ದೇವರು ತಾನೇ ಹುಡುಗನ ಸಂಗಡ ಮಾತಾಡಿ, ಮುಂ
ದೆ ಆಗ ಬೇಕಾದ ಸಂಗತಿಯನ್ನು ಅವನಿಂದ ತಿಳಿಸಿದನು. ಪ್ರಧಾನಯಾಜಕನ
ಮಕ್ಕಳಾದ ಹಾಫ್ನಿಯೂ ಪಿನ್ಹಾಸನೂ ಮನಸ್ಸೋಯಿಚ್ಛೆಯಿಂದ ನಿಷ್ಪ್ರಯೋಜಕರಾ
ಗಿ, ದೇವರ ಮಂದಿರವನ್ನು ದುಷ್ಟತನದಿಂದ ಅಶುದ್ಧ ಮಾಡುತ್ತಿದ್ದರು. ಎಲಿ
ಯು ತನ್ನ ಮಕ್ಕಳನ್ನು, ಈ ಪ್ರಕಾರ ಮಾಡ ಬಾರದೆಂದು, ಶಿಕ್ಷಿಸಿ—ದೇವರಿ
ಗೂ ಮನುಷ್ಯರಿಗೂ ವಿರೋಧವಾಗಿ ನೀವು ಪಾಪ ಮಾಡುತ್ತೀರೆಂದು ಅವ
ರನ್ನು ಗದರಿಸಿದಾಗ್ಯೂ, ತನ್ನ ಮಕ್ಕಳ ಮೇಲೆ ಬಹಳ ಪ್ರೀತಿ ಇಡುವದರಿಂ
ದ ನ್ಯಾಯದ ಪ್ರಕಾರ ಅವರನ್ನು ದಂಡಿಸ ಮನಸ್ಸಿಲ್ಲದೆ ಹೋದನು. ಹೀ
ಗಿರಲಾಗಿ ದೇವರು ಒಂದು ರಾತ್ರಿಯಲ್ಲಿ—ಸಮುವೇಲನೇ! ಯೆಂದು ಕರೆದನು.
ಯೌವನಸ್ಥನು, ತನಗೆ ಎಲಿಯು ಕರದನೆಂದು, ನೆನಸಿ ಕೊಂಡು ಯೆದ್ದನು. ಆ
ದರೆ ಅವನು ಯೆರಡು ಮೂರು ಸಾರಿ ಆ ಶಬ್ದವನ್ನು ಕೇಳಿ, ಎಲಿಯ ಹತ್ತರ
ಬರುವಾಗ್ಯೆ, ಇವನು, ದೇವರು ಕರದನೆಂದು ತಿಳುಕೊಂಡು, ಸಮುವೇಲನಿಗೆ—
ಆ ಕರೆಯುವ ಶಬ್ದ ತಿರುಗಿ ಬಂದರೆ—ದೇವರೇ, ಅಪ್ಪಣೆ ಕೊಡು; ನಿನ್ನ ದಾಸ
ನು ಕೇಳುತ್ತಾನೆಂದು ಹೇಳು, ಯೆಂದನು. ಮತ್ತು—ಸಮುವೇಲನೇ! ಯೆಂದು
ದೇವರು ಕರೆಯುವ ಶಬ್ದವು ತಿರುಗಿ ಬರುವಾಗ, ಸಮುವೇಲನು—ಅಪ್ಪಣೆ
ಕೊಡು; ನಿನ್ನ ದಾಸನು ಕೇಳುತ್ತಾನೆಂದಾಗ, ದೇವರು—ಇಗೋ, ನಾನು ಇಸ್ರಾಯೇ
ಲಿನಲ್ಲಿ ಒಂದು ಗುರುತನ್ನು ತೋರಿಸುತ್ತೇನೆ; ಅದನ್ನು ಕೇಳುವವನಿಗೆ ಯೆರಡು
ಕಿವಿಗಳು ಜಿಗ್ರನ್ನುವವು. ಒಂದೇ ದಿವಸದಲ್ಲಿ ಎಲಿಯನ್ನೂ ಅವನ ಮಕ್ಕ
ಳನ್ನೂ ದಂಡಿಸುವೆನು. ಯಾಕಂದರೆ ಅವನು ಅವರ ದುಷ್ಟತನವನ್ನು ತಿಳಿ
ಕೊಂಡು, ಅವರಿಗೆ ಅಡ್ಡಿ ಮಾಡಲಿಲ್ಲವೆಂದನು.


ಮರುದಿವಸ ಉದಯದಲ್ಲಿ ಎಲಿಯು ಸಮುವೇಲನಿಗೆ—ಕರ್ತನು ನಿನ್ನ

ಸಂಗಡ ಮಾತಾಡಿದ್ದನ್ನೆಲ್ಲಾ ಒಂದೂ ಮಾಜದೆ ನನಗೆ ಹೇಳು, ಯೆನಲು, ಸಮುವೇಲನು ವ್ಯಸನ ಪಟ್ಟು, ಯೆಲ್ಲಾ ವಿವರಿಸಿದನು. ಏಲಿಯು, ದೇವರು ತನ್ನ ಮನಸ್ಸಿಗೆ ಬಂದ ಹಾಗೆ ಮಾಡಲಿ, ಯೆಂದನು. ದೇವರು ಹೆದರಿಸಿ ಹೇಳಿದ ಶಿಕ್ಷೆ ಬಂದದ್ದು ಹ್ಯಾಗಂದರೆ—ಕೆಲವು ದಿವಸದ ಮೇಲೆ ಯುದ್ಧ ಉಂಟಾಗಿ, ಫಿಲಿಷ್ಟ್ಯರು ಇಸ್ರಯೇಲ್ಯರನ್ನು ಒಡಗೊಂಡಿರುವದರಿಂದ, ಇಸ್ರಯೇಲ್ಯರ ಅಧಿಪತಿಗಳು ತಮ್ಮ ಜನರಿಗೆ ತಿರುಗಿ ಧೈರ್ಯವನ್ನು ಕೊಡುವದಕ್ಕಾಗಿ ಸಾಕ್ಷಿಪೆಟ್ಟಿಗೆಯನ್ನು ದಂಡಿನ ಮಧ್ಯಕ್ಕೆ ತರಿಸಿದರು. ಏಲಿಯ ಮಕ್ಕಳಾದ ಇಬ್ಬರು ಯೌವನಸ್ಥ ಯಾಜಕರು ಪೆಟ್ಟಿಗೆಯನ್ನು ಹೊತ್ತು ಕೊಂಡು ಹೋದರು. ತೊಂಬತ್ತೆಂಟು ವರ್ಷದವನಾದ ಏಲಿಯು ಮನೆಯ ಬಾಗಲ ಮುಂದೆ ಕೂತು ಕೊಂಡು, ವರ್ತಮಾನ ಕೇಳಲಿಕ್ಕೆ ನಿರೀಕ್ಷಿಸುತ್ತಿದ್ದನು. ಆಗ ವಸ್ತ್ರಗಳನ್ನು ಹರಕೊಂಡು ದುಖ್ಖಾತುರನಾದ ದೂತನು ಬಂದನು. ಏಲಿಯು, ದಂಡು ಹ್ಯಾಗೆ, ಯೆನಲು, ಆ ಮನುಷ್ಯನು—ಇಸ್ರಯೇಲ್ಯರು ಫಿಲಿಷ್ಟ್ಯರ ಮುಂದೆ ಓಡಿ ಹೋಗಿದ್ದಾರೆ; ನಿನ್ನ ಇಬ್ಬರು ಮಕ್ಕಳು ಸತ್ತು ಬಿದ್ದಿದ್ದಾರೆ; ಮತ್ತು ದೇವರ ಪೆಟ್ಟಿಗೆ ಕಳದು ಹೋಗಿದೆ, ಯೆಂದಾಗ, ಏಲಿಯು ಇದನ್ನು ಕೇಳಿ, ಭ್ರಮೆ ಪಟ್ಟು, ಅಂಗಾತಬಿದ್ದು, ಕೊರಳ ಮುರಿದು, ಸತ್ತು ಹೋದನು.



ಸಾಕ್ಷಿ ಪೆಟ್ಟಿಗೆಯನ್ನು ಫಿಲಿಷ್ಟ್ಯರು ಯೇಳು ತಿಂಗಳಾದ ಮೇಲೆ ತಿರುಗಿ ಕ

ಳುಹಿಸಿದರು. ಯಾಕಂದರೆ ವ್ಯಾಧಿಗಳು ಹೊರ್ತು ಅದರಿಂದ ಅವರಿಗೆ ಯೇನೂ ಪ್ರಯೋಜನ ಬರಲಿಲ್ಲ.



ಆದರೆ ಇಸ್ರಯೇಲ್ಯರನ್ನು ಅವರು ಇಪ್ಪತ್ತು ವರ್ಷ ಪರ್ಯಂತರ ಬಹಳವಾಗಿ ಶ್ರಮ ಪಡಿಸಿದರು.

ಆ ಮೇಲೆ ಸಮುವೇಲನು ತನ್ನ ಜನರನ್ನು ತಮ್ಮ ತಂದೆಗಳ ದೇವರ ಕಡೆಗೆ ತಿರುಗಿಸಿದಾಗ, ದೇವರು ಅವರಿಗೆ ತಿರುಗಿ ಸಹಾಯ ಮಾಡುವದರಿಂದ ಇಸ್ರಯೇಲ್ಯರು ಫಿಲಿಷ್ಟ್ಯರನ್ನು ಬಡಿದು, ಅವರು ಮುಂಚೆ ತೆಗದುಕೊಂಡ ಪಟ್ಟಣಗಳನ್ನು ತಿರುಗಿ ತಾವು ಗೆದ್ದು ಕೊಂಡರು. ಆದದರಿಂದ ಸಮುವೇಲನು ಫಿಲಿಷ್ಟ್ಯರ ಸೀಮೆಯ ಪ್ರಾಂತ್ಯದಲ್ಲಿ ನಿಲುಕಲ್ಲನ್ನಿಟ್ಟು, ಅದರ ಮೇಲೆ ಎಬೆನೇಜರೆಂದು ಬರೆದನು. ಈ ಮಾತಿನ ಅರ್ಥವೇನಂದರೆ—ಈವರೆಗೆ ದೇವರು ಸಹಾಯ ಮಾಡಿದ್ದಾನೆ. ತದನಂತರ ಸಮುವೇಲನು ಇಸ್ರಯೇಲಿನ ಶ್ರೇಷ್ಟ ನ್ಯಾಯಾಧಿಪತಿಯಾಗಿ ತನ್ನ ಜನರನ್ನು ನೀತಿಯಾಗಿಯೂ ಜಾಗ್ರತೆಯಾಗಿಯೂ ಆಳಿ ಕೊಳ್ಳುತ್ತಿದ್ದನು.

೩೫. ಸಮುವೇಲನೂ ಸೌಲನೂ.

ಸಮುವೇಲನು ಮುದುಕನಾಗಿದ್ದು, ತನ್ನ ಮಕ್ಕಳಿಗೆ ನ್ಯಾಯಾಧಿಪತಿಯ ಕೆಲಸದಲ್ಲಿ ಪಾಲನ್ನು ಕೊಟ್ಟನು. ಇವರು ದ್ರವ್ಯಾಶೆಯುಳ್ಳವರಾಗಿ, ಉತ್ತಮನಾದ ತಮ್ಮ ತಂದೆಯ ಹೆಜ್ಜೆಗಳಿಗೆ ಹತ್ತಿ ಕೊಳ್ಳದೆ ಇರುವದರಿಂದ, ಒಂದು ದಿವಸದಲ್ಲಿ ಸಮಸ್ತ ಇಸ್ರಯೇಲಿನ ಗೋತ್ರಗಳ ಹಿರಿಯರು ರಾಮದಲ್ಲಿರುವ ಸಮುವೇಲನ ಬಳಿಗೆ ಕೂಡಿ ಬಂದು — ಇನ್ನು ಮೇಲೆ ನ್ಯಾಯಾಧಿಪತಿಗಳಿಗೆ ಅಲ್ಲ, ಒಬ್ಬ ಅರಸನಿಗೆ ವಿಧೇಯರಾಗಿರಲಿಕ್ಕೆ ನಮಗೆ ಮನಸ್ಸುಂಟೆಂದರು. ಈ ಮಾತು ಸಮುವೇಲನಿಗೆ ಸರಿ ಬೀಳಲಿಲ್ಲ. ಆದರೆ ದೇವರು ಅವನಿಗೆ ಹೇಳಿದ್ದು — ಜನರ ಮಾತನ್ನು ಕೇಳು. ಯಾಕಂದರೆ ಅವರು ನಿನ್ನನ್ನಲ್ಲದೆ, ನನ್ನನ್ನೇ ತಿರಸ್ಕರಿಸಿ, ನಾನು ಅವರ ಮೇಲೆ ಅರಸನಾಗಿರ ಬೇಡವೆಂದು ಮಾಡಿ ಕೊಳ್ಳುತ್ತಾರೆ.

ಆ ವೇಳೆಯಲ್ಲಿ ಬೆನ್ಯಮೀನನ ಗೋತ್ರದವನಾದ ಕೀಷನೆಂಬ ಒಬ್ಬ ಮನುಷ್ಯನು ಕೆಲವು ಹೆಣ್ಣುಕತ್ತೆಗಳನ್ನು ಕಳಕೊಂಡದರಿಂದ, ಅವುಗಳನ್ನು ಹುಡುಕುವದಕ್ಕೆ ತನ್ನ ಮಗನಾದ ಸೌಲನನ್ನೂ ಒಬ್ಬ ಚಾಕರಿಯವನನ್ನೂ ಕಳುಹಿಸಿದನು. ಅವರು ಕೆಲವು ದಿವಸ ದೇಶವೆಲ್ಲಾ ಸಂಚರಿಸಿ, ಅವುಗಳನ್ನು ಹುಡುಕಿ ರಾಮ ಪಟ್ಟಣದ ಸಮೀಪಕ್ಕೆ ಬಂದಾಗ, ಆ ಚಾಕರಿಯವನು ಆ ಕತ್ತೆಗಳು ಯಲ್ಲಿ ಯೆಂದು ಪ್ರವಾದಿಯ ಹತ್ತರ ಕೇಳ ಬೇಕೆಂಬ ಆಲೋಚನೆಯ ಮಾಡಿದನು. ಅದೇ ಸಮಯದಲ್ಲಿ ಕರ್ತನು ಪ್ರವಾದಿಯಾದ ಸಮುವೇಲನಿಗೆ — ಇಗೋ, ಇವನು ನನ್ನ ಜನರನ್ನು ಆಳಿ ಕೊಳ್ಳಬೇಕೆಂದು ನಾನು ಹೇಳಿದ ಮನುಷ್ಯನಾಗಿದ್ದಾನೆಂದು ತಿಳಿಸಿದನು. ಸಮುವೇಲನು ಸೌಲನಿಗೆ ಸಂಗಡಲೇ — ಆ ಕತ್ತೆಗಳಿಗೋಸ್ಕರ ಚಿಂತೆ ಪಡ ಬೇಡ; ಅವು ಸಿಕ್ಕಿದವು; ಮತ್ತು ಇಸ್ರಯೇಲಿನಲ್ಲಿ ಉತ್ತಮವಾದದ್ದು ಯಾವನಿಗೆ ಪ್ರಾಪ್ತಿಯಾಗುವದು? ಯೆನಲು, ಸೌಲನು ಈ ಮಾತನ್ನು ತಿಳಿಯದೆ ಹೋದನು. ಮರುದಿವಸದಲ್ಲಿ ಆ ಪ್ರವಾದಿಯು ಅವನನ್ನು ಕರಕೊಂಡು ಹೋಗಿ, ಮಾರ್ಗದಲ್ಲಿ ಯಾರೂ ಇಲ್ಲದಿರುವಾಗ, ಯೆಣ್ಣೆಯ ಕೊಂಬನ್ನು ತೆಗದು,

ಅವನ ತಲೆಯ ಮೇಲೆ ಹೊಯಿದು, ಅವನಿಗೆ ಅಪ್ಪಿ ಕೊಂಡು—ಕರ್ತನು ನಿನ್ನನ್ನು ತನ್ನ ಸ್ವತಂತ್ರದ ಮೇಲೆ ಅರಸಾಗಲಿಕ್ಕೆ ಅಭಿಷೇಕಿಸಿದ್ದಾನೆಂಬುವದನ್ನು ನೋಡುತ್ತೀಯಾ? ಯೆಂದನು. ಆ ಸಂಗತಿಯನ್ನು ಸಮುವೇಲನು ಪ್ರಕಟ ಮಾಡುವ ಪರ್ಯಂತರ ಸೌಲನು ಯಾರಿಗೂ ಹೇಳದೆ ತನ್ನ ಮನೆಗೆ ಹೋದನು. ಕೆಲವು ದಿವಸಗಳಾದ ಮೇಲೆ ಪ್ರವಾದಿಯು ರಾಜ್ಯಸಭೆಯನ್ನು ಕೂಡಿಸಿ, ಜನರೆಲ್ಲರನ್ನು ಕರಸಿ, ಹೊಸ ಅರಸನನ್ನು ಅವರಿಗೆ ತೋರಿಸಿದನು. ಸೌಲನು ಉನ್ನತನೂ ಶ್ರೇಷ್ಠನೂ ಸೌಂದರ್ಯ ರೂಪವುಳ್ಳವನೂ ಆಗಿದ್ದನು. ಆದದರಿಂದ ಜನರೆಲ್ಲರು ಅವನನ್ನು ನೋಡುತ್ತಲೇ ಹರ್ಷಧ್ವನಿಯನ್ನು ಮಾಡಿದರು. ಸೌಲನು ಸ್ವಲ್ಪ ಕಾಲದಲ್ಲಿ ಪರಾಕ್ರಮಶಾಲಿಯಾಗಿ, ಶೂರಕೃತ್ಯಗಳನ್ನು ಮಾಡಿ, ಕೀರ್ತಿಯನ್ನು ಹೊಂದಿ, ಗಿಲ್ಯಾದನ್ನು ಅಮ್ಮೋನ್ಯರ ಕೈಯಿಂದ ರಕ್ಷಿಸಿ, ಸಮಸ್ತ ಇಸ್ರಾಯೇಲ್ಯರಿಗೆ ಉಪಕಾರಿಯಾದನು. ತದನಂತರ ಅಮಲೇಕ್ಯರ ಸಂಗಡ ಯುದ್ಧ ಮಾಡಿ, ಪಾಪದಲ್ಲಿ ಬಿದ್ದನು. ಹ್ಯಾಗಂದರೆ—ಯುದ್ಧವು ಆದ ಮೇಲೆ ಅವನು ದೇವರ ಆಜ್ಞೆಗೆ ವಿರೋಧವಾಗಿ ಮನುಷ್ಯರನ್ನೂ ಪಶುಗಳನ್ನೂ ನಾಶನ ಮಾಡದೆ, ಬಲಿಗೋಸ್ಕರ ಉಳಿಸಿದನು. ಆದದರಿಂದ ಸಮುವೇಲನು ಅವನ ಯೆದುರಾಗಿ ಬಂದು—ಕರ್ತನ ಶಬ್ದಕ್ಕೆ ವಿಧೇಯನಾಗಿರುವದಕ್ಕಿಂತ ನೀನು ಬಲಿಗಳನ್ನು ಅರ್ಪಿಸುವದು ದೇವರಿಗೆ ಸಮರ್ಪಕವಾಗಿರುವದೆಂದು ನೆನಸುತ್ತೀಯೋ? ಇಗೋ, ವಿಧೇಯತ್ವ



ವು ಬಲಿಗಿಂತ ಒಳ್ಳೇದು. ವಿಗ್ರಹಾರಾಧನೆಯೂ ಮಂತ್ರಕೆಲಸವೂ ಮೊದಲಾದವುಗಳ ಹಾಗೆಯೇ ಅವಿಧೇಯತ್ವವು ಪಾಪವಾಗಿರುವದೆಂದನು. ಅಂದಿನಿಂದ ಸೌಲನ ಅವಿಧೇಯತ್ವವೂ ಅಸಮಾಧಾನವೂ ಹೆಚ್ಚಿದ ಕಾರಣ ಕರ್ತನ ಆತ್ಮವು ಅವನನ್ನು ಬಿಟ್ಟು ಹೋಯಿತು.

---

೩೬. ಕುರುಬನಾಗಿರುವ ದಾವೀದನು.

ಸಮುವೇಲನು ಬೆತ್ಲೆಹೇಮಿನಲ್ಲಿ ಹಕ್ಕಲಾರಿಸಿದ ದರಿದ್ರಳಾದ ರೂಥಳ ವಂಶದವನಾದ ಇಷಾಯನ ಬಳಿಗೆ ಹೋದನು. ಯಾಕಂದರೆ ಕರ್ತನು ಅವನಿಗೆ—ಇಷಾಯನ ಕುಮಾರರಲ್ಲಿ ಒಬ್ಬನನ್ನು ಅರಸನಾಗ ನನಗೆ ಆರಿಸಿ ತೆಗದು ಕೊಂಡಿದ್ದೇನೆಂದು ತಿಳಿಸಿದನು. ಸಮುವೇಲನು ಬೆತ್ಲೆಹೇಮಕ್ಕೆ ಬಂದಾಗ, ಇಷಾಯನನ್ನೂ ಅವನ ಕುಮಾರರನ್ನೂ ಔತಣಕ್ಕೆ ಕರಸಿ, ಅವರನ್ನು ಪರಿಶೋಧಿಸಿ, ಕರ್ತನು ಆರಿಸಿದವನನ್ನು ಯೇಕಾಂತದಲ್ಲಿ ಅಭಿಷೇಕಿಸುವ ಆಲೋಚನೆಯಲ್ಲಿದ್ದನು. ಇಷಾಯನು ಯೇಳು ಮಂದಿ ಕುಮಾರರ ಸಂಗಡ ಬಂದನು. ಸಮುವೇಲನು ಅವರಲ್ಲಿ ಒಬ್ಬೊಬ್ಬನನ್ನು ದೃಷ್ಟಿಸಿ ಸಂಶೋಷಿಸಿದಾಗ್ಯೂ, ಒಬ್ಬೊಬ್ಬನನ್ನು ನೋಡುವಾಗ—ಇವನು ಕರ್ತನು ಆರಿಸಿದವನಲ್ಲವೆಂಬದನ್ನು ತನ್ನ ಮನಸ್ಸಿನಲ್ಲಿ ತಿಳಕೊಂಡನು. ಅದು ಕಾರಣ ಇಷಾಯನನ್ನು ನೋಡಿ—ನಿನ್ನ ಕುಮಾರರೆಲ್ಲರು ಇವರೇ ಸರಿಯೋ? ಯೆನಲು, ಅವರು ಹೊಲದಿಂದ ಕರೆಯದೆ ಕುರಿಗಳ ಹತ್ತರ ಉಳಿಸಿದ ಚಿಕ್ಕವನನ್ನು ಕರಸಿದರು. ಅವನು ಸೌಂದರ್ಯ ಕಣ್ಣೂ ವಾಳ್ಯೆ ರೂಪವೂ ಹೊಂಬಣ್ಣವೂ ಉಳ್ಳ ಯೌವನಸ್ಥನು. ಅವನು ಮನೆಯಲ್ಲಿ ಸೇರುವಾಗ್ಯೆ ಕರ್ತನು ಸಮುವೇಲನಿಗೆ—ನೀನು ಯೆದ್ದು ಇವನನ್ನೇ ಅಭಿಷೇಕಿಸು, ಯೆಂದನು. ಆಗಲು ಸಮುವೇಲನು ತನ್ನ ಯೆಣ್ಣೇಕೊಂಬು ತೆಗದು ಕೊಂಡು, ದಾವೀದನನ್ನು ಅವನ ಸಹೋದರರ ಮಧ್ಯದಲ್ಲಿ ಅಭಿಷೇಕಿಸಿದನು. ಅಂದಿನಿಂದ ಕರ್ತನ ಆತ್ಮವು ಅವನ ಮೇಲೆ ಬಿದ್ದು ಅವನಲ್ಲಿ ಸ್ಥಿರವಾಯಿತು. ಆದರೆ ಸೌಲನಿಂದ ಕರ್ತನ ಆ

ತ್ಮವು ಹೊರಟು ಹೋಯಿತು. ಆದದರಿಂದ ಅವನ ಸಮಾಧಾನವು ಕಡಮೆ ಕಡಮೆಯಾಗಿ ಹೋಯಿತು. ದಾವೀದನು ಇನ್ನೂ ಕೆಲವು ದಿವಸ ಮುಂದೆ ಮೇಯಿಸುವವನಾಗಿದ್ದ ಮೇಲೆ ಅರಸನು ಅವನನ್ನು ಕರಸಿ ಕೊಂಡನು. ಯಾತಕ್ಕಂದರೆ ದುರಾತ್ಮವು ಸೌಲನ ಮೇಲೆ ಬಂದಾಗ ಅವನನ್ನು ಸಂತೋಷ ಪಡಿಸುವದಕ್ಕೆ ವೀಣೆ ಬಾರಿಸಿ ಹಾಡುವವನೊಬ್ಬನು ಅವಶ್ಯವಾಗಿದ್ದಾ



ನೆಂದು ಚಾಕರಿಯವರು ನೋಡಿ, ಇಸಾಯನ ಮಗನು ಶೂರನಾದ ಬುದ್ಧಿಯುಳ್ಳ ಯೌವನಸ್ಥನೂ ಚಮತ್ಕಾರವಾಗಿ ಬಾರಿಸುವ ವೀಣೆಗಾರನೂ ಆಗಿದ್ದಾನೆಂದು ಹೇಳಿದರು. ಸೌಲನು ಅವರ ಮಾತನ್ನು ಕೇಳಿ, ವೀಣೆ ಬಾರಿಸುವದನ್ನೂ ಹಾಡುವದನ್ನೂ, ಹೊರತು ಯುದ್ಧದಲ್ಲಿ ತನ್ನ ಹತ್ತಿರ ಪರಾಕ್ರಮವನ್ನು ತೋರಿಸುವವನೊಬ್ಬನು ಇದ್ದರೆ, ಒಳ್ಳೇದೆಂದು ನೆನಸಿ ಕೊಂಡು, ದಾವೀದನನ್ನು ಕರಸಿ, ಅವನಿಗೆ ಶಸ್ತ್ರದಾಯಿಯ ಉದ್ಯೋಗವನ್ನು ಕೊಟ್ಟನು.

ಆ ಮೇಲೆ ಇಸ್ರಯೇಲ್ಯರು ಫಿಲಿಷ್ಟ್ಯರ ಸಂಗಡ ಯುದ್ಧ ಮಾಡುವ ಸಮಯದಲ್ಲಿ ದಾವೀದನು ತಿರುಗಿ ಬೆಥ್ಲೆಹೇಮಕ್ಕೆ ಬಂದನು. ಯಾಕಂದರೆ ಅವನ ಅಣ್ಣಂದಿರೆಲ್ಲರು ಸೌಲನ ಸೈನ್ಯದ ಸಂಗಡ ಹೊರಟು ಹೋಗಿದ್ದರು. ಆಗಲು ಇಸಾಯನು ದಾವೀದನನ್ನು ಸೈನ್ಯದಲ್ಲಿರುವ ತನ್ನ ಸಹೋ

ದರರನ್ನು ನೋಡುವ ಬಗ್ಗೆ ಕಳುಹಿಸಿದನು. ದಾವೀದನು ಪಾಳೆಯಕ್ಕೆ ಬಂದಾಗ, ಸೈನ್ಯವು ಯುದ್ಧಕ್ಕೆ ಸಿದ್ಧವಾಗಿರುವದನ್ನೂ, ಒಬ್ಬ ರಾಕ್ಷಸನಾದ ಮನುಷ್ಯನು ಫಿಲಿಷ್ಟ್ಯರ ಸೈನ್ಯದಿಂದ ಹೊರಟು ಬಂದು ನಿಂತು, ಇಸ್ರಯೇಲ್ಯರಿಗೆ ಕೂಗಿ—ನಿಮ್ಮಲ್ಲಿ ಶೂರನು ಇದ್ದರೆ, ನನ್ನ ಸಂಗಡ ಯುದ್ಧ ಮಾಡುವದಕ್ಕೆ ಬರಲಿ ಯೆಂದು ಹೇಳಿದ್ದನ್ನೂ, ಕೇಳಿ, ಆ ರಾಕ್ಷಸನನ್ನು ಯಾವನಾದರೂ ಕೊಂದು ಹಾಕಿದರೆ, ಅವನಿಗೆ ಅರಸನು ತನ್ನ ಮಗಳನ್ನು ಮದುವೆ ಮಾಡಿ ಕೊಟ್ಟು, ಅವನ ತಂದೆಯ ಮನೆಯವರಿಗೆ ಅವರು ಮಾಡುವ ಭೂಮಿಯನ್ನು ಉಂಬಳಿಯಾಗಿ ಬಿಟ್ಟು ಕೊಡುತ್ತೇನೆಂದು ಹೇಳಿದ ವರ್ತಮಾನವನ್ನೂ ಕೇಳಿದನು. ದಾವೀದನು ಅರಸು ಹೇಳಿದ ದಾನಗಳ ಮಾತನ್ನು ಮನಸ್ಸಿಗೆ ತಾರದೆ, ಆ ಫಿಲಿಷ್ಟ್ಯನ ಸಂಗಡ ಯುದ್ಧ ಮಾಡುವದಕ್ಕೆ ದೇವರಲ್ಲಿ ವಿಶ್ವಾಸವಿಡುವವನು ಇಸ್ರಯೇಲ್ಯರಲ್ಲಿ ಒಬ್ಬನೂ ಇಲ್ಲವೆಂದು ದುಃಖಪಟ್ಟನು. ಆದದರಿಂದ ಅವನು ಅರಸನ ಹತ್ತಿರ ಹೋಗಿ—ನಾನು ಆ ರಾಕ್ಷಸನನ್ನು ಕೊಂದು ಹಾಕುತ್ತೇನೆಂದು ಹೇಳಿದನು. ಸೌಲನು ಅವನ ಗುರ್ತು ತಿಳುಕೊಂಡು, ನಿವಾರಿಸಿ—ನೀನು ಹುಡುಗನಾಗಿದ್ಧಿ! ಆ ರಾಕ್ಷಸನು ಪ್ರಾಯಸ್ಥನಾದಾರಭ್ಯ ಯುದ್ಧದಲ್ಲೇ ಇದ್ಧಾನೆ, ಯೆನಲು, ದಾವೀದನು ಪ್ರತ್ಯುತ್ತರವಾಗಿ—ನಾನು ಮಂದೆ ಮೇಯಿಸುವಾಗ ಸಿಂಹ ಕರಡಿಗಳನ್ನು ಕೊಂದು ಹಾಕಿದೆನು. ನನ್ನನ್ನು ಸಿಂಹ ಕರಡಿಗಳ ಬಾಯಿಂದ ರಕ್ಷಿಸಿದ ನನ್ನ ದೇವರು ಈ ಫಿಲಿಷ್ಟ್ಯನ ಕೈಯಿಂದ ನನ್ನನ್ನು ರಕ್ಷಿಸನೇ? ಯೆಂದನು. ಆ ಮೇಲೆ ಸೌಲನು ತನ್ನ ಆಯುಧಗಳನ್ನು ತೆಗದು ಕೊಂಡು, ದಾವೀದನಿಗೆ ಧರಿಸ ಮಾಡಿ, ಅವನ ತಲೆಯ ಮೇಲೆ ಶಿರಸ್ತ್ರಾಣವನ್ನು ಇಟ್ಟು, ಅವನ ಮೈಗೆ ತನ್ನ ಕವಚವನ್ನು ತೊಡಿಸಿದನು. ಆದರೆ ದಾವೀದನು ಯೆಲ್ಲಾ ತೆಗದು ಹಾಕಿ, ತನ್ನ ಅಂಗಿ ಹೊರ್ತು ಮತ್ತೇನೂ ಧರಿಸದೆ, ಹೊಳೆಯಿಂದ ಐದು ಕೈಕಲ್ಲುಗಳನ್ನು ಆರಿಸಿ ತಂದು, ತನ್ನ ಕೋಲು ಕವಣೆಗಳನ್ನು ತಕ್ಕೊಂಡು, ಯುದ್ಧವಸ್ತ್ರವನ್ನೂ ಶಸ್ತ್ರಗಳನ್ನೂ ಧರಿಸಿ ಕೊಂಡ ರಾಕ್ಷಸನಿಗೆ ಯೆದುರಾಗಿ ಹೋದನು.

ಆ ರಾಕ್ಷಸನು ಇಸ್ರಾಯೇಲ್ಯರ ದಂಡಿನಿಂದ ವೊಬ್ಬ ಕುರುಬನಾದ ಹುಡುಗನು ಬರುವದನ್ನು ನೋಡಿ, ದೂಷಿಸಿ—ನಾನು ನಾಯಿ ಯೆಂದು ಕೋಲು ತೆಗದು ಕೊಂಡು ನನ್ನ ಹತ್ತರ ಬರುತ್ತೀಯೋ? ಬಾ! ನಿನ್ನ ಮಾಂಸವನ್ನು ಆಕಾಶದ ಪಕ್ಷಿಗಳಿಗೆ ತಿನ್ನ ಕೊಡುತ್ತೇನೆಂದನು. ದಾವೀದನು ಹೇಳಿದ್ದು—ನೀನು ಖಡ್ಗ ಭಲ್ಲೆ ಡಾಲುಗಳನ್ನು ತಕ್ಕೊಂಡು ಬರುತ್ತಿ. ನೀನು ಹಾಸ್ಯ ಮಾಡಿದ ದಂಡಿನ ಕರ್ತನಾಗಿರುವ ಇಸ್ರಾಯೇಲಿನ ದೇವರ ನಾಮದಲ್ಲಿ ನಾನು ನಿನ್ನ ಹತ್ತರ ಬರುತ್ತೇನೆ, ಯೆಂದನು. ಆ ಫಿಲಿಷ್ಟ್ಯನು ದಾವೀದನಿಗೆದುರಾಗಿ ಬರುವ ಸಮಯದಲ್ಲಿ ದಾವೀದನು ತ್ವರೆ ಪಟ್ಟು, ಒಂದು ಕಲ್ಲನ್ನು ಕವಣೆಯಲ್ಲಿಟ್ಟು, ಅವನ ಹಣೆಗೆ ಹೊಡೆದನು. ಆ ಗೊಲ್ಯಾಥನೆಂಬವನು ಮೋರೆ ಕೆಳಗಾಗಿ ಬಿದ್ದು, ತಿರುಗಿ ಯೇಳುವದಕ್ಕಿಂತ ಮುಂಚೆ ದಾವೀದನು



ಓಡಿ ಬಂದು, ಅವನ ಖಡ್ಗವನ್ನು ಯೆಳದು, ಅವನ ಖಡ್ಗದಿಂದಲೇ ಅವನ ತಲೆ ಕೊಯಿದನು. ಫಿಲಿಷ್ಟ್ಯರು ಇದನ್ನು ನೋಡಿ, ಭಯ ಪಟ್ಟು, ಓಡಿ ಹೋದರು. ಇಸ್ರಾಯೇಲ್ಯರು ಅವರನ್ನು ಅವರ ಪಟ್ಟಣಗಳ ಪರ್ಯಂತರ ಓಡಿಸಿದರು. ಸೌಲನು ದಾವೀದನನ್ನು ನೋಡಿ—ನಿನ್ನ ವಂಶವೇನೆಂದು ಕೇಳಿದನು. ಇವನು ಬೋವಾಚ್ ಸಲ್ಮ ನಹಸ್ಸೋನ್ ಈ ಮೊದಲಾದ ತನ್ನ ಘನವುಳ್ಳ ಹಿರಿಯರ ಹೆಸರುಗಳನ್ನು ಹೇಳದೆ—ನಾನು ಬೆಥ್ಲೆಹೇಮಿನವನಾದ ಇಶಾಯನೆಂಬ ನಿನ್ನ ಸೇವಕನ ಮಗನಾಗಿದ್ದೇನೆಂದನು. ದಾವೀದನು

ಈ ಮಾತುಗಳನ್ನು ಸೌಲನಿಗೆ ಹೇಳುವಾಗ, ಯೋನಥಾನನ ಹೃದಯವು ದಾವೀದನ ಹೃದಯಕ್ಕೆ ಕೂಡಿದದರಿಂದ ಯೋನಥಾನನು ದಾವೀದನನ್ನು ತನ್ನ ಪ್ರಾಣದ ಹಾಗೆ ಸ್ನೇಹಿಸಿದನು. ಆದದರಿಂದ ಈ ಅರಸನ ಮಗನು ತನ್ನ ಸ್ನೇಹಕ್ಕೆ ಬಹಿರಂಗವಾದ ಗುರ್ತಾಗಿ ಹಚ್ಚಡ ನಡುಕಟ್ಟು ಬಿಲ್ಲು ಖಡ್ಗಗಳನ್ನು ಆ ಶೂರನಾದ ಕುರುಬನಿಗೆ ಕೊಟ್ಟು ಬಿಟ್ಟನು. ಇದಲ್ಲದೆ ಸೌಲನು ದಾವೀದನನ್ನು ತನ್ನ ಸನ್ನಿಧಿಯಿಂದ ಹೋಗ ಗೊಡಿಸದೆ, ಅವನನ್ನು ಸೈನ್ಯಾಧಿಪತಿಗಳ ಮಧ್ಯದಲ್ಲಿ ಕೂಡ್ರಿಸಿದನು.

---

೩೭. ದಾವೀದನ ಹಿಂಸೆಯು.

ಆದರೆ ದಾವೀದನ ಸುಖವು ಬಹಳ ದಿವಸ ಸ್ಥಿರವಾಗಿರಲಿಲ್ಲ. ಇಸ್ರಯೇಲ್ಯರು ಫಿಲಿಷ್ಟ್ಯರನ್ನು ಜಯಿಸಿದ ಮೇಲೆ ಮನೆಗೆ ಬರುವಾಗ್ಯೆ, ಹೆಂಗಸರು ನಾಟ್ಯವಾಡಿ–ಸೌಲನು ಸಹಸ್ರವನ್ನು ದಾವೀದನು ಹತ್ತು ಸಹಸ್ರವನ್ನು ಹೊಡೆದನೆಂಬ ರಾಗವನ್ನು ಹಾಡಿದರು. ಅರಸನು ಇದನ್ನು ಕೇಳಿ, ಕೋಪಿಸಿ–ಇನ್ನು ಮೇಲೆ ರಾಜ್ಯವು ಅವನದಾಗುವದೆಂಬ ಭಯದಿಂದ ಜನರು ದಾವೀದನಿಗೆ ಹೆಚ್ಚು ಪ್ರೀತಿ ಮಾಡುವಾಗ ತಾನು ಹೆಚ್ಚು ಹಗೆ ಮಾಡಿ, ಕಡೆಯಲ್ಲಿ ಅವನ ಪ್ರಾಣವನ್ನು ತೆಗದು ಕೊಳ್ಳ ಬೇಕೆಂದು ನಿಶ್ಚೈಸಿ ಕೊಂಡನು. ಆದದರಿಂದ ದಾವೀದನು ಒಂದು ದಿವಸದಲ್ಲಿ ಅರಸ




ನ ಮುಂದೆ ವೀಣೆ ಬಾರಿಸುವ ಸಮಯದಲ್ಲಿ ಸೌಲನು ಅವನನ್ನು ಗುರಿ
ಇಟ್ಟು ಭಲ್ಲೆ ಯೆಸೆದನು. ದಾವೀದನು ಓಡಿ ಹೋದದರಿಂದ ಅವನ ಮ
ನೆಗೆ ಜನರನ್ನು ಕಳುಹಿಸಿ, ಅವನನ್ನು ಕೊಲ್ಲ ಬೇಕೆಂದು ಆಜ್ಞಾಪಿಸಿದನು.
ಆದರೆ ಸೌಲನ ಮಗಳಾದ ದಾವೀದನ ಹೆಂಡತಿಯಾದ ಮೀಕಳು ಅವ
ನನ್ನು ಕಿಟಿಕಿಯಿಂದ ಇಳಿಸಿ ರಕ್ಷಿಸಿದಳು. ಆಗಲು ದಾವೀದನು ಗೊಲ್ಯಾಥನ
ಖಡ್ಗವನ್ನು ತೆಗದು ಕೊಂಡು, ಫಿಲಿಷ್ಟ್ಯರ ಅರಸನ ಬಳಿಗೆ ಓಡಿ ಹೋದನು.
ಫಿಲಿಷ್ಟ್ಯರ ಶ್ರೇಷ್ಠರು ಆ ಖಡ್ಗವನ್ನು ನೋಡಿ, ಸಿಟ್ಟಿನಿಂದ ಉಬ್ಬಿ, ಅವನನ್ನು
ಕೊಂದು ಹಾಕುವ ಆಲೋಚನೆ ಮಾಡಿದದರಿಂದ ದಾವೀದನು ತಿರುಗಿ ತ
ನ್ನ ದೇಶಕ್ಕೆ ಬಂದನು. ಆಗಲು ಯೊನಥಾನನು ತನ್ನ ತಂದೆಯನ್ನು ಮುಂ
ಚೆ ಸಮಾಧಾನ ಪಡಿಸಿದ ಪ್ರಕಾರ ತಿರುಗಿ ಸೌಲನನ್ನೂ ದಾವೀದನನ್ನೂ
ಒಡಂಬಡಿಸಲಿಕ್ಕೆ ಪ್ರಯತ್ನ ಮಾಡಿದನು. ಅದು ವ್ಯರ್ಥವಾಯಿತು. ಯಾಕಂ
ದರೆ ಸೌಲನು ತನ್ನ ಮಗನನ್ನು ಕ್ರೂರ ಕಣ್ಣಿನಿಂದ ನೋಡಿ—ಅವನು ಹ್ಯಾ
ಗಾದರೂ ಸಾಯ ಬೇಕೆಂದು, ಹೇಳಿದನು. ಆದರೆ ಯೊನಥಾನನು ಅಂತ
ರಂಗದಲ್ಲಿ ದಾವೀದನ ಸಂಗಡ ಮಾತನಾಡಿ, ತಮ್ಮ ಸ್ನೇಹದ ಒಡಂಬಡಿಕೆ
ಯನ್ನು ತಿರುಗಿ ಸ್ಥಿರ ಪಡಿಸಿ, ಓಡಿ ಹೋಗ ಬೇಕೆಂದು ಅವನಿಗೆ ಆಲೋಚನೆ
ಹೇಳಿದನು. ದಾವೀದನು ಯೊನಥಾನನನ್ನು ಬಿಟ್ಟು ಯೆಹೂದ್ಯ ಘಟ್ಟಗ
ಳ ಗವಿ ಗುಹೆಗಳಲ್ಲಿ ವಾಸಿಸುತ್ತಿದ್ದನು. ಕೆಲವು ದಿವಸವಾದ ಮೇಲೆ ಆ
ರುನೂರು ಮಂದಿ ಯುದ್ಧಸ್ಥರೂ ಸೌಲನಿಂದ ಹಿಂಸೆ ಪಡುವ ದಾವೀದನ
ನೆಂಟರಿಷ್ಟರಾದ ಬಹಳ ಮಂದಿ ವೃದ್ಧರೂ ಸ್ತ್ರೀಯರೂ ಮಕ್ಕಳೂ ಅವನಿಗೆ
ಕೂಡಿ ಕೊಂಡರು. ಯಾಕಂದರೆ, ಪ್ರಧಾನಯಾಜಕನು ದಾವೀದನು ಸೌಲ
ನ ಮುಂದೆ ಓಡಿ ಹೋಗುವದನ್ನು ತಿಳಿಯದೆ ಅವನಿಗೆ ರೊಟ್ಟಿಯನ್ನೂ
ಗೊಲ್ಯಾಥನ ಖಡ್ಗವನ್ನೂ ಕೊಟ್ಟದರಿಂದ, ಸೌಲನು ಬಹಳ ಸಿಟ್ಟಿನಿಂದ ಆ
ಪ್ರಧಾನಯಾಜಕನನ್ನೂ ನಿರಪರಾಧಿಗಳಾದ ಯೆಂಭತ್ತನಾಲ್ಕು ಯಾಜಕರ
ನ್ನೂ ಸಹ ಕೊಲ್ಲಿಸಿ, ಇದು ಸಾಲದೆಂದು ನೆನಸಿ ಕೊಂಡು, ಯಾಜಕರ ಸಮ
ಸ್ತ ಪಟ್ಟಣವನ್ನು ಹಾಳು ಮಾಡಿ, ಪುರುಷರನ್ನೂ ಸ್ತ್ರೀಯರನ್ನೂ ಮಕ್ಕಳ

ನ್ನು ಕೊಲ್ಲಿಸಿ ಇದ್ದನು. ಅವರಲ್ಲಿ ಒಬ್ಬನು ತಪ್ಪಿಸಿ ಕೊಂಡು ದಾವೀದನ ಹತ್ತರ ಬಂದನು. ಅವನ್ಯಾರಂದರೆ ಆ ಮೇಲೆ ಪ್ರಧಾನಯಾಜಕನ ಉದ್ಯೋಗವನ್ನು ಪಡೆದ ಅಬ್ಯಾಥಾರನು. ದೇವರ ಆತ್ಮವು ಸೌಲನನ್ನು ಬಿಟ್ಟದರಿಂದ ಅವನಿಷ್ಟು ಕೆಟ್ಟವನಾದನು.

ದಾವೀದನು ಓಡಿ ಹೋದ ಸಮಯದಲ್ಲಿ ಯೊನಥಾನನು ಮುಂಚಿನ ಹಾಗೆ ಅವನಿಗೆ ಸತ್ಯ ಸ್ನೇಹಿತನಾಗಿದ್ದನು. ದಾವೀದನು ಸಹ ಯಾವಾಗಲೂ ಸೌಲನ ಮೇಲೆ ಭಕ್ತಿಯನ್ನೂ ಪ್ರೀತಿಯನ್ನೂ ಇಟ್ಟು, ಅವನು ತನ್ನ ಅರಸನೂ ಮಾವನೂ ತನ್ನ ಸ್ನೇಹಿತನ ತಂದೆಯೂ ಯೆಂದು ನೆನಪು ಮಾಡಿದನು. ಸೌಲನು ಯಾಜಕರನ್ನು ಕೊಂದು ಹಾಕಿದ ಕೆಲವು ದಿವಸಗಳ ತರುವಾಯ ಉತ್ತಮ ರಾಣುವೆಯವರಾದ ಮೂರು ಸಾವಿರ ಮಂದಿಯನ್ನು ಕೂಡಿಸಿ, ದಾವೀದನನ್ನು ಹಿಡಿಯುವದಕ್ಕೆ ಘಟ್ಟಗಳ ಮಾರ್ಗವಾಗಿ ಹೊರಟನು. ಒಂದು ದಿವಸ ಸೌಲನು ಒಂದು ಗವಿಯಲ್ಲಿ ಸೇರಿ, ಮಲಗಿ ಕೊಂಡಾಗ, ಅದೇ ಗವಿಯ ಒಳ ಭಾಗದಲ್ಲಿ ತನ್ನ ಜನರ ಸಂಗಡ ಅಡಗಿ ಕೊಂಡ ದಾವೀದನ ಯುದ್ಧಸ್ಥರು—ಇಗೋ! ಕರ್ತನು ನಿನ್ನ ಶತ್ರುವನ್ನು ನಿನ್ನ ಕೈಯಲ್ಲಿ ಕೊಟ್ಟಿರುವ ದಿವಸವು ಬಂತು, ಯೆನಲು, ದಾವೀದನು ಯೆದ್ದು, ಮೆಲ್ಲಗೆ ಜಾರಿ ಬಂದು, ಸೌಲನ ಅಂಗಿಯ ತುದಿಯನ್ನು ಕತ್ತರಿಸಿ ಕೊಂಡು ಹೋದನು. ಸೌಲನು ಹೊರಟು ಹೋದಾಗ, ದಾವೀದನು ಹಿಂದೆ ಬಂದು ಕೂಗಿ—ನನ್ನ ಕರ್ತನಾದ ಅರಸನೇ! ಇಗೋ, ದೇವರು ಈಹೊತ್ತು ನಿನ್ನನ್ನು ನನ್ನ ಕೈಯಲ್ಲಿ ಕೊಟ್ಟಾಗ್ಯೂ ನೀನು ತಪ್ಪಿ ಹೋದಿ. ನನ್ನ ತಂದೆಯೇ, ನಿನ್ನ ಅಂಗಿಯ ತುದಿಯನ್ನು ನನ್ನ ಕೈಯಲ್ಲಿ ನೋಡು! ಯೆಂದು ಹೇಳಿದನು. ಸೌಲನು ಅತ್ತು ಹಿಂದಿರುಗಿ, ದಾವೀದನಿಗೆ—ನೀನು ನನಗಿಂತ ನೀತಿವಂತನಾಗಿದ್ದಿ ಯೆಂದು ಹೇಳಿ, ನಾಚಿಕೆ ಪಟ್ಟು ಮನೆಗೆ ಹೋದನು. ಆದರೂ ಕೆಲವು ದಿವಸದ ಮೇಲೆ ತಿರುಗಿ ಅವನಿಗೆ ವಿರೋಧವಾಗಿ ಹೊರಟು ಹೋದಾಗ, ದಾವೀದನೂ ಅಬಿಷಾಯನೂ ರಾತ್ರಿ ಹೊತ್ತು ಅರಸನ ದಂಡಿನೊಳಗೆ ಹೊಕ್ಕರು. ದಾವೀದನು ಅರಸನ ಭಲ್ಲೆಯನ್ನೂ ನೀರು ತಂಬಿಗೆ

ಯನ್ನೂ ಅವನ ತಲೆಯ ಕಡೆಯಿಂದ ತೆಗದು ಕೊಂಡು ಹೋದನು. ಅ



ವರಿಬ್ಬರು ತಮ್ಮ ಯೆತ್ತರವಾದ ಬಂಡೆಗೆ ತಿರುಗಿ ಬಂದನಂತರ ದಾವೀದನು ದಂಡಿಗೆದುರಾಗಿ ನಿಂತು—ಅಬ್ನೇರನೇ, ಅಬ್ನೇರನೇ! ಯೆಂದು ಕೂಗಿದನು. ಆ ಸೈನ್ಯಾಧಿಪತಿಯು ನಿದ್ರೆಯಿಂದೆದ್ದು—ಅರಸನ ಕಡೆಗೆ ಬೊಬ್ಬೆ ಹಾಕುವವನಾದ ನೀನು ಯಾರು? ಯೆಂದನು. ದಾವೀದನು ಅಬ್ನೇರನಿಗೆ ಪ್ರತ್ಯುತ್ತರವಾಗಿ—ನೀನು ಇಸ್ರಾಯೇಲ್ಯರಲ್ಲಿ ಶ್ರೇಷ್ಠ ಶೂರನಾಗಿರುವದಿಲ್ಲವೋ? ನೀನು ನಿನ್ನ ಅರಸನನ್ನು ಚನ್ನಾಗಿ ಕಾಪಾಡದೆ ಇದ್ದದ್ದು ಯಾಕೆ? ನಿನ್ನ ಯಜಮಾನನಾದ ಅರಸನನ್ನು ನಾಶನ ಮಾಡಲಿಕ್ಕೆ ಒಬ್ಬನು ಬಂದಿದ್ದನು. ಇಗೋ, ಅವನ ತಲೆಯ ಕಡೆಯಲ್ಲಿದ್ದ ಭಲ್ಲೆಯೂ ನೀರು ತಂಬಿಗೆಯೂ ಸಹಾ ಇಲ್ಲಿ ಅದೆ, ಯೆನಲಾಗಿ, ಸೌಲನು—ನನ್ನ ಮಗನಾದ ದಾವೀದನೇ! ಇದು ನಿನ್ನ ಶಬ್ದವಲ್ಲವೋ? ಯೆಂದನು. ಅದಕ್ಕೆ ದಾವೀದನು—ಅಹುದು ಇದು ನನ್ನ ಶಬ್ದವು; ನನ್ನ ಕರ್ತನಾದ ಅರಸನೇ! ಯಾಕೆ ನನ್ನನ್ನು ಹಿಂಸಿಸುತ್ತೀ? ನಾನು ಯೇನು ಮಾಡಿದೆನು? ನನ್ನಲ್ಲಿ ಯಾವ ಅನ್ಯಾಯವು? ಇಸ್ರಾಯೇಲ್ಯರ ಅರಸನು ಒಂದು ಕಾಡ ಕೋಳಿಯನ್ನು ಬೆಟ್ಟಗಳಲ್ಲಿ ಬೇಟೆಯಾಡುವದಕ್ಕೆ ದೊಡ್ಡ ದಂಡನ್ನು ಕರೆಕೊಂಡು ಬರಲಿಲ್ಲವೋ? ಯೆಂದನು. ಸೌಲನು—ನಾನು ಪಾಪ ಮಾಡಿದೆನು. ನನ್ನ ಮಗನಾದ ದಾವೀದನೇ, ತಿರುಗಿ ಬಾ; ನಾನು ನಿನಗೆ ಇನ್ನು ಮುಂದೆ ಯೇನೂ ಮಾಡೆನು, ಯೆಂದನು. ಆದರೆ ದಾ

ವೀದನು, ಆ ಅಸ್ಥಿರ ಬುದ್ಧಿಯುಳ್ಳ ಮನುಷ್ಯನಲ್ಲಿ ವಿಶ್ವಾಸವಿಡಲಾಗದೆಂದು ತಿಳುಕೊಂಡು, ಯೌವನಸ್ಥರಲ್ಲಿ ಒಬ್ಬನು ಬಂದು ಭಲ್ಲೆಯನ್ನೂ ನೀರು ತಂಬಿಗೆಯನ್ನೂ ತಕ್ಕೊಂಡು ಹೋಗಲಿ, ಯೆಂದು ಕೂಗಿದನು. ಆ ಮೇಲೆ ದಾವೀದನು ಸೌಲನ ಸಂಗಡ ಒಂದು ಸಾರಿಯಾದರೂ ಮಾತಾಡಲಿಲ್ಲ. ಸೌಲನ ಅಂತ್ಯವು ಸಮೀಪಿಸಿತು.

---

೩೮. ಸೌಲನು ಸತ್ತದ್ದು. ದಾವೀದನು ಅರಸಾದದ್ದು.

ದಾವೀದನು ಸೌಲನ ಕೈಯಲ್ಲಿ ಬೀಳುವ ಭಯದಿಂದ ತನ್ನ ಹತ್ತರ ಇರುವ ಆರುನೂರು ಜನರನ್ನು ಕರಕೊಂಡು, ಯೆಹೂದ್ಯ ದೇಶದ ಪ್ರಾಂತ್ಯವನ್ನು ದಾಟಿ, ಅರಸನಾದ ಅಕೀಷನ ಹತ್ತರ ಹೋದನು. ಈ ಅರಸನು ದಾವೀದನಿಗೆ ಚಿಕ್ಲಾಗೆಂಬ ಊರನ್ನು ಕೊಟ್ಟನು. ಅದರಲ್ಲಿ ದಾವೀದನ ಜನರೂ ಅವರ ಹೆಂಡರೂ ಮಕ್ಕಳೂ ಹೆಚ್ಚುಕಡಿಮೆ ಒಂದು ವರೆ ವರ್ಷ ವಾಸವಾಗಿದ್ದರು. ತರುವಾಯ ಫಿಲಿಷ್ಟ್ಯರ ಅರಸುಗಳು ಸೈನ್ಯಗಳನ್ನು ಕೂಡಿಸಿ, ಇಸ್ರಾಯೇಲ್ಯರಿಗೆ ವಿರೋಧವಾಗಿ ಹೊರಟು ಹೋಗುವಾಗ, ಅಕೀಷನು ದಾವೀದನಿಗೆ—ನೀನು ಸಹಾ ನಮ್ಮ ಸಂಗಡ ಬರ ಬೇಕೆಂದು ಹೇಳಿದನು. ಆದರೆ ಅಕೀಷನ ಸಂಗಡಲಿರುವ ನಾಲ್ಕು ಮಂದಿ ಅರಸುಗಳು ದಾವೀದನಲ್ಲಿ ನಂಬಿಗೆ ಇಡದೆ ಇರುವದರಿಂದ ದಾವೀದನನ್ನು ಚಿಕ್ಲಾಗೆ ತಿರುಗಿ ಕಳುಹಿಸಿದರು. ದಾವೀದನು ತಿರುಗಿ ಕೊಂಡು ಮೂರನೆ ದಿವಸದಲ್ಲಿ ತನ್ನ ಪಟ್ಟಣದ ಸಮೀಪಕ್ಕೆ ಬಂದಾಗ, ಸುಟ್ಟ ಸ್ಥಳವನ್ನು ಕಂಡನು. ಯೇನಂದರೆ ದಾವೀದನು ಹೋದ ಮೇಲೆ ಅಮಲೇಕ್ಯರು ಚಿಕ್ಲಾಗಿನ ಮೇಲೆ ಬಿದ್ದು, ಪಟ್ಟಣವೆಲ್ಲಾ ಹಾಳು ಮಾಡಿ, ಹೆಂಡರನ್ನೂ ಮಕ್ಕಳನ್ನೂ ಆಸ್ತಿಯನ್ನೂ ಯೆಲ್ಲಾ ಬಲತ್ಕಾರದಿಂದ ವೈದಿದ್ದರು. ದಾವೀದನ ಜನರು ಪ್ರಯಾಣದಿಂದ ಬಹಳ ಪ್ರಯಾಸ ಪಟ್ಟಾಗ್ಯೂ, ಕಳ್ಳರ ಬೆನ್ನು ಹತ್ತಿ, ರಾತ್ರಿಯೆಲ್ಲಾ ಅರಣ್ಯವನ್ನು ಸಂಚರಿಸಿದರು. ಮರುದಿವಸ ಅರುಣೋದಯದ

ಲ್ಲಿ ಕಳ್ಳರ ಗುಂಪನ್ನು ನೋಡಿ, ತಡ ಮಾಡದೆ ಅವರ ಮೇಲೆ ಬಿದ್ದು, ತಮ್ಮ ಸಕಲ ಆಸ್ತಿಯನ್ನೂ ಅವರ ಕೈಯಲ್ಲಿರುವ ಬೇರೆ ಐಶ್ವರ್ಯವನ್ನೂ ತಕ್ಕೊಂಡರು. ಅಷ್ಟರೊಳಗೆ ಮೇಲಿನ ದೇಶದಲ್ಲಿರುವ ಗಿಲ್ಬೋವ ಪರ್ವತದ ಬುಡದಲ್ಲಿ ಆದದ್ದೇನಂದರೆ—ಇಸ್ರಾಯೇಲ್ಯರು ಫಿಲಿಷ್ಟ್ಯರ ಕೈಯಿಂದ ಅಪಜಯವಾದರು. ಯೊನಥಾನನೂ ಸೌಲನ ಕುಮಾರರಲ್ಲಿ ಇನ್ನು ಇಬ್ಬರೂ ಹತವಾದರು. ಸೌಲನು ತನ್ನ ಖಡ್ಗದ ಮೇಲೆ ತಾನು ಬಿದ್ದು ಸತ್ತು ಹೋದನು. ದಾವೀದನು ಅಮಲೇಕ್ಯರ ಯುದ್ಧದಿಂದ ತಿರುಗಿ, ಹಾಳಾದ ಜಿಕ್ಲಗಿನ ಸ್ಥಳಕ್ಕೆ ಬಂದು ಒಬ್ಬ ಅಮಲೇಕ್ಯನ ಬಾಯಿಂದ, ಸೌಲನು ಅಪಜಯವಾಗಿ ಸತ್ತು ಹೋದನೆಂಬ ವರ್ತಮಾನವನ್ನು ಕೇಳಿದನು. ಆ ಮನುಷ್ಯನು ರಣಾಂಗಣಕ್ಕೆ ಹೋಗಿ, ಸತ್ತವರ ವಸ್ತ್ರಗಳನ್ನು ಬಿಚ್ಚುವಾಗ, ತನ್ನ ಪ್ರಾಣವನ್ನು ತಾನೇ ತೆಗದು ಕೊಂಡ ಅರಸನ ಶವವನ್ನು ಕಂಡು, ತೋಳಸರಿಗೆಯನ್ನೂ ಕಿರೀಟವನ್ನೂ ಸೆಳಕೊಂಡು, ದಾವೀದನಿಗೆ ತೆಗದು ಕೊಂಡು ಬಂದನು. ಮತ್ತು, ತಾನು ಒಳ್ಳೇ ಉಚಿತ ಹೊಂದ ಬೇಕೆಂದು—ನಾನು ಅರಸನನ್ನು ಕೊಂದೆನೆಂದು, ಆ ದುಷ್ಟನು ಸುಳ್ಳು ಹೇಳಿದನು. ಆದರೆ ದಾವೀದನು ಅವನ ಮಾತನ್ನು ಕೇಳಿ, ದುಃಖದಿಂದ ಭ್ರಮೆಗೊಂಡು—ಯೇನು! ದೇವರ ಅಭಿಷಿಕ್ತನ ಮೇಲೆ ಕೈಯನ್ನು ಹಾಕಲಿಕ್ಕೆ ನೀನು ಭಯ ಪಡಲಿಲ್ಲವೋ? ನಿನ್ನ ರಕ್ತದ ಅಪರಾಧವು ನಿನ್ನ ಮೇಲೆ ಇರಲಿ. ನೀನು ಕೊಟ್ಟ ಸಾಕ್ಷಿಯೇ ನಿನಗೆ ವಿರೋಧವಾಗಿದೆ; ಯೆಲೇ, ಇವನನ್ನು ಕೊಂದು ಹಾಕಿರಿ! ಯೆಂದನು. ದಾವೀದನ ಜನರು ಈ ಮಾತನ್ನು ಕೇಳಿ, ಅವನನ್ನು ಕಡಿದು ಹಾಕಿದರು.

ಆ ಮೇಲೆ ದಾವೀದನು ತನ್ನ ಜನರ ಸಂಗಡ ಸ್ವದೇಶಕ್ಕೆ ತಿರುಗಿ, ಹೆಬ್ರೋನಿಗೆ ಬಂದು, ಅಮಲೇಕ್ಯರ ಕೈಯಿಂದ ಕೊಳ್ಳೆ ಮಾಡಿದ ದ್ರವ್ಯದಿಂದ ಯೆಹೂದ್ಯ ದೇಶದ ಸಮಸ್ತ ಹಿರಿಯರಿಗೆ ದಾನಗಳನ್ನು ಕಳುಹಿಸಿದನು. ಯೆಹೂದ್ಯದ ಜನರು ದಾವೀದನನ್ನು ಅರಸಾಗ ಆರಿಸಿ ತೆಗದು ಕೊಂಡರು. ಅಬ್ನೇರನು ಸೌಲನ ಮಗನಾದ ಇಷ್ಬೋಷೆತನನ್ನು ಅರಸಾಗ ಮಾಡಿದನು. ಈ ಪ್ರಕಾರ ಇಸ್ರಾಯೇಲ್ಯರಿಗೆ ಇಬ್ಬರು ಅರಸರಿದ್ದರು. ಆದರೆ ಆರು

೩೭. ಸೌಲನು ಸತ್ತದ್ದು ದಾವೀದನು ಅರಸಾದದ್ದು. ೧೦೫೧

ವರ್ಷದ ಮೇಲೆ ಇಷ್ಬೋಷೆತನು ತನ್ನ ಜನರ ಕೈಯಿಂದ ಸತ್ತ ಮೇಲೆ ದಾವೀದನು ಸಮಸ್ತ ಇಸ್ರಾಯೇಲಿಗೆ ಅರಸನಾದನು.

---

೩೮. ಉರೀಯನ ಪಾಪವು.

ಆ ಕುರುಬಹುಡುಗನಾದ ದಾವೀದನು ಅರಸನಾದ ಮೇಲೆ ವೀಣೆ ಬಾರಿಸುವದನ್ನು ಬಿಡದೆ ಇಂದಿನ ಪರ್ಯಂತರ ಸಂತೋಷ ಪಡುವವರೆಲ್ಲರಿಗೆ ಸಂತೋಷವನ್ನೂ ದುಃಖ ಪಡುವವರೆಲ್ಲರಿಗೆ ಶಾಂತಿಯನ್ನೂ ಕೊಡುವ ಅ



ನೇಕ ಕೀರ್ತನೆಗಳನ್ನು ಹಾಡಿದನು. ಯೆಲ್ಲಾದಕ್ಕಿಂತ ಮೊದಲಾಗಿ ಅವನು ಸಾಕ್ಷಿಗುಡಾರವನ್ನು ಯೆರೂಸಲೇಮಿನಲ್ಲಿಟ್ಟು, ಅದರ ಉತ್ತಮ ಆಚರಣೆಗಳನ್ನು ತಿರುಗಿ ಸ್ಥಾಪಿಸಿದನು. ಯಾತಕ್ಕಂದರೆ ಸಾಕ್ಷಿಪೆಟ್ಟಿಗೆಯನ್ನು ಜನರು ಬಹಳ ದಿವಸಗಳಾರಭ್ಯ ನಿರ್ಲಕ್ಷಿಸುತ್ತಾ ಇದ್ದರು. ಯೋಷುವನು ತೀರಿ ಹೋದ ಮೇಲೆ ಯೆಬೂಜ್ಯರು ಯೆರೂಸಲೇಮು ಪಟ್ಟಣವನ್ನು ತಮ್ಮ ವಶ ಮಾಡಿ ಕೊಂಡು, ಚಿಯೋನೆಂಬ ಕೋಟೆಗೆ ಯೆಬೂಜೆಂಬ ಹೆಸರಿಟ್ಟರು. ದಾವೀದನು ಯೆರೂಸಲೇಮನ್ನು ಮೊದಲು ವಶ ಮಾಡಿಕೊಳ್ಳ ಬೇಕೆಂದು ಆಲೋಚನೆ ಮಾಡಿ, ಅದನ್ನು ಮುತ್ತಿಗೆ ಹಾಕಿ ತೆಗದು ಕೊಂಡನು. ಆ

ಮೇಲೆ ಪಟ್ಟಣವನ್ನು ವಿಸ್ತರಿಸಿ, ಛತ್ರ ಮಾಡಿ, ರಾಜಪಟ್ಟಣವಾಗ ಬೇಕೆಂದು ನಿಶ್ಚೈಸಿದನು.

ದಾವೀದನು ಅನೇಕ ದೊಡ್ಡ ಯುದ್ಧಗಳನ್ನು ನಡಿಸಿ, ಮಧ್ಯ ಸಮುದ್ರಕ್ಕೂ ಪ್ರಾತ್ ನದಿಗೂ ದಮಸ್ಕ ಪಟ್ಟಣಕ್ಕೂ ಮಿಶ್ರ ದೇಶಕ್ಕೂ ಮಧ್ಯದಲ್ಲಿರುವ ಸಮಸ್ತ ದೇಶವನ್ನು ತನ್ನ ವಶ ಮಾಡಿ ಕೊಂಡನು. ಬಹಳ ಯುದ್ಧಗಳು ಆಗಿದ್ದಾಗ್ಯೂ ಅಧಿಪತಿಗಳು ರಾಜ್ಯವನ್ನು ನಡಿಸಿದ ಸಮಯಕ್ಕೆಂತ ದಾವೀದನು ಬಾಳಿದ ಸಮಯವು ಇಸ್ರಯೇಲ್ಯರಿಗೆ ಬಹಳ ಒಳ್ಳೇದಾಗಿತ್ತು. ಮತ್ತು ಅವನು ಜಯಿಸಿದ ಸುರಿಯ ದೇಶಸ್ಥರೂ ಎದೋಮ್ಯರೂ ಮೋವಾಬ್ಯರೂ ಫಿಲಿಷ್ಟ್ಯರೂ ಅವನ ಸ್ವಾಧೀನವಾದ ಮೇಲೆ ಸುಖದಿಂದಿದ್ದರು. ಅಮ್ಮೋನ್ಯರನ್ನು ಮಾತ್ರ, ಕರುಣವಿಲ್ಲದೆ ದಂಡಿಸಿದನು. ಯಾಕಂದರೆ ಆ ಸಮಯದಲ್ಲಿ ಅವನ ಹೃದಯವು ಅಶುದ್ಧ ಕಾಮದಿಂದ ತುಂಬಿದ ಕಾರಣ ಅವನು ಕುರುಡನಾಗಿಯೂ ಕಿವುಡನಾಗಿಯೂ ಕಠಿಣ ಮನಸ್ಸಿನವನಾಗಿಯೂ ಇದ್ದನು. ಯೇನಂದರೆ ಅವನು ಊರೀಯನೆಂಬ ಒಬ್ಬ ಉತ್ತಮ ಸರದಾರನ ಹೆಂಡತಿಯಾದ ಬತ್ಶೇಬಳಿಗೆ ಮೋಹ ಮಾಡುವದರಿಂದ ಆ ಊರೀಯನನ್ನು ಶತ್ರುಗಳ ಕೈಯಿಂದ ಮರಣಪ್ರಾಪ್ತಿ ನಿಶ್ಚಯವಾಗುವ ಸ್ಥಳದಲ್ಲಿ ನಿಲ್ಲಿಸ ಬೇಕೆಂದು ತನ್ನ ದಳವಾಯಿಯಾದ ಯೊವಾಬನಿಗೆ ಬರೆದನು. ದಾವೀದನು ತನಗೆ ಪೂರ್ವದಲ್ಲಿ ಸೌಲನು ಇದೇ ಪ್ರಕಾರ ಮಾಡಿದನೆಂದೂ, ಆವಾಗ ದೇವರು ತನ್ನನ್ನು ರಕ್ಷಿಸಿದನೆಂದೂ ಜ್ಞಾಪಕ ಮಾಡದೆ, ಮೋಹದಿಂದ ಮೋಸ ಪಟ್ಟು, ಈ ಅಪರಾಧವನ್ನು ನಡಿಸಿದನು. ಈ ಪ್ರಕಾರವಾಗಿ ಊರೀಯನು ಕೊಲ್ಲಲ್ಪಟ್ಟನು. ಆದರೆ ದಾವೀದನು ಒಂದು ವರ್ಷ ಪರ್ಯಂತರ ತಾನು ಮಾಡಿದ ಅಕ್ರಮಕ್ಕೋಸ್ಕರ ಮಾನಸಾಂತರ ಪಡದೆ ಇದ್ದನು.

ಆ ಮೇಲೆ ಕರ್ತನ ಪ್ರೇರೇಪಣೆಯಿಂದ ಪ್ರವಾದಿಯಾದ ನಥಾನನು ದಾವೀದನ ಬಳಿಗೆ ಬಂದು ಹೇಳಿದ್ದು — ಒಂದು ಪಟ್ಟಣದಲ್ಲಿ ಒಬ್ಬ ಐಶ್ವರ್ಯವಂತನೂ ಒಬ್ಬ ದರಿದ್ರನೂ ಇವರಿಬ್ಬರಿದ್ದರು. ಆ ಐಶ್ವರ್ಯವಂತನಿಗೆ

ಬಹಳ ಕುರಿ ದನಗಳು ಇದ್ದವು. ಆ ದರಿದ್ರನಿಗೆ ಒಂದೇ ಕುರಿಮರಿ ಇತ್ತು. ಅದು ಅವನ ಆಹಾರದಿಂದಲೇ ಕೆಲವು ತಿಂದು ಅವನ ಪಾನದಿಂದ ಕುಡಿದು ಅವನ ಯೆದೆಯ ಮೇಲೆ ಮಲಗುತ್ತಾ ಇತ್ತು. ಆದರೆ ಒಂದು ದಿವಸದಲ್ಲಿ ಆ ಐಶ್ವರ್ಯವಂತನ ಹತ್ತರ ಒಬ್ಬ ಪರ ಮನುಷ್ಯನು ಬಂದದರಿಂದ ಅವನು ತನ್ನ ಕುರಿದನಗಳಿಂದ ಒಂದನ್ನೂ ಕಾಡ ಬಾರದೆಂದು ಆ ಬಡವನ ಕುರಿಯನ್ನು ಕಡಿದು, ಆ ಪರನಿಗೆ ಭೋಜನ ಮಾಡಿಸಿದನು.

ದಾವೀದನು ನಥಾನನ ಮಾತು ಕೇಳಿ, ಪ್ರವಾದಿಯು ಹೇಳಿದ ಕಾರ್ಯಕ್ಕೆ ತಾನು ನ್ಯಾಯ ತೀರಿಸಬೇಕಾದ ಪ್ರಕಾರ ಕೋಪದಿಂದ ಹೇಳಿದ್ದು—ಈ ಅಕ್ರಮವನ್ನು ಮಾಡಿದ ಮನುಷ್ಯನು ಸಾಯತಕ್ಕವನು ಯೆಂದು ಕರ್ತನ ಜೀವದ ಆಣೆ! ನಥಾನನು ದಾವಿದನಿಗೆ—ನಾನು ಹೇಳಿದ ಮನುಷ್ಯನು ನೀನೆ; ಇಸ್ರಯೇಲಿನ ದೇವರಾದ ಕರ್ತನು ಹೇಳುವದೇನಂದರೆ—ನಾನು ನಿನ್ನನ್ನು ಅರಸಾಗ ಅಭಿಷೇಕಿಸಿ, ಸೌಲನ ಕೈಯಿಂದ ರಕ್ಷಿಸಿದ ಮೇಲೆ ನೀನು ಕರ್ತನ ವಾಕ್ಯವನ್ನು ತಿರಸ್ಕರಿಸಿ, ಕೇಡನ್ನು ಮಾಡಿ ಉರೀಯನನ್ನು ಅಮೋನನ ಮಕ್ಕಳ ಖಡ್ಗದಿಂದ ಸಂಹರಿಸಿ, ಅವನ ಹೆಂಡತಿಯನ್ನು ಇಟ್ಟು ಕೊಂಡ



ದ್ದು ಯಾಕೆಂದನು. ದಾವೀದನು ತನ್ನ ಅಕ್ರಮವನ್ನು ತಿಳಕೊಂಡು, ತನ್ನ ಮನಸ್ಸಿನಲ್ಲಿ ದುಃಖ ಪಟ್ಟು, ವಿನಯದಿಂದ—ನಾನು ಕರ್ತನಿಗೆ ವಿರೋಧವಾಗಿ ಪಾಪ ಮಾಡಿದೆನೆಂದನು. ನಥಾನನು—ಕರ್ತನು ಆ ಪಾಪ ಕ್ಷಮಿಸಿದನೆಂದು ಹೇಳಿದಾಗ್ಯೂ, ಆ ಅಪರಾಧಕ್ಕೋಸ್ಕರ ಅವನ ಮೇಲೆಯೂ ಅವನ ಮನೆ

ಯ ಮೇಲೆಯೂ ಬರುವ ಶಿಕ್ಷೆಯನ್ನು ತಿಳಿಸಿ, ಕರ್ತನ ಹೆಸರಿನಲ್ಲಿ ಹೇಳಿದ್ದು—ಈಗೋ ನಿನ್ನ ಸ್ವಂತ ಮನೆಯಿಂದ ನಿನ್ನ ಮೇಲೆ ನಷ್ಟವನ್ನು ಯೆಬ್ಬಿಸುವೆನು. ನೀನು ಸಾಯಲಿಕ್ಕಿಲ್ಲ. ಆದಾಗ್ಯೂ ನೀನು ಈ ಅಕ್ರಮವನ್ನು ನಡಿಸಿ, ಕರ್ತನ ಶತ್ರುಗಳಿಗೆ ದೂಷಿಸುವ ಆಸ್ಪದವನ್ನು ಕೊಟ್ಟದರಿಂದ, ನಿನಗೆ ಹುಟ್ಟಿದ ಮಗನು ಮರಣಸ್ಥನಾಗುವನೆಂದನು. ನಥಾನನು ಈ ಮಾತನ್ನು ಹೇಳಿ, ಮನೆಗೆ ಹೋದನು.



ಮಿತಿಯಿಲ್ಲದ ಮೋಹದ ಶಿಕ್ಷೆಗಾಗಿ ಮಗು ಸಾಯಲಿಕ್ಕೆ ಅವಶ್ಯವಾದರೆ, ಅದು ತಂದೆಗೆ ದೊಡ್ಡ ದಂಡನೆಯಾಯಿತಲ್ಲವೋ? ದಾವೀದನು ಯೇಳು ದಿವಸ ಪರ್ಯಂತರ ನೆಲದಲ್ಲಿ ಬಿದ್ದು ಉಪವಾಸ ಮಾಡಿ, ಅತ್ತು, ಪ್ರಾರ್ಥಿಸಿ, ಕೂಸಿನ ಜೀವವನ್ನು ದೇವರಿಂದ ಬೇಡಿ ಕೊಳ್ಳುತ್ತಿದ್ದನು. ಆ ಸಮಯದಲ್ಲಿ ಅವನು ಮನಸ್ಸಿನ ವ್ಯಥೆಯಿಂದ ಹಾಡಿದ ಪಶ್ಚಾತ್ತಾಪದ ಪದಗಳು ಈಗಲೂ ದುಃಖ ಪಡುವವರ ಉಪಶಮನಕ್ಕಾಗಿ ದೇವರ ವಾಕ್ಯದಲ್ಲಿ ಇದ್ದಾವೆ. ಅವುಗಳ ಸಾರಾಂಶವೇನಂದರೆ—ದೇವರೇ ನಿನ್ನ ಕೃಪೆಯ ಪ್ರಕಾರ ನನ್ನನ್ನು ಕರುಣಿಸಿ, ನಿನ್ನ ಅತಿಯತವಾದ ಕರುಣಾಕಟಾಕ್ಷದಿಂದ ನನ್ನ ಪಾಪವನ್ನು ಪರಿಹರಿಸು. ನನ್ನ ಅಪರಾಧವನ್ನು ತೊಳದು, ನನ್ನ ಪಾಪದಿಂದ ನನ್ನನ್ನು ಶುದ್ಧ ಮಾಡು. ಯಾಕಂದರೆ ನಾನು ನನ್ನ ಅಕ್ರಮವನ್ನು ತಿಳಕೊಳ್ಳುತ್ತೇನೆ; ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇ

ರುತ್ತದೆ; ನಿನಗೆ ಮಾತ್ರ ವಿರೋಧವಾಗಿ ಪಾಪ ಮಾಡಿದೆ. ನಿನ್ನ ಮುಂದೆ ಕೇಡನ್ನು ನಡಿಸಿದೆ. ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸಿ, ಹೊಸತಾದ ಸ್ಥಿರ ಮನಸ್ಸನ್ನು ನನಗೆ ಕೊಡು!



ಆದರೆ ಕೂಸು ಸತ್ತ ಮೇಲೆ ಅವನು ಯೆದ್ದು, ಮೈ ತೊಳದು ಕೊಂಡು, ಯೆಣ್ಣೆ ಹಚ್ಚಿ, ಮರುಗುವದನ್ನು ಬಿಟ್ಟು, ದೇವರ ಮಂದಿರಕ್ಕೆ ಹೋಗಿ, ಸ್ತೋತ್ರಗಳನ್ನೂ ಸ್ತುತಿಗಳನ್ನೂ ಅರ್ಪಿಸಿ ಹಾಡಿದ್ದೇನಂದರೆ—ನನ್ನ ಆತ್ಮವೇ ಕರ್ತನನ್ನು ಸ್ತುತಿಸು! ನನ್ನಲ್ಲಿರುವ ಸಮಸ್ತವು ಆತನ ಪರಿಶುದ್ಧ ನಾಮವನ್ನು ಕೊಂಡಾಡಲಿ. ನನ್ನ ಆತ್ಮವೇ ಕರ್ತನನ್ನು ಸ್ತುತಿಸು. ಆತನು ನಿನಗೆ ಮಾಡಿದ ಮೇಲನ್ನು ಮರೆಯದಿರು. ಆತನು ನಿನ್ನ ಸಮಸ್ತ ಪಾಪಗಳನ್ನು ಕ್ಷಮಿಸಿ, ನಿನ್ನ ಸಕಲ ರೋಗಗಳನ್ನು ಸ್ವಸ್ಥ ಮಾಡುತ್ತಾನೆ. ಆತನು ನಿನ್ನ ಪ್ರಾಣವನ್ನು ಮರಣದಿಂದ ತಪ್ಪಿಸಿ, ನಿನಗೆ ಕೃಪೆಯ ಕಿರೀಟವನ್ನು ಧರಿಸ ಮಾಡುತ್ತಾನೆ. ಮನುಷ್ಯನು ಬದುಕುವ ಪರ್ಯಂತರ ಹುಲ್ಲಿನ ಹಾಗೆ ಇದ್ದಾನೆ; ಬೈಲಿನಲ್ಲಿರುವ ಹೂವಿನ ಪ್ರಕಾರವಾಗಿ ಅರಳುತ್ತಾನೆ. ಗಾಳಿ ಬಡಿದರೆ, ಹೂವು ಇಲ್ಲದೆ ಹೋಗುವದು; ಅದರ ಸ್ಥಳವನ್ನು ಯಾರೂ ಅರಿಯರು. ಆದರೆ ದೇವರ ಕೃಪೆಯು ಆತನಿಗೆ ಭಯ ಪಡುವವರಿಗೂ ಆತನ ನೀತಿಯು ಆತನ ಒಡಂಬಡಿಕೆಯನ್ನು ಕೈಕೊಂಡು ಆತನ ಆಜ್ಞೆಗಳನ್ನು ನೆನಪು ಮಾಡುವವರ ಮಕ್ಕಳ ಮಕ್ಕಳಿಗೂ ಯುಗ ಯುಗಕ್ಕೆ ಸ್ಥಿರವಾಗಿರುವದೆಂದು ಹಾಡಿದನು. ಅನೇಕ ಸಾವಿರ ಜನರು ತ

ಮ್ಮ ತಮ್ಮ ಮಕ್ಕಳು ತೀರಿ ಹೋಗುವದಕ್ಕೋಸ್ಕರ ಬಹಳ ವ್ಯಥೆ ಪಡುವಾಗ ದಾವೀದನು ಮಾಡಿದ ಈ ಕೀರ್ತನೆಗಳನ್ನು ಧ್ಯಾನಿಸಿ ಶಾಂತರಾದರು.

---

೪೦. ಅಬ್ಸಾಲೋಮನು.

ಆ ಕೂಸಿನ ಮರಣವು ದಾವೀದನ ಮೇಲೆ ಬಂದ ಕಷ್ಟಗಳ ಆರಂಭ ಮಾತ್ರವೇ ಇತ್ತು; ಹೆಚ್ಚಾದ ಉಪದ್ರಗಳು ಆಮೇಲೆ ಬಂದವು. ದಾವೀದನ ಮಗನಾದ ಅಬ್ಸಾಲೋಮನು ತನ್ನ ಸಹೋದರನಾದ ಅಮ್ನೋನನನ್ನು ಕೊಂದು ಹಾಕಿದರಿಂದ ದಾವೀದನು ಅವನಿಗೆ ಕಟ್ಟುಗ್ರ ನಿರ್ದಯವನ್ನು ತೋರಿಸಿದ ಕಾರಣ ಅವನು ತನ್ನ ತಂದೆಯನ್ನು ಸಿಂಹಾಸನದಿಂದ ತೆಗದು ಹಾಕುವ ಆಲೋಚನೆ ಮಾಡಿ ಕೊಂಡನು. ಬಹಳ ದಿವಸದಾರಭ್ಯ ಈ ಕೆಲಸವನ್ನು ನಡಿಸ ಬೇಕೆಂದು ಆಲೋಚಿಸಿ, ಯುಕ್ತಿಯಿಂದ ಸಾಧಿಸಿದನು. ದಾವೀದನ ಮುಖ್ಯ ಪ್ರಧಾನಿಗಳಲ್ಲಿ ಒಬ್ಬನಾದ ಅಹೀತೋಫೆಲನು ಅಬ್ಸಾಲೋಮನಿಗೆ ಅನುಸರಿಸಿದನು. ಮತ್ತು ಅಬ್ಸಾಲೋಮನು ಇಸ್ರಾಯೇಲ್ಯರೆಲ್ಲರಲ್ಲಿ ಸೌಂದರ್ಯವುಳ್ಳ ಪುರುಷನಾಗಿರುವದರಿಂದಲೂ ಅವನು ಸರ್ಪದ ಬುದ್ಧಿಯಿಂದ ಜನರ ಹೃದಯಗಳನ್ನು ಕದ್ದು ಕೊಳ್ಳುವದರಿಂದಲೂ ಜನರಲ್ಲಿ ಅನೇಕರು ಅವನ ಮೇಲೆ ಪ್ರೀತಿ ಇಟ್ಟರು. ಆದದರಿಂದ ಒಂದು ದಿವಸದಲ್ಲಿ ಹೆಬ್ರೋನಿನಲ್ಲಿ ಅಬ್ಸಾಲೋಮನು ಅರಸನಾಗಿ ಸಾರಲ್ಪಟ್ಟನೆಂಬ ವರ್ತಮಾನವು ಅಕಸ್ಮಾತ್ತಾಗಿ ಯೆರೂಸಲೇಮಿಗೆ ಬಂದಾಗ, ದಾವೀದನು ಧೈರ್ಯವನ್ನು ಬಿಟ್ಟು — ನಾವು ಓಡಿ ಹೋಗುವಾ, ಬರ್ರಿ! ಅಬ್ಸಾಲೋಮನು ನಮ್ಮ ಮೇಲೆ ಬೀಳದ ಹಾಗೆ ಬರ್ರಿ! ಯೆರೂಸಲೇಮಿನಲ್ಲಿರುವವರು ಅಬ್ಸಾಲೋಮನ ಕೈಗೆ ತಪ್ಪಿ ಹೋಗಲಿಕ್ಕಿಲ್ಲವೆಂದನು. ಆಗಲು ಅರಸನು ಕಿದ್ರೋನ ಹೊಳೆಯನ್ನು ದಾಟಿ, ಪಾದರಕ್ಷೆ ಇಲ್ಲದೆ ಬರಿ ಕಾಲಿನಿಂದ ಇಪ್ಪೆಯ ಗುಡ್ಡದ ಮೇಲೆ ಯೇರಿದನು. ಯೇರುವಾಗ್ಗೆ ಅವನೂ ಅವನ ಸಂಗಡ ಇರುವವರೆಲ್ಲರೂ ಅಳುತ್ತಿದ್ದರು. ಆವಾಗ್ಗೆ ಸೌಲನ ಕುಟುಂ

ಬದವನಾದ ಷಿಮ್ಮಿಯೆಂಬ ಹೆಸರುಳ್ಳ ಒಬ್ಬನು ದೂರದಿಂದ ಕಲ್ಲು ಯೆಸದು, ರಕ್ತನಾಯಿ ಯೆಂದು ಬೈದನು. ಅಬಿಸಾಯನು ಅವನ ತಲೆಯನ್ನು ಕಡಿಯ ಬೇಕೆಂದು ಮನಸ್ಸು ಮಾಡಿದನು. ಆದರೆ ದಾವೀದನು—ಬಿಡಿರಿ! ಕರ್ತನ ಅಪ್ಪಣೆಯಿಂದ ಮಾಡುತ್ತಾನೆಂದನು. ಆ ಮೇಲೆ ದಾವೀದನು ಮಹನಾಯವೆಂಬ ಕೋಟೆಯಲ್ಲಿ ಸೇರಿದನು. ಅಬ್ಸಲೋಮನು ಯೆರೂಸಲೇಮಿನ ಸಿಂಹಾಸನದ ಮೇಲೆ ಕೂತು ಕೊಂಡು, ತಾನು ಭದ್ರವಾಗಿದ್ಧೇನೆಂದು ನೆನಸಿ ಕೊಂಡನು. ಯೇನಂದರೆ ಇಸ್ರಾಯೇಲಿನ ಜನರೆಲ್ಲರಿಗೆ ಜೀವದಿಂದಿರುವ ತನ್ನ ತಂದೆಯನ್ನಾಗಲಿ ಅವನ ಶವವನ್ನಾಗಲಿ ತನ್ನ ಹತ್ತರ ತರಬೇಕೆಂದು ಹೇಳಿದ ಮೇಲೆ ಈತನು ತಪ್ಪಿ ಹೋಗನೆಂದು ನಂಬಿ ಕೊಂಡಿದ್ದನು. ಆದರೆ ದಾವೀದನ ಬಳಿಗೆ ಸಜ್ಜನರೆಲ್ಲರು ಬಂದದರಿಂದ, ಯುದ್ಧವಾಗುವಾಗ್ಯೆ ಯೊವಾಬನು ಸಿದ್ಧವಾದ ಸೈನ್ಯವನ್ನು ತೆಗದು ಕೊಂಡು, ದ್ರೋಹಿಯಾದ ಮಗನೆದುರಿಗೆ ಹೋದನು. ಮುದುಕನಾದ ಅರಸನನ್ನು ಅವರು ತಮ್ಮ ಸಂಗಡ ಹೊರಟು ಬರ ಗೊಡಿಸಲಿಲ್ಲ. ಯಾಕಂದರೆ—ನೀನು ಹತ್ತು ಸಹಸ್ರ ಜನರ ಪ್ರಕಾರವಾಗಿದ್ಧಿ. ನೀನು ನಮಗೆ ಪಟ್ಟಣದೊಳಗಿಂದ ಸಹಾಯ ಮಾಡಿದರೆ ಸಾಕು, ಯೆಂದರು. ಅವರು ಹೊರಟು ಹೋಗುವಾಗ್ಯೆ ದಾವೀದನು ಸೈನ್ಯಾಧಿಪತಿಗಳಿಗೆ ಜನರೆಲ್ಲರ ಮುಂದೆ—ನನ್ನ ಮಗನಾದ ಅಬ್ಸಲೋಮನಿಗೆ ಕೇಡು ಸಂಭವಿಸದ ಹಾಗೆ ನೋಡಿರಿ! ಯೆಂದನು. ಆ ದ್ರೋಹಿಗಳ ಸೈನ್ಯಕ್ಕೆ ಅಘೋರವಾದ ಅಪಜಯವಾಯಿತು. ಅಬ್ಸಲೋಮನು ಹೇಸರಕತ್ತೆಯ ಮೇಲೆ ಕೂತು ಕೊಂಡು ಅಡವಿಯಲ್ಲಿ ಓಡುವಾಗ್ಯೆ ಅವನ ತಲೆಯ ಕೂದಲು ಸೇಗಿನ ಮರದ ಕೊಂಬೆಗೆ ಸಿಕ್ಕಿದದರಿಂದ, ಆ ಕತ್ತೆಯು ಮುಂದೆ ಹೋದಾಗ ಅವನು ಮರದಲ್ಲಿ ತೂಗ್ಯಾಡುತ್ತಿದ್ದನು. ರಾಣುವೆಯವರಲ್ಲಿ ಒಬ್ಬನು ಅವನು ತೂಗ್ಯಾಡುವದನ್ನು ನೋಡಿ, ದಳವಾಯಿಗೆ ಹೇಳಿದನು. ಯೊವಾಬನು—ನೀನು ಅವನನ್ನು ನೋಡಿದಾಗಲೇ ಯಾಕೆ ಕೊಂದು ಹಾಕಲಿಲ್ಲವೆನಲು, ಆ ರಾಣುವೆಯವನು—ನೀನು ನನಗೆ ಸಾವಿರ ರೂಪಾಯಿ ಕೊಟ್ಟಾಗ್ಯೂ, ನಾನು ನನ್ನ ಅರಸನ ಮಗನ ಮೇಲೆ ಕೈ

ಯೆತ್ತಲಿಕ್ಕಿಲ್ಲ, ಯಾಕಂದರೆ ಅರಸನು ನಮ್ಮನ್ನು ಭದ್ರಪಡಿಸಿ, ಹೇಳಿದ ಮಾತನ್ನು ನಾನು ಕೇಳಿದೆನೆಂದನು. ಯೋವಾಬನು—ನಿನ್ನ ಮಾತು ಕೇಳಲಿಕ್ಕೆ ನನಗೆ ತಡ ಮಾಡ ಕೂಡದು ಯೆಂದು ಹೇಳಿ, ಮೂರು ಭಲ್ಲೆಗಳನ್ನು ತೆಗದು ಕೊಂಡು, ತೇಗಿನ ಮರದಲ್ಲಿ ತೂಗ್ಯಾಡುವ ಅಬ್ಸಲೋಮನ ಹೃದಯವನ್ನು ತಿವಿದನು.



ಅರಸನು ತನ್ನ ಮಗನು ಸತ್ತ ಕಾರಣ ಆ ಜಯವರ್ತಮಾನಕ್ಕೆ ಸಂತೋಷಪಡದೆ—ಓ ಅಬ್ಸಲೋಮನೇ! ನನ್ನ ಮಗನೇ! ನನ್ನ ಮಗನೇ! ನಿನಗೆ ಬದಲಾಗಿ ದೇವರು ನನ್ನನ್ನು ಸಾಯಗೊಡಿಸಿ ಇದ್ದರೆ ಒಳ್ಳೇದಾಗಿತ್ತು ಯೆಂದು ಬಹಳ ಸಾರಿ ಕೂಗಿ ಹಲುಬಿದನು. ಆ ಜಯವರ್ತಮಾನವು ಯೊರ್ದಾನಿನ ಆಚೆಯಲ್ಲಿ ಪ್ರಸಿದ್ಧಿಯಾದ ಕೂಡಲೇ ಯೆರೂಸಲೇಮಿನಲ್ಲಿಯೂ ಸಮಸ್ತ ಇಸ್ರಯೇಲಿನಲ್ಲಿಯೂ ಯೆಲ್ಲಾ ಬದಲಾಯಿತು. ಯೇನಂದರೆ ಬಹಳ ಸಂತೋಷದಿಂದ ಯೆಹೂದ್ಯರು ಬಂದು, ತಮ್ಮ ದಾವೀದನನ್ನು ಜಯಘೋಷದಿಂದ ರಾಜಪಟ್ಟಣದಲ್ಲಿ ತಿರುಗಿ ಸೇರಿಸಿದರು. ಇದಲ್ಲದೆ ಶಿಮ್ಮಿಯು ಭಯಸ್ಥನಾಗಿ ಜಾರಿ ಬಂದು, ಮನ್ನಿಸ ಬೇಕೆಂದು ಬೇಡಿ ಕೊಂಡನು.

ಸಂತೋಷದಿಂದ ಹರ್ಷಿಸುವ ಜನರ ಗುಂಪಿನಿಂದ ಆವರಿಸಲ್ಪಟ್ಟ ದಾವೀದನು ಯೆರೂಸಲೇಮಿಗೆ ತಿರುಗಿ ಬಂದ ಮೇಲೆ ಇಸ್ರಯೇಲ್ಯರ ರಾಜ್ಯ

ದಿಯು ಆಜ್ಞಾಪಿಸಿದರೆ ಮಾಡುತ್ತಿದ್ದಿ ಅಲ್ಲವೋ? ಹಾಗಾದರೆ ತೊಳಕೊಂಡು ಶುದ್ಧವಾಗು ಯೆಂದು ಅವನು ಹೇಳಿದ ಮೇಲೆ ಮಾಡದೆ ಬಿಡುವದು ಯಾಕೆ? ಯೆಂದು ಅರಿಕೆ ಮಾಡಿದರು. ಅವರು ಈ ಪ್ರಕಾರ ಹೇಳಿದದರಿಂದ ಅವನು ಇಳಿದು ಯೊರ್ದಾನಿನಲ್ಲಿ ಯೇಳುಸಾರಿ ಮುಳುಗುತ್ತಲೇ ಅವನ ಮಾಂಸವು ಕೂಸಿನ ಮಾಂಸದ ಹಾಗೆ ಶುದ್ಧವಾಯಿತು. ತರುವಾಯ ನಯೆಮಾನನು ಪ್ರವಾದಿಗೆ ಸ್ತೋತ್ರ ಮಾಡುವದಕ್ಕೆ ತಿರಿಗಿ ಬಂದು ಇಸ್ರಾಯೇಲಿನ ಹೊರ್ತು ಸಮಸ್ತ ದೇಶಗಳಲ್ಲಿ ದೇವರು ಇಲ್ಲವೆಂದು ನಾನು ತಿಳುಕೊಂಡಿದ್ದೇನೆ, ಹಾಗಾದರೆ ನೀನು ಈ ವರವನ್ನು ತಕ್ಕೊ ಯೆಂದು ಹೇಳಿ ಕಾಣಿಕೆಗಳನ್ನು ಮುಂದಿಟ್ಟನು. ಎಲೀಷನು ದೇವರಾಣೆ ನಾನು ತಕ್ಕೊಳ್ಳುವದಿಲ್ಲಾ, ನೀನು ಸಮಾಧಾನದಿಂದ ಹೊರಟು ಹೋಗು ಅಂದನು. ಆದರೆ ಎಲೀಷನ ಸೇವಕನಾದ ಗೆಹಾಜಿಯು, ತನ್ನ ಯಜಮಾನನು ತಿರಸ್ಕರಿಸಿದ ಬೆಳ್ಳಿ ಬಂಗಾರ ಉತ್ತಮವಾದ ವಸ್ತ್ರಾದಿಗಳ ಮೇಲೆ ಆಶೆಯಾಗಿ, ನಯೆಮಾನನ ಹಿಂದೆ ಓಡಿ ಹೋಗಿ—ನನ್ನ ಯಜಮಾನನು ನಿನಗೆ ಹೇಳಿಸುವದೇನೆಂದರೆ, ಈಗಲೇ ಇಬ್ಬರು ದರಿದ್ರರಾದ ಪ್ರವಾದಿಗಳು ತನ್ನ ಹತ್ತರ ಬಂದರು; ಅವರಿಗೆ ಹೊಂದು ಮಣ ಬೆಳ್ಳಿಯನ್ನೂ ಯೆರಡು ಉಟು ವಸ್ತ್ರಗಳನ್ನೂ ಕೊಡು ಯೆನಲು, ನಯೆಮಾನನು, ಪ್ರಿಯನೇ ಯೆರಡು ಮಣ ತಕ್ಕೋ ಯೆಂದು, ಯೆರಡು ಉಟು ವಸ್ತ್ರಗಳನ್ನು ಸಹಾ ಕೊಟ್ಟನು. ಗೆಹಾಜಿಯು ತನ್ನ ಯಜಮಾನನ ಹತ್ತರ ಬಂದಾಗ, ಎಲೀಷನು, ಗೆಹಾಜಿಯೇ ಯೆಲ್ಲಿಂದ ಬಂದಿ ಯೆಂದು ಕೇಳಲು, ಗೆಹಾಜಿಯು ನಾನೆಲ್ಲಿಗೂ ಹೋಗಲಿಲ್ಲವೆಂದನು. ಪ್ರವಾದಿಯು, ಆ ಮನುಷ್ಯನು ರಥದಿಂದ ಇಳಿದು ನಿನಗೆ ಯೆದುರಾಗಿ ಬಂದದ್ದನ್ನು ನಾನು ಜ್ಞಾನದೃಷ್ಟಿಯಿಂದ ನೋಡಲಿಲ್ಲವೋ? ಬೆಳ್ಳಿಯನ್ನೂ ವಸ್ತ್ರಗಳನ್ನೂ ದ್ರಾಕ್ಷೆ ಇಪ್ಪೆ ತೋಟಗಳನ್ನೂ ಸಂಪಾದಿಸುವ ಸಮಯವು ಇದೇ ಸರಿಯೋ? ಹಾಗಾದರೆ ನಯೆಮಾನನ ಕುಷ್ಟರೋಗವು ಯೆಂದೆಂದಿಗೂ ನಿನಗೆ ಹತ್ತಿಕೊಳ್ಳಲಿ ಅಂದನು. ಈ ಪ್ರಕಾರ ಗೆಹಾಜಿಯು ಕುಷ್ಟಿಯಾಗಿ ಹಿಮದ ಹಾಗೆ ಬಿಳುಪಾದನು.

ಡು ಯೆನಲು, ಮಗನು ಒಂದೂ ಉಳಿಯಲಿಲ್ಲವೆಂದು ಹೇಳಿದ ಕೂಡಲೇ ಯೆಂಗೆ ನಿಂತಿತು. ದೇವರ ಮನುಷ್ಯನು ಆ ಸ್ತ್ರೀಗೆ ನೀನು ಯೆಂಗೆಯನ್ನು ಮಾರಿ, ನಿನ್ನ ಸಾಲದವರಿಗೆ ಕಾಡು, ಉಳಿದ ಹಣದಿಂದ ನೀನೂ ನಿನ್ನ ಕುಮಾರರೂ ಬದುಕಿರಿ ಅಂದನು.

ಸುರ್ಯದೇಶದ ಅರಸನ ಸೈನ್ಯಾಧಿಪತಿಯಾದ ನಯೆಮಾನನು ಕುಷ್ಠಿಯಾಗಿದ್ದನು. ಅವನ ಹೆಂಡತಿಯ ಚಾಕರಿಯಲ್ಲಿರುವ ಇಸ್ರಾಯೇಲ್ಯಳಾದ ದಾಸಿಯು, ನಮ್ಮ ದಾರೆಯು ಸಮಾರ್ಯದಲ್ಲಿರುವ ಪ್ರವಾದಿಯ ಬಳಿಗೆ ಹೋದರೆ, ಅವನು ಕುಷ್ಠರೋಗವನ್ನು ಪರಿಹರಿಸ್ಯಾನು ಅಂದಳು. ನಯೆಮಾನನು ಈ ಮಾತು ಕೇಳಿ ರಥಗಳನ್ನೂ ಕುದುರೆಗಳನ್ನೂ ಅಧಿಕವಾದ ಕಾಣಿಕೆಗಳನ್ನೂ ತೆಗದುಕೊಂಡು ಇಸ್ರಾಯೇಲ ದೇಶಕ್ಕೆ ಹೋಗಿ, ಪ್ರವಾದಿಯ ಬಾಗಿಲ ಮುಂದೆ ನಿಂತು ಕೊಂಡನು. ಎಲೀಷನು, ನೀನು ಹೋಗಿ ಯೇಳುಸಾರಿ



ಯೊರ್ದಾನ ನದಿಯಲ್ಲಿ ಮುಳುಗಿ ಸ್ನಾನ ಮಾಡು ಯೆಂದು ಹೇಳಿ ಕಳುಹಿಸಿದಾಗ, ನಯೆಮಾನನು ಕೋಪಿಸಿ, ಅವನು ತನ್ನ ದೇವರ ನಾಮದಲ್ಲಿ ತಂನ ಕೈಯನ್ನು ನನ್ನ ಕುಷ್ಠದ ಮೇಲೆ ಯೆಳದು ಪರಿಹರಿಸ್ಯಾನು ಯೆಂದು ನಾನು ನೆನಸಿಕೊಂಡು ಬಂದೆನು; ದಮಸ್ಕ ನದಿಗಳು ಇಸ್ರಾಯೇಲಿನಲ್ಲಿರುವ ಯೆಲ್ಲಾ ನೀರಿಗಿಂತ ಶ್ರೇಷ್ಟವಲ್ಲವೋ ಅಂದಾಗ, ಸೇವಕರು ಅವನಿಗೆ ಪ್ರಿಯ ಅಯ್ಯಾ, ನೀನು ದೊಡ್ಡ ಕಾರ್ಯವನ್ನು ಮಾಡ ಬೇಕೆಂದು ಆ ಪ್ರವಾ

ಎಲೀಷನು ಎಲೀಯನ ಆತ್ಮವನ್ನೂ ಶಕ್ತಿಯನ್ನೂ ಹೊಂದಿದನು. ಅದರ ಮೇಲೆ ಚಿಂನದ ಕರುವಿನ ಪೂಜೇ ಸ್ಥಳವಾದ ಬೇಥೇಲಿನಲ್ಲಿ ಕುಚೇಷ್ಟೆದ್ವದ ಹುಡುಗರು ಪ್ರವಾದಿಗೆ ಹಾಸ್ಯಮಾಡಿ, ಬೋಳುಮಂಡೆಯೇ ಬೋಳುಮಂಡೆಯೇ, ಯೆದ್ದು ಬಾ ಯೆಂದು ಕರದಾಗ, ಎಲೀಷನು ತಾಳ್ಮೆಗೂ ಶಿಕ್ಷೆಗೂ ತಕ್ಕ ಸಮಯವನ್ನರಿತು, ದೇವರ ನಾಮದಲ್ಲಿ ಅವರನ್ನು ಶಪಿಸಿದನು. ಆಗ್ಗೆ ಅಡವಿಯಿಂದ ಯೆರಡು ಕರಡಿಗಳು ಬಂದು ಆ ಹುಡುಗರಲ್ಲಿ ನಾಲ್ವತ್ತೆರಡು ಮಂದಿಯನ್ನು ಶೀಳಿಬಿಟ್ಟವು.


ಪ್ರವಾದಿಗಳ ಮಠವು ಇರುವ ಹಾಂದು ಊರಿನಲ್ಲಿ ಪ್ರವಾದಿಯ ವಿಧವೆಯಾದ ಹೆಬ್ಬಳು ಎಲೀಷನಿಗೆ, ನಂನ ಗಂಡನು ಸತ್ತು ಹೋದನು, ಸಾಲ ಕೊಟ್ಟವನು ಈಗ ಬಂದು ನನ್ನ ಇಬ್ಬರು ಹುಡುಗರನ್ನು ದಾಸರಾಗಿ ವೈಯ್ಯುವನು ಯೆಂದು ಕೂಗಲು, ಅವನು ನಿಂನ ಮನೆಯಲ್ಲಿ ಇನ್ನೂ ಯೇನು ಉಳಿದದೆ ಹೇಳೆಂದನು. ಅವಳು ಯೆಂಣೆ ಮೊಗೆ ಹೊರ್ತು ನಿನ್ನ ದಾಸಿಗೆ ಯೇನೂ ಉಳಿಯಲಿಲ್ಲವೆನಲಾಗಿ, ಅವನು ನೀನು ಹೋಗಿ ಸಮಸ್ತ ನೆರೆ ಮನೆಯವರಾದ ಹೆಂಗಸರ ಕೈಯಿಂದ ಬರೇ ಪಾತ್ರೆಗಳು ಯೆಷ್ಟು ಶಿಕ್ಕುವವೋ, ಅಷ್ಟು ತೆಗದುಕೊಂಡು ಬಾ; ತರುವಾಯ ನಿಂನ ಕುಮಾರರ ಸಂಗಡ ಮನೆಯ ಬಾಗಿಲು ಮುಚ್ಚಿ ನಿನ್ನ ಮೊಗೆಯಿಂದ ಆ ಪಾತ್ರೆಗಳೆಲ್ಲಾ ತುಂಬುವ ಪರ್ಯಂತರ ಯೆಂಣೆ ಹೊಯ್ಯಿ ಯೆಂದು ಹೇಳಿದನು. ಅವಳು ಯೆಲ್ಲಾ ತುಂಬುವ ಪರ್ಯಂತರ ಹೊಯ್ದು, ತನ್ನ ಮಗನಿಗೆ ಇಂನೊಂದು ಪಾತ್ರೆ, ಇ



ತರುವಾಯ ಮೂರನೆಯವನು ಬಂದು ಮೊಣಕಾಲೂರಿ, ದೇವರ ಮನುಷ್ಯನೇ, ನನ್ನ ಆತ್ಮವು ನಿನಗೆ ಪ್ರಿಯವಾಗಲಿ ಯೆಂದನು. ಆಗಲು ಎಲೀಯನು ಅವನ ಸಂಗಡ, ನೀನು ಅರಸನ ಬಳಿಗೆ ಹೋಗಿ—ಇಸ್ರಾಯೇಲಿನಲ್ಲಿ ವಿಚಾರಿಸತಕ್ಕ ದೇವರು ಇಲ್ಲದ ಹಾಗೆ ಮಾಡಿ, ಎಕ್ರೋನಿನ ದೆವ್ವವಾದ ಬಳ್ಜೆಬೂಬನ ಹತ್ತರ ದೂತರನ್ನು ಕಳುಹಿಸಿ ವಿಚಾರಿಸಿದದರಿಂದ, ನೀನು ಬಿದ್ದ ಮಂಚದಿಂದ ತಿರಿಗಿ ಯೇಳದೆ ಸಾಯಲೇ ಸಾಯುವಿ ಯೆಂದು ದೇವರ ಅಪ್ಪಣೆ ಆಗಿದೆ ಯೆಂತಾ ಹೇಳು ಅಂದನು. ಇದೇ ಪ್ರಕಾರ ಅಹಸ್ಯನು ಮಕ್ಕಳನ್ನು ಪಡೆಯದೆ ಸತ್ತು ಹೋದನು.

---

೪೫. ಎಲೀಷನ ಕಥೆಯು.



ಎಲೀಯನು ದೇವರ ಆಜ್ಞೆಯ ಪ್ರಕಾರ ಎಲೀಷನನ್ನು ತನ್ನ ಸ್ಥಳದಲ್ಲಿಟ್ಟನು. ಆ ಪ್ರವಾದಿಯಾದ ಎಲೀಯನು ಗುಡುಗು ಮಿಂಚುಗಳಾದನೆ ಅಗ್ನಿರಥದಿಂದ ಪರಲೋಕಕ್ಕೆ ಯೇರಿ ಹೋದದ್ದನ್ನು ನೋಡಿದ ಮೇಲೆ,

ಳು ಸಾರಿ ಮಳೆಗೋಸ್ಕರ ದೇವರಿಗೆ ಮೊರೆ ಇಟ್ಟು ಬೇಡಿಕೊಂಡು, ತನ್ನ ಸೇವಕನಿಗೆ ಸಮುದ್ರದ ಕಡೆಗೆ ತಿರುಗಿ ಮಳೆಬರುವದೋ ಇಲ್ಲವೋ ಯೆಂದು ನೋಡ ಬೇಕೆಂದು ಯೇಳು ಸಾರಿ ಆಜ್ಞಾಪಿಸಿದನು. ಅವನು ಯೇಳನೇ ಸಾರಿ ನೋಡುವಾಗ್ಯೆ ಮನುಷ್ಯನ ಕೈಯಷ್ಟು ದೊಡ್ಡ ಮೋಡವು ಸಮುದ್ರದಿಂದೇಳುವದು ಕಾಣುತ್ತದೆ ಅಂದನು. ಆಗ್ಯೆ ಎಲೀಯನು ಅಹಾಬನಿಗೆ, ಮಳೆಯು ನಿನ್ನನ್ನು ಹಿಡಿಯದ ಹಾಗೆ ರಥವನ್ನು ಸಿದ್ಧ ಮಾಡಿಸು ಯೆಂದು ವರ್ತಮಾನ ಹೇಳಿ ಕಳುಹಿಸಿದನು. ಆ ಕ್ಷಣದಲ್ಲಿ ಆಕಾಶವು ಮೇಘಗಳಿಂದ ತುಂಬಿ ಕಪ್ಪಾಗಿ ದೊಡ್ಡ ಮಳೆ ಸುರೀತು.

ಅದರ ಮೇಲೆ ಅಹಾಬನ ಮಗನಾದ ಅಹಸ್ಯನು ರೋಗದಲ್ಲಿ ಬಿದ್ದಾಗ, ಫಿಲಿಷ್ಟ್ಯರ ದೈವವಾದ ಬಳ್ಜೆಬೂಬನ ಪಾತ್ರರ ಜನರನ್ನು ಕಳುಹಿಸಿ ತನಗೆ ಸ್ವಸ್ಥವಾಗುವದೋ ಇಲ್ಲವೋ ಯೆಂದು ವಿಚಾರಿಸಿದನು. ಎಲೀಯನು ದೂತರೆದುರಿಗೆ ಬಂದು, ಎಕ್ರೋನಿನಲ್ಲಿರುವ ದೈವದ ಪಾತ್ರರ ವಿಚಾರಿಸುವದಕ್ಕೆ ನೀವು ಹೋಗುವದು ಯಾಕೆ? ಇಸ್ರಯೇಲಿನಲ್ಲಿ ದೇವರು ಇಲ್ಲವೋ? ಅದುಕಾರಣ ನೀನು ಸಾಯುವಿ ಯೆಂದು ಕರ್ತನು ಹೇಳುತಾನೆಂದನು. ಆ ದೂತರು ತಿರುಗಿ ಬಂದು ನಮ್ಮ ಯೆದುರಿಗೆ ಒಬ್ಬ ಮೃಗಚರ್ಮ ಧರಿಸಿದವನು ಬಂದು, ಅರಸನಿಗೆ ನೀನು ಸಾಯಲೇ ಸಾಯುವಿ ಯೆಂದು ಹೇಳಬೇಕೆಂದಾಜ್ಞಾಪಿಸಿದನು ಯೆನಲಾಗಿ, ಅರಸನು ಅವನೇ ಎಲೀಯನು ಯೆಂದು, ಒಬ್ಬ ಸೈನ್ಯಾಧಿಪತಿಯನ್ನು ಐವತ್ತು ಮಂದಿ ರಾಣುವೆಯವರ ಸಂಗಡ ಕಳುಹಿಸಿ ಅವನನ್ನು ಹಿಡಿದು ಕೊಂಡು ಬನ್ನಿಯೆಂದು ಆಜ್ಞಾಪಿಸಿದನು. ಆ ಸೈನ್ಯಾಧಿಪತಿಯು ಪ್ರವಾದಿಗೆ, ದೇವರ ಮನುಷ್ಯನೇ ನನ್ನ ಬಳಿಗೆ ಇಳಿದು ಬಾ, ಇದು ಅರಸನ ಆಜ್ಞೆಯು ಯೆನಲು, ಎಲೀಯನು ಪ್ರತ್ಯುತ್ತರವಾಗಿ, ನಾನು ದೇವರ ಮನುಷ್ಯನಾಗಿದ್ದರೆ, ಅಗ್ನಿಯು ಆಕಾಶದಿಂದ ಬಿದ್ದು ನಿನ್ನನ್ನೂ ನಿನ್ನ ಐವತ್ತು ಜನರನ್ನೂ ದಹಿಸಿ ಬಿಡಲಿ ಯೆಂದು ಹೇಳಿದನು. ಹಾಗೆಯೇ ಆಯಿತು. ಅರಸನು ಬೇರೆ ಸೈನ್ಯಾಧಿಪತಿಯನ್ನು ಕಳುಹಿಸಿದನು. ಇವನನ್ನೂ ಇವನ ಸಂಗಡ ಹೋದ ಐವತ್ತು ಜನರನ್ನೂ ಆಕಾಶದಿಂದ ಬಿದ್ದ ಅಗ್ನಿಯು ಭಕ್ಷಿಸಿತು.

ಮೊರೆ ಇಡಿರಿ; ನಾನು ನನ್ನ ದೇವರ ನಾಮಕ್ಕೆ ಮೊರೆ ಇಡುತ್ತೇನೆ; ಯಾರ ದೇವರು ಅಗ್ನಿ ಸುರಿಸುವನೋ, ಆತನೇ ದೇವರಾಗಲಿ ಯೆಂದು ಹೇಳಿದಾಗ, ಜನರು ಹೀಗೆ ಸರಿ ಅಂದರು.


ಬಾಳನ ಪೂಜಾರಿಗಳು ತಮ್ಮ ಕರು ಕಡಿದು, ಕಟ್ಟಿಗೆಯ ಮೇಲೆ ಇಟ್ಟು, ತಮ್ಮ ಮರ್ಯಾದೆಯ ಪ್ರಕಾರ ಪೀಠದ ಸುತ್ತುಮುತ್ತು ನಾಟ್ಯವಾಡಿ, ಬೆಳಿಗ್ಗೆ ಆರಂಭಿಸಿ ಮಧ್ಯಾನ್ಹದ ಪರ್ಯಂತರ, ಬಾಳನೇ ನಮ್ಮನ್ನು ಕೇಳು ಯೆಂದು ಕೂಗಿದರು. ಆದರೆ ಶಬ್ದವಾದರೂ ಪ್ರತ್ಯುತ್ತರವಾದರೂ ಆಗಲಿಲ್ಲ. ಆಗ್ಗೆ ಎಲೀಯನು ಅವರಿಗೆ ಹಾಸ್ಯ ಮಾಡಿ, ಅವನು ದೇವರೇ ಸರಿ, ಘಟ್ಟಾಗಿ ಕೂಗಿರಿ; ಒಂದು ವೇಳೆ ಅವನು ಧ್ಯಾನ ಮಾಡುವನು, ಇಲ್ಲವೆ ಕೆಲಸದಲ್ಲಿ ಇರುವನು, ಇಲ್ಲವೆ ಪ್ರಯಾಣ ಮಾಡಿರುವನು, ಇಲ್ಲವೆ ನಿದ್ರೆಗೈಯುವನು ಯೆನಲು, ಅವರು ಹೆಚ್ಚಾಗಿ ನಾಟ್ಯವಾಡಿ ತಮ್ಮ ಪೂರ್ಣ ಬಲದಿಂದ ಕೂಗಿ, ಚೂರಿಗಳಿಂದ ತಮ್ಮ ಶರೀರಗಳನ್ನು ರಕ್ತಬರುವ ಹಾಗೆ ಕೆತ್ತಿಕೊಂಡರು. ಆದಾಗ್ಯೂ ಶಬ್ದವಾದರೂ ಪ್ರತ್ಯುತ್ತರವಾದರೂ ಆಗಲಿಲ್ಲ.

ದೇವಾಲಯದ ಮರ್ಯಾದೆಯ ಪ್ರಕಾರ ಸಾಯಂಕಾಲದ ಬಲಿಯನ್ನು ಅರ್ಪಿಸುವ ಸಮಯವು ಬಂದಾಗ, ಎಲೀಯನು ಒಂದು ಪೀಠವನ್ನು ಕಟ್ಟಿಸಿದನು. ಪೀಠದ ಸುತ್ತ ಕುಣಿಯನ್ನು ಅಗಿದು, ಕಟ್ಟಿಗೆಯ ಮೇಲೆಯೂ ದಹನಬಲಿಯ ಮೇಲೆಯೂ ಆ ಕುಣಿ ತುಂಬುವ ಪರ್ಯಂತರ ನೀರು ಹೊಯ್ಸಿದನು. ಅದು ಆದ ಮೇಲೆ—ಅಬ್ರಹಾಮನ ಇಸಾಕನ ಯಾಕೋಬನ ದೇವರಾದ ಕರ್ತನೇ, ನೀನು ಇಸ್ರಾಯೇಲಿನ ದೇವರಾಗಿರುತ್ತೀ ಯೆಂದೂ, ನಾನು ನಿನ್ನ ಸೇವಕನಾಗಿರುತ್ತೇನೆ ಯೆಂದೂ, ಈ ಹೊತ್ತು ಪ್ರಸಿದ್ಧಿ ಮಾಡು ಯೆಂದು ಪ್ರಾರ್ಥಿಸಿದನು. ಆವಾಗ್ಗೆ ಕರ್ತನ ಅಗ್ನಿಯು ಮೇಲಿನಿಂದ ಬಿದ್ದು ಬಲಿಯನ್ನು ದಹಿಸಿ, ಕುಣಿಯ ನೀರನ್ನು ಹೀರಿಬಿಟ್ಟಿತು. ಜನರೆಲ್ಲರು ಮೋರೆ ಕೆಳಗಾಗಿ ಬಿದ್ದು, ಕರ್ತನು ದೇವರಾಗಿದ್ದಾನೆಂದು ಕೂಗಿದರು. ಆದರೆ ಎಲೀಯನು ಬಾಳನ ಪೂಜಾರಿಗಳು ತಪ್ಪಿ ಹೋಗದ ಹಾಗೆ, ಅವರನ್ನು ಹಿಡಿದು ಹತಮಾಡಿದನು. ತರುವಾಯ ಆತನು ಯೇ

ಹೊರಗೆ ಬಾ, ಆಮೇಲೆ ನೀನು ನಿಂನ ಮಗನ ಸಂಗಡ ತಿನ್ನು, ಯಾಕೆಂದರೆ ಕರ್ತನು ಭೂಮಿಯ ಮೇಲೆ ಮಳೆಯನ್ನು ಸುರಿಸುವ ದಿವಸದ ಪರ್ಯಂತರ ಕಾಡದಲ್ಲಿರುವ ಹಿಟ್ಟು ಕ್ಷಯವಾಗದೆ, ಹೊಗೆಯಲ್ಲಿರುವ ಯೆಂಣೆಯು ಕಡಮೆಯಾಗದೆ ಇರುವದು ಯೆಂದು, ಇಸ್ರಾಯೇಲಿನ ದೇವರಾದ ಕರ್ತನು ಹೇಳಿದ್ದಾನೆ ಅಂದನು. ಆಗ್ಯೆ ಎಲೀಯನು ಆ ದರಿದ್ರ ವಿಧವೆಯ ಮನೆಯಲ್ಲಿ ಊಟ ಮಾಡಿ, ಒಂದು ವರ್ಷದ ಮೇಲೆ ಕೆಲವು ದಿವಸ ಅವಳಲ್ಲಿ ವಾಸವಾಗಿದ್ದನು. ಕಾಡದಲ್ಲಿ ಹಿಟ್ಟು ಕ್ಷಯವಾಗಲಿಲ್ಲಾ, ಹೊಗೆಯಲ್ಲಿ ಯೆಂಣೆ ಕಡಮೆಯಾಗಲಿಲ್ಲಾ. ಆಕಾಶವು ಮೂರುವರೆ ವರ್ಷ ಪರ್ಯಂತರ ಮುಚ್ಚಿ ಇದ್ದ ತರುವಾಯ, ಕರ್ತನು ಎಲೀಯನಿಗೆ—ನೀನು ಹೋಗಿ ನಾನು ಮಳೆ ಸುರಿಸುವದಕ್ಕಾಗಿ ಅಹಾಬನಿಗೆ ಕಾಣಿಸಿಕೋ ಅಂದನು. ಅಹಾಬನು ಅವನು ಬರುವದನ್ನು ನೋಡಿ, ಅವನಿಗೆದುರಾಗಿ, ಸಮಸ್ತ ಕಷ್ಟವನ್ನು ಇಸ್ರಾಯೇಲ್ಯರ ಮೇಲೆ ಯೆಬ್ಬಿಸುವವನು ನೀನೇ ಅಲ್ಲವೋ ಅಂದನು. ಎಲೀಯನು ಕಷ್ಟವನ್ನು ಯೆಬ್ಬಿಸುವವನು ನಾನಲ್ಲಾ, ನೀನೂ ನಿಂನ ತಂದೆಯ ಮನೆತನವೂ ದೇವರ ಆಜ್ಞೆಗಳನ್ನು ಮೀರಿ ವಿಗ್ರಹಗಳನ್ನು ಹಿಂಬಾಲಿಸುತ್ತಿರುವದರಿಂದ, ಕಷ್ಟವನ್ನು ಯೆಬ್ಬಿಸುತ್ತೀರಿ ಯೆಂದು ಹೇಳಿದನು. ತರುವಾಯ ಅರಸನು ಪ್ರವಾದಿಯು ಹೇಳಿದ ಆಲೋಚನೆಗೆ ಒಪ್ಪಿ, ಕರ್ಮೇಲ ಪರ್ವತದಲ್ಲಿ ರಾಜ್ಯಸಭೆಯನ್ನು ಕೂಡಿಸಿ, ಬಾಳನ ಆ ನಾನೂರೈವತ್ತು ಮಂದಿ ಪೂಜಾರಿಗಳು ಬರಬೇಕೆಂದು ಆಜ್ಞಾಪಿಸಿದನು.

ಪ್ರವಾದಿಯು ಜನರಿಗೆ ಪ್ರಸಂಗಿಸಿ, ನೀವು ಯಾಕೆ ಯೆರಡು ಕಾಲು ಕುಂಟಿಕೊಳ್ಳುತ್ತಾ ನಡೆಯುತ್ತೀರಿ? ಕರ್ತನು ದೇವರಾಗಿದ್ದರೆ, ಆತನನ್ನು ಹಿಂಬಾಲಿಸಿರಿ; ಬಾಳನು ದೇವರಾಗಿದ್ದರೆ, ಅವನಿಗೆ ಹತ್ತಿ ಕೊಳ್ಳಿರಿ ಯೆನಲು, ಜನರು ನಿರುತ್ತರವಾಗಿದ್ದರು. ಆಗ್ಯೆ ಎಲೀಯನು—ನಾನು ಒಂಟಿಯಾಗಿದ್ದೇನೆ, ಬಾಳನ ಪ್ರವಾದಿಗಳು ನಾನೂರೈವತ್ತು ಮಂದಿ ಇಲ್ಲಿ ಇದ್ದಾರೆ; ನಮಗೆ ಯೆರಡು ಕರುಗಳಂನು ಕೊಡಿರಿ; ಅವುಗಳಲ್ಲಿ ಒಂದನ್ನು ನಾನು, ಮತ್ತೊಂದನ್ನು ಅವರು ಬೆಂಕಿ ಹಾಕದೆ ಕಟ್ಟಿಗೆಯ ಮೇಲೆ ಇಟ್ಟ ತರುವಾಯ, ನೀವು ನಿಮ್ಮ ದೇವರ ನಾಮಕ್ಕೆ

ದೆ ನಿಂತು ನಾನು ಹೇಳುವನಕಾ ಈ ವರ್ಷಗಳಲ್ಲಿ ಮಂಜಾದರೂ ಮಳೆಯಾದರೂ ಬೀಳದೆಂಬದಕ್ಕೆ, ನಾನು ಸೇವಿಸುವ ಇಸ್ರಯೇಲಿನ ದೇವರಾದ ಕರ್ತನ ಆಣೆ ಯೆಂದು ಹೇಳಿದನು. ಬರವು ಬಂದ ಮೇಲೆ ಪ್ರವಾದಿಯು ಕ್ರೀತೆಂಬ ಹಳ್ಳದ ಹತ್ತಿರ ಅಡಗಿಕೊಂಡು, ಕಾಗೆಗಳು ತನಗೆ ತಂದ ರೊಟ್ಟಿಯನ್ನೂ, ಮಾಂಸವನ್ನೂ ತಿಂದು, ಆ ಹಳ್ಳದ ನೀರನ್ನು ಕುಡಿದುಕೊಂಡಿದ್ದನು. ಆದರೆ



ಆ ಹಳ್ಳವು ಸಹಾ ಒಣಗಿದಾಗ, ಕರ್ತನು—ನೀನು ಸರೆಪ್ತಕ್ಕೆ ಹೋಗು, ನಿಂನನ್ನು ಸಂರಕ್ಷಿಸಬೇಕೆಂದು ಒಬ್ಬ ವಿಧವೆಗೆ ಆಜ್ಞಾಪಿಸಿದ್ದೇನೆ ಅಂದನು. ಎಲೀಯನು ಹೋಗಿ, ಆ ಊರ ಬಾಗಿಲ ಹತ್ತರ ಬಂದಾಗ, ಇಗೋ, ಒಬ್ಬ ವಿಧವೆಯು ಅಲ್ಲಿ ಕಟ್ಟಿಗೆ ಕೂಡಿಸುತ್ತಾ ಇದ್ದಳು. ಪ್ರವಾದಿಯು ಅವಳಿಗೆ ಸ್ವಲ್ಪ ನೀರು ಕುಡಿಯಲಿಕ್ಕೆ ಕೊಡು ಅಂದನು. ಅವಳು ಹೋಗುವಾಗ್ಯೆ ಅವನು ರೊಟ್ಟಿಯ ತುಂಡು ಸಹಾ ತೆಗದು ಕೊಂಡು ಬಾ ಯೆಂದು ಹಿಂದಿನಿಂದ ಕೂಗಿ ಹೇಳಿದನು. ಆ ದರಿದ್ರಳು ಪ್ರತ್ಯುತ್ತರವಾಗಿ, ದೇವರ ಜೀವದಾಣೆ ನಂನ ಕೊಡದಲ್ಲಿ ಒಂದು ಹಿಡಿ ಹಿಟ್ಟೂ ನಂನ ಮೊಗೆಯಲ್ಲಿ ಸ್ವಲ್ಪ ಯೆಣ್ಣೆಯೂ ಮಾತ್ರ ಉಂಟು, ಅದರಿಂದ ಈಗ ನನಗೂ ನನ್ನ ಮಗನಿಗೂ ರೊಟ್ಟಿ ಮಾಡುತ್ತೇನೆ, ತಿಂದ ಮೇಲೆ ಸಾಯುತ್ತೇವೆ ಯೆನಲು; ಎಲೀಯನು ಅವಳಿಗೆ, ಭಯ ಪಡ ಬೇಡ, ಹೋಗಿ ನಾನು ಹೇಳಿದ ಹಾಗೆ ಮಾಡು, ಆದರೆ ಮೊದಲು ನನಗೆ ಒಂದು ಸಂಣ ರೊಟ್ಟಿಯನ್ನು ಮಾಡಿ ತಕೊಂಡು


ತನ್ನ ಕೆಟ್ಟ ಮಾರ್ಗವನ್ನು ಬಿಡಲಿಲ್ಲ. ಆದದರಿಂದ ಅಂದಿನಿಂದ ಇಸ್ರಾಯೇಲಿನಲ್ಲಿ ಕ್ಷೇಮವಿಲ್ಲದೆ ಹೋಯಿತು. ಕಾಟಕಾಯಿಯ ಮೇಲೆ ಕಾಟಕಾಯಿಯು ಬಂತು. ಒಬ್ಬ ಅರಸನು ಸಿಂಹಾಸನದಲ್ಲಿ ಕೂತ ಕೂಡಲೇ, ಮತ್ತೊಬ್ಬನು ಅವನನ್ನು ದೊಬ್ಬಿ, ಅವನನ್ನೂ ಅವನ ಯೆಲ್ಲಾ ಸಂತಾನವನ್ನೂ ಕೊಂದು, ತಾನು ಇಂತಾಬ್ಬ ಕೆಟ್ಟವನ ಕೈಯಿಂದ ಸಂಹಾರಿಸಲ್ಪಟ್ಟನು. ಯೆಲ್ಲರು ಯೆರೊಬೊಾಮನ ಪಾಪದಲ್ಲಿ ಸೇರಿ ಚಿಂನದ ಕರುಗಳಿಗೆ ಪೂಜೆ ಮಾಡುತ್ತಿದ್ದರು. ಇದಲ್ಲದೆ ಅನ್ಯಜನರ ಸಕಲ ವಿಗ್ರಹಾರಾಧನೆಗಳೂ ಅಸಹ್ಯವಾದ ಬಲಿಗಳೂ ಪ್ರಬಲವಾದದರಿಂದ ದೇಶವು ನಷ್ಟದಲ್ಲಿ ಮುಳುಗಿ ಹೋಯಿತು.

---

೪೪. ಪ್ರವಾದಿಯಾದ ಎಲೀಯನು.

ಅರಸನಾದ ಅಹಾಬನು ಮುಂಚಿನ ಸಕಲ ಅರಸುಗಳಿಗಿಂತ ಹೆಚ್ಚಾಗಿ ವಿಗ್ರಹಾರಾಧನೆಗಳನ್ನು ನಡಸಿದನು. ಅವನ ಹೆಂಡತಿಯಾದ ಯೆಸೇಬೆಲಳು ಚಿದೋನಿನ ಅರಸನ ಮಗಳಾಗಿ ಚಿದೋನ್ಯರ ದೇವ್ವಗಳಿಗೆ ಸಮಾರ್ಯರ ದೇಶದಲ್ಲಿ ಅಲಂಕಾರವಾದ ದೇವಸ್ಥಾನಗಳನ್ನು ಕಟ್ಟಿಸಿ, ಬಾಳನೆಂಬ ಸೂರ್ಯದೇವರ ನಾನೂರೈವತ್ತು ಮಂದಿ ಪೂಜಾರಿಗಳನ್ನೂ, ಅಷ್ಟರೋತೆಂಬ ಚಂದ್ರದೇವಿಯ ನಾನೂರು ಮಂದಿ ಪೂಜಾರಿಗಳನ್ನೂ ಇಟ್ಟಿದ್ದಳು. ಆ ದೇವಿಯ ಭಕ್ತರು ತೋಪುಗಳೊಳಗೆ ರಾತ್ರಿಕಾಲದಲ್ಲಿ ಕೂಡಿ ಬಂದು, ಸೂಳೆಯರಿಗೆ ಕೂಡಿಕೊಂಡು ಅಸಹ್ಯರೀತಿಯಾಗಿ ಆ ದೇವತೆಗೆ ಸೇವೆ ಮಾಡುತ್ತಿದ್ದರು. ಆ ಸಮಯದಲ್ಲಿ ಇಸ್ರಾಯೇಲಿನ ದೇವರ ಭಕ್ತರು ಹಿಂಸೆಯನ್ನೂ, ದೇವರ ಪ್ರವಾದಿಗಳು ಮರಣವನ್ನೂ ಪಟ್ಟರು. ಆದಾಗ್ಯೂ ಅಹಾಬನ ಅರಮನೆಯ ಸೇವಕರಲ್ಲಿ ಒಬ್ಬನು ಅಂತರಂಗದಲ್ಲಿ ದೇವರಿಗೆ ಭಯ ಪಟ್ಟು, ನೂರು ಮಂದಿ ಪ್ರವಾದಿಗಳನ್ನು ತಪ್ಪಿಸಿ, ಗುಹೆಗಳಲ್ಲಿ ಅಡಗಿಸಿ, ಅಂನಪಾನದಿಂದ ಸಂರಕ್ಷಿಸಿದನು. ಆವಾಗ ಪ್ರವಾದಿಯಾದ ಎಲೀಯನು ಅರಸನ ಮುಂ

ಗಳನ್ನು ನಿನ್ನ ಮೇಲೆ ಸುಟ್ಟು ಬಿಡುವನು ಅಂದನು. ಯೆರೊಬಾಮನು ಈ ಮಾತು ಕೇಳಿ, ತನ್ನ ಕೈಯನ್ನು ಚಾಚಿ, ಅವನನ್ನು ಹಿಡಿಯಿರಿ ಯೆನಲು, ಅವನ ಕೈ ಸೆಟ್ಟಾಗಿ ಹೋಯಿತು. ಮತ್ತು ಪೀಠವು ಹರಿದು ಭಸ್ಮವು ಹಾರಿ ಹೋಯಿತು. ಆಗ್ಗೆ ಅರಸನು ದೇವರ ಮನುಷ್ಯನಿಗೆ, ನೀನು ನನಗೋಸ್ಕರ ಕರ್ತನಿಗೆ ಮೊರೆ ಇಡು, ಯೆಂದು ಬೇಡಿ ಕೊಂಡನು. ಅವನು ಕರ್ತನಿಗೆ ಮೊರೆ ಇಡುವಾಗಲೇ ಅರಸನ ಕೈ ಮುಂಚಿನ ಹಾಗೆ ಸಮವಾಯಿತು. ದೇವರ ಮನುಷ್ಯನು ತನ್ನ ಕಾರ್ಯವನ್ನು ಮಾಡಿದ ಮೇಲೆ, ದೇವರು ಆಜ್ಞಾಪಿಸಿದ ಪ್ರಕಾರ ತನ್ನ ದೇಶಕ್ಕೆ ತಿರುಗಿ ಹೋದನು. ಆವಾಗ್ಗೆ ಬೆಥೇಲಿನಲ್ಲಿರುವ ವೊಬ್ಬ ಮುದುಕನಾದ ಪ್ರವಾದಿಯು ಅವನ ಹಿಂದೆ ಬಂದು, ಮೋಸದಿಂದ ಮಾತಾಡಿ, ಅವನು ದೇವರ ಆಜ್ಞೆಗೆ ವಿರೋಧವಾಗಿ ಮನೆಗೆ ತಿರುಗಿ ಬಂದು ಭೋಜಿಸುವ ಹಾಗೆ ಮಾಡಿದನು. ತದನಂತರ ಅವನು ತನ್ನ ದೇಶಕ್ಕೆ ಹೋಗುವ ಮಾರ್ಗದಲ್ಲಿರುವಾಗ್ಗೆ, ವೊಂದು ಸಿಂಹವು ಬಂದು ಅವನನ್ನು ಕೊಂದು ಹಾಕಿ, ತಿನ್ನದೆ ಆ ಶವದ ಹತ್ತಿರ ನಿಂತಿತು. ಮತ್ತು ಆ



ಸತ್ತು ಹೋದ ಪ್ರವಾದಿಯ ಕತ್ತೆಯು ಅಲ್ಲೇ ನಿಂತಿತು. ಅವನ ಅವಿಧೇಯತ್ವದಿಂದ ದೇವರ ಶಿಕ್ಷೆಯು ಅವನ ಮೇಲೆ ಹೀಗೆ ಬಂದದ್ದಾಯಿತು. ಆ ಮೇಲೆ ಮೋಸ ಮಾಡಿದ ಆ ಬೆಥೇಲಿನವನಾದ ಪ್ರವಾದಿಯು ಬಂದು, ಶವವನ್ನು ಹೂಳಿಟ್ಟನು.

ಇಂಥಾ ಆಶ್ಚರ್ಯಕಾರ್ಯಗಳು ಸಂಭವಿಸಿದ್ದಾಗ್ಯೂ, ಯೆರೊಬಾಮನು

ಬಳಿಗೆ ಕಳುಹಿಸಿ—ನಿನ್ನ ತಂದೆಯು ಅತಿ ಭಾರವಾದ ನೊಗವನ್ನು ನಮ್ಮ ಮೇಲೆ ಇಟ್ಟನು; ನೀನು ನಮ್ಮ ಸೇವೆಯ ಭಾರವನ್ನು ಕಡಿಮೆ ಮಾಡಿದರೆ, ನಾವು ನಿನಗೆ ವಶವಾಗುತ್ತೇವೆಂದು ಹೇಳಿಸಿದರು. ರೆಹಬಾಮನು—ನನ್ನ ತಂದೆಯು ನಿಮ್ಮ ನೊಗವನ್ನು ಭಾರ ಮಾಡಿದ್ದರೆ, ನಾನು ಇನ್ನೂ ಭಾರ ಮಾಡುತ್ತೇನೆ; ನನ್ನ ಕಿರಿ ಬೆರಳು ನನ್ನ ತಂದೆಯ ಸಮಸ್ತ ಭಾರಕ್ಕಿಂತ ಹೆಚ್ಚಾಗಿ ನಿಮಗೆ ವೊತ್ತಲಿ; ನನ್ನ ತಂದೆಯು ಚಬುಕಿನಿಂದ ನಿಮಗೆ ಹೊಡದನು, ಆದರೆ ನಾನು ಕಬ್ಬಿಣದ ಕೊರಡೆಯಿಂದ ಶಿಕ್ಷಿಸುವೆನು ಅಂದನು. ಜ್ಞಾನಿಯಾದ ಸೊಲೊಮೋನನ ಹುಟ್ಟ ಮಗನು, ಇಂಥಾ ಕಠೋರವಾದ ಮಾತುಗಳಂನಾಡಿದರೆ, ಇಸ್ರಯೇಲ್ಯರು ಭಯ ಪಟ್ಟು, ತನಗೆ ಸ್ವಾಧೀನವಾದಾರೆಂದು ನೆನೆಸಿದನು. ಆದರೆ ಇವರು ಮನಸ್ಸನ್ನು ದೃಢ ಮಾಡಿಕೊಂಡು, ಇಸಾಯನ ಮನೆಯು ನಮಗೇನು? ಇಸ್ರಯೇಲಿನಲ್ಲಿ ಇನ್ನೂ ಬೇರೆ ಮನೆಗಳಿದ್ದಾವೆಂದು ಕೂಗಿದರು. ಹೀಗಿರಲಾಗಿ ಹತ್ತು ಗೋತ್ರಗಳು ಯೆಹೂದ್ಯ ಗೋತ್ರಕ್ಕೆ ತಿರುಗಿಬಿದ್ದು, ಇಸ್ರಯೇಲಿನ ರಾಜ್ಯವೆಂಬ ಹೆಸರನ್ನು ಮಾಡಿ ಕೊಂಡು, ಪ್ರತ್ಯೇಕವಾದ ವೊಂದು ರಾಜ್ಯವನ್ನು ಸ್ಥಾಪಿಸಿ, ಕೀರ್ತಿಯುಳ್ಳ ಸೈನ್ಯಾಧಿಪತಿಯಾದ ಯೆರೊಬಾಮನಿಗೆ ಇಸ್ರಯೇಲಿನ ಪಟ್ಟವನ್ನು ಕೊಟ್ಟರು. ಇದಕ್ಕೆ ದೇವರು ವೊಬ್ಬ ಪ್ರವಾದಿಯನ್ನು ಕಳುಹಿಸಿ, ಅವರು ಚನ್ನಾಗಿ ಮಾಡಿದರೆಂದು ಸಾಕ್ಷಿ ಕೊಟ್ಟನು.

ಆದರೆ ಯೆರೊಬಾಮನು ಇಸ್ರಯೇಲಿನ ದೇವರಿಗೆ ಹತ್ತಿ ಕೊಳ್ಳದೆ, ಬೆಥೇಲಿನಲ್ಲಿಯೂ ದಾನಿನಲ್ಲಿಯೂ ಭಂಗಾರದ ಬಸವಗಳನ್ನು ಪೂಜೆಗಾಗಿ ಮಾಡಿಸಿ ಇಟ್ಟು, ಜನರು ಯೆರೂಸಲೇಮಿನಲ್ಲಿರುವ ಹಬ್ಬಗಳಿಗೆ ಹೋಗದ ಹಾಗೆ ಅಡ್ಡ ಮಾಡಿದನು. ಆಗಲು ದೇವರು ಯೆಹೂದ್ಯ ದೇಶದಿಂದ ವೊಬ್ಬ ಮನುಷ್ಯನನ್ನು ಕಳುಹಿಸಿದನು. ಇವನು ಯೆರೊಬಾಮನು ಕಟ್ಟಿದ ಪೀಠಕ್ಕೆ ಯೆದುರಾಗಿ ನಿಂತು ಕೂಗಿ—ವೋ ಪೀಠವೇ, ಕರ್ತನು ಹೇಳುವದೇನೆಂದರೆ, ಇಗೋ ದಾವೀದನ ಮನೆಯಲ್ಲಿ ಹುಟ್ಟಿದ ಯೋಷೀಯನೆಂಬವನು ನಿನ್ನ ಮೇಲೆ ಗುಡಿಗಳ ಪೂಜಾರಿಗಳನ್ನು ಬಲಿಯಾಗಿ ಅರ್ಪಿಸಿ, ನರರ ಯೆಲುಬು

ಳಿಂದ ಅರಸರು ಆತನನ್ನು ನೋಡುವದಕ್ಕೂ ಆತನ ಜ್ಞಾನ ಕೇಳುವದಕ್ಕೂ ಬರುತ್ತಿದ್ದರು. ಸೊಲೊಮೋನನ ಸಾಮತಿಗಳು ಬುದ್ಧಿಹೀನರಿಗೂ ಬುದ್ಧಿಯುಳ್ಳವರಿಗೂ ಉಪದೇಶವನ್ನು ಕೊಡುವ ಹಾಗೆ ಜ್ಞಾನದಿಂದ ತುಂಬಿಯವೆ.

ಆದಾಗ್ಯೂ ಸೊಲೊಮೋನನು ತನಗುಂಟಾದ ವಿಶೇಷವಾದ ಜ್ಞಾನದ ಮೂಲಕದಿಂದ ಪಾಪಕ್ಕೆ ತಪ್ಪಿ ಹೋಗಲಿಲ್ಲ. ಅವನು ಕಾನಾನ್ ಚಿದೋನ್, ಚೋರ, ಮಿಸ್ರ ಮೊದಲಾದ ದೇಶಗಳಿಂದ ಕೆಲವು ನೂರು ರಾಜಕುಮಾರಿಗಳನ್ನು ತೆಗದು ಕೊಂಡು, ತನ್ನ ಅರಮನೆಯಲ್ಲಿ ಇಟ್ಟದರಿಂದ, ಇವರು ತಮ್ಮ ವಿಗ್ರಹಾರಾಧನೆಗಳನ್ನು ಯೆರೂಸಲೇಮಿನಲ್ಲಿ ಸ್ಥಾಪಿಸಿ, ಸೊಲೊಮೋನನ ಹೃದಯವನ್ನು ಕೆಡಿಸಿದರು. ಈ ಪ್ರಕಾರ ಯೆಲ್ಲರಿಗಿಂತ ಬುದ್ಧಿಜ್ಞಾನವುಳ್ಳ ಅರಸನಾದ ಸೊಲೊಮೋನನು ಮತ್ತೊಬ್ಬರಿಗೆ ಭಯ ಹುಟ್ಟುವ ಹಾಗೆ ಪಾಪದ ಕುಣಿಯಲ್ಲಿ ಸಿಕ್ಕಿ ಬಿದ್ದು, ದೇವರು ಇಸ್ರಯೇಲ್ಯರ ಸಂಗಡ ನಿರ್ಮಿಸಿದ ಒಡಂಬಡಿಕೆಯನ್ನು ಮೀರುವ ಕೆಟ್ಟ ಮಾರ್ಗದಲ್ಲಿ ಸೇರಿದನು.

---

೪೩. ರಾಜ್ಯದ ವಿಭಾಗ.

ಸೊಲೊಮೋನನು ತೀರಿದ ಮೇಲೆ, ಇಸ್ರಯೇಲಿನ ಗೃಹಸ್ಥರು ಹೊಸ ಅರಸನನ್ನು ಆರಿಸಿ ತೆಗದು ಕೊಳ್ಳಲಿಕ್ಕೆ ಕೂಡಿ ಬಂದರು. ಸೊಲೊಮೋನನ ಚೊಚ್ಚಲ ಮಗನಾದ ರೆಹಬಾಮನು ತನಗೆ ರಾಜ್ಯವು ಆಗ ಬೇಕೆಂದು ನೆನಸಿಕೊಂಡನು. ಆದರೆ ಆ ಸಮಯದಲ್ಲಿ ಒಬ್ಬ ಅರಸನು ಸತ್ತು ಹೋದ ಮೇಲೆ, ಮಗನು ಆ ಪಟ್ಟವನ್ನು ಹೊಂದ ಬೇಕೆಂಬ ಕಟ್ಟಳೆ ಇರಲಿಲ್ಲ. ರಾಜ್ಯಸಭೆಯು ಸಿಕೇಮಿನಲ್ಲಿ ಉಂಟಾಯಿತು. ರೆಹಬಾಮನು ಅಲ್ಲಿ ಬಂದು ತಾನು ಅರಸನಾಗಿದ್ದೇನೆಂಬ ಹಾಗೆ ಮಾಡಿ, ಜನಾಂಗಕ್ಕೆ ತಂದೆಯಾಗ ತಕ್ಕ ಒಳ್ಳೇ ಅರಸನ ಗುಣಗಳನ್ನು ತೋರಿಸದೆ, ಜನರಿಗೆ ಹೆದರಿಸಿಯೇ ಆಳ ಬೇಕೆಂಬ ಕ್ರೂರ ಅರಸನ ಪ್ರಕಾರ ನಡಕೊಂಡನು. ಜನರು ಕೆಲವರನ್ನು ಅವನ

ಮಸ್ತ ಜನರು ಅವರ ಚಿತ್ತಾನುಸಾರವಾಗಿ ಬಂಗಾರ ಬೆಳ್ಳಿ ರತ್ನ ಮುಂತಾದ ತಾ
ಗೀತೆಗಳನ್ನು ತರ ಬೇಕೆಂದು ಪ್ರೇರೇಪಿಸಿದನು.

ಈ ಪ್ರಕಾರ ಷಲೋಮೋನನು ಆ ಕಾಲದಲ್ಲಿ ಬಾಳಿದ ಸಮಸ್ತ ಅರಸರಿಗಿಂ
ತ ಐಶ್ವರ್ಯವಂತನಾಗಿದ್ದನು. ಅವನು ಬಾಳುವ ಸಮಯದಲ್ಲಿ ಇಸ್ರಾಯೇ
ಲ್ಯರು ಕ್ಷೇಮವಾಗಿ ತಮ್ಮ ತಮ್ಮ ದ್ರಾಕ್ಷೆ ಇಪ್ಪೆ ಗಿಡಗಳ ನೆರಳಿನಲ್ಲಿ ವಾಸವಾ
ಗಿದ್ದರು. ಆದರೂ ಷಲೋಮೋನನಿಗೆ ಐಶ್ವರ್ಯಕ್ಕಿಂತ ಜ್ಞಾನವು ದೊಡ್ಡದಾಗಿತ್ತು.
ಅವನು ಪಟ್ಟವನ್ನು ಹೊಂದಿದ ಮೇಲೆ ದೇವರು ಅವನಿಗೆ ದರ್ಶನದಿಂ
ದ ಪ್ರತ್ಯಕ್ಷವಾಗಿ ವರವನ್ನು ಬೇಡಿಕೋ ಯೆನಲು, ಷಲೋಮೋನನು ಈ
ದೊಡ್ಡ ಜನಾಂಗವನ್ನು ಆಳಲಿಕ್ಕಿರುವ ನಾನು ಬುದ್ಧಿ ಇಲ್ಲದ ಹುಡುಗ
ನಾಗಿದ್ದೇನೆ; ನಾನು ಹಾಳೆಯದನ್ನೂ ಕೆಟ್ಟದ್ದನ್ನೂ ಅರಿತು, ನಿನ್ನ ಜನಾಂಗಕ್ಕೆ ನ್ಯಾ
ಯ ತೀರಿಸುವದಕ್ಕೆ ನನಗೆ ಜ್ಞಾನವುಳ್ಳ ವಿಧೇಯವಾದ ಮನಸ್ಸನ್ನು ಕೊಡು
ಯೆಂದು ಹೇಳಿದನು. ಈ ಮಾತು ದೇವರಿಗೆ ಸಮರ್ಪಕವಾಗಿರುವದರಿಂದ,
ಆತನು ಷಲೋಮೋನನಿಗೆ—ನೀನು ದೀರ್ಘಾಯುಷ್ಯವಂತನಾದರೂ ಐಶ್ವರ್ಯವ
ನ್ನಾದರೂ ಶತ್ರುಪರಾಜಯವನ್ನಾದರೂ ಬೇಡಿ ಕೊಳ್ಳದೆ, ಈ ವಿಜ್ಞಾಪನೆ ಮಾ
ಡಿದದರಿಂದ, ಇಗೋ, ನಿನ್ನ ಮಾತಿನ ಪ್ರಕಾರವೇ ಮಾಡಿದೆನು; ಇಗೋ, ಲೋ
ಕದಲ್ಲಿ ನಿನಗೆ ಸಮಾನನಾದವನಿಲ್ಲದಷ್ಟು ಜ್ಞಾನವನ್ನು ನಿನಗೆ ಕೊಟ್ಟೆನು; ಇ
ದಲ್ಲದೆ ನೀನು ಬೇಡಿ ಕೊಳ್ಳದ ವರಗಳಾದ ಐಶ್ವರ್ಯವನ್ನೂ ಘನವನ್ನೂ ನಿ
ನ್ನ ಕಾಲದಲ್ಲಿರುವ ಸಕಲ ಅರಸುಗಳಿಗೆ ಕೊಡದಷ್ಟು ನಿನಗೆ ಕೊಡುತ್ತೇನೆ ಅಂ
ದನು. ಇದು ಸ್ವಪ್ನವೇ ಸರಿ. ಆದರೆ ಆ ಮೇಲೆ ಆದ ಕಾರ್ಯಗಳಿಂದ
ಈ ಸ್ವಪ್ನವು ದೇವರಿಂದ ಬಂತೆಂದು ಕಾಣುವದು. ಹ್ಯಾಗಂದರೆ ಷಲೋ
ಮೋನನು ಜ್ಞಾನ ದ್ರವ್ಯ ಮಹಿಮೆಗಳ ವಿಷಯವಾಗಿ ಸಮಸ್ತ ಅರಸ
ರುಗಳಿಗಿಂತ ಕೀರ್ತಿಯುಳ್ಳವನಾದನು. ಅವನ ಹಡಗಗಳಲ್ಲಿ ಕೆಲವು ಕೆಂಪು
ಸಮುದ್ರದಿಂದ ಹೊರಟು ಹಿಂದು ದೇಶಕ್ಕೆ ಹೋಗಿ ವ್ಯಾಪಾರ ನಡಿಸುತ್ತಿ
ದ್ದವು. ಕೆಲವು ಈಗಿನ ಹಿಸ್ಪಾನ್ಯ ದೇಶವಾದ ತರ್ಷೀಷಿಗೆ ಹೋಗಿ ಅಲ್ಲಿಂ
ದ ಅಫ್ರಿಕ ದೇಶದ ವ್ಯಾಪಾರಗಳನ್ನು ತರುತ್ತಿದ್ದವು. ಬಹಳ ದೂರ ದೇಶಗ

ಯೆದುಥೂನನೂ ಪ್ರಸಿದ್ಧ ವೀಣೆಗಾರನಾದ ಹೇಮಾನನೂ ಮುಖ್ಯಸ್ಥರಾಗಿದ್ದರು.

---

೪೨. ಸೊಲೊಮೋನನು.



ಅರಸನಾದ ದಾವೀದನು ಸಿಂಹಾಸನದಲ್ಲಿ ಕೂತು ಕೊಂಡಾಗಲೇ ಮೊದಲು ದೇವರ ಆರಾಧನೆಯ ನೇಮಕಗಳನ್ನು ನಿರ್ಣಯಿಸುವದಕ್ಕೆ ಜಾಗ್ರತೆಯಾಗಿದ್ದ ಪ್ರಕಾರವೇ, ಸಾಯುವ ಮುಂಚೆ ಬೇರೆ ಕಾರ್ಯಗಳನ್ನು ಬಿಟ್ಟು, ಈ ಕಾರ್ಯದಲ್ಲೇ ಮನಸ್ಸು ಇಟ್ಟು, ಸಕಲ ಪ್ರಧಾನಿಗಳನ್ನೂ ಜನಶ್ರೇಷ್ಠರನ್ನೂ ಕೂಡಾ ಕರೆಸಿ, ತನ್ನ ಮಗನಾದ ಸೊಲೊಮೋನನಿಗೆ ಪಟ್ಟವನ್ನು ಒಪ್ಪಿಸಿ ಕೊಟ್ಟು, ತಾನು ಕಟ್ಟಿಸ ಬೇಕೆಂದು ಮನಸ್ಸು ಮಾಡಿದ ದೇವರ ಮಂದಿರವನ್ನು ಆಲಸ್ಯವಿಲ್ಲದೆ ನಿರ್ಮಿಸ ಬೇಕೆಂದು ಆಜ್ಞಾಪಿಸಿದನು. ಆಗ್ಯೆ ತಾನು ಮಾಡಿದ ಮಾದರಿಗಳನ್ನೂ ನಕ್ಷೆಗಳನ್ನೂ ತೋರಿಸಿ, ತಾನು ಈ ಕೆಲಸಕ್ಕೆ ಕೂಡಿಸಿ ಇಟ್ಟ ಬಂಗಾರ ಬೆಳ್ಳಿ ತಾಂಬ್ರ ಕಬ್ಬಿಣ ಮುಂತಾದ ಲೆಖ್ಖವಿಲ್ಲದ ದ್ರವ್ಯಗಳನ್ನೂ, ತಾನು ಮಾಡಿಸಿದ ಬಂಗಾರ ಬೆಳ್ಳಿ ಪಾತ್ರೆಗಳ ರಾಶಿಯನ್ನೂ, ತಾನು ಸಿದ್ಧ ಮಾಡಿದ ತೊಲೆಗಳನ್ನೂ, ತಾನು ಕೆತ್ತಿಸಿದ ಬಿಳೀ ಕಲ್ಲುಗಳ ರಾಶಿಯನ್ನೂ ಅವನಿಗೆ ಒಪ್ಪಿಸಿ ಕೊಟ್ಟನು. ಮತ್ತು ಹಿರಿಯರೂ ಐಶ್ವರ್ಯವಂತರೂ ಮೊದಲಾದ ಸ

ಲೆಕ್ಕ ಮಾಡಿದನು. ಆ ಒಂಬತ್ತು ತಿಂಗಳುಗಳಾದ ಮೇಲೆ ಅವನು ಹ
ನ್ನೊಂದು ಗೋತ್ರಗಳ ಲೆಕ್ಕವನ್ನು ಅರಸನ ಬಳಿಗೆ ತಂದಾಗ, ದಾವೀದನು ಸಂ
ದೇಹ ಪಟ್ಟು, ತಾನು ಆಜ್ಞಾಪಿಸಿದ ಕೆಲಸಕ್ಕೋಸ್ಕರ ಪಶ್ಚಾತ್ತಾಪ ಪಡಲಾರಂಭಿ
ಸಿದನು. ಆಗಲು ದೇವರು ಪ್ರವಾದಿಯಾದ ಗಾದನನ್ನು ದಾವೀದನ ಹತ್ತಿ
ರ ಕಳುಹಿಸಿ, ಅವನಿಗೆ, ಮೂರು ಮಾತುಗಳಲ್ಲಿ ಒಂದನ್ನು ಆರಿಸಿಕೋ, ಯಾ
ವದಂದರೆ—ಯೇಳು ವರ್ಷದ ಬರವು ಬೇಕೋ, ಇಲ್ಲವೆ ಮೂರು ತಿಂಗಳು ನಿ
ನ್ನ ಶತ್ರುಗಳ ಭಯದಿಂದ ಓಡಿ ಹೋಗುವದು ಬೇಕೋ, ಅಥವಾ ನಿನ್ನ
ದೇಶದಲ್ಲಿ ಮೂರು ದಿನದ ವ್ಯಾಧಿ ಬೇಕೋ, ಈ ಮೂರು ಉಪದ್ರಗಳಲ್ಲಿ
ಯಾವದು ಬೇಕು, ಯೆಂದು ಹೇಳಿಸಲಾಗಿ, ದಾವೀದನು—ನಾನು ಬಹಳವಾಗಿ
ಹೆದರುತ್ತೇನೆ, ಆದರೆ ಮನುಷ್ಯರ ಕೈಯಲ್ಲಿ ಅಲ್ಲ, ದೇವರ ಕೈಯಲ್ಲಿ ನಾ
ನು ಬೀಳಲಿ, ಯಾಕಂದರೆ ಆತನ ಕರುಣೆಯು ದೊಡ್ಡದಾಗಿದೆ ಅಂದನು. ಆ
ದದರಿಂದ ಕರ್ತನು ದಾನಿಗೂ ಬೆರ್ಷೇಬಕ್ಕೂ ಮಧ್ಯದ ದೇಶದಲ್ಲಿರುವ ಯೆ
ಪ್ಪತ್ತು ಸಾವಿರ ಜನರನ್ನು ಸಂಹರಿಸುವ ವ್ಯಾಧಿಯನ್ನು ಕಳುಹಿಸಿದನು. ಆ
ಮೇಲೆ ದೂತನು ತನ್ನ ಕೈಯನ್ನು ಯೆರೂಸಲೇಮಿನ ಮೇಲೆ ಹಾಕುವಗ,
ಕರ್ತನು ಮನಸಾಂತರ ಪಟ್ಟು, ಆ ನಾಶಕನಾದ ದೂತನಿಗೆ—ಸಾಕು, ನಿನ್ನ ಕೈಯ
ನ್ನು ಬಿಡು ಯೆಂದು ಆಜ್ಞಾಪಿಸಿದನು. ಚಿಯೋನ ಪರ್ವತದಲ್ಲಿ ಯೆಬೂಸ್ಯ
ರ ಪರಾಜಿತನಾದ ಅರಸನಾಗಿರುವ ಅರೌನನ ಕಣದಲ್ಲಿ ಆ ದೂತನು ನಿಂತಿರು
ವದನ್ನು ದಾವೀದನು ನೋಡಿ, ಕರ್ತನಿಗೆ ಪೀಠವನ್ನು ಕಟ್ಟಿಸಿ, ಸ್ತೋತ್ರಬಲಿಗಳ
ನ್ನು ಅರ್ಪಿಸಿದ ಮೇಲೆ, ಆ ರೋಗವು ನಿಂತಿತು.

ತರುವಾಯ ದಾವೀದನು ಮೋಶೆಯ ನ್ಯಾಯದ ಪ್ರಕಾರ ಲೇವಿಯರಿಂದ
ಆರು ಸಾವಿರ ಜನರನ್ನು ಆರಿಸಿ ತೆಗದು ಕೊಂಡು, ಜನರಿಗೆ ಅಧಿಪತಿಗಳಾಗ
ಮಾಡಿ, ಉಳಿದ ಲೇವಿಯರನ್ನು ಪಾಳಿಗೆ ಸಾವಿರ ಮಂದಿಯ ಪ್ರಕಾರ ಇಪ್ಪ
ತ್ತುನಾಲ್ಕು ಪಾಳಾಗಿ ನೇಮಿಸಿ, ದೇವಾಲಯದಲ್ಲಿ ಆಗ ತಕ್ಕ ವಾದ್ಯಗಳಿಗೋಸ್ಕರ
ರಾಗ ತಿಳಿದ ನಾಲ್ಕು ಸಾವಿರ ಮಂದಿಯನ್ನು ಇಪ್ಪತ್ತುನಾಲ್ಕು ಪಾಳಾಗಿ ನಿಶ್ಚಯಿ
ಸಿದನು. ಇವರಲ್ಲಿ ಉತ್ತಮವಾದ ಕೀರ್ತನೆಗಳನ್ನು ಮಾಡಿದ ಅಸಾಫನೂ

ವು ಅವನು ಬದುಕಿರುವ ಪರ್ಯಂತರ ಯೆಹೋವನ ಆಶೀರ್ವಾದದಿಂದ ನಿರಾತಂಕವಾಗಿತ್ತು.

---

೪೧. ಇಸ್ರಯೇಲದಲ್ಲಿ ಹುಟ್ಟಿದ ಮೂಲವ್ಯಾಧಿ.

ಅಬ್ಶಾಲೋಮನು ಸತ್ತ ಹೋದ ಮೇಲೆ ಬೇರೆ ಕೆಲವರು ಅವಿಧೇಯತ್ವವನ್ನು ಬಿಡಲಿಲ್ಲ. ಮೊದಲು ಬೆನ್ಯಾಮೀನ್ಯರಲ್ಲಿ ಹಾಬ್ಬನಾದ ಷೇಬನು, ದಾವೀದನ ಮನೆಯು ನಮಗೆ ಯೇನು? ಗೋತ್ರ ಗೋತ್ರದವರು ತಮ್ಮೊಳಗೆ ತಾವೇ ಆಳಿ ಕೊಳ್ಳಲಿ ಯೆಂದು ಹೇಳಿ, ಕಾಟಕಾಯಿ ಯೆಬ್ಬಿಸಿದನು. ಯೋವಾಬನು ಹೋಗಿ ದ್ರೋಹಿಗಳನ್ನು ದಂಡಿಸಿದನು. ತರುವಾಯ ಇಂನಾಂಮೆ ದಾವೀದನ ಮನೆಯಲ್ಲೇ ಅವಿಧೇಯತ್ವದ ಆತ್ಮವು ಪ್ರಸಿದ್ಧಿಯಾಯಿತು. ಹ್ಯಾಗಂದರೆ ಯೋವಾಬನು ಅದೋನೀಯನನ್ನು ಅವನ ತಂದೆಯಾದ ದಾವೀದನ ಸ್ಥಳದಲ್ಲಿ ಅರಸಾಗ ಮಾಡ ಬೇಕೆಂದು ಮನಸ್ಸು ಮಾಡಿದನು. ಆದರೆ ಅರಸನಾದ ದಾವೀದನು ಈ ಆಲೋಚನೆ ತಿಳಿದಾಗಲೇ ತ್ವರೆ ಪಟ್ಟು, ಸ್ವಲ್ಪ ಪ್ರಾಯಸ್ಥರಾದ ತನ್ನ ಕುಮಾರರಲ್ಲಿ ಹಾಬ್ಬನಾದ ಷೆಲೋಮೋನನಿಗೆ ಪಟ್ಟವನ್ನು ಕಟ್ಟಿ ಪಟ್ಟಣದಲ್ಲಿ ಡಂಗುರ ಹೊಯ್ಸಿದನು.

ಷೆಲೋಮೋನನು ಪಟ್ಟಕ್ಕೆ ಕುಂದ್ರುವದಕ್ಕಿಂತ ಮೊದಲು ದೊಡ್ಡ ವ್ಯಾಧಿ ಯುಂಟಾಯಿತು. ಹ್ಯಾಗಂದರೆ ತಿರಿಗಿ ತಿರಿಗಿ ಕಾಟಕಾಯಿಗಳು ಉಂಟಾಗುತ್ತವೆಂದು ದಾವೀದನು ನೋಡಿ ಆಲೋಚನೆ ಮಾಡಿ, ಮೋಶೆಯು ಮಾಡಿದ ನೇಮಗಳಿಗೆ ವಿರೋಧವಾಗಿ ದಂಡು ಕಟ್ಟುವ ಮಾರ್ಗವನ್ನು ಪ್ರಾರಂಭಿಸಿ, ತಂನ ದಳವಾಯಿಯಾದ ಯೋವಾಬನಿಗೆ ಖಾನೇಷುಮಾರಿ ಮಾಡ ಬೇಕೆಂದು ಆಜ್ಞಾಪಿಸಿದನು. ಯೋವಾಬನು ಅರಸನಿಗೆ ಖಂಡಿತವಾಗಿ ಹೀಗೆ ಮಾಡ ಬಾರದೆಂದು ಹೇಳಿದ್ದಾಗ್ಯೂ, ಅರಸನ ಮಾತು ದಳವಾಯಿಯ ಮಾತಿಗಿಂತ ಪ್ರಬಲವಾಗಿರುವದರಿಂದ, ಯೋವಾಬನು ತನ್ನ ಸರದಾರರನ್ನು ಕರಕೊಂಡು, ಹಾಂತತ್ತು ತಿಂಗಳ ಪರ್ಯಂತರ ದೇಶವನ್ನು ಸಂಚರಿಸಿ, ಗೋತ್ರಗಳಲ್ಲಿ ಖಾನೇಷುಮಾರಿ

ಅದರ ಮೇಲೆ ಇಸ್ರಯೇಲ್ಯರ ಅರಸನಿಗೂ ಸುರ್ಯರಿಗೂ ಯುದ್ಧವಾಗಿರುವ ಸಮಯದಲ್ಲಿ ಎಲೀಷನು ಸುರ್ಯರ ದಂಡಿನಲ್ಲಿ ಆದದ್ದೆಲ್ಲವನ್ನು ಅರಸನಿಗೆ ತಿಳಿಸುತ್ತಿದ್ದನು. ಆದದರಿಂದ ಸುರ್ಯರ ಅರಸನು ದೇವರ ಮನುಷ್ಯನನ್ನು ಹಿಡಕೊಳ್ಳುವದಕ್ಕೆ ಪ್ರವಾದಿಯು ವಾಸಿಸುವ ದೋಥಾನೆಂಬ ಊರಿಗೆ ಮುತ್ತಿಗೆ ಹಾಕಿದನು. ಸುರ್ಯರು ರಾತ್ರಿಯಲ್ಲಿ ಬಂದು ಪಟ್ಟಣದ ಸುತ್ತಲು ಕೂತು ಕೊಂಡರು. ದೇವರ ಮನುಷ್ಯನ ಸೇವಕನು ಬೆಳಿಗ್ಗೆ ಯೆದ್ದು ನೋಡುವಾಗ, ಇಗೋ ಕುದುರೆ ರಥಗಳು ಸಹಿತವಾದ ದಂಡು ಪಟ್ಟಣದ ಸುತ್ತಲೂ ಉಳಕೊಂಡಿತ್ತು. ಸೇವಕನು ಅದನ್ನು ನೋಡಿ ಅಯ್ಯಯ್ಯೋ! ಯೇನು ಮಾಡುವಾ ಯೆನಲು, ಎಲೀಷನು ನೀನು ಭಯ ಪಡಬೇಡಾ, ನಮ್ಮ ಸಂಗಡಲಿರುವವರು ಅವರ ಸಂಗಡಲಿರುವವರಿಗಿಂತ ಹೆಚ್ಚಾಗಿದ್ದಾರೆಂದು ಹೇಳಿ, ಕರ್ತನೇ ಅವನು ನೋಡುವ ಹಾಗೆ ಅವನ ಕಣ್ಣುಗಳನ್ನು ತೆರೆ ಯೆಂದು ಪ್ರಾರ್ಥಿಸಲು, ಕರ್ತನು ಹುಡುಗನ ಕಂಣುಗಳನ್ನು ಕಾಣುವ ಹಾಗೆ ತೆರದ ಮೇಲೆ, ಇಗೋ ಎಲೀಷನ ಸುತ್ತಲಿರುವ ಗುಡ್ಡಗಳು ಅಗ್ನಿ ಕುದುರೆ ರಥಗಳಿಂದ ತುಂಬಿರುವದನ್ನು ನೋಡಿದನು. ಅವರೆಲ್ಲರು ರಕ್ಷಿಸಲ್ಪಡುವವರ ಸೇವೆಗೋಸ್ಕರ ಕಳುಹಿಸಲ್ಪಟ್ಟ ದೂತರಾದ ಆತ್ಮಗಳಲ್ಲವೇ?

---

೪೬. ಅಸ್ಸುರ್ಯ ದೇಶದ ವಾಸಾಂತರವು.

ಅಹಾಬನ ಮೇಲೆ ಹತ್ತುಗೋತ್ರಗಳ ರಾಜ್ಯದಲ್ಲಿ ಹನ್ನೆರಡು ಮಂದಿ ಅರಸುಗಳಾದರು. ಆದರೆ ಅವರ ರಾಜ್ಯವು ಬಹಳ ವರ್ಷಗಳ ಪರ್ಯಂತರ ಸ್ಥಿರವಾಗಲಿಲ್ಲ. ಯಾಕೆಂದರೆ ಅವರು ಒಬ್ಬನಂನೊಬ್ಬನು ಕೊಂದುಹಾಕಿಕೊಂಡು ಸಿಂಹಾಸನದಲ್ಲಿ ಕೂತು ಸ್ವಲ್ಪ ಮೇಲೆ ತಾವೂ ಅದೇ ಪ್ರಕಾರವೇ ಸತ್ತರು. ಅರಸುಗಳು ಬಹಳವಾಗಿ ಬದಲಾಗುವ ದೇಶಕ್ಕೆ ಅಯ್ಯೋ! ಇಸ್ರಯೇಲ್ಯರ ದೇಶವು ಆ ಸಮಯದಲ್ಲಿ ಸುರ್ಯರ ಕೈಯಿಂದ ಕೊಳ್ಳೆಯೂ ಹಾಳೂ ಆಗಿ ಹೋಯಿತು. ಆದಾಗ್ಯೂ ಜನರು ಯೆಚ್ಚರಿಕೆಯಾಗಲಿಲ್ಲ. ಪ್ರ

ವಾದಿಗಳು ಹೆಚ್ಚು ಹೆಚ್ಚಾಗಿ ಭಯಂಕರವಾದ ಮಾತುಗಳನ್ನು ಸಾರಿ ಹೇಳುತ್ತಿದ್ದಾಗ್ಯೂ, ಜನರು ಹೆಚ್ಚು ಹೆಚ್ಚಾಗಿ ವಿಗ್ರಹಾರಾಧನೆ ಮೊದಲಾದ ಪಾಪಗಳಲ್ಲಿ ಮುಳುಗಿ ಹೋದರು. ಕಡೇಲಿ ಅಸ್ಸೂರ್ಯರೆಂಬ ಒಂದು ಯುದ್ಧಪರಾಕ್ರಮವುಳ್ಳ ಜನಾಂಗವು ಇಸ್ರಾಯೇಲ್ಯರ ಮೇಲೆ ಬಿದ್ದು, ಅವರ ದೇಶವನ್ನು ತಮ್ಮ ವಶ ಮಾಡಿಕೊಂಡು, ಕಂದಾಯವನ್ನು ನಿಷ್ಕರ್ಷೆ ಮಾಡಿದರು. ಹೋಶೇಯನೆಂಬ ಅರಸನು ಅರಸನಾದ ಶಲ್ಮನೆಸ್ಸರನಿಗೆ ವಿಧೇಯತ್ವದ ಪ್ರಮಾಣ ಮಾಡಿದನು. ಅದನ್ನು ಅವನು ಮೀರಿದಾಗ ಶಲ್ಮನೆಸ್ಸರನು ದಂಡು ತಕ್ಕೊಂಡು ಸುಳಿಗಾಳಿಯ ಹಾಗೆ ಇಸ್ರಾಯೇಲ ದೇಶದ ಮೇಲೆ ಬಿದ್ದು, ಸಮಾರ್ಯ ಪಟ್ಟಣವನ್ನು ಮುರಿದು, ಹತ್ತು ಗೋತ್ರಗಳ ದೇಶದ ನಿವಾಸಿಗಳನ್ನು ವಾಗ್ದತ್ತದ ದೇಶದೊಳಗಿಂದ ಅರ್ಮೇನ್ಯ ದೇಶಕ್ಕೂ ತನ್ನ ವಿಸ್ತಾರವಾದ ರಾಜ್ಯದ ಬೇರೆ ದೂರವಾದ ಸೀಮೆಗಳಿಗೂ ಒಯ್ದನು. ಈ ಸಂಗತಿಗೆ ಅಸ್ಸೂರ್ಯ ದೇಶದ ವಾಸಾಂತರವೆಂಬ ಹೆಸರುಂಟು. ಇಸ್ರಾಯೇಲ ದೇಶದಲ್ಲಿ ಸ್ವಲ್ಪ ಜನರು ಉಳಿದರು. ಒಯ್ಯಲ್ಪಟ್ಟವರಿಗೆ ಬದಲಾಗಿ ಶಲ್ಮನೆಸ್ಸರನು ಸುರ್ಯವೂ ನದಿಗಳ ಅರಾಮೂ ಯೆಂಬ ದೇಶಗಳ ನಿವಾಸಿಗಳು ಮೊದಲಾದ ಜನಗಳನ್ನು ಹಾಳಾದ ದೇಶದ ವ್ಯವಸಾಯಕ್ಕೋಸ್ಕರ ಕಳುಹಿಸಿ, ದೇವಭಕ್ತಿಯ ಮಾರ್ಗವನ್ನು ಅವರಿಗೆ ಕಲಿಸುವ ಬಗ್ಗೆ ಒಬ್ಬ ಆಚಾರ್ಯನನ್ನು ಕೊಟ್ಟನು. ಈ ಪ್ರಕಾರ ಹತ್ತು ಗೋತ್ರಗಳ ರಾಜ್ಯವು ಬಿದ್ದ ಮೇಲೆ ಉಳಿದ ಇಸ್ರಾಯೇಲ್ಯರಿಂದಲೂ ಪರದೇಶಗಳಿಂದ ಬಂದ ಅನ್ಯಜನರಿಂದಲೂ ಸಮಾರ್ಯರ ಜನಾಂಗವು ಉಂಟಾಯಿತು.

---


೪೭. ಪ್ರವಾದಿಯಾದ ಯೋನನು.

ಅಸ್ಸೂರ್ಯ ದೇಶಸ್ಥರಿಗೆ ಸಹ ದೇವರು ಇಸ್ರಾಯೇಲ್ಯರ ಪ್ರವಾದಿಗಳಲ್ಲಿ ಒಬ್ಬನನ್ನು ಕಳುಹಿಸಿದನು. ಅಸ್ಸೂರ್ಯ ದೇಶದ ಅರಸನ ರಾಜಪಟ್ಟಣವಾದ ನಿನಿವೆಯು ಸುತ್ತು ತಿರುಗುವದಕ್ಕೆ ಮೂರು ದಿವಸದ ಪ್ರಯಾಣದಷ್ಟು

ವಿಸ್ತಾರವೂ ಐಶ್ವರ್ಯ ಮಹಿಮೆಗಳುಳ್ಳದ್ದೂ ಆಗಿತ್ತು. ಕರ್ತನು ಯೋನನಿಗೆ— ನೀನು ನಿನಿವೆ ಯೆಂಬ ದೊಡ್ಡ ಪಟ್ಟಣಕ್ಕೆ ಹೋಗಿ ಅದರೊಳಗೆ ಪ್ರಸಂಗ ಮಾಡು, ಯಾಕಂದರೆ ಅದರ ದುಷ್ಟತನದ ಸುದ್ದಿಯು ಭೂಲೋಕದಿಂದ ಯೆದ್ದು ನನಗೆ ತಿಳಿಯ ಬಂತು ಯೆಂದು ಹೇಳಿದನು. ಆದರೆ ಯೋನನು ಅವಿಧೇಯನಾಗಿದ್ದು ವಿಮುಖಮಾರ್ಗದಿಂದ ಹೋಗಿ ಸಮುದ್ರದ ಹತ್ತರ ಬಂದು ಹಡಗವನ್ನೇರಿದನು. ಆಗ್ಗೆ ಕರ್ತನು ದೊಡ್ಡ ಸುಳಿಘಾಳಿಯನ್ನು ಯೆಬ್ಬಿಸಿದದರಿಂದ ಹಡಗವು ಒಡದು ಹೋಗುವದೆಂಬ ಭಯದಲ್ಲಿ ಜನರು ಇದ್ದರು. ಹಡಗದವರು ಭಯಭ್ರಾಂತರಾಗಿ ತಂಮ ತಂಮ ದೇವರುಗಳಿಗೆ ಮೊರೆ ಇಟ್ಟು, ಹಡಗವನ್ನು ಹಗುರ ಮಾಡುವದಕ್ಕೆ ಅದರಲ್ಲಿದ್ದ ಸಾಮಾನುಗಳನ್ನು ಸಮುದ್ರದಲ್ಲಿ ಹಾಕಿ ಬಿಟ್ಟರು. ಯೋನನು ಹಡಗದ ಬುಡದಲ್ಲಿ ಮಲಗಿ ನಿದ್ರೆಗೈಯುತ್ತಿರುವಾಗ್ಗೆ ಹಡಗದ ಯಜಮಾನನು ಅವನಿಗೆ, ನೀನು ಯಾಕೆ ನಿದ್ರೆಗೈಯುತ್ತೀ? ಯೆದ್ದು ನಿನ್ನ ದೇವರಿಗೆ ಮೊರೆ ಇಡು ಅಂದನು. ತರುವಾಯ ಈ ಕಷ್ಟವು ಯಾವನ ಪಾಪದಿಂದ ಹುಟ್ಟಿತು ಯೆಂದು ತಿಳುಕೊಳ್ಳುವದಕ್ಕೆ ಚೀಟು ಹಾಕಿ ನೋಡುವಾ ಯೆಂದು ಒಬ್ಬರಿಗೊಬ್ಬರು ಹೇಳಿದರು. ಆ ಚೀಟು ಯೋನನ ಮೇಲೆ ಬರಲು, ಅವನು ಆ ಜನರಿಗೆ, ನನ್ನನ್ನು ಕೈಹಿಡಿದು ಸಮುದ್ರದಲ್ಲಿ ಮುಳುಗಿಸಿದರೆ ಶಾಂತವಾಗುವದು ಅಂದನು. ಆಗಲವರು ದೇವರಿಗೆ, ಈ ಮನುಷ್ಯನ ಜೀವಕ್ಕೋಸ್ಕರ ನಂಮನ್ನು ಸಂಹಾರ ಮಾಡದೆಯೂ, ನಿರಾಪರಾಧವಾದ ರಕ್ತವನ್ನು ಚೆಲ್ಲಿದ ಹಾಗೆ ನಂಮ ಮೇಲೆ ಪಾಪವನ್ನು ಹೊರಿಸದೆಯೂ ಇರು, ಯೆಂದು ಪ್ರಾರ್ಥಿಸಿ, ಯೋನನನ್ನು ಹಿಡಿದು ಸಮುದ್ರದಲ್ಲಿ ಹಾಕಲು, ಸಮುದ್ರದ ಉಕ್ಕು ನಿಂತು ಶಾಂತವಾಯಿತು. ಆ ಹಡಗದವರು ಹೀಗೆ ಮಾಡಿದ ಮೇಲೆ ಕರ್ತನಿಗೆ ಬಹಳವಾಗಿ ಭಯ ಪಟ್ಟು ಬಲಿಗಳನ್ನರ್ಪಿಸಿ ಹರಿಕೆಗಳನ್ನು ಹೇಳಿ ಕೊಂಡರು.

ಯೋನನು ಸಮುದ್ರದಲ್ಲಿ ಬೀಳುವಾಗ್ಗೆ ಬಹಳ ದೊಡ್ಡ ಮೀನು ಅವನನ್ನು ನುಂಗಿ ಬಿಟ್ಟಿತು. ಆದರೆ ದೇವರು ಅವನ ಪ್ರಾಣವನ್ನು ರಕ್ಷಿಸಿದದ

ರಿಂದ ಮೂರು ಹಗಲು ಮೂರು ಇರುಳು ಹೋದ ಮೇಲೆ ಆ ಮೀನು ಅ



ವನನ್ನು ಕಾರಿ ದಡದಲ್ಲಿ ಹಾಕಿತು. ಆಗ್ಗೆ ಕರ್ತನು ಯೆರಡನೇ ಸಾರಿ ಯೋನನಿಗೆ, ನೀನು ನಿನಿವೆ ಪಟ್ಟಣಕ್ಕೆ ಹೋಗಿ ನಾನು ಹೇಳುವದನ್ನು ಪ್ರಸಂಗಿಸು ಯೆನಲು, ಯೋನನು ಹೋಗಿ ಬೀದಿಗಳಲ್ಲಿ ನಿಂತು ಕೂಗಿ ನಾಲ್ವತ್ತು ದಿವಸಗಳಾದ ಮೇಲೆ ನಿನಿವೆಯು ಹಾಳಾಗುವದೆಂದನು. ಆ ಜನರು ಪ್ರವಾದಿಯ ಮಾತು ನಂಬಿ, ಹೆದರಿ, ಉಪವಾಸ ಮಾಡಿ, ಅರಸನು ಮೊದಲಾದವರು ಉಟು ವಸ್ತ್ರಗಳನ್ನು ತೆಗದು ಹಾಕಿ, ಮಲಿನ ವಸ್ತ್ರಗಳನ್ನು ಧರಿಸಿ ಕೊಂಡರು. ಮತ್ತು ಅರಸನು ಘಟ್ಟಿಯಾಗಿ ದೇವರಿಗೆ ಮೊರೆ ಇಡ ಬೇಕೆಂದೂ, ಮನುಷ್ಯರೂ ಪಶುಗಳೂ ಉಪವಾಸ ಮಾಡ ಬೇಕೆಂದೂ, ಯೆಲ್ಲರು ತಂಮ ಕೆಟ್ಟ ಮಾರ್ಗಗಳನ್ನು ಬಿಟ್ಟು ತಿರುಗ ಬೇಕೆಂದೂ ಆಜ್ಞಾಪಿಸಿ, ವೊಂದು ವೇಳೆ ದೇವರು ಹೆದರಿಸಿ ಹೇಳಿದ ಶಿಕ್ಷೆಯನ್ನು ನಿವಾರಿಸ್ಯಾನೆಂದು ತೋರುವಾಗ, ದೇವರು ಆ ಪಟ್ಟಣವನ್ನು ಕಟಾಕ್ಷದಿಂದ ನೋಡಿ, ನಷ್ಟವನ್ನು ನಿವಾರಿಸಿದ ಕಾರಣ, ಯೋನನು ದೇವರ ಕರುಣೆಗೆ ಬಹಳವಾಗಿ ಕರಕರೆ ಪಟ್ಟು, ಜೀವಿಸುವದಕ್ಕಿಂತ ಸಾಯುವದು ಉತ್ತಮವಾಗಿ ತೋರುತ್ತದೆ ಯೆಂದು, ಪಟ್ಟಣದಿಂದ ಹೊರಟು ಹೋಗಿ, ಸಣ್ಣ ಗುಡ್ಲು ಮಾಡಿಕೊಂಡು, ಪಟ್ಟಣಕ್ಕೆ ಯೇನು ಆಗುವದೆಂದು ನಿರೀಕ್ಷಿಸುತ್ತಿದ್ದನು. ಆಗಲು ದೇವರು ರಾತ್ರಿಯಲ್ಲಿ ವೊಂದು ಆಶ್ಚರ್ಯ ಗಿಡವನ್ನು ಬೆಳಸಿದನು. ಉದಯ ಕಾಲದಲ್ಲಿ ಆ ಗಿಡವು ವೊಳ್ಳೇ ಸೊಪ್ಪಿನಿಂದ ಯೋನನನ ಗುಡ್ಲಿನ ಮೇಲೆ ಮುಚ್ಚಿಕೊಂಡು ಬಹಳ ತಂಪು ಮಾಡಿತು.


ಅದರ ನೆರಳಿನಿಂದ ಯೋನನಿಗೆ ಬಹಳ ಸಂತೋಷವಾಯಿತು. ಮರು ದಿವಸ ಉದಯ ಕಾಲದಲ್ಲಿ ದೇವರು ಒಂದು ಹುಳವನ್ನು ಕಳುಹಿಸಿದನು. ಆ ಹುಳವು ಆ ಗಿಡ ಕಚ್ಚಿದದರಿಂದ, ಮಧ್ಯಾಹ್ನದ ಬಿಸಿಲು ಬಂದಾಗ್ಯೂ, ಅದರ ಯೆಲೆಗಳು ಬಾಡಿ, ಯೋನನ ತಲೆಗೆ ಸೆಕೆ ತಾಗಿತು. ಆಗ ಯೋನನು ಬದುಕಿರುವದಕ್ಕಿಂತ ಸಾಯುವದು ಉತ್ತಮವೆಂದು ಕೋಪದಿಂದ ಹೇಳಲಾಗಿ, ದೇವರು ನಿನಗೆ ಸಿಟ್ಟು ಬಂದದ್ದು ನ್ಯಾಯವೆಂದು ನೆನಸುತ್ತೀಯೋ ಅಂದನು. ಯೋನನು ಸಾಯುವ ಪರ್ಯಂತರ ನಾನು ಸಿಟ್ಟು ಮಾಡುವದು ನ್ಯಾಯವೇ ಯೆನಲು, ಕರ್ತನು ನೀನು ಸಾಕದೆ ಒಂದು ರಾತ್ರಿಯಲ್ಲೇ ಹುಟ್ಟಿ ಬೆಳದು, ಒಂದು ರಾತ್ರಿಯಲ್ಲೇ ಸತ್ತು ಬಿದ್ದ, ಆಶ್ಚರ್ಯ ಗಿಡಕ್ಕೋಸ್ಕರ ನೀನು ಕರಕರೆ ಪಡುತ್ತೀಯಲ್ಲವೋ? ಹಾಗಾದರೆ ನಾನು ಒಂದು ಲಕ್ಷ ಇಪ್ಪತ್ತು ಸಾವಿರಕ್ಕಿಂತ ಹೆಚ್ಚಾದ ಯೆಡಬಲ ತಿಳಿಯದ ಮನುಷ್ಯರೂ ದನಗಳ ಸಮೂಹವೂ ಇರುವ ಈ ದೊಡ್ಡ ಪಟ್ಟಣವಾದ ನಿನೆವೆಗೆ ಕರಕರೆ ಪಡ ಬೇಡವೋ ಅಂದನು.

---

೪೮. ಯೂದಾ ದೇಶದ ಕಡೇ ಅರಸುಗಳು.

ರಾಜ್ಯಗಳು ವಿಭಾಗವಾದ ಮೇಲೆ, ಯೆರೂಸಲೇಮಿನಲ್ಲಿ ಇಪ್ಪತ್ತು ಮಂದಿ ಅರಸರು ಪಾರಂಪರ್ಯವಾಗಿ ದಾವಿದನ ಸಿಂಹಾಸನದ ಮೇಲೆ ಕೂತು ಮುನ್ನೂರ ಯೆಪ್ಪತ್ತೆರಡು ವರ್ಷವಾಳಿದರು. ಹತ್ತು ಗೋತ್ರಗಳ ಸಂಸ್ಥಾನವು ಹಾಳಾದ ಮೇಲೆ ಯೆಹೂದ್ಯ ಸಂಸ್ಥಾನವು ಇನ್ನು ನೂರು ವರ್ಷಗಳ ಪರ್ಯಂತರ ಸ್ಥಿರವಾಗಿತ್ತು. ಆದರೆ ದಾವಿದನ ಸಂತಾನದವರಲ್ಲಿ ಭಕ್ತಿಯುಳ್ಳ ಅರಸುಗಳಿಗಿಂತ ಭಕ್ತಿ ಇಲ್ಲದ ವಿಗ್ರಹಾರಾಧಸ್ಥರು ಹೆಚ್ಚಾಗಿದ್ದದರಿಂದ, ಯೊಷಫಾತನೂ ಹಿಜ್ಕೀಯನೂ ಯೋಷೀಯನೂ ಈ ಮೊದಲಾದವರ ಚರಿತ್ರಗಳು ಕತ್ತಲೆಯಾದ ರಾತ್ರಿಯಲ್ಲಿ ಕಾಣುವ ನಕ್ಷತ್ರಗಳ ಹಾಗೆ ಇರುತ್ತವೆ. ಅಹಾಬನು ಬಾಳನಿಗೆ ಯೆರೂಸಲೇಮಿನ ಬೀದಿಗಳಲ್ಲಿ ಪೀಠಗಳನ್ನು ಕಟ್ಟಿಸಿ,

ಕರ್ತನ ಮಂದಿರದ ಬಾಗಿಲೆದುರಿಗೆ ಅಡ್ಡ ಗೋಡೆ ಹಾಕಿಸಿದದರಿಂದ, ದೇವರ ಆಲಯವು ಹಾಳು ಬಿದ್ದ ಮನೆಯ ಹಾಗಾಯಿತು. ದುಷ್ಟನಾದ ಅಹಾಜನ ಭಕ್ತಿಯುಳ್ಳ ಮಗನಾಗಿರುವ ಹಿಜ್ಕೀಯನು ಕರ್ತನ ಮಂದಿರದ ದ್ವಾರಗಳನ್ನು ತಿರಿಗಿ ತೆರದು, ಯೆರೂಸಲೇಮನ್ನು ವಿಗ್ರಹಾರಾಧನೆಯಿಂದ ಶುದ್ಧ ಮಾಡಿ, ಹತ್ತು ಗೋತ್ರಗಳ ಜನಾಂಗಕ್ಕೆ ಸಹಾ ತಮ್ಮ ಪಿತೃಗಳ ದೇವರ ಕಡೆಗೆ ತಿರುಗಿಕೊಳ್ಳ ಬೇಕೆಂದೂ, ಪರಿಪಾಲನೆಯ ಹಬ್ಬವನ್ನು ಯೆಹೂದ್ಯ ಜನರ ಸಂಗಡ ಆಚರಿಸ ಬೇಕೆಂದೂ, ಸಾರಿ ಹೇಳಲಿಕ್ಕೆ ಜನರನ್ನು ಕಳುಹಿಸಿದನು. ಅವನು ಆಳುವ ಸಮಯದಲ್ಲಿ ಹತ್ತು ಗೋತ್ರಗಳು ಅಸ್ಸುರ್ಯದ ವಾಸಾಂತರಕ್ಕೆ ಒಯ್ಯಲ್ಪಡುವಾಗ, ಅನೇಕ ಸಾವಿರ ಇಸ್ರಾಯೇಲ್ಯರು ತಮ್ಮ ದೇಶದಿಂದ ಓಡಿ ಯೆಹೂದ್ಯದಲ್ಲಿ ಸೇರಿ, ಅವನ ರಾಜ್ಯವನ್ನು ದೃಢ ಪಡಿಸಿದರು. ಷಲ್ಮನೆಸ್ಸರನ ಮೇಲೆ ಅಸ್ಸುರ್ಯರನ್ನಾಳಿದ ಸನ್ಹೇರೀಬನು ತನ್ನ ಸೈನ್ಯಾಧಿಪತಿಯನ್ನು ದಂಡಿನ ಸಂಗಡ ಕಳುಹಿಸಿ, ಯೆಹೂದ್ಯ ದೇಶದ ಸಮಸ್ತ ಬಲವಾದ ಪಟ್ಟಣಗಳನ್ನು ತಕ್ಕೊಂಡು, ಯೆರೂಸಲೇಮಿಗೆ ಮುತ್ತಿಗೆಯನ್ನು ಹಾಕಿಸಿದನು. ಆದರೆ ಅವನು ಜೀವವುಳ್ಳ ದೇವರಿಗೆ ಹಾಸ್ಯ ಮಾಡುವಾಗ, ಹಿಜ್ಕೀಯನು ತನ್ನ ವಸ್ತ್ರಗಳನ್ನು ಹರಕೊಂಡು, ಇಸ್ರಾಯೇಲಿನ ದೇವರಿಗೆ ಪ್ರಾರ್ಥನೆ ಮಾಡಲು, ಕರ್ತನ ದೂತನು ಹೊರಟು, ಒಂದೇ ರಾತ್ರಿಯಲ್ಲಿ ಅಸ್ಸುರ್ಯರ ದಂಡಿನ ಒಂದು ಲಕ್ಷಯೆಂಭತ್ತೈದು ಸಾವಿರ ಜನರನ್ನು ಹೊಡದ್ದರಿಂದ, ಇಗೋ! ಮರು ದಿವಸ ಬೆಳಿಗ್ಗೆ ಆ ಸ್ಥಳವೆಲ್ಲಾ ಶವಗಳಿಂದ ತುಂಬಿ ಇತ್ತು. ಆಗ್ಗೆ ಸನ್ಹೇರೀಬನು ಉಳಿದ ದಂಡನ್ನು ಕೂಡಿಸಿ ಕೊಂಡು, ನಿನೆವೆಗೆ ಹೋದನು. ಆ ಸಮಯದಲ್ಲಿ ಹಿಜ್ಕೀಯನು ರೋಗದಲ್ಲಿ ಬಿದ್ದು ಸಾಯಲಿಕ್ಕಿರಲಾಗಿ, ಪ್ರವಾದಿಯಾದ ಯೆಶಾಯನು ಅವನ ಹತ್ತರ ಬಂದು, ನೀನು ಸಾಯಲಿಕ್ಕಿರುವದರಿಂದ ನಿನ್ನ ಆದಾಯವೆಚ್ಚವೆಲ್ಲಾ ಒಪ್ಪಿಸಿ ಕೊಡು ಯೆನಲು, ಹಿಜ್ಕೀಯನು ಕಣ್ಣೀರಿಟ್ಟು ತನ್ನ ಆಯುಷ್ಯ ವೃದ್ಧಿಯಾಗ ಬೇಕೆಂದು, ದೇವರಿಗೆ ಮೊರೆ ಇಟ್ಟನು. ಆಗ್ಗೆ ಯೆಶಾಯನು ತನ್ನ ಮನೆಗೆ ಹೋಗುವಾಗ್ಗೆ, ಕರ್ತನು ಅವನಿಗೆ ನಾನು ಹಿಜ್ಕೀಯನ ಪ್ರಾರ್ಥನೆಯನ್ನು ಕೇಳಿ, ಅ



ವನ ಕಣ್ಣೀರನ್ನು ನೋಡಿದ್ದೇನೆ; ಇನ್ನೂ ಅವನಿಗೆ ಹದಿನೈದು ವರ್ಷದ ಆಯುಷ್ಯವನ್ನು ಕೊಡುತ್ತೇನೆ ಯೆಂದು ನೀನು ಹೋಗಿ ಹಿಜ್ಕೀಯನಿಗೆ ಹೇಳೆಂದು ಆಜ್ಞಾಪಿಸಿದನು. ಯೆಶಾಯನು ಇಪ್ಪೇ ಹಣ್ಣುಗಳಿಂದ ಲೇಪ ಮಾಡಿ, ಕುರುವಿನ ಮೇಲೆ ಇಡ ಬೇಕೆಂದು ಹೇಳಿದನು. ಮೂರು ದಿವಸಗಳಾದ ಮೇಲೆ ಅರಸನು ಗುಣವಾಗಿ, ದೇವಾಲಯಕ್ಕೆ ಹೋಗಿ, ತನಗೆ ಕ್ಷೇಮವಾದದರಿಂದ ದೇವರಿಗೆ ಸ್ತೋತ್ರ ಮಾಡಿದನು.

ಹಿಜ್ಕೀಯನ ಕೆಟ್ಟ ಮಗನಾದ ಮನಸ್ಸೆಯು ಐವತ್ತು ವರ್ಷ ದೇಶವನ್ನು ಆಳಿಕೊಂಡು, ಭಕ್ತಿಯುಳ್ಳ ತನ್ನ ತಂದೆಯು ಮಾಡಿದ ಕಟ್ಟಳೆಗಳನ್ನು ತೆಗದು ಹಾಕಿ, ಜನರನ್ನು ವಿಗ್ರಹಾರಾಧನೆಗೆ ತಿರುಗಿಸಿದನು. ಸಾಯುವದಕ್ಕಿಂತ ಮುಂಚೆ ಅವನು ಕೈಸೆರೆಯಾಗಿ ಬಾಬೇಲಿಗೆ ಹೊಯ್ಯಲ್ಪಟ್ಟು, ಅಲ್ಲಿ ತನ್ನನ್ನು ತಗ್ಗಿಸಿ ಕೊಂಡದರಿಂದ, ದೇವರು ಅವನ ಮೊರೆಯನ್ನು ಕೇಳಿ, ಅವನ ರಾಜ್ಯದಲ್ಲಿ ಅವನನ್ನು ತಿರಿಗಿ ಸ್ಥಾಪಿಸಿದ ತರುವಾಯ, ಯೆರೂಸಲೇಮನ್ನು ವಿಗ್ರಹಾರಾಧನೆಯಿಂದ ಶುದ್ಧ ಮಾಡಿದನು. ಮನಸ್ಸೆಯ ಮಗನಾದ ಅಮ್ಮೋನನು ತಂನಿಂದ ಮುಂಚೆ ಇದ್ದ ಸಮಸ್ತ ಅರಸುಗಳಿಗಿಂತ ಹೆಚ್ಚಾದ ಪಾಪಗಳಂನು ಮಾಡಿ, ಯೆರಡು ವರ್ಷದ ಮೇಲೆ ಯೆಂಟು ವರ್ಷದ ಹುಡುಗನಾದ ಯೋಶೀಯನೆಂಬ ತನ್ನ ಮಗನಿಗೆ ಪಟ್ಟವನ್ನು ಬಿಟ್ಟು ಸತ್ತು ಹೋದನು. ಆ ದಿವಸಗಳಲ್ಲಿ ತಿರಿಗಿ ದೇವರ ಹೃದಯಕ್ಕೆ ಸರಿಯಾದವನೊಬ್ಬನು ದಾವಿದನ ಸಿಂ

ಹಾಸನದಲ್ಲಿ ಕೂತು ಕೊಂಡಿದ್ದನು. ಯೋಷೀಯನು ಯೆಂಟು ವರ್ಷ ಪ್ರಧಾನಯಾಜಕನ ಪಾಲನೆಯಲ್ಲಿದ್ದ ಮೇಲೆ, ಇಪ್ಪತ್ತನೇ ವರ್ಷದಲ್ಲಿ ಯೆರೂಸಲೇಮನ್ನೂ ಸಮಸ್ತ ಯೆಹೂದ್ಯ ದೇಶವನ್ನೂ ದೆವ್ವಗಳಿಂದ ಶುದ್ಧ ಮಾಡಿ, ಕರ್ತನ ಮಂದಿರವನ್ನು ಹೊಸದಾಗಿ ಸ್ಥಾಪಿಸುವಾಗ ಇಗೋ, ದೇವಾಲಯವನ್ನು ಶುದ್ಧ ಮಾಡುವವರು ಮನಸ್ಸೆಯ ಕಾಲದಲ್ಲಿ ಕಳದು ಹೋದ ಮೋಷೆಯ ಗ್ರಂಥಗಳ ಪುಸ್ತಕವನ್ನು ಕಂಡರು. ಆ ಪುಸ್ತಕವನ್ನು ಅರಸನಿಗೆ ವೋದಿ ಹೇಳುವಾಗ್ಯೆ, ಅವನು ಅದರಲ್ಲಿ ಬರದ ಭಯಂಕರವಾದ ವಚನಗಳನ್ನು ಕೇಳಿ, ಆಶ್ಚರ್ಯವೂ ಭಯವೂ ಪಟ್ಟು, ತನ್ನ ವಸ್ತ್ರವನ್ನು ಹರಕೊಂಡನು. ಆದರೆ ದೇವರು ಹುಲ್ದ ಪ್ರವಾದಿಸ್ತ್ರೀಯನ್ನು ಕಳುಹಿಸಿ, ನಿನ್ನ ಹೃದಯವು ಈ ಮಾತು ಕೇಳುವದರಲ್ಲಿ ಕರಗಿದ ಕಾರಣ, ನೀನು ಸಮಾಧಾನದಿಂದ ಹೂಳಿಡಲ್ಪಟ್ಟು, ನಾನು ಈ ಸ್ಥಳದ ಮೇಲೆ ತರಿಸುವ ನಷ್ಟವನ್ನು ನಿನ್ನ ಕಣ್ಣುಗಳಿಂದ ನೋಡದೆ ಇರುವಿ ಯೆಂದು ಹೇಳಿಸಿದನು. ಆದ್ದರಿಂದ ಯೋಷೀಯನು ಬಹು ಜಾಗ್ರತೆಯಾಗಿ ಇಸ್ರಯೇಲ್ಯರಲ್ಲಿ ಮೋಷೆಯ ನ್ಯಾಯಪುಸ್ತಕದ ಪ್ರಕಾರ ಸಕಲ ನೇಮಗಳನ್ನು ತಿರಿಗಿ ಸ್ಥಾಪಿಸಿದನು. ಆ ಪುಸ್ತಕದ ಸಕಲ ಮಾತುಗಳನ್ನು ರಾಜ್ಯಸಭೆಯ ಮುಂದೆ ವೋದಿ ಹೇಳಿಸಿದ ಮೇಲೆ, ಅರಸನು ಜನರೆಲ್ಲರ ಸಂಗಡ ಕರ್ತನ ಮುಂದೆ ಹಾಡಂಬಡಿಕೆಯನ್ನು ಕಟ್ಟಿದನು. ಇದಲ್ಲದೆ ಯೆಹೂದ್ಯ ಪ್ರಾಂತ್ಯಗಳ ಆಚೆಯಲ್ಲಿಯೂ ಅವನು ಜಾಗ್ರತೆಯಿಂದಲೂ ಧೈರ್ಯದಿಂದಲೂ ದೇವರ ವಾಕ್ಯವನ್ನು ನಡಿಸಿ, ಬೆಥೇಲಿನಲ್ಲಿರುವ ಪೀಠವನ್ನು ಮುರಿದು, ಸಮಾಧಿಗಳಿಂದ ಯೆಲುವುಗಳನ್ನು ಅಗಿಸಿ, ಆ ದೇವರ ಮನುಷ್ಯನು ಪೂರ್ವದಲ್ಲಿ ಆ ಪೀಠಕ್ಕೆ ವಿರೋಧವಾಗಿ ಸಾರಿದ ದೇವರ ವಾಕ್ಯದ ಪ್ರಕಾರ ಯೆಲುವುಗಳನ್ನು ಆ ಪೀಠದಲ್ಲಿ ಸುಟ್ಟನು. ಆದರೆ ಯೋಷೀಯನು ತೀರಿದ ಮೇಲೆ ಅಂತ್ಯವು ತ್ವರೆಯಾಗಿ ಸಮೀಪಿಸಿತು. ಯೋಷೀಯನ ಕುಮಾರರಲ್ಲಿ ಇಬ್ಬರೂ, ಅವನ ಮೊಮ್ಮಕ್ಕಳಲ್ಲಿ ಇಬ್ಬರೂ, ಸ್ವಲ್ಪ ವರ್ಷದೊಳಗೆ ಪಾರಂಪರ್ಯವಾಗಿ ಯೆರೂಸಲೇಮಿನ ಸಿಂಹಾಸನದಲ್ಲಿ ಕುಳಿತು, ಸ್ವಲ್ಪಕಾಲವಾಳಿದ ಮೇಲೆ ರಾಜ್ಯವನ್ನು ಕಳಕೊಂಡರು. ಈ ಮೊದ

ಲಾದ ಅನೇಕ ಗುರುತುಗಳಿಂದ ಶಿಕ್ಷೆಯ ಕಾಲವು ಸಮೀಪವಾಯಿತೆಂದು ತಿಳುಕೊಳ್ಳ ಬಹುದಾಗಿತ್ತು.

---

೪೮. ಪ್ರವಾದಿಗಳು.

ಪ್ರವಾದಿಗಳು ಆ ಗುರುತುಗಳನ್ನು ಜನರಿಗೆ ಮುಂತಿಳಿಸಿ, ಅವುಗಳ ಅಭಿಪ್ರಾಯಗಳನ್ನು ಬೋಧಿಸುತ್ತಿದ್ದರು. ಅವರು ಹೇಳಿದ ವಾಕ್ಯಗಳಲ್ಲಿ ಅನೇಕವು ಪರಿಶುದ್ಧ ಬರಹದಲ್ಲಿ ಬಂದದೆ. ಜನರೊಳಗೆ ದಿವ್ಯ ಜ್ಞಾನವನ್ನು ಹುಟ್ಟಿಸ ಬೇಕೆಂದೂ, ಅರಸರೂ ಯಾಜಕರೂ ತಿರಿಗಿ ತಿರಿಗಿ ಬೋಧಿಸಿದ ಕೆಟ್ಟ ಮಾರ್ಗಗಳಿಂದ ಜನರನ್ನು ತಿರುಗಿಸ ಬೇಕೆಂದೂ, ಈ ಮೊದಲಾದ ಕೆಲಸಗಳಿಗೋಸ್ಕರ ನೇಮಿಸಲ್ಪಟ್ಟ ಪ್ರವಾದಿಗಳನ್ನು ದೇವರು ಉಭಯ ರಾಜ್ಯಗಳಲ್ಲಿ ನೀಚರೊಳಗಿಂದಲೂ ಶ್ರೇಷ್ಟರೊಳಗಿಂದಲೂ ಯೆಬ್ಬಿಸುತ್ತಿದ್ದನು. ಯೆಷಾಯನೂ ದನಿಯೇಲನೂ ಅರಸ ಸಂತಾನದವರಾಗಿಯೂ, ಯೆರೆಮೀಯನೂ ಹೆಜಿಕಿಯೇಲನೂ ಯಾಜಕಸಂತಾನದವರಾಗಿಯೂ, ಎಲೀಯನೂ ಎಲೀಷನೂ ಯೋನನೂ ಮೀಕನೂ ಊರಿನ ಬರಿ ಗೃಹಸ್ಥರಾಗಿಯೂ ಇದ್ದರು. ಅಮೋಸನು ಬಡ ಕುರುಬನಾಗಿದ್ದನು. ಬಾಬೇಲಿನ ರಾಜ್ಯವು ಇನ್ನೂ ಸಂಣದೂ ಬಲಹೀನವೂ ಆಗಿರುವ ಸಮಯದಲ್ಲಿ ಪ್ರವಾದಿಯಾದ ಯೆಷಾಯನು, ಅದು ತ್ವರೆಯಾಗಿ ಬೆಳೆದು ಜಯಶಾಲಿಯಾಗುವದೆಂದೂ, ಕಡೇಲಿ ಫಾರ್ಶಿ ದೇಶದವನಾದ ವಾಬ್ಬ ಶೂರನ ಕೈಯಿಂದ ಸಂಹಾರವಾಗುವದೆಂದೂ, ಮುಂತಿಳಿಸಿ ಈ ಶೂರನ ಹೆಸರನ್ನು ಸಹ ಅವನು ಹುಟ್ಟುವ ನೂರು ವರ್ಷದ ಮುಂಚೆ ಹೇಳಿದನು. ಯೆರೆಮೀಯನು ಯೆರೂಸಲೇಮು ಕಸ್ದೀಯರ ಕೈಯಿಂದ ಹಾಳಾಗುವದೆಂಬುವದನ್ನೂ, ಯೆರೂಸಲೇಮು ಹಾಳಾಗಿರಬೇಕಾದ ವರ್ಷಗಳ ಲೆಖ್ಖವನ್ನೂ ಸಹ ಮುಂತಿಳಿಸಿದನು. ಆದರೂ ಈ ಗತಿಗೆ ತಪ್ಪಿ ಹೋಗ ಕೂಡದೆಂಬ ಹಾಗಲ್ಲ, ಜನರು ಹೊಸ ಬುದ್ಧಿಯನ್ನು ತಂದುಕೊಂಡು, ಬರುವ ಕೇಡನ್ನು ನಿವಾರಿಸ ಬೇಕೆಂದು ಬೋಧಿಸುತ್ತಲೇ ಆಪ್ರ

ವಾದನೆಯನ್ನು ಹೇಳಿದನು. ಪ್ರವಾದಿಯಾದ ಹೆಜೆಕಿಯೇಲನು ನೂರು ವರ್ಷದಾರಭ್ಯ ತಮ್ಮ ದೇಶದಿಂದ ಹೊರಡಿಸ ಪಟ್ಟು, ಅಮೇರ್ನ್ನ ದೇಶದ ವಾಸಾಂತರದಲ್ಲಿದ್ದು, ಬಾಬೇಲಿನ ರಾಜ್ಯವು ದೇವರ ಶಿಕ್ಷೆಯಿಂದ ಸಂಹಾರವಾಗುವದೆಂದು ಕಾಯುತ್ತಿರುವ ಇಸ್ರಯೇಲ್ಯರಿಗೆ, ಆಗಲೇ ಇಸ್ರಯೇಲ್ಯ ರಾಜ್ಯವು ಪುನಸ್ಥಾಪನೆ ಯಾಗದೆಂದೂ, ಉಳಿದ ಯೆಹೂದ್ಯ ಜನಾಂಗವು ಸಹ ಸ್ವಲ್ಪ ಕಾಲದ ಮೇಲೆ ಸೆರೆಯಲ್ಲಿ ಬೀಳುವದೆಂದೂ ತಿಳಿಸಿದಾಗ, ಯೆರೆಮೀಯನು ಯೆಹೂದ್ಯರ ಸಂಮುಖವನ್ನು ಹೊಂದದ ಪ್ರಕಾರವೇ, ಹೆಜೆಕಿಯೇಲನು ಇಸ್ರಯೇಲ್ಯರ ಸಂಮುಖವನ್ನು ಹೊಂದಲಿಲ್ಲ.

ಪ್ರವಾದಿಗಳು ಆಶ್ಚರ್ಯರೀತಿಯಾಗಿ ಉತ್ತಮವಾದ ಉಪಮೆಗಳನ್ನು ಹೇಳುತ್ತಿದ್ದರು. ಯೆರೆಮೀಯನು ಅನೇಕಾವರ್ತಿ ಕುಂಬಾರನ ಕೈಕೆಲಸದ ಉಪಮೆಗಳನ್ನು ಹೇಳುತ್ತಿದ್ದನು. ಅವನು ಒಂದು ಸಾರಿ, ಜನರು ಅಶುದ್ಧ ಪಾತ್ರೆ ತೊಳದು ಕವುಚಿ ಹಾಕುವ ಪ್ರಕಾರ, ಯೆರೂಸಲೇಮು ಕವುಚಿ ಬೀಳುವದೆಂದು ಹೇಳಿದನು. ಬೇರೆ ಸಮಯದಲ್ಲಿ ಈ ಪ್ರವಾದಿಯು, ಕುಂಬಾರನು ತನ್ನ ಚಕ್ರದಲ್ಲಿ ಕೆಲಸಮಾಡುವಾಗ ಕೈಯಲ್ಲಿರುವ ಕೊಡವು ಕೆಟ್ಟದರಿಂದ ಅದನ್ನು ತೆಗದು ಮುದ್ದೆ ಮಾಡಿ ತಿರಿಗಿ ಹೊಸ ಕೊಡವನ್ನು ನಿರ್ಮಿಸುವದನ್ನು ನಾನು ನೋಡಿದೆನು; ಹಾಗೆಯೇ ಇಸ್ರಯೇಲಿನ ಮನೆಯವರೇ, ನಿಮಗೆ ನಾನು ಹೀಗೆ ಮಾಡಲಾರೆನೋ ಯೆಂದು ಕರ್ತನು ಹೇಳುತ್ತಾನೆ; ಇಗೋ ಕುಂಬಾರನ ಕೈಯಲ್ಲಿ ಮಣ್ಣು ಹ್ಯಾಗೆ ಅದೆಯೋ, ಹಾಗೆಯೇ ಇಸ್ರಯೇಲ್ಯರಾದ ನೀವು ನನ್ನ ಕೈಯಲ್ಲಿ ಇದ್ದೀರಿ ಅಂದನು. ಮತ್ತೊಂದು ದಿವಸ ಅವ



ನು ಕುಂಬಾರನ ಕೈಯಿಂದ ಒಂದು ಸೌಂದರ್ಯವಾದ ಹೂಜಿಯನ್ನು ಕ್ರಯಕ್ಕೆ ತೆಗದು ಕೊಂಡು, ಜನರ ಹಿರಿಯರೂ ಶ್ರೇಷ್ಠ ಯಾಜಕರೂ ಇರುವ ಸಮಯದಲ್ಲಿ ಆ ಹೂಜಿಯನ್ನು ನೆಲಕ್ಕೆ ಬಡದು ಒಡದುಹಾಕಿ, ಸೈನ್ಯಗಳ ಕರ್ತನು ಹೇಳುವದೇನೆಂದರೆ, ಕುಂಬಾರನ ಪಾತ್ರೆಯು ತಿರಿಗಿ ಒಂದಾಗ ಕೂಡದ ಹಾಗೆ ಒಡದು ಬಿಡುವ ಪ್ರಕಾರವೇ, ನಾನು ಈ ಜನಾಂಗವನ್ನೂ ಈ ಪಟ್ಟಣವನ್ನೂ ತಂಗಿಸಿ, ಯೆರೂಸಲೇಮಿನ ಮನೆಗಳನ್ನೂ ಅರಮನೆಗಳನ್ನೂ ನಾಶ ಮಾಡುವೆನು. ಯಾತಕ್ಕೆಂದರೆ ಅವುಗಳ ಮಾಳಿಗೆಗಳ ಮೇಲೆ ನಿವಾಸಿಗಳು ದೇವ್ವಗಳಿಗೆ ಅರ್ಪಿಸಿದ್ಧಾರೆಂದಂದನು.

---

೫೦. ಬಬಿಲೋನದ ವಾಸಾಂತರವು.

ಯೆಹೂದ್ಯರು ನಂಬಿದರೂ ನಂಬದಿದ್ದರೂ ಪ್ರವಾದಿಗಳು ಹೇಳಿದ ಸಕಲ ಮಾತುಗಳಲ್ಲಿ ಒಂದಾದರೂ ತಪ್ಪಲಿಲ್ಲವೆಂದು ಆವಾಗ್ಗೆ ತಿಳಕೊಂಡರು. ಯೇನಂದರೆ—ದೂರ ದೇಶದ ಕ್ರೂರ ಮನಸ್ಸುಳ್ಳ ಕಾಡ ಯುದ್ಧಸ್ಥರಾದ ಕಸ್ದೀಯರ ಜನಾಂಗವು ಬಂದು, ಮಹಿಮೆಯುಳ್ಳ ಯೆರೂಸಲೇಮೆಂಬ ಪಟ್ಟಣದ ಮೇಲೆ ಕೈಹಾಕಿ, ಅದನ್ನು ತಂಗಿಸಿ ಕಲ್ಲಿನ ರಾಶಿಯಾಗ ಮಾಡಿದರು. ಆದರೆ ದೇವರ ಶಿಕ್ಷೆಗಳು ಆವಾಗ ಸಹ ಕ್ರಮ ಕ್ರಮವಾಗಿಯೇ ಬರುತ್ತಿದ್ದವು. ಕಸ್ದೀಯರ ಅರಸನಾದ ನೆಬುಕದ್ನೆಚರನು ಯೆಹೂದ್ಯರ ದೇಶವನ್ನು ತನ್ನ ವಶ ಮಾಡಿ, ಕಂದಾಯವನ್ನು ತೆಗದು ಕೊಂಡು, ಅರಸನಾದ ಯೆಕೊನ್ಯನನ್ನೂ ಹತ್ತು ಸಾವಿರ ಯುದ್ಧಸ್ಥರನ್ನೂ ಹಿರಿಯರನ್ನೂ ಸಕಲ ಪಂಚಾಲರನ್ನೂ ಕೈಸೆರೆ ಹಿಡಿದು, ಬಾಬೇಲ ದೇಶಕ್ಕೆ ಕೊಂಡು ಹೋಗಿ, ಯೆಹೂದ್ಯರ ರಾಜ್ಯವು ಇನ್ನೂ ಹತ್ತು ವರ್ಷ ನಿಲ್ಲುವ ಹಾಗೆ ಒಬ್ಬ ಅರಸನನ್ನು ಆ ದೇಶದಲ್ಲಿ ಇಟ್ಟನು. ಈ ಅರಸನಾದ ಚಿದೆಕೀಯನು ನೆಬುಕದ್ನೆಚರನ ಕೈಯಿಂದ ಬಿಡುಗಡೆಯಾಗ ಬೇಕೆಂದು, ಮಿಸ್ರ ದೇಶಸ್ಥರನ್ನು ಆಶ್ರಯಿಸಿದವರಿಂದ, ಕಸ್ದೀಯರ ದಂಡು ನಾಶ ಮಾಡುವ ಪ್ರವಾಹದ ಹಾಗೆ ದೇಶದ ಮೇಲೆ

ಬಿತ್ತು. ಯೆಹೂದ್ಯರು ತಂಮ ಪಟ್ಟಣದ ರಕ್ಷಣೆಗೋಸ್ಕರ ಯೆರಡು ವರ್ಷ ಪ
ರ್ಯಂತರ ಯುದ್ಧ ಮಾಡಿದರು. ಆ ಸಮಯದಲ್ಲಿ ಪಟ್ಟಣದಲ್ಲಿರುವವರು
ಹಸಿವೆಯಿಂದ ಅಧಿಕವಾದ ಕಷ್ಟದಲ್ಲಿರುವಾಗ್ಯೆ, ಕೆಲವು ಹೆಂಗಸರು ತಂಮ
ಮಕ್ಕಳನ್ನು ತಿಂದು ಬಿಟ್ಟರು. ಕಡೇಲಿ ಶತ್ರುಗಳು ಪಟ್ಟಣದಲ್ಲಿ ಸೇರಿದರಿಂದ
ಚಿದೆಕೀಯನು ಓಡಿ ಹೋಗುವಾಗ್ಯೆ, ಶತ್ರುಗಳ ಕೈಯಲ್ಲಿ ಸಿಕ್ಕಿದನು. ಆ
ಗಲು, ಅರಸನು ಬಾಬೇಲಿಗೆ ಒಯ್ಯಲ್ಪಟ್ಟು ಅಲ್ಲೇ ಸಾಯುವನು; ಆದಾ
ಗ್ಯೂ ಆ ದೇಶವನ್ನು ನೋಡನು, ಯೆಂಬ ಹೆಜೆಕಿಯೇಲನ ಪ್ರವಾದನೆಯು
ಈಡೇರಿತು. ಹ್ಯಾಗೆಂದರೆ ಕಸ್ದೀಯರು, ಅವನು ನೋಡುವಾಗಲೇ ಅವನ ಕು
ಮಾರರನ್ನು ಹತ ಮಾಡಿದ ಮೇಲೆ, ಅವನ ಕಣ್ಣುಗಳನ್ನು ತಿವಿದು, ಅವನ
ನ್ನು ಬಾಬೇಲಿಗೆ ಒಯ್ದರು. ಮತ್ತು ಅವರು ಯೆರೂಸಲೇಮನ್ನೂ ಅದರ
ದೇವಾಲಯವನ್ನೂ ಕೊಳ್ಳೆ ಮಾಡಿ, ಗೋಡೆ ಕೆಡವಿ ಯೆಲ್ಲಾ ಸುಟ್ಟು, ದೇವಾಲಯ
ದಲ್ಲಿದ್ದ ಬೆಲೆಯುಳ್ಳ ಪಾತ್ರೆಗಳನ್ನು ಲೂಟಿ ಮಾಡಿ, ಬಾಬೇಲಿನಲ್ಲಿರುವ ಬೇಲ
ನ ಮಂದಿರಕ್ಕೆ ತೆಗದು ಕೊಂಡು ಹೋದರು. ಆದರೆ ಸಾಕ್ಷಿಪೆಟ್ಟಿಗೆ ಯೇನು
ಆಯಿತೆಂದು ಯಾರಿಗೂ ತಿಳಿಯಲಿಲ್ಲಾ. ನೆಬುಕದ್ನೇಚರನು ತಾನು ನಂ
ಬಿಕೆ ಇಟ್ಟ ಕೆಲವು ಮಂದಿ ಮುಖ್ಯಸ್ಥರನ್ನೂ, ಗುಣವನ್ನಾಗಲಿ ಅವಗುಣ
ವನ್ನಾಗಲಿ ಮಾಡರೆಂದು ತಾನು ತಿಳಕೊಂಡ ಬಡವರನ್ನೂ, ದೇಶದಲ್ಲಿ ಉಳಿಸಿ,
ಮಿಕ್ಕಾದವರನ್ನು ಬಾಬೇಲ ರಾಜ್ಯದ ಬೇರೆ ಬೇರೆ ಸೀಮೆಗಳಲ್ಲಿ ಕಳುಹಿಸಿದನು.
ಅಲ್ಲಿ ಪ್ರವಾದಿಗಳು ಮುಂತಿಳಿಸಿದ ಪ್ರಕಾರ ಘಾಳಿಯು ಬಡಕೊಂಡು ಹೋ
ಗುವ ಹೊಟ್ಟಿನ ಹಾಗೆ ಅವರು ಚದರಿ ಹೋದರು.

ಬಾಬೇಲಿನ ಅರಸನು ದೇಶದೊಳಗೆ ಉಳಿದವರಲ್ಲಿ ಶ್ರೇಷ್ಠನಾಗಿರುವ ಗೆದಲ್ಯ
ನನ್ನು ಯೆಹೂದ್ಯದ ಮೇಲೆ ಅಧಿಪತಿಯಾಗಿಟ್ಟನು. ಆದರೆ ಈ ಉತ್ತಮ
ನಾದ ಘನವುಳ್ಳ ಮನುಷ್ಯನನ್ನು ಯೆಹೂದ್ಯರು ಕೊಂದು ಹಾಕಿದರು. ಪ್ರ
ವಾದಿಯಾದ ಯೆರೆಮೀಯನು ಸಹಾ ದೇಶದಲ್ಲಿ ಇರಲಿಕ್ಕೆ ಅರಸನಿಂದ ಅಪ್ಪ
ಣೆಯನ್ನು ಹೊಂದಿ, ಆಗಲೇ ಹಾಳಾದ ಯೆರೂಸಲೇಮಿನಲ್ಲಿ ಸಂಚರಿಸಿ
ಪರಿಶುದ್ಧ ಬರಹದಲ್ಲಿ ಸೇರಿದ ಗೋಳಾಟದ ಗೀತಗಳನ್ನು ಹಾಡುತ್ತಿದ್ದನು.

೫೧. ದನಿಯೇಲನು.

ಕೈಸೆರೆಯಲ್ಲಿ ಬಿದ್ದ ಯೆಹೂದ್ಯರು ತಮ್ಮನ್ನು ಜಯಿಸಿದವರ ಹಸ್ತ್ರ ದಿಕ್ಕಿಲ್ಲದ ದಾಸರಾಗಿ ಬಹಳ ಅನ್ಯಾಯವನ್ನನುಭವಿಸಿದರೆಂದು ನೆನಸಬೇಡ. ಅವರು ಈಗಿನ ಕಾಲದಲ್ಲಿ ಸಮಸ್ತ ದೇಶಗಳೊಳಗೆ ಚದರಲ್ಪಟ್ಟು ಅನುಭವಿಸುವ ಉಪದ್ರದಷ್ಟು ಕಸ್ದೀಯರ ದೇಶದಲ್ಲಿ ಅನುಭವಿಸಲಿಲ್ಲ. ಯೇನಂದರೆ ಅರಸನು ಇವರಿಗೂ ಕಸ್ದೀಯರಿಗೂ ಹೊಟ್ಟುಕಡಮೆ ಮಾಡದೆ, ಇವರಲ್ಲಿ ಕೆಲವರಿಗೆ ಉತ್ತಮ ಉದ್ಯೋಗಗಳನ್ನು ಕೊಟ್ಟನು. ನೆಬುಕದ್ನೇಚರನು ಯೆಹೂದ್ಯರಾದ ಯೌವನಸ್ಥರನ್ನು ಸಾಕಿ, ವಿದ್ಯೆಗಳನ್ನು ಕಲಿಸಿದನು. ದನಿಯೇಲನೂ ಷದ್ರಕನೂ ಮೇಷಕನೂ ಅಬೆದ್ನೆಗೋ ಈ ರೀತಿಯಾಗಿ ನೆಬುಕದ್ನೇಚರನಿಂದ ಪರಾಂಬರಿಸಲ್ಪಟ್ಟು, ಶ್ರೇಷ್ಟ ಉದ್ಯೋಗಗಳಲ್ಲಿ ಸೇರಿ, ಪ್ರಧಾನಿಗಳಾಗಿ, ತಮ್ಮ ದೇಶಸ್ಥರಿಗೆ ಘನವನ್ನೂ ಕಾರ್ಯವನ್ನೂ ಕೊಟ್ಟು, ಅನ್ಯಜನರೊಳಗೆ ದಿವ್ಯ ಜ್ಞಾನದ ಬೆಳಕನ್ನು ಪ್ರಕಾಶಿಸ ಮಾಡಿದರು. ಆದರೆ ಸೌಖ್ಯದಲ್ಲಿ ಸೇರುವದಕ್ಕಿಂತ ಮುಂಚೆ, ಅವರು ದುಃಖ ಕಷ್ಟಗಳನ್ನು ತಾಳಿ ಕೊಳ್ಳ ಬೇಕಾಯಿತು. ಯಾಕಂದರೆ ಅವರು ನೆಬುಕದ್ನೇಚರನ ಮೇಜಿನಿಂದ ಬರುವ ಊಟಗಳನ್ನು ತಿಂನುವದು ನ್ಯಾಯವಲ್ಲವೆಂದು ನೆನಸಿ, ಮಾಂಸವೂ ದ್ರಾಕ್ಷೆಯ ರಸವೂ ಬೇಡ, ಪಲ್ಯಗಳನ್ನೂ ನೀರನ್ನೂ ಕೊಡ ಬೇಕೆಂದು ತಮ್ಮ ನಾಯಕನಿಗೆ ಅರಿಕೆ ಮಾಡಿದರು. ಹೀಗೆ ಮಾಡುವದರಿಂದ ಅವರು ದೇವರ ಆಶೀರ್ವಾದವನ್ನು ಪಡಕೊಂಡು, ಮತ್ತೊಬ್ಬರಿಗಿಂತ ಅಧಿಕವಾದ ಕ್ಷೇಮವನ್ನೂ ತ್ರಾಣವನ್ನೂ ಹೊಂದಿದರು. ಅರಸನು ಪರೀಕ್ಷೆ ಮಾಡುವ ಸಮಯದಲ್ಲಿ ಯೆಲ್ಲರಿಗಿಂತ ಬುದ್ಧಿವಂತರಾಗಿಯೂ ವಿದ್ಯಾವಂತರಾಗಿಯೂ ಕಾಣಿಸಲ್ಪಟ್ಟು, ಅರಸನ ಸೇವಕರ ಸಾಲಿನಲ್ಲಿ ಸೇರಿದರು

ಆ ಮೇಲೆ ನೆಬುಕದ್ನೇಚರನು ಸಮಸ್ತ ದೇಶದೊಳಗಿಂದ ತಾನು ಜಯಶಾಲಿಯಾಗಿ ಕೂಡಿಸಿ ಇಟ್ಟ ದ್ರವ್ಯದಿಂದ ಅರವತ್ತು ಮೊಳ ಉದ್ದವಾದ ಭಂಗಾರದ ವಿಗ್ರಹವನ್ನು ಮಾಡಿಸಿದನು. ಪ್ರತಿಷ್ಟೆ ಸಮಯದಲ್ಲಿ ದೊಡ್ಡವರೆಲ್ಲರನ್ನು ಕೂಡಾ ಕರಿಸಿದಾಗ, ಸಾರುವವನು ಕೂಗಿ ಪ್ರಜೆಗಳೇ ಭಾಷೆಗಳೇ, ನೀ

ವು ಕೊಂಬು ಪಿಳ್ಳಂಗೋವಿ ತಂಬೂರಿ ವೀಣೆ ಕಿನ್ನರಿ ನಾಗಸ್ವರ ಮೊದಲಾದ ಬೇರೆ ಬೇರೆ ವಾದ್ಯಗಳ ಶಬ್ದವನ್ನು ಕೇಳಲಾಗಿ, ನೀವು ಯೆರಗಿ, ಅರಸನಾದ ನೆಬುಕದ್ನೆಚರನು ಇರಿಸಿದ ಭಂಗಾರದ ವಿಗ್ರಹದ ಮುಂದೆ ಆರಾಧಿಸ ಬೇಕು; ಯೆರಗದೆಯೂ ಆರಾಧಿಸದೆಯೂ ಇರುವವನು ತಕ್ಷಣದಲ್ಲಿ ವುರಿಯುವ ಬೆಂಕಿಯ ಭಟ್ಟಿಯ ಮಧ್ಯದಲ್ಲಿ ದಬ್ಬಲ್ಪಡುವನು ಯೆಂದು ಹೇಳಿದನು. ಆದದರಿಂದ ಜನರೆಲ್ಲರು ಕೊಂಬು ಪಿಳ್ಳಂಗೋವಿ ತಂಬೂರಿ ವೀಣೆ ಕಿನ್ನರಿ ನಾಗಸ್ವರ ಮೊದಲಾದ ವಾದ್ಯಗಳ ಶಬ್ದವನ್ನು ಕೇಳಲು, ಪ್ರಜೆಗಳೂ ಜನಾಂಗಗಳೂ ಭಾಷೆಗಳೂ ಯೆರಗಿ, ಅರಸನಾದ ನೆಬುಕದ್ನೆಚರನು ಇರಿಸಿದ ವಿಗ್ರಹವನ್ನಾರಾಧಿಸಿದರು. ಆದರೆ ಆ ಸಮಯದಲ್ಲಿ ಕಸ್ದೀಯರಾದ ಜನರು ಬಂದು, ಯೆಹೂದ್ಯರ ಮೇಲೆ ಕ್ಷುದ್ರ ಹೇಳಿದರು. ಯೇನಂದರೆ ಅವರು ಅರಸನಾದ ನೆಬುಕದ್ನೆಚರನಿಗೆ, ಅರಸನೇ ನಿರಂತರ ಬಾಳು; ಪ್ರತಿ ಮನುಷ್ಯನು ಕೊಂಬು ಪಿಳ್ಳಂಗೋವಿ ತಂಬೂರಿ ವೀಣೆ ಕಿನ್ನರಿ ನಾಗಸ್ವರ ಮೊದಲಾದ ವಾದ್ಯಗಳ ಶಬ್ದವನ್ನು ಕೇಳಲು, ಯೆರಗಿ ಭಂಗಾರದ ವಿಗ್ರಹದ ಮುಂದೆ ಆರಾಧಿಸ ಬೇಕು; ಯೆರಗದೆಯೂ ಆರಾಧಿಸದೆಯೂ ಇರುವವನು ಉರಿಯುವ ಬೆಂಕಿಯ ಭಟ್ಟಿಯಲ್ಲಿ ದಬ್ಬಲ್ಪಡ ಬೇಕು ಯೆಂದು, ಅರಸನಾದ ನೀನು ಅಪ್ಪಣೆ ಕೊಟ್ಟಿದ್ದೀಯಷ್ಟೆ! ಈಗ ಬಾಬೇಲ ಸೀಮೆಯ ಕೆಲಸಗಳಿಗೆ ನೀನು ಇಟ್ಟ ಷದ್ರಕ ಮೇಷಕ ಅಬೆದ್ನೆಗೋ ಯೆಂಬ ಯೆಹೂದ್ಯರಿದ್ದಾರೆ; ಈ ಜನರು ಅರಸನಾದ ನಿನ್ನನ್ನು ಲಕ್ಷಿಸದೆಯೂ ನಿನ್ನ ದೇವರುಗಳನ್ನು ಪೂಜಿಸದೆಯೂ, ನೀನು ಇರಿಸಿದ ಭಂಗಾರದ ವಿಗ್ರಹವನ್ನು ಆರಾಧಿಸದೆಯೂ ಇದ್ದಾರೆ ಯೆಂದು ಹೇಳಿದರು. ನೆಬುಕದ್ನೆಚರನು ಕೋಪವೂ ರೌದ್ರವೂ ಪಟ್ಟು, ಷದ್ರಕನನ್ನೂ ಮೇಷಕನನ್ನೂ ಅಬೆದ್ನೆಗೋವನ್ನೂ ತರಿಸ ಹೇಳಿದನು. ಹಾಗೆ ಈ ಜನರನ್ನು ಅರಸನ ಮುಂದೆ ತಂದರು. ಆಗ್ಯೆ ನೆಬುಕದ್ನೆಚರನು ಅವರಿಗೆ, ಷದ್ರಕನೇ ಮೇಷಕನೇ ಅಬೆದ್ನೆಗೋವೇ, ನೀವು ಬೇಕೆಂದು ನನ್ನ ದೇವರುಗಳನ್ನು ಪೂಜಿಸದೆಯೂ, ನಾನು ಇರಿಸಿದ ಭಂಗಾರದ ವಿಗ್ರಹವನ್ನಾರಾಧಿಸದೆಯೂ, ಇದ್ದೀರಾ? ಈಗ ನೀವು ಕೊಂಬು ಪಿಳ್ಳಂಗೋವಿ ತಂಬೂರಿ ವೀಣೆ

ಕಿನ್ನರಿ ನಾಗಸ್ವರ ಮೊದಲಾದ ವಾದ್ಯಗಳ ಶಬ್ದವನ್ನು ಕೇಳುವ ಸಮಯದಲ್ಲಿ ಯೆರಗಿ, ನಾನು ಮಾಡಿದ ವಿಗ್ರಹದ ಮುಂದೆ ಆರಾಧಿಸಿದರೆ ಸಮ, ಇಲ್ಲದಿದ್ದರೆ, ನೀವು ತಕ್ಷಣದಲ್ಲಿ ಉರಿಯುವ ಬೆಂಕಿಯ ಭಟ್ಟಿಯಲ್ಲಿ ದೊಬ್ಬಲ್ಪಡುವಿರಿ; ಇದರಿಂದ ನಿಮ್ಮನ್ನು ತಪ್ಪಿಸುವ ದೇವರು ಯಾರು? ಅಂದನು. ಷದ್ರಕನೂ ಮೇಷಕನೂ ಅಬೆದ್ನೆಗೋವೂ ಅರಸನಿಗೆ ಪ್ರತ್ಯುತ್ತರವಾಗಿ, ನೆಬುಕದ್ನೆಚರನೇ, ಈ ವಿಷಯದಲ್ಲಿ ನಿನಗೆ ಉತ್ತರ ಕೊಡ, ನಮಗೆ ಕಾರಣವಿಲ್ಲಾ; ಅರಸನೇ ನಾವು ಸೇವಿಸುವ ನಮ್ಮ ದೇವರು ಉರಿಯುವ ಬೆಂಕಿಯ ಭಟ್ಟಿಯಿಂದಲೂ, ಅರಸನಾದ ನಿನ್ನ ಕೈಯಿಂದಲೂ, ನಮ್ಮನ್ನು ತಪ್ಪಿಸ ಸಮರ್ಥನಾಗಿದ್ದಾನೆ; ತಪ್ಪಿಸದಿದ್ದರೂ ನಾವು ನಿನ್ನ ದೇವತೆಗಳಿಗೆ ಸೇವಿಸದೆಯೂ, ನೀನು ಇರಿಸಿದ ಭಂಗಾರದ ವಿಗ್ರಹದ ಮುಂದೆ ಆರಾಧಿಸದೆಯೂ, ಇರುವೆವೆಂದು ತಿಳಿದಿರ ಬೇಕು ಅಂದರು. ಆಗಲು ನೆಬುಕದ್ನೆಚರನು ಅತಿ ಕೋಪಿತನಾಗಿ ಷದ್ರಕನಿಗೂ ಮೇಷಕನಿಗೂ ಅಬೆದ್ನೆಗೋವಿಗೂ ವಿರೋಧವಾಗಿ ಅವನ ಮುಖಲಕ್ಷಣವು ಬೇರೆ ಆಯಿತು. ಅವನು ಮಾತಾಡಿ, ಸಾಧಾರಣವಾದ ಬೆಂಕಿಗಿಂತ ಅಧಿಕವಾದ ಬೆಂಕಿಯನ್ನು ಭಟ್ಟಿಯಲ್ಲಿ ಹೊಚ್ಚಲಿಕ್ಕೆ ಅಪ್ಪಣೆ ಕೊಟ್ಟು, ತನ್ನ ಸೈನ್ಯದಲ್ಲಿ ಬಲಿಷ್ಟರಾದವರಿಗೆ, ಷದ್ರಕನನ್ನೂ ಮೇಷಕನನ್ನೂ ಅಬೆದ್ನೆಗೋವನ್ನೂ ಬಂಧಿಸಿ, ಉರಿಯುವ ಬೆಂಕಿಯ ಭಟ್ಟಿಯಲ್ಲಿ ಹಾಕಲಾಜ್ಞಾಪಿಸಿದನು. ಆಗಲು ಈ ಮನುಷ್ಯರು ಗುಡಿಗಗಳನ್ನೂ ಕವಚಗಳನ್ನೂ ನಿಲುವಂಗಿಗಳನ್ನೂ ಶಲ್ಯಗಳನ್ನೂ ಹೊದ್ದವರಾಗಿ ಬಂಧಿಸಲ್ಪಟ್ಟು, ಉರಿಯುವ ಬೆಂಕಿಯ ಭಟ್ಟಿಯಲ್ಲಿ ಹಾಕಲ್ಪಟ್ಟರು. ಅರಸನ ಅಪ್ಪಣೆಯು ಅವಶ್ಯವಾಗಿಯೂ ಭಟ್ಟಿಯು ಬಹಳ ಬಿಸಿಯಾಗಿಯೂ ಇರುವದರಿಂದ, ಬೆಂಕಿಯ ಜ್ವಾಲೆಯು ಷದ್ರಕ ಮೇಷಕ ಅಬೆದ್ನೆಗೋ ಯೆಂಬವರನ್ನು ಮೇಲಕ್ಕೆ ಒಯ್ದ ಮನುಷ್ಯರನ್ನು ಸಂಹರಿಸಿತು. ಷದ್ರಕ ಮೇಷಕ ಅಬೆದ್ನೆಗೋ ಯೆಂಬ ಮೂವರು ಬಂಧಿಸಲ್ಪಟ್ಟವರಾಗಿ ಉರಿಯುವ ಬೆಂಕಿಯ ಭಟ್ಟಿಯಲ್ಲಿ ಬಿದ್ದರು. ಆಗಲು ಅರಸನಾದ ನೆಬುಕದ್ನೆಚರನು ವಿಸ್ಮಯಪಟ್ಟು ತೀವ್ರವಾಗಿ ಯೆದ್ದು ತನ್ನ ಮಂತ್ರಿಗಳಿಗೆ, ನಾವು ಮೂವರನ್ನು ಬಂಧಿಸಲ್ಪಟ್ಟವರನ್ನಾಗಿ ಬೆಂಕಿಯಲ್ಲಿ ಹಾಕಿದ್ದಲ್ಲವೋ ಅಂ

ದನು. ಅವರು ಅರಸನಿಗೆ ಪ್ರತ್ಯುತ್ತರವಾಗಿ, ಅಹುದು ಅರಸನೇ ಅಂದರು. ಅವನು ಉತ್ತರವಾಗಿ, ಅಗೋ ನಾನು ನಾಲ್ಕು ಮಂದಿ ಬಿಡುಗಡೆಯವರಾಗಿ



ಬೆಂಕಿಯೊಳಗೆ ತಿರುಗಾಡುವದನ್ನು ನೋಡುತ್ತೇನೆ; ಅವರಿಗೆ ಬೆಂದ ಬಾಕ್ಕೆ ಇಲ್ಲಾ, ಆ ನಾಲ್ಕನೆಯವನ ರೂಪವು ದೇವರ ಮಗನ ಹಾಗದೆ ಯೆಂದು, ಉರಿಯುವ ಬೆಂಕಿಯ ಭಟ್ಟಿಯ ಹತ್ತರ ಬಂದು, ಪರಮದೇವರ ಸೇವಕರಾದ ಷದ್ರಕನೇ ಮೇಷಕನೇ ಅಬದ್ನೆಗಾವೇ, ಹೊರಗೆ ಬನ್ನಿ ಅಂದನು. ಹಾಗೆಯೇ ಅವರು ಬೆಂಕಿಯೊಳಗಿಂದ ಹೊರಟರು. ಆಗಲು ಕ್ಷತ್ರಪರೂ ಸುಭೇದಾರರೂ ಅಧಿಪತಿಗಳೂ ಅರಸನ ಮಂತ್ರಿಗಳೂ ಕೂಡಿ ಕೊಂಡು, ಈ ಮನುಷ್ಯರ ಶರೀರಗಳ ಮೇಲೆ ಬೆಂಕಿಗೆ ತ್ರಾಣವಿರಲಿಲ್ಲವೆಂದೂ, ಅವರ ತಲೇ ಕೂದಲು ಸಹ ಕುಂದಲಿಲ್ಲವೆಂದೂ, ಅವರ ಗುಡಿಗಿ ಬೇರೆಯಾಗಲಿಲ್ಲವೆಂದೂ, ಬೆಂಕಿಯ ವಾಸನೆಯು ಅವರಲ್ಲಿ ಬರಲಿಲ್ಲವೆಂದೂ, ನೋಡಿದರು. ಆಗ ನೆಬುಕದ್ನೆಚರನು, ಷದ್ರಕನೂ ಮೇಷಕನೂ ಅಬೆದ್ನೆಗಾವೂ ಇವರ ದೇವರು ಸ್ತುತಿಸಲ್ಪಡಲಿ. ಯಾಕಂದರೆ ಆತನು, ತಂನಲ್ಲಿ ನಂಬಿ, ಅರಸನ ಆಜ್ಞೆಯನ್ನು ಮೀರಿ, ಸ್ವದೇವರನ್ನು ಹೊರ್ತು ಬೇರೆ ದೇವರನ್ನು ಪೂಜಿಸದೆಯೂ ಆರಾಧಿಸದೆಯೂ ಇರುವ ಹಾಗೆ, ತಮ್ಮ ಶರೀರಗಳನ್ನು ಒಪ್ಪಿಸಿರುವ, ತನ್ನ ಸೇವಕರನ್ನು ರಕ್ಷಿಸಲಿಕ್ಕೆ ತನ್ನ ದೂತನನ್ನು ಕಳುಹಿಸಿದ್ದಾನೆ; ಈ ಪ್ರಕಾರ ರಕ್ಷಿಸ ಸಮರ್ಥನಾದ ಬೇರೆ ದೇವರು ಇಲ್ಲದ ಕಾರಣ, ಸಕಲ ಪ್ರಜೆ ಜನಾಂಗ ಭಾಷೆಗಳ

ಲ್ಲಿ, ಷದ್ರಕ ಮೇಷಕ ಅಬೆದ್ನೆಗೊ ಯೆಂಬವರ ದೇವರಿಗೆ ವಿರೋಧವಾಗಿ ದೂಷಣೆ ಹೇಳುವವನನ್ನು ಖಂಡಿಸ ಬೇಕೆಂದೂ, ಅವನ ಮನೆಯನ್ನು ಮಣ್ಣು ದಿಬ್ಬವಾಗಿ ಮಾಡ ಬೇಕೆಂದೂ, ನನ್ನ ಅಪ್ಪಣೆಯುಂಟು ಅಂದನು. ತರುವಾಯ ಅರಸನು ಷದ್ರಕ ಮೇಷಕ ಅಬೆದ್ನೆಗೊ ಯೆಂಬವರನ್ನು ಬಾಬೇಲ ಸೀಮೆಯಲ್ಲಿ ದೊಡ್ಡವರಾಗ ಮಾಡಿದನು.

ನೆಬುಕದ್ನೇಚರನು ಯೌವನಸ್ಥನಾದ ದನಿಯೇಲನಿಗೆ ಬಹಳ ಮಾನ ಕೊಟ್ಟು ಸತ್ತುಹೋದ ಮೇಲೆ, ಅವನ ತರುವಾಯ ಅರಸನಾದ ಬೆಲ್ಶಚರನು ಹೆಚ್ಚಾದ ಮಾನವನ್ನು ಕೊಟ್ಟನು. ಅವನ ಮೇಲೆ ಮೇದ್ಯದವನಾದ ದರ್ಯೋಯನು ಮುದುಕನಾದ ದನಿಯೇಲನಿಗೆ ತನ್ನ ರಾಜ್ಯದ ಮೂರನೇ ಪಾಲಿನ ಅಧಿಕಾರವನ್ನು ಕೊಟ್ಟು, ಸಮಸ್ತ ರಾಜ್ಯದ ಮೇಲೆ ಅವನನ್ನು ನೇಮಿಸ ಮನಸ್ಸಾಗಿದ್ದನು. ಆಗಲು ಮುಖ್ಯಸ್ಥರೂ ಕ್ಷತ್ರಪರೂ ರಾಜ್ಯಕೆಲಸದಲ್ಲಿ ದನಿಯೇಲನಿಗೆ ವಿರೋಧವಾದ ನಿಮಿತ್ತವನ್ನು ಹುಡುಕಿದರು. ಆದರೆ ಅವನು ನಂಬಿಗೆಯುಳ್ಳವನೂ, ತಪ್ಪೂ ದೋಷವೂ ಇಲ್ಲದೆ ಇರುವವನೂ ಆದದರಿಂದ, ಅವರು ನಿಮಿತ್ತ ತಪ್ಪು ನೋಡದಿದ್ದರು. ಆಗಲು ಆ ಮನುಷ್ಯರು ಈ ದನಿಯೇಲನಿಗೆ ವಿರೋಧವಾಗಿ ಅವನ ದೇವರ ನ್ಯಾಯದಲ್ಲಿ ನಿಮಿತ್ತ ಕಂಡ ಹೊರತು, ನಮಗೆ ಯಾವದೂ ಕೊಲಿಕ್ಕಿಲ್ಲವೆಂದು ಅಂದುಕೊಂಡರು. ಆಗಲು ಮುಖ್ಯಸ್ಥರೂ ಕ್ಷತ್ರಪರೂ ಅರಸನ ಸನ್ನಿಧಿಗೆ ನುಗ್ಗಿ ಬಂದು, ಅರಸನಾದ ದರ್ಯೋಯನೇ ನಿರಂತರ ಬಾಳು! ರಾಜ್ಯದ ಸಕಲ ಪ್ರಧಾನಿಗಳೂ ಮುಖ್ಯಸ್ಥರೂ ಕ್ಷತ್ರಪರೂ ಅಧಿಪತಿಗಳೂ ಅಧಿಕಾರಿಗಳೂ ಮೂವತ್ತು ದಿವಸ ತನಕ ಅರಸನಾದ ನಿನಗೆ ವಿನಾಯಿಸಿ, ಯಾವ ದೇವನಿಗಾದರೂ ಮನುಷ್ಯನಿಗಾದರೂ ವಿಜ್ಞಾಪನೆ ಮಾಡುವವನನ್ನು ಸಿಂಹಗಳ ಗವಿಯಲ್ಲಿ ಬಿಸಾಡ ಬೇಕೆಂದು ರಾಜಾಜ್ಞೆಯನ್ನು ಸ್ಥಾಪಿಸಿ ಸ್ಥಿರ ಕಟ್ಟಳೆ ಮಾಡಲಿಕ್ಕೆ ಆಲೋಚಿಸಿಕೊಂಡಿದ್ದಾರೆ; ಈಗ ಅರಸನೇ, ಮೇದ್ಯರೂ ಪಾರ್ಸಿಯರೂ ನೇಮಿಸಿದ ಬದಲಾಗದ ನ್ಯಾಯದ ಪ್ರಕಾರ ಇದು ಬದಲಾಗದ ಹಾಗೆ, ಈ ನ್ಯಾಯವನ್ನು ಸ್ಥಾಪಿಸಿ, ಬರಹಕ್ಕೆ ಮುದ್ರೆ ಹಾಕು ಯೆಂದು ಹೇಳಿದರು. ಹಾಗೇ ಅರಸನಾದ ದರ್ಯೋಯನು

ಆ ಕಟ್ಟಳೆಯ ಬರಹಕ್ಕೆ ಒಪ್ಪಿತ ಹಾಕಿದನು. ಆ ಬರಹಕ್ಕೆ ಒಪ್ಪಿತ ಹಾಕಿ ಆಯಿತೆಂದು ತಿಳಿದಾಗ, ದನಿಯೇಲನು ತನ್ನ ಮನೆಗೆ ಹೋದನು. ಅವನ ಉಪ್ಪರಿಗೆಯಲ್ಲಿ ಯೆರೂಸಲೇಮಿನ ಕಡೆಗೆ ತೆರದ ಕಿಟಿಕಿಗಳು ಇದ್ದವು. ಅಲ್ಲಿ ಅವನು ಮುಂಚೆ ಮಾಡಿದ ಪ್ರಕಾರವೇ ದಿನಕ್ಕೆ ಮೂರು ಸಾರಿ ಮೊಣಕಾಲೂರಿ, ತನ್ನ ದೇವರ ಸಂನಿಧಿಯಲ್ಲಿ ಪ್ರಾರ್ಥನೆ ಸ್ತೋತ್ರ ಮಾಡುತ್ತಿದ್ದನು. ಆಗಲು ಆ ಮನುಷ್ಯರು ನುಗ್ಗಿ ಬಂದು, ದನಿಯೇಲನು ತನ್ನ ದೇವರ ಸನ್ನಿಧಿಯಲ್ಲಿ ಪ್ರಾರ್ಥನೆ ವಿಜ್ಞಾಪನೆ ಮಾಡುವದನ್ನು ಕಂಡರು. ಆಗಲವರು ಅರಸನ ಹತ್ತರ ಬಂದು ಮೂವತ್ತು ದಿವಸಗಳ ತನಕ ಅರಸನಾದ ನಿನಗೆ ವಿನಾಯಿಸಿ, ಯಾವ ದೇವನಿಗಾದರೂ ಮನುಷ್ಯನಿಗಾದರೂ ವಿಜ್ಞಾಪನೆ ಮಾಡುವವನನ್ನು ಸಿಂಹಗಳ ಗವಿಯಲ್ಲಿ ಬಿಸಾಡ ಬೇಕೆಂಬ ಕಟ್ಟಳೆಯ ರಾಜಾಜ್ಞೆಗೆ ನೀನು ಒಪ್ಪಿತ ಹಾಕಿದಿಯಲ್ಲವೋ ಅಂದರು. ಅರಸನು ಪ್ರತ್ಯುತ್ತರವಾಗಿ, ಮೇದ್ಯರೂ ಫಾರ್ಸಿಯರೂ ನೇಮಿಸಿದ ಬದಲಾಗದ ನ್ಯಾಯದ ಪ್ರಕಾರ ಅದು ಸ್ಥಿರವೇ ಸರಿ ಯೆಂದು ಹೇಳಿದನು. ಅವರು ಅರಸನಿಗೆ ಪ್ರತ್ಯುತ್ತರವಾಗಿ ಯೆಹೂದ್ಯರಾದ ಸೆರೆಯವರಲ್ಲಿ ಒಬ್ಬನಾಗಿರುವ ಆ ದನಿಯೇಲನು ಅರಸನಾದ ನಿನ್ನನ್ನೂ ನೀನು ಒಪ್ಪಿತ ಹಾಕಿದ ಕಟ್ಟಳೆಯನ್ನೂ ಲಕ್ಷಿಸದೆ, ದಿನಕ್ಕೆ ಮೂರು ಸಾರಿ ವಿಜ್ಞಾಪನೆ ಮಾಡುತ್ತಾನೆ ಯೆಂದು ಹೇಳಿದರು. ಅರಸನು ಇವುಗಳನ್ನು ಕೇಳಿ, ತಂನಲ್ಲಿ ಕಳವಳ ಪಟ್ಟು, ದನಿಯೇಲನನ್ನು ತಪ್ಪಿಸಲಿಕ್ಕೆ ಮನಸ್ಸು ಮಾಡಿ, ಸೂರ್ಯಾಸ್ತಮಯ ಪರ್ಯಂತರಕ್ಕೂ ಅವನನ್ನು ತಪ್ಪಿಸುವ ಪ್ರಯತ್ನದಲ್ಲಿದ್ದನು. ಆಗಲು ಆ ಮನುಷ್ಯರು ಅರಸನ ಸಮೀಪಕ್ಕೆ ನುಗ್ಗಿ ಬಂದು, ಅರಸನು ನೇಮಿಸಿದ ಯಾವ ಕಟ್ಟಳೆಯೂ ಆಜ್ಞೆಯೂ ಬದಲಾಗದ ಹಾಗೆ, ಮೇದ್ಯರಿಗೂ ಫಾರ್ಸಿಯರಿಗೂ ನ್ಯಾಯ ವುಂಟೆಂದು ಅರಸನಾದ ನಿನಗೆ ತಿಳಿದಿರಲಿ ಅಂದರು. ಆಗಲು ಅರಸನು ಆಜ್ಞಾಪಿಸಲಾಗಿ, ಅವರು ದನಿಯೇಲನನ್ನು ತಂದು ಸಿಂಹಗಳ ಗವಿಯಲ್ಲಿ ಹಾಕಿದರು. ಅರಸನು ದನಿಯೇಲನಿಗೆ ನೀನು ಸದಾಕಾಲ ಸೇವಿಸುವ ನಿನ್ನ ದೇವರು ನಿನ್ನನ್ನು ರಕ್ಷಿಸಲಿ ಅಂದನು. ಅವರು ಒಂದು ಕಲ್ಲನ್ನು ತಂದು ಗವಿ

ಯ ಬಾಯಿಗೆ ಇಟ್ಟರು. ಮತ್ತು ದನಿಯೇಲನ ವಿಷಯವಾದ ಆಲೋಚನೆಯು ಬೇರೆಯಾಗದ ಹಾಗೆ ಅರಸನು ತನ್ನ ಮುದ್ರೆಯನ್ನೂ ತನ್ನ ಪ್ರಭುಗಳ ಮುದ್ರೆಯನ್ನೂ ಅದಕ್ಕೆ ಹಾಕಿದನು. ಹಾಗೆ ಅರಸನು ತನ್ನ ಅರಮನೆಗೆ ಹೋಗಿ ಉಪವಾಸದಿಂದಲೇ ರಾತ್ರಿಯನ್ನು ಕಳೆದು, ಉಪಪತ್ನಿಯರನ್ನು ಕರಿಸದೆ ಜಾಗರ ಮಾಡಿದನು. ಮರುದಿವಸ ಅರುಣೋದಯದಲ್ಲಿ ಅರಸನು ಯೆದ್ದು ತ್ವರ್ಯವಾಗಿ ಆ ಸಿಂಹಗಳ ಗವಿಗೆ ಹೋದನು. ಆ ಗವಿಯ ಹತ್ತರ ಬಂದು ದುಃಖಶಬ್ದದಿಂದ ದನಿಯೇಲನಿಗೆ ಕರೆದು, ಜೀವವುಳ್ಳ ದೇವರ ಸೇವಕನಾದ ದನಿಯೇಲನೇ, ನೀನು ಸದಾಕಾಲದಲ್ಲಿ ಸೇವಿಸುವ ನಿನ್ನ ದೇವರು ನಿನ್ನನ್ನು ಸಿಂಹಗಳಿಂದ ತಪ್ಪಿಸ ಸಮರ್ಥನಾಗಿದ್ದಾನೋ ಅಂದನು. ದನಿಯೇಲನು ಅರಸನಿಗೆ, ಅರಸನೇ, ನಿರಂತರ ಬಾಳು; ನನ್ನ ದೇವರು ತನ್ನ ದೂತನನ್ನು ಕಳುಹಿಸಿ ನನಗೆ ಘಾತ ಮಾಡದ ಹಾಗೆ ಸಿಂಹಗಳ ಬಾಯಿಗಳನ್ನು ಮುಚ್ಚಿದನು; ಯಾತಕ್ಕೆಂದರೆ ಆತನ ಸನ್ನಿಧಿಯಲ್ಲಿಯೂ ನಾನು ನಿರ್ಮಲನೆಂದು ಕಾಣಿಸಿ ಕೊಂಡೆನು; ಅರಸನಾದ ನಿನ್ನ ಸನ್ನಿಧಿಯಲ್ಲಿಯೂ ನಾನು ಯೇನೂ ದ್ರೋಹವನ್ನು ಮಾಡಲಿಲ್ಲ ಅಂದನು. ಆಗ ಅರಸನು ಅವನಿಗೋಸ್ಕರ ಅತಿ ಸಂತೋಷ ಪಟ್ಟು, ದನಿಯೇಲನನ್ನು ಗವಿಯೊಳಗಿಂದ ಯೆತ್ತಲಿಕ್ಕೆ ಅಪ್ಪಣೆ ಕೊಟ್ಟನು. ಆಗಲವರು ದನಿಯೇಲನನ್ನು ಗವಿಯೊಳಗಿಂದ ಯೆತ್ತಿದರು. ಅವನು ತನ್ನ ದೇವರಲ್ಲಿ ವಿಶ್ವಾಸವಿಟ್ಟದರಿಂದ ಯಾವ ಘಾಯವಾದರೂ ಅವನಲ್ಲಿ ಕಾಣಲಿಲ್ಲ. ಅರಸನು ಆಜ್ಞಾಪಿಸಲಾಗಿ, ಅವರು ದನಿಯೇಲನನ್ನು ದೂರಿದ ಮನುಷ್ಯರನ್ನು ತಂದು, ಅವರನ್ನೂ ಅವರ ಮಕ್ಕಳನ್ನೂ ಅವರ ಹೆಂಡರನ್ನೂ ಸಿಂಹಗಳ ಗವಿಯಲ್ಲಿ ಬಿಸಾಟರು. ಅವರು ಗವಿಯ ನೆಲವನ್ನು ಮುಟ್ಟುವ ಮುಂಚೆ ಸಿಂಹಗಳು ವಿಜೃಂಭಿಸಿ, ಅವರ ಯೆಲುವುಗಳನ್ನೆಲ್ಲಾ ಮುರಿದವು. ತರುವಾಯ ಅರಸನಾದ ದರೀಯನು, ತನ್ನ ಸಮಸ್ತ ರಾಜ್ಯದಲ್ಲಿರುವವರೆಲ್ಲರು ದನಿಯೇಲನ ದೇವರಿಗೆ ಭಯಪಡಲಿ, ಯಾಕಂದರೆ ಆತನು ಜೀವವುಳ್ಳ ದೇವರಾಗಿ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಗುರುತುಗಳನ್ನೂ ಅದ್ಭುತಾದಿಗಳನ್ನೂ ನಡಿಸುವವನಾಗಿದ್ಧಾನೆಂದು ಬರೆಸಿ ಸಾರಿ ಹೇಳಿಸಿದನು.




೫೨. ಯೆರೂಸಲೇಮಿನ ಪುನಃಸ್ಥಾಪನೆಯು.

ಯೆರೂಸಲೇಮು ಹಾಳಾದ ಯೆಪ್ಪತ್ತನೇ ವರ್ಷದಲ್ಲಿ ಫಾರ್ಸಿ ರಾಜನಾದ ಕೋರೇಷನು, ಅಸ್ಸೂರ್ಯ ಮೇದ್ಯ ಬಬೇಲ ದೇಶಗಳನ್ನು ತನ್ನ ವಶ ಮಾಡಿಕೊಂಡಾಗಲೇ, ತನ್ನ ರಾಜ್ಯದಲ್ಲಿ ವಾಸಿಸುವ ಸಕಲ ಇಸ್ರಾಯೇಲ್ಯರು ತಿರಿಗಿ ತಮ್ಮ ದೇಶಕ್ಕೆ ಹೋಗಿ, ತಮ್ಮ ಪಟ್ಟಣವನ್ನೂ ದೇವಾಲಯವನ್ನೂ ಮರಳಿ ಕಟ್ಟಿಸ ಬಹುದೆಂಬ ಅಪ್ಪಣೆ ಕೊಟ್ಟು, ಪರಲೋಕಗಳಲ್ಲಿರುವ ದೇವರಾದ ಕರ್ತನು ಯೆರೂಸಲೇಮ ಪಟ್ಟಣದಲ್ಲಿ ತನಗೊಂದು ಮಂದಿರವನ್ನು ಕಟ್ಟಿಸ ಬೇಕೆಂದು ತನಗೆ ಆಜ್ಞಾಪಿಸಿದದರಿಂದ, ಆತನ ಜನಾಂಗದವರು ಯಾರೋ ಅವರು ತಮ್ಮ ದೇವರ ಸಹಾಯದಿಂದ ಹೊರಟು ಹೋಗಲಿ ಯೆಂದು ಸಾರಿಸಿದನು. ಇದಲ್ಲದೆ ದೇವಾಲಯದಿಂದ ಬಬೇಲಿಗೆ ಒಯ್ಯಲ್ಪಟ್ಟ ಬಂಗಾರದ ಐದು ಸಾವಿರದ ನಾನೂರು ಪಾತ್ರೆಗಳನ್ನು ಅವನು ಇಸ್ರಾಯೇಲ್ಯರಿಗೆ ತಿರಿಗಿ ಕೊಟ್ಟನು. ಹೀಗಿರಲಾಗಿ ಯೆರೂಸಲೇಮನ್ನು ಮರತು ಬಿಡದವರೆಲ್ಲರು ಪ್ರಯಾಣಕ್ಕೆ ಸಾಹಿತ್ಯಗಳನ್ನು ಸಿದ್ಧ ಮಾಡಿದರು. ಆದರೆ ಯೆಹೂದ್ಯರಲ್ಲಿಯೂ ಇಸ್ರಾಯೇಲ್ಯರಲ್ಲಿಯೂ ಹೆಚ್ಚಾದವರು ಅಸ್ಸೂರ್ಯ ಬಬೇಲ ದೇಶಗಳಲ್ಲಿ ಮನೆಗಳನ್ನು ಮಾಡಿ ಕೊಂಡು ಐಶ್ವರ್ಯವಂತರಾದದರಿಂದ, ಇವರ ಹೊರತು ಯೆಹೂದ್ಯ ಗೋತ್ರದವರೂ ಲೇವಿ ಗೋತ್ರದವರೂ ನಾಲ್ವತ್ತೆರಡು ಸಾವಿರ ಮ

ನೆಯ ಯಜಮಾನರು ಮಾತ್ರ ಪ್ರಧಾನಯಾಜಕನಾದ ಯೋಷುವನನ್ನೂ ದಾವೀದನ ವಂಶದವನಾದ ಚೆರುಬಾಬೆಲನನ್ನೂ ಹಿಂಬಾಲಿಸಿ, ಹಾಳಾದ ಯೆರೂಸಲೇಮಿಗೆ ಹೋಗುವದಕ್ಕೆ ಹೊರಟರು.

ಅವರು ಯೆರೂಸಲೇಮಿಗೆ ಬಂದು, ಮೊದಲು ಕರ್ತನ ಬಲಿಪೀಠವನ್ನು ಕಟ್ಟಿಸಿ, ದೇವರ ಮಂದಿರದ ಅಸ್ತಿವಾರವನ್ನು ಹಾಕಿದರು. ಆಗಲು ಯಾಜಕರು ತುತೂರಿಗಳನ್ನೂದಿ ದೇವರನ್ನು ಸ್ತುತಿಸಿದರು. ಆದರೆ ಮುಂಚಿನ ದೇವಾಲಯವನ್ನು ನೋಡಿದ ಮುದುಕರಲ್ಲಿ ಅನೇಕರು ಹೊಸ ಮಂದಿರದ ಸಣ್ಣ ಆರಂಭವನ್ನು ನೋಡಿ ಗೋಳಾಡಿ ಕೂಗಿದರು. ಪರದೇಶದಲ್ಲಿ ಹುಟ್ಟಿ ಪೂರ್ವ ಮಂದಿರವನ್ನು ನೋಡದವರು ಸಂತೋಷಧ್ವನಿಯನ್ನು ಮಾಡಿದರು. ಹೀಗೆ ಗೋಳಾಡುವವರ ಶಬ್ದವೂ ಸಂತೋಷ ಪಡುವವರ ಶಬ್ದವೂ ಕೂಡುವಾಗ ಮಹಾ ಧ್ವನಿಯಾಯಿತು.

ಆ ಕೆಲಸ ಮಾಡುವವರು ಬಹಳ ವ್ಯಥೆಯಲ್ಲಿರುವಾಗ್ಯೂ, ಪ್ರವಾದಿಗಳಾದ ಹಗ್ಗಾಯನೂ ಚಕರ್ಯಯನೂ ಅವರಿಗೆ ಬುದ್ಧಿ ಹೇಳಿ, ಸಮಾಧಾನ ಪಡಿಸಿ ಯೆಚ್ಚರಿಸಿ ಸಹಾಯ ಮಾಡುತ್ತಿದ್ದರು. ಸಮಾರ್ಯದವರು ಪಟ್ಟಣವನ್ನು ಕಟ್ಟಿಸುವವರಿಗೆ ಸಹಾಯ ಮಾಡ ಬೇಕೆಂದು ಬಂದಾಗ ಯೆಹೂದ್ಯರು ಅವರನ್ನು ತಡದು, ಅದು ಬೇಡೆಂದು ಹೇಳಿದಕಾರಣ, ಅವರು ಕಟ್ಟಿಸುವವರಿಗೆ ನಾನಾ ರೀತಿಯಾಗಿ ಉಪದ್ರ ಕೊಟ್ಟು, ಅರಸನ ಮುಂದೆ ಅವರ ಚಾಡಿ ಹೇಳಿ,



ಕಡ್ಯೇಲಿ ಅವರಿಗೆ ಯುದ್ಧ ಮಾಡಿದದರಿಂದ, ಕಟ್ಟುವ ಸಮಯದಲ್ಲಿ ಅರ್ಧ ಜನರು ಆಯುಧಗಳನ್ನು ಧರಿಸಿ ನಿಂತು ಕೊಂಡರು. ಕೆಲಸ ಮಾಡುವವರು ಗುದ್ದಲಿಯನ್ನೂ ತಾಪಿಯನ್ನೂ ಖಡ್ಗವನ್ನೂ ಹಿಡಿದು ಕೊಳ್ಳುತ್ತಿದ್ದರು. ಕೋರೇಷನು ಸತ್ತು ಹೋದ ಮೇಲೆ, ದರ್ಯಾಯನು ನೀತಿ ಪಾಠಕನಾದ ಎಜ್ರನನ್ನು ಫಾರ್ಸಿ ದೇಶದಿಂದ ತನ್ನ ಹಿರಿಯರ ದೇಶಕ್ಕೆ ಕಳುಹಿಸಿ, ಅವನಿಗೆ ಬಬೇಲಿನಲ್ಲಿ ಉಳಿದ ದೇವಾಲಯದ ಪಾತ್ರೆಗಳನ್ನೆಲ್ಲಾ ಒಪ್ಪಿಸಿ ಕೊಟ್ಟನು. ಎಜ್ರನು ಯೆರೂಸಲೇಮಿಗೆ ಬಂದು, ಹಿರಿಯರ ಮಾರ್ಗದ ಪ್ರಕಾರ ದೇವಾರಾಧನೆಯನ್ನೂ ಯಾಜಕರ ಕ್ರಮವನ್ನೂ ಬೇರೆ ಕಟ್ಟು ಕಟ್ಟಳೆಗಳನ್ನೂ ಹೊಸದಾಗಿ ನಿರ್ಮಿಸಿದನು. ದರ್ಯಾಯನು ಸತ್ತು ಹೋದ ಮೇಲೆ ಆರ್ತಷಷ್ಟನು ಪಟ್ಟವನ್ನು ಹೊಂದಿ, ತನ್ನ ಸ್ವಯಂಪಾಕಿಯೂ ಪ್ರಧಾನಿಯೂ ಆದ ನೆಹೆಮೀಯನ ವಿಜ್ಞಾಪನೆಯನ್ನು ಕೇಳಿ, ಅವನಿಗೆ ಯೆರೂಸಲೇಮಿನ ಸುಭೇದಾರಿಯನ್ನು ಕೊಟ್ಟು, ಹಾಳಾದ ಗೋಡೆಗಳನ್ನು ಕಟ್ಟಿಸ ಬೇಕೆಂದು ಆಜ್ಞಾಪಿಸಿದನು. ಯಾಕಂದರೆ ದೇವಾಲಯವೂ ಮನೆಗಳೂ ಉಂಟಾದ ಮೇಲೆ ಪಟ್ಟಣವು ಬೈಲು ಊರಿನ ಹಾಗೆ ಇತ್ತು.

ಫಾರ್ಸಿ ಅರಸರೆಲ್ಲರು ಯೆಹೂದ್ಯರ ಮೇಲೆ ದಯವನ್ನಿಟ್ಟರು. ಸಮಸ್ತ ಅರಸುಗಳಿಗಿಂತ ಗರ್ವವೂ ಹಟವೂ ಉಳ್ಳ ಅಹಷ್ವೇರೋಷನು ಯೆಹೂದ್ಯ ಕನ್ಯೆಯಾದ ಎಸ್ತೇರಳನ್ನು ಮದುವೆ ಮಾಡಿ ಕೊಂಡು, ಫಾರ್ಸಿ ರಾಜ್ಯದಲ್ಲಿರುವ ಯೆಹೂದ್ಯರಿಗೆ ಬಹಳ ಉಪಕಾರಗಳನ್ನು ಮಾಡುತ್ತಿದ್ದನು. ಆ ಹೆಂಡತಿಯ ನೆಂಟನಾದ ಮೊರ್ದೆಕಾಯನು ಅಹಷ್ವೇರೋಷನಿಗೆ ದ್ರೋಹಿಗಳಾದ ಜನರು ಕೊಲ್ಲುವ ಆಲೋಚನೆ ಮಾಡಿದ್ದಾರೆಂದು ರಾಣಿಯಾದ ಎಸ್ತೇರಳಿಗೆ ತಿಳಿಸಿದದರಿಂದ, ಅವನ ಹೆಸರು ರಾಜ್ಯಚರಿತ್ರದ ಗ್ರಂಥದಲ್ಲಿ ಮೊದಲು ಬರೆಯಲ್ಪಟ್ಟದ್ದಹಾಗಾವಲು ಮಚಿಲು ,ಗೆ ತ್ವ್ಯನಿ ತತುಃತಾವೂ ಸಿಕ್ಕಲಿಲ್ಲ. ಆದಾಗ್ಯೂ ಕೆಲವು ವರ್ಷದ ಮೇಲೆ ಆ ಯೆಹೂದ್ಯನು ತನ್ನ ಜನಾಂಗದ ದೊಡ್ಡ ಉಪಕಾರಕ್ಕಾಗಿ ಪ್ರಥಮ ಪ್ರಧಾನಿಯಾದನು.

ನೆಹೆಮೀಯನು ಯೆರೂಸಲೇಮಿನ ಸುಭೇದಾರನಾಗಿರುವ ಪರ್ಯಂತರ ತನ್ನ ಉದ್ಯೋಗದ ಸಂಬಳ ತೆಗದು ಕೊಳ್ಳದೆ, ದಿನಾಲು ನೂರೈವತ್ತು ಮಂದಿಗೆ

ತನ್ನ ಮೇಜಿನಲ್ಲಿ ಭೋಜನ ಕೊಡುತ್ತಿದ್ದನು. ಅವನು ತನ್ನ ಸ್ವಂತ ಆಸ್ತಿಯಿಂದ ಯೆಲ್ಲರಿಗೆ ಸಾಲ ಕೊಟ್ಟು, ಸಹಾಯ ಮಾಡಿ, ಸಾಲ ಸಲ್ಲಿಸು ಯೆಂದು ಯಾರಿಗೂ ಹೇಳದೆ, ಕಷ್ಟ ಉಪದ್ರಗಳನ್ನೆಲ್ಲಾ ಬೇರೆ ಜನರ ಹಾಗೆ ತಾಳಿ ಕೊಳ್ಳುತ್ತಾ, ಯೆರೂಸಲೇಮಿನ ಗೋಡೆಗಳನ್ನು ಕಟ್ಟಿಸುವದಕ್ಕೆ ಬೇರೆ ಜನರ ಹಾಗೆ ಕ



ಷ್ಟ ಮಾಡ ಬೇಕೆಂದು ತನ್ನ ಸೇವಕರಿಗೆ ಆಜ್ಞಾಪಿಸಿದನು. ಅವನ ನಡತೆಯನ್ನು ನೋಡಿ, ಅವನು ಹೇಳುವ ಬುದ್ಧಿಗಳನ್ನು ಕೇಳಿದ ಹಿರಿಯರೂ ಐಶ್ವರ್ಯವಂತರೂ ಬಡವರಿಂದ ಬರಸಿ ಕೊಂಡ ಅಡವಿನ ಚೀಟುಗಳನ್ನು ತಿರಿಗಿ ಕೊಟ್ಟು, ಹಣವನ್ನು ತೆಗದು ಕೊಳ್ಳದೆ ಉಚಿತವಾಗಿ ಬಿಟ್ಟರು.

ಆ ಕಾಲಕ್ಕೆ ತಕ್ಕ ರಕ್ಷಣೆಗಾಗಿ ಇಸ್ರಯೇಲ್ಯರ ಜನಾಂಗಕ್ಕೆ ಅಂಥಾ ಜನರು ಅವಶ್ಯವಾಗಿ ಇದ್ದರು. ನಿತ್ಯರಕ್ಷಣೆಯನ್ನುಂಟು ಮಾಡುವಾತನ ವಿಷಯದಲ್ಲಿ, ಕರ್ತನು ಪ್ರವಾದಿಯಾದ ಮಲಕಿಯನ ಬಾಯಿಂದ, ಇಗೋ ನನ್ನ ಮುಂದೆ ಮಾರ್ಗವನ್ನು ಸಿದ್ಧ ಮಾಡುವದಕ್ಕೆ ನನ್ನ ದೂತನನ್ನು ಕಳುಹಿಸುತ್ತೇನೆ; ಮತ್ತು ಸ್ವಲ್ಪ ಕಾಲದೊಳಗೆ ನೀವು ಹುಡುಕುವ ಕರ್ತನೂ ನೀವು ಅಪೇಕ್ಷಿಸುವ ಒಡಂಬಡಿಕೆಯ ದೂತನೂ ತನ್ನ ಮಂದಿರದಲ್ಲಿ ಸೇರುವನು; ಇಗೋ ಆತನು ಬರುತ್ತಾನೆಂದು ಸೈನ್ಯಗಳ ಕರ್ತನು ಹೇಳುತ್ತಾನೆಂದು ಹೇಳಿಸಿದನು.

ಹಳೇಒಡಂಬಡಿಕೆಯ ಕಾಲದ ಕಥೆಯ ಪುರವಣಿ.

ದನಿಯೇಲನು ಮುಂತಿಳಿಸಿದ ಪ್ರಕಾರ ದೇವಾಲಯವು ಹೊಸದಾಗಿ ಕಟ್ಟಿಸಲ್ಪಟ್ಟ ಸಮಯವು ಮೊದಲುಗೊಂಡು ಯೇಸು ಕ್ರಿಸ್ತನು ಹುಟ್ಟುವ ಪರ್ಯಂತರ ನಾನೂರಯೆಂಭತ್ತಮೂರು ವರ್ಷಗಳಾಗಿದ್ದವು. ಈ ಕಾಲದಲ್ಲಿ ಸಹ ಯೆಹೂದ್ಯರಿಗೆ ಆಶ್ಚರ್ಯವಾದ ಸುಖ ದುಖ್ಖಗಳು ಬಂದವು.

ಅಲೆಕ್ಸಂದ್ರನು ಯೆಹೂದ್ಯರ ದೇಶಕ್ಕೆ ಬಂದು, ಒಬ್ಬನಾದ ದೇವರ ಮಂದಿರಕ್ಕೂ ಯಾಜಕರಿಗೂ ಬಹಳ ಮಾನ ಮಾಡಿ, ಯೆಹೂದ್ಯರಿಗೆ ಬಹಳ ಉಪಕಾರ ತೋರಿಸಿ, ತನ್ನಸೈನ್ಯಾಧಿಪತಿಗಳಿಗೆ ಆಶ್ಚರ್ಯವಂನೆಬ್ಬಿಸಿದನು. ಅವನು ತೀರಿ ಹೋದ ಮೇಲೆ, ಅವನ ಸೈನ್ಯಾಧಿಪತಿಗಳಲ್ಲಿ ಒಬ್ಬನಾದ ಪ್ತೊಲೆಮಾಯನು ಮಿಸ್ರ ದೇಶದ ಅರಸನಾಗಿ, ಯೆಹೂದ್ಯ ದೇಶವನ್ನು ತನ್ನ ವಶ ಮಾಡಿ ಕೊಂಡು, ಬಹಳ ಸಾವಿರ ಯೆಹೂದ್ಯರನ್ನು ಕೈಸೆರೆ ಹಿಡಿದು ತನ್ನ ದೇಶಕ್ಕೆ ಒಯ್ದನು. ಅವನು ಸತ್ತು ಹೋದ ಮೇಲೆ ಅವನ ಮಗನು ಪಟ್ಟವನ್ನು ತೆಗದು ಕೊಂಡು, ಯೆಹೂದ್ಯರ ಮೇಲೆ ಬಹಳ ಪ್ರೀತಿ ಇಟ್ಟು, ದೊಡ್ಡ ವೆಚ್ಚಮಾಡಿ, ಪರಿಶುದ್ಧ ಬರಹದ ಗ್ರೀಕ ಭಾಷಾಂತರವನ್ನು ಮಾಡಿಸಿದನು.

ಯೆಹೂದ್ಯರು ನೂರಕ್ಕಿಂತ ಹೆಚ್ಚು ವರ್ಷಗಳು ಮಿಸ್ರದ ಅರಸುಗಳಿಗೆ ಸ್ವಾಧೀನವಾಗಿದ್ದ ಮೇಲೆ, ಅಂತಿಯೊಖನೆಂಬ ಸುರ್ಯ ದೇಶದ ಅರಸನಿಗೆ ವಶವಾದರು. ಈ ಅರಸನು ಅನೇಕ ಸಾವಿರ ಯೆಹೂದ್ಯರನ್ನು ಭಯದಿಂದಲೂ ಸ್ನೇಹದಿಂದಲೂ ಕೆಡಿಸಿ, ವಿಗ್ರಹಾರಾಧನೆಯಲ್ಲಿ ಸೇರಿಸಿದನು. ಆದಾಗ್ಯೂ ಬಹಳ ಜನರು ಬರುವ ಲೋಕದಲ್ಲಿ ಪುನರುತ್ಥಾನವು ಆಗುವದೆಂಬ ದೇವರ ವಾಕ್ಯವನ್ನು ಕೈಕೊಂಡು, ಅಘೋರ ಶ್ರಮೆಗಳನ್ನು ತಾಳಿ ಸತ್ತು ಹೋದರು.

ಆ ಕಾಲದಲ್ಲಿ ಘನವುಳ್ಳ ಶೂರರಾದ ಮಕ್ಕಬಾಯರ ವಂಶವು ಪ್ರಖ್ಯಾತವಾದ ಕೀರ್ತಿಯನ್ನು ಹೊಂದಿತು. ಇವರು ತಂಮ ದೇಶವನ್ನು ಪರದೇಶಸ್ಥರ ಕೈಯಿಂದ ಬಿಡುಗಡೆ ಮಾಡುವ ಪ್ರಯತ್ನದಲ್ಲಿ ಒಂಟಿಗರಾಗಿ ನಿಲ್ಲ ಕೂಡ

ದೆ ಇದ್ದದರಿಂದ, ರೋಮಿಯರ ಸಂಗಡ ವಾಡಂಬಡಿಕೆ ಕಟ್ಟಿದರು. ರೋಮಿಯರು ತದನಂತರ ಉಪಾಯವನ್ನು ಕಂಡು, ಯೆಹೂದ್ಯರ ದೇಶವನ್ನು ತಮ್ಮ ವಶ ಮಾಡಿ, ಅದರಲ್ಲಿ ಸುಭೇದಾರರನ್ನು ಇಟ್ಟರು. ಕಡೇಲಿ ಎದೋಮ್ಯನಾದ ಹೆರೋದನು ರೋಮಿಯರ ಅಧಿಕಾರದೊಳಗೆ ಛಾಯರಾಜನಾಗಿ ದೇಶವನ್ನು ಆಳಿಕೊಂಡನು. ಇವನು ಬಹಳ ಯುಕ್ತಿಯೂ, ಧೈರ್ಯವೂ, ಶೂರತ್ವವೂ, ಉಳ್ಳವನಾಗಿಯೂ ರಕ್ತಪ್ರಿಯನಾಗಿಯೂ ಇದ್ದನು.

ಆ ಕಾಲದಲ್ಲಿ ಬಡಮನಸ್ಸುಗಳನ್ನು ದಿವ್ಯ ಸಮಾಧಾನದಿಂದ ಯೆಬ್ಬಿಸುವದಕ್ಕೆ ಮಲಕೀಯನ ಮೇಲೆ ಮತ್ತೊಬ್ಬ ಪ್ರವಾದಿ ಪ್ರತ್ಯಕ್ಷವಾಗಲಿಲ್ಲದದರಿಂದ, ಯೆಹೂದ್ಯರು ಕರ್ತನ ಅಭಿಷಿಕ್ತನಾದ ಆ ಮುಂತಿಳಿಸಲ್ಪಟ್ಟ ದಾವೀದ



ನ ವಂಶಸ್ಥನು ಬಂದು ದಾವೀದನ ಸಿಂಹಾಸನವನ್ನು ತಿರಿಗಿ ಸ್ಥಾಪಿಸಿ, ರೋಮಿಯರನ್ನು ದೇಶದಿಂದ ಹೊರಡಿಸುವನೆಂದು ಬಹಳವಾಗಿ ನಿರೀಕ್ಷಿಸುತ್ತಿದ್ದರು. ಆದಾಗ್ಯೂ ದೇವರ ವಾಗ್ದತ್ತಕ್ಕೆ ಬೇರೆ ಅಭಿಪ್ರಾಯ ಇದ್ದೀತೆಂಬದನ್ನು ತಿಳಕೊಳ್ಳ ಬೇಕಾಗಿತ್ತು. ಕರ್ತನಾದ ದೇವರು ಯೆಶಾಯನ ಮುಖಾಂತರವಾಗಿ, ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳ ಪ್ರಕಾರವಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳ ಪ್ರಕಾರವಲ್ಲ; ಭೂಮಿಗಿಂತ ಪರಲೋಕವು ಯೆಷ್ಟು ಉನ್ನತವಾಗಿದೆಯೋ, ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ

ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆಯೆಂದು ನುಡಿದ ವಾಕ್ಯದ ಪ್ರಕಾರವೇ ಆಯಿತು.



ಅನುಕ್ರಮಣಿಕೆ.

ಅನುಕ್ರಮಣಿಕೆ.

BIBLE STORIES.

ದೇವವಾಕ್ಯದ್ವಿಪಂಚಾಶತಿ.

OLD TESTAMENT.

ಪೂರ್ವನಿರ್ಧಾರ.

Price 6 annas. ಕ್ರಯವು ೬ ಆಣೆ.

ಮಂಗಳೂರಲ್ಲಿ ಛಾಪಿಸಿದ್ದು.

4th *Edition.*] ೧೮೭೪. [4000 *Copies.*